# ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ KPSC VAANI APP ಡೌನ್ಲೋಡ್ ಮಾಡಿಕೊಳ್ಳಿ

KPSC Vaani

**ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ**

**ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ**

**ನಮ್ಮ ಗುಂಪುಗಳನ್ನು ಸೇರಿಕೊಳ್ಳಿ**

Click here To Join

To Download Our App

Follow Us on Facebook

Follow Us on Instagram





Scan QR Code
To Download
KPSC Vaani App

# 01 July 2025

## ಜುಲೈ 1 ರಾಷ್ಟ್ರೀಯ ವೈದ್ಯರ ದಿನ




* ಪ್ರತಿ ವರ್ಷ ಜುಲೈ 1 ರಂದು ರಾಷ್ಟ್ರೀಯ ವೈದ್ಯರ ದಿನವನ್ನು ವೈದ್ಯರಾಗಿದ್ದುಕೊಂಡು ಡಾ. ಬಿ. ಸಿ. ರಾಯ್ ಅವರು ಮಾಡಿದ ಜನಸೇವೆಗೆ ಗೌರವ ಸಲ್ಲಿಸುವ ಸಲುವಾಗಿ ಅವರ ಜನ್ಮದಿನವಾದ ಜುಲೈ 1 ರಂದು ಪ್ರತಿ ವರ್ಷ ರಾಷ್ಟ್ರೀಯ ವೈದ್ಯರ ದಿನವನ್ನಾಗಿ ಆಚರಿಸಲಾಗುತ್ತದೆ.

*** 2025ರ ರಾಷ್ಟ್ರೀಯ ವೈದ್ಯರ ದಿನದ ಥೀಮ್ "ಮುಖವಾಡದ ಹಿಂದೆ: ಗುಣಪಡಿಸುವವರನ್ನು ಯಾರು ಗುಣಪಡಿಸುತ್ತಾರೆ?" ಎಂಬುವುದಾಗಿದೆ.**

* ವೈದ್ಯರ ಕರ್ತವ್ಯಗಳು, ಪ್ರಾಮುಖ್ಯತೆ ಮತ್ತು ಕೊಡುಗೆಗಳ ಬಗ್ಗೆ ಜನರಿಗೆ ಅರಿವು ಮೂಡಿಸುವುದು ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸುವ ಉದ್ದೇಶವಾಗಿದೆ.

* ಜುಲೈ 1, 1962 ರಂದು ರಾಯ್ ಅವರು ನಿಧನರಾದ ನಂತರ ಸಮಾಜಕ್ಕೆ ಅವರ ಅಪಾರ ಕೊಡುಗೆಗಳನ್ನು ಗುರುತಿಸಿ ರಾಷ್ಟ್ರೀಯ ವೈದ್ಯರ ದಿನಾಚರಣೆಯ ಸ್ಮರಣಾರ್ಥ ಈ ದಿನಾಂಕವನ್ನು ಆಯ್ಕೆ ಮಾಡಲಾಯಿತು.

* ಭಾರತವು ಜುಲೈ 1 ರಂದು 'ರಾಷ್ಟ್ರೀಯ ವೈದ್ಯರ ದಿನ' ಎಂದು ಆಚರಿಸುತ್ತದೆ ಮತ್ತು ಇದನ್ನು ಭಾರತೀಯ ವೈದ್ಯಕೀಯ ಸಂಘ (IMA) ವಾರ್ಷಿಕವಾಗಿ ಆಯೋಜಿಸುತ್ತದೆ.

* ಬ್ರೆಜಿಲ್‌ನಲ್ಲಿ ಅಕ್ಟೋಬರ್ 18ರಂದು, ಕ್ಯೂಬಾದಲ್ಲಿ ಡಿಸೆಂಬರ್ 3. ರಂದು ಇರಾನ್‌ನಲ್ಲಿ ಆಗಸ್ಟ್ 23ರಂದು, ವಿಯೆಟ್ನಾಂನಲ್ಲಿ ಫೆಬ್ರುವರಿ 28ರಂದು, ನೇಪಾಳದಲ್ಲಿ ಮಾರ್ಚ್ 4ನೇ 1. ವಾರ, ಅಮೆರಿಕನ್ನರು ಮಾರ್ಚ್ 30ರಂದು ರಾಷ್ಟ್ರೀಯ ವೈದ್ಯ " ದಿನವನ್ನಾಗಿ ಆಚರಿಸುತ್ತಾರೆ.

* ರೆಡ್ ಕಾರ್ನೇಶನ್ ಹೂವು ವೈದ್ಯ ಈ ದಿನಾಚರಣೆಯ ಸಂಕೇತ. ಕೆಂಪು ಕಾರ್ನೇಶನ್ ಹೂವು ಪ್ರೀತಿ, ತ್ಯಾಗ, ಈ ಧೈರ್ಯ, ಸಾಹಸ ಹಾಗೂ ಸೇವೆಯ ಪ್ರತೀಕವಾಗಿದೆ.

## ಜುಲೈ 01 : ಕನ್ನಡ ಪತ್ರಿಕಾ ದಿನ




* ಕನ್ನಡದ ಮೊಟ್ಟ ಮೊದಲ ಪತ್ರಿಕೆ ಮಂಗಳೂರು ಸಮಾಚಾರದ ಮೊದಲ ಸಂಚಿಕೆ 1843ರ ಜುಲೈ 1 ರಂದು ಮಂಗಳೂರಿನಿಂದ ಪ್ರಕಟವಾಯಿತು. ಕನ್ನಡ ಪತ್ರಿಕಾ ರಂಗದ ಮೊದಲ ಆವೃತ್ತಿ ಹೊರಬಂದ ದಿನದ ಸ್ಮರಣೆಗೆ ರಾಜ್ಯದಲ್ಲಿ ಜುಲೈ 1 ರಂದು 'ಪತ್ರಿಕಾ ದಿನ'ವಾಗಿ ಆಚರಿಸಲಾಗುತ್ತದೆ.

* ಕನ್ನಡದ ಪ್ರಪ್ರಥಮ ಪತ್ರಿಕೆ ಮಂಗಳೂರು ಸಮಾಚಾರ 1843ರ ಜುಲೈ 1ರಂದ ಮಂಗಳೂರಿನಲ್ಲಿ ಬಾಸೆಲ್ ಮಿಷನ್‌ನವರ ಮುದ್ರಣಾಲಯದಿಂದ ಪ್ರಕಟವಾಯಿತು. ರೆವರೆಂಡ್ ಹರ್ಮನ್ ಮೋಗ್ಲಿಂಗ್ ಅವರು ಸಂಪಾದಕರಾಗಿದ್ದರು. ಜರ್ಮನ್‌ನ ಮತ ಪ್ರಚಾರಕರಾದ ಮೋಗ್ಲಿಂಗ್ ಅವರನ್ನು ಕನ್ನಡ ಪತ್ರಿಕೋದ್ಯಮದ ಮೂಲಪುರುಷ, ಕನ್ನಡ ಪತ್ರಿಕೋದ್ಯಮದ ಪಿತಾಮಹ ಎಂದು ಅವರನ್ನು ಕರೆಯಲಾಗುತ್ತದೆ.

* ಮಂಗಳೂರು ಸಮಾಚಾರ ಪತ್ರಿಕೆ 8 ತಿಂಗಳ ಕಾಲ ಪಾಕ್ಷಿಕವಾಗಿ ಪ್ರಕಟವಾಯಿತು. ವರ್ತಮಾನಗಳು, ಸರಕಾರಿ ನಿರೂಪಗಳು ಕಾನೂನು, ಹಾಡುಗಳು, ಕತೆಗಳು, ಅಂತರಾಜ್ಯ ವರ್ತಮಾನಗಳು, ವಾಚಕರ ವಾಣಿಗಳು ಅಂಕಣಗಳಾಗಿದ್ದವೆಂದು ಮಂಗಳೂರು ದರ್ಶನ ದಾಖಲಿಸಿದೆ. ಬಳಿಕ ಈ ಪತ್ರಿಕೆಯ ಹೆಸರನ್ನು ಕನ್ನಡ ಸಮಾಚಾರ ಎಂದು ಬದಲಿಸಿ ಬಳ್ಳಾರಿಯಿಂದ ಪ್ರಕಟಿಸಲು ಆರಂಭಿಸಿದರು.

* ಕನ್ನಡದ ಪತ್ರಿಕ್ಯೋದ್ಯಮದ ವಿಷಯದಲ್ಲಿ ಇಂದು ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ವೃತ್ತಿಪರ ಕೋರ್ಸ್ ರೂಪದಲ್ಲಿ ಪತ್ರಿಕ್ಯೋದ್ಯಮ ಪದವಿ, ಸ್ನಾತಕೋತ್ತರ ಪದವಿ, ಪಿಹೆಚ್‌ಡಿ ಸೇರಿದಂತೆ ಪಿಜಿ ಡಿಪ್ಲೊಮಾ ಕೋರ್ಸ್ ಸಹ ಆರಂಭಿಸಲಾಗಿದ್ದು ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಿ ಪತ್ರಿಕೋದ್ಯಮದಲ್ಲಿ ಉದ್ಯೋಗವನ್ನು ಕಂಡುಕೊಳ್ಳುತ್ತಿದ್ದು, ಪತ್ರಿಕಾರಂಗ ಪ್ರಜಾಪ್ರಭುತ್ವದ 4ನೇ ಅಂಗವಾಗಿ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ.

## ಜುಲೈ 1 – ಜಿಎಸ್‌ಟಿ ದಿನ




* ಭಾರತವು ಪ್ರತಿ ವರ್ಷ ಜುಲೈ 1 ರಂದು ಜಿಎಸ್‌ಟಿ ದಿನವನ್ನಾಗಿ ಆಚರಿಸುತ್ತದೆ. 2017 ರಲ್ಲಿ ಜಾರಿಗೆ ಬಂದ ಈ ತೆರಿಗೆ ವ್ಯವಸ್ಥೆಯು ಭಾರತದ ಅತೀವ ಪ್ರಭಾವಶಾಲಿ ಆರ್ಥಿಕ ಸುಧಾರಣೆಯಾಗಿದೆ. 2018 ರಿಂದ ಈ ದಿನವನ್ನು ಅಧಿಕೃತವಾಗಿ ಆಚರಿಸಲಾಗುತ್ತಿದೆ.

* ಜಿಎಸ್‌ಟಿ (ಸರಕು ಮತ್ತು ಸೇವೆಗಳ ತೆರಿಗೆ) ವ್ಯಾಪಕ ಹಾಗೂ ಗಮ್ಯಸ್ಥಾನ ಆಧಾರಿತ ಪರೋಕ್ಷ ತೆರಿಗೆ. ಇದು ಮೌಲ್ಯವರ್ಧನೆಯ ಮೇಲೆ ತೆರಿಗೆ ವಿಧಿಸುವ ವ್ಯವಸ್ಥೆಯಾಗಿದ್ದು, ಇನ್‌ಪುಟ್ ತೆರಿಗೆ ಕ್ರೆಡಿಟ್ ಮೂಲಕ ಗ್ರಾಹಕರಿಗೆ ಮಾತ್ರ ಅಂತಿಮ ತೆರಿಗೆ ಭಾರ ಬೀಳುತ್ತದೆ.

* ಜಿಎಸ್‌ಟಿಯ ಕಲ್ಪನೆ 2000ರಲ್ಲಿ ಹುಟ್ಟಿಕೊಂಡು, 2017 ರಲ್ಲಿ ಜಾರಿಗೆ ಬಂತು. ಈ ಮಾರ್ಗದಲ್ಲಿ ಹಲವು ತಿದ್ದುಪಡಿ ಮಸೂದೆಗಳು, ಚರ್ಚೆಗಳು, ನಿಯಮ ರೂಪಗಳು ನಡೆದವು. ಜಿಎಸ್‌ಟಿ ಭಾರತೀಯ ತೆರಿಗೆ ವ್ಯವಸ್ಥೆಯ ಸರಳೀಕರಣದ ಪ್ರಮುಖ ಹೆಜ್ಜೆ.

ಪ್ರಮುಖ ವೈಶಿಷ್ಟ್ಯಗಳು

- ಒಂದು ರಾಷ್ಟ್ರ – ಒಂದು ತೆರಿಗೆ: ವಿವಿಧ ಕೇಂದ್ರ ಹಾಗೂ ರಾಜ್ಯ ತೆರಿಗೆಗಳನ್ನು ಬದಲಾಯಿಸಿ ಏಕೀಕೃತ ಮಾರುಕಟ್ಟೆ.
- ದ್ವಂದ್ವ ಮಾದರಿ: CGST, SGST ಮತ್ತು IGST ಮೂಲಕ ತೆರಿಗೆ ವಸೂಲಿ.
- ಇನ್‌ಪುಟ್ ತೆರಿಗೆ ಕ್ರೆಡಿಟ್: ತೆರಿಗೆ ಸರಪಳಿಯಲ್ಲಿ ದ್ವಿತೀಯ ತೆರಿಗೆ ನಿವಾರಣೆ.

KPSCVaani


- ಗಮ್ಯಸ್ಥಾನ ಆಧಾರಿತ ತೆರಿಗೆ: ಬಳಕೆಯ ಸ್ಥಳಕ್ಕೆ ತೆರಿಗೆ ಆದಾಯ.
ವಿಶೇಷ ಸೌಲಭ್ಯಗಳು
• ಲಘು ಉದ್ಯಮಗಳಿಗೆ ವಿನಾಯಿತಿಗಳು ಮತ್ತು Composition Scheme.
• GSTN ಮೂಲಕ ಸಂಪೂರ್ಣ ಡಿಜಿಟಲ್ ವ್ಯವಸ್ಥೆ.
• ಲಾಭ ನಿರೋಧ ಪ್ರಾಧಿಕಾರ (NAA) ಮೂಲಕ ಗ್ರಾಹಕರ ಹಕ್ಕು ರಕ್ಷಣೆ.
• PAN-Aadhaar ಜೋಡಣೆ ಮೂಲಕ ಪಾರದರ್ಶಕತೆ.
• ಆರೋಗ್ಯ, ಶಿಕ್ಷಣ ಕ್ಷೇತ್ರಗಳಿಗೆ ವಿನಾಯಿತಿಗಳು.
ತೆರಿಗೆ ದರಗಳು (2025)
0%: ಧಾನ್ಯ, ತರಕಾರಿ
5%: ಸಾಮಾನ್ಯ ವಸ್ತುಗಳು
12%-18%: ಬಹುತೇಕ ಸೇವೆಗಳು
28%: ಐಷಾರಾಮಿ ವಸ್ತುಗಳು
Compensation Cess: ಪಾಪ ವಸ್ತುಗಳ ಮೇಲೆ
* ಜುಲೈ 1 ಅನ್ನು ನಾವು ಜಿಎಸ್‌ಟಿ ದಿನವಾಗಿ ಆಚರಿಸುವ ಮೂಲಕ ದೇಶದ ಏಕತೆ, ಪಾರದರ್ಶಕತೆ ಹಾಗೂ ಆರ್ಥಿಕ ಸುಧಾರಣೆಯ ಬೆಳವಣಿಗೆಗೆ ಗೌರವ ಸಲ್ಲಿಸುತ್ತೇವೆ.

## ಮೊದಲ ಬಾರಿಗೆ ಆರ್‌ಬಿಐ `ಚಿನ್ನದ ಖಜಾನೆ' ಅನಾವರಣ




* ಭಾರತದ ಕೇಂದ್ರೀಯ ಬ್ಯಾಂಕ್ RBI ತನ್ನ ಚಿನ್ನದ ಖಜಾನೆಯ ಬಗ್ಗೆ ಮೊದಲ ಬಾರಿಗೆ ಸಾಕ್ಷ್ಯಚಿತ್ರ (ಡಾಕ್ಯುಮೆಂಟರಿ) ರೂಪದಲ್ಲಿ ಮಾಹಿತಿ ಹೊರತಂದಿದೆ. RBI Unlocked: Beyond the Rupee ಎಂಬ 5 ಭಾಗಗಳ ಡಾಕ್ಯುಮೆಂಟರಿ ಜಿಯೋ ಹಾಟ್‌ಸ್ಟಾರ್‌ನಲ್ಲಿ ಪ್ರಸಾರವಾಗುತ್ತಿದೆ.
* ಚಾಕ್‌ಬೋರ್ಡ್ ಎಂಟರ್‌ಟೇನ್‌ಮೆಂಟ್ ನಿರ್ಮಿಸಿರುವ ಈ ಡಾಕ್ಯುಮೆಂಟರಿಯಲ್ಲಿ, RBIಯ 90 ವರ್ಷದ ಇತಿಹಾಸ, ಕಾರ್ಯವೈಖರಿ ಮತ್ತು ಭದ್ರತಾ ವ್ಯವಸ್ಥೆ ವಿವರಿಸಲಾಗಿದೆ.
* ಚಿನ್ನದ ಬಟ್ಟಲುಗಳು, ಭದ್ರತಾ ಕ್ರಮಗಳು ಹಾಗೂ ಸ್ವರ್ಣ ಸಂಗ್ರಹದ ಮಾಹಿತಿಗಳನ್ನು ಪ್ರತಕ್ಷ್ಯವಾಗಿ ತೋರಿಸಲಾಗಿದೆ.
* RBI ಶ್ರೇಣಿಯಾದ ಚಿನ್ನದ ಬಟ್ಟಲಿನ ತೂಕ ತಲಾ 12.5 ಕೆ.ಜಿ. ಇರುತ್ತದೆ. ಭಾರತದಲ್ಲಿ ಒಟ್ಟು 870 ಟನ್ ಚಿನ್ನ ಸಂಗ್ರಹವಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, ಈ ಸಂಗ್ರಹದ ಮೌಲ್ಯ ₹7.2 ಲಕ್ಷ ಕೋಟಿ.
* 1991ರ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ವಿದೇಶಗಳಿಗೆ ಚಿನ್ನ ತಲುಪಿಸಬೇಕಾದರೂ, RBI ತನ್ನ ಸಂಗ್ರಹವನ್ನು ಕುಗ್ಗಿಸಿಲ್ಲ. ಚಿನ್ನ ಸದಾ ಮೌಲ್ಯವನ್ನು ಕಾಪಾಡಿಕೊಳ್ಳುವ ಆಸ್ತಿ ಎಂದು RBI ಅಧಿಕಾರಿ ತಿಳಿಸಿದ್ದಾರೆ.
* ಈ ಸಾಕ್ಷ್ಯಚಿತ್ರದ ಮೂಲಕ RBI ತನ್ನ ನೈತಿಕತೆ, ಕಾರ್ಯಪದ್ಧತಿ ಮತ್ತು ಸಾರ್ವಜನಿಕ ನಂಬಿಕೆಯನ್ನು ಗಟ್ಟಿ ಮಾಡುವುದು ಉದ್ದೇಶವಾಗಿದೆ.

## ವಿಶ್ವದ ಮೊದಲ ಸಿಲಿಕಾನ್ ರಹಿತ ಕಂಪ್ಯೂಟರ್



* ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ನ್ಯಾನೋಫ್ಯಾಬ್ರಿಕೇಷನ್ ಘಟಕವು, ಸಿಲಿಕಾನ್ ರಹಿತ ಕಂಪ್ಯೂಟರ್ ಅಭಿವೃದ್ಧಿಪಡಿಸಿದೆ. ಸಿಎಂಒಎಸ್ (Complementary Metal-Oxide Semiconductor) ತಂತ್ರಜ್ಞಾನವನ್ನು ಆಧಾರವಾಗಿ ಬಳಸಲಾಗಿದೆ.
* ಈ ಸಾಧನೆಯಲ್ಲಿ ಕಾಗದದಷ್ಟು ತೆಳುವಾದ 2ಡಿ ವಸ್ತುಗಳನ್ನು ಉಪಯೋಗಿಸಿ, ಸಿಲಿಕಾನ್‌ಬಳಕೆಯ ಅಗತ್ಯವಿಲ್ಲದಂತೆ ಮಾಡಲಾಗಿದೆ. ಸಪ್ತರ್ಷಿ ದಾಸ್ ನೇತೃತ್ವದ ಸಂಶೋಧಕರ ತಂಡ ಈ ಪ್ರಗತಿಗೆ ಕಾರಣವಾಗಿದೆ.
* ಸಿಲಿಕಾನ್ ಶಕ್ತಿವಂತ ಮತ್ತು ಅಗ್ಗದ ವಸ್ತುವಾಗಿದ್ದರೂ, ಉಪಕರಣಗಳ ಗಾತ್ರದ ಚಿಕ್ಕದಾಗುತ್ತಿರುವ ನಿಟ್ಟಿನಲ್ಲಿ ಇದರ ಮಿತಿಗಳು ಎದುರಾಗುತ್ತಿವೆ. ಸಿಲಿಕಾನ್‌ಅನ್ನು ಇನ್ನಷ್ಟು ಸಣ್ಣಗೊಳಿಸಲು ಸಾಧ್ಯವಿಲ್ಲದ ಕಾರಣ ಪರ್ಯಾಯ ಅಗತ್ಯವಾಯಿತು.
* ಈ ಹೊಸ 2ಡಿ ವಸ್ತು ಬಳಕೆಯು ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಕ್ರಾಂತಿ ತರಬಲ್ಲದು. ಭವಿಷ್ಯದಲ್ಲಿ ಸಿಲಿಕಾನ್‌ಗಾಗಿ ಸರಿಯಾದ ಪರ್ಯಾಯವಾಗಿ ಇದನ್ನು ಪರಿಗಣಿಸುವ ಸಾಧ್ಯತೆ ಹೆಚ್ಚಾಗಿದೆ.

## ಕಾಸಿಯಾ ಅಧ್ಯಕ್ಷರಾಗಿ ಗಣೇಶ್ ರಾವ್ ಅಧಿಕಾರ ಸ್ವೀಕಾರ



* 2025–26ನೇ ಸಾಲಿನ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷರಾಗಿ ಬಿ.ಆರ್. ಗಣೇಶ್ ರಾವ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.
* ಗಣೇಶ್ ರಾವ್ ಅವರು ಅನುಭವಿ ಉದ್ಯಮಿಯಾಗಿದ್ದು, ಎರಡು ದಶಕಗಳಿಗೂ ಹೆಚ್ಚು ಕಾಲ ಪೀಣ್ಯ ಕೈಗಾರಿಕೆಗಳ ಸಂಘ ಮತ್ತು ಕಾಸಿಯಾದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ.
* ಗಣೇಶ್ ರಾವ್ ಅವರು ಹಿಂದೆ ಕಾಸಿಯಾದಲ್ಲಿ ಖಜಾಂಚಿ, ಉಪಸಮಿತಿ ಅಧ್ಯಕ್ಷ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.
* ಹೊಸ ಪದಾಧಿಕಾರಿಗಳಾಗಿ ನಿಂಗಣ್ಣ ಎಸ್. ಬಿರಾದರ್ (ಉಪಾಧ್ಯಕ್ಷರು), ಎಸ್.ಎಂ. ಹುಸೇನ್ (ಗೌರವ ಪ್ರಧಾನ ಕಾರ್ಯದರ್ಶಿ), ಆರ್. ಕೇಶವ ಮೂರ್ತಿ (ಜಂಟಿ ಕಾರ್ಯದರ್ಶಿ – ನಗರ), ದಿನೇಶ್ ಕುಮಾರ್ ವಿ. (ಜಂಟಿ ಕಾರ್ಯದರ್ಶಿ – ಗ್ರಾಮೀಣ), ಹಾಗೂ ಆರ್. ದುರ್ಗೆ (ಖಜಾಂಚಿ) ನೇಮಕಗೊಂಡಿದ್ದಾರೆ.

KPSCVaani

## ಮೊಬೈಲ್ ಮೂಲಕ ಮತದಾನದ ಭಾರತದ ಮೊದಲ ರಾಜ್ಯ ಬಿಹಾರ




* 2025ರ ಜೂನ್ 28ರಂದು ಬಿಹಾರವು ಮೊಬೈಲ್ ಫೋನ್ ಮೂಲಕ ಮತದಾನ ನಡೆಸಿದ ಭಾರತದ ಮೊದಲ ರಾಜ್ಯವಾಗಿ ಗುರುತಿಸಲ್ಪಟ್ಟಿತು. ಈ ಪ್ರಯೋಗವು ಪಾಲಿಕೆ ಉಪಚುನಾವಣೆ ಮತ್ತು ಆರು ನಗರ ಪಂಚಾಯಿತಿಗಳ ಚುನಾವಣೆಯ ಭಾಗವಾಗಿತ್ತು.
* ಪಟ್ನಾ, ಬುಕ್ಸರ್, ರೋಹ್ತಾಸ್ ಮತ್ತು ಪೂರ್ವ ಚಂಪಾರಣ್ ಸೇರಿದ 489 ಮತಗಟ್ಟೆಗಳಲ್ಲಿ 538 ಅಭ್ಯರ್ಥಿಗಳಿಗಾಗಿ ಮತದಾನ ನಡೆಯಿತು.
* ಕೆಲವರು ತಮ್ಮ ಮನೆಯಲ್ಲಿಯೇ ಆಪ್ ಅಥವಾ ವೆಬ್‌ಸೈಟ್ ಮೂಲಕ ಮತ ಹಾಕುವ ಅವಕಾಶ ಪಡೆದರು. ಈ ಸೌಲಭ್ಯ ಗರ್ಭಿಣಿಯರು, ಹಿರಿಯರು ಮತ್ತು ಅಂಗವಿಕಲರಿಗೆ ಸೀಮಿತವಾಗಿತ್ತು.
* ಪೂರ್ವ ಚಂಪಾರಣ್ ಜಿಲ್ಲೆಯ ಬಿಭಾ ಕುಮಾರಿ ದೇಶದ ಮೊದಲ ಇ-ಮತದಾರೆಯಾಗಿದ್ದು, ಮುನ್ನಾ ಕುಮಾರ್ ಮೊದಲ ಪುರುಷ ಇ-ಮತದಾರರಾಗಿದ್ದಾರೆ. ಈ ಘಟನೆಯು ಮತದಾನ ಸುಲಭತೆ ಮತ್ತು ಒಳಗೊಳಿಸುವಿಕೆಯನ್ನು ತೋರಿಸುತ್ತದೆ.
* ಮತದಾರರು E-SECBHR ಆಪ್ ಡೌನ್‌ಲೋಡ್ ಮಾಡಿ, ತಮ್ಮ ಮೊಬೈಲ್ ಸಂಖ್ಯೆಯನ್ನು ಲಿಂಕ್ ಮಾಡಬಹುದು. ಈ ಆಪ್‌ನ್ನು ಸಿಡ್ಯಾಕ್ ಅಭಿವೃದ್ಧಿಪಡಿಸಿದ್ದು, ಬ್ಲಾಕ್‌ಚೇನ್, ಮುಖ ಗುರುತು ಪರಿಶೀಲನೆ ಮತ್ತು ಸ್ಕ್ಯಾನಿಂಗ್ ತಂತ್ರಜ್ಞಾನ ಬಳಸಿ ಭದ್ರತೆ ಒದಗಿಸಲಾಗಿದೆ.
* ಅಕ್ಟೋಬರ್-ನವೆಂಬರ್‌ನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಈ ತಂತ್ರಜ್ಞಾನ ಬಳಕೆಯಾಗುತ್ತದೆಯೇ ಎಂಬುದರ ಬಗ್ಗೆ ಸ್ಪಷ್ಟನೆ ನೀಡಲಾಗಿಲ್ಲ. ಆದರೆ ಚುನಾವಣೆ ಪರದರ್ಶಕವಾಗಿರಲು ಎಲ್ಲಾ ಕ್ರಮ ಕೈಗೊಳ್ಳಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

## ಏಷ್ಯಾ ಕಪ್ 2025: ಸೆಪ್ಟೆಂಬರ್ 10ರಿಂದ ಆರಂಭದ ನಿರೀಕ್ಷೆ




* ಕ್ರಿಕೆಟ್ ಅಭಿಮಾನರು ಎದುರುನೋಡುವ ಏಷ್ಯಾ ಕಪ್ 2025 ಅನ್ನು ಸೆಪ್ಟೆಂಬರ್ 10ರಿಂದ ಆರಂಭಿಸಲಾಗುವ ನಿರೀಕ್ಷೆಯಿದೆ. ಜುಲೈ ಮೊದಲ ವಾರದಲ್ಲಿ ಅಧಿಕೃತ ವೇಳಾಪಟ್ಟಿ ಪ್ರಕಟವಾಗಲಿದೆ ಎಂದು ಕ್ರಿಕ್‌ಬಜ್ ವರದಿ ಮಾಡಿದೆ.
* ಈ ಬಾರಿ ಭಾರತ ಈ ಮಹಾ ಕ್ರೀಡಾ ಕೂಟವನ್ನು ಆಯೋಜಿಸಲಿದೆ. ಭಾಗವಹಿಸುವ ದೇಶಗಳಲ್ಲಿ ಭಾರತ, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶ, ಯುಎಇ ಮತ್ತು ಅಫ್ಘಾನಿಸ್ತಾನ ಇವೆ. ಭದ್ರತಾ ಕಾರಣದಿಂದಾಗಿ ಪಾಕಿಸ್ತಾನ ತನ್ನ ಪಂದ್ಯಗಳನ್ನು ಯುಎಇಯಲ್ಲಿ ಆಡಲಿದೆ.
* ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತ-ಪಾಕಿಸ್ತಾನ ನಡುವಿನ ರಾಜತಾಂತ್ರಿಕ ಸಂಬಂಧಗಳು ಮತ್ತೆ ಉದ್ವಿಗ್ನವಾಗಿವೆ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನ ಈ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತದೆಯೇ ಎಂಬ ಪ್ರಶ್ನೆ ಕಾಡುತ್ತಿದೆ.
* ಭಾರತ ಏಷ್ಯಾ ಕಪ್‌ನಲ್ಲಿ ಭಾಗವಹಿಸುವುದಿಲ್ಲ ಎಂಬ ಊಹೆಗಳನ್ನು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಖಂಡಿಸಿದ್ದಾರೆ. ಸರ್ಕಾರದ ಸೂಚನೆಗೆ ಅನುಗುಣವಾಗಿ ನಿರ್ಧಾರ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ.
* ಐಸಿಸಿ ಟೂರ್ನಿಗಳಲ್ಲಿ ಭಾರತ ಪಾಕಿಸ್ತಾನ ವಿರುದ್ಧ ಆಡುತ್ತಿರುವುದಿಲ್ಲ. ಮುಂದಿನ ಪಂದ್ಯಗಳ ಕುರಿತು ಸರ್ಕಾರದ ನಿರ್ಧಾರವನ್ನು ಕಾಯಬೇಕಾಗುತ್ತದೆ ಎಂದು ಬಿಸಿಸಿಐ ಅಧಿಕಾರಿ ಹೇಳಿದ್ದಾರೆ.

## ಕೆಪಿಸಿಸಿ ಸಾಮಾಜಿಕ ಮಾಧ್ಯಮ ವಿಭಾಗದ ಅಧ್ಯಕ್ಷೆಯಾಗಿ ಐಶ್ವರ್ಯಾ ಮಹಾದೇವ್ ನೇಮಕ



* ಐಶ್ವರ್ಯಾ ಮಹಾದೇವ್ ಅವರನ್ನು ಕರ್ನಾಟಕ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಸಾಮಾಜಿಕ ಮಾಧ್ಯಮ ವಿಭಾಗದ ಅಧ್ಯಕ್ಷೆಯಾಗಿ ನೇಮಕ ಮಾಡಲಾಗಿದೆ. ಈ ಕುರಿತು ಎಐಸಿಸಿಯಿಂದ ಭಾನುವಾರ ಅಧಿಕೃತ ಆದೇಶ ಹೊರಡಿಸಲಾಗಿದೆ.
* ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ಈ ನೇಮಕಾತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಐಶ್ವರ್ಯಾ ಕಾಂಗ್ರೆಸ್‌ನ ರಾಷ್ಟ್ರೀಯ ಮಾಧ್ಯಮ ಸಮಿತಿ ಸದಸ್ಯೆಯೂ ಆಗಿದ್ದಾರೆ.
* ಮೂಲತಃ ಮೈಸೂರು ಜಿಲ್ಲೆ ಕೆಆರ್ ನಗರ ಮೂಲದ ಐಶ್ವರ್ಯಾ, ಮಾಜಿ ಶಾಸಕ ದಿವಂಗತ ಮಂಚನಹಳ್ಳಿ ಮಹಾದೇವ್ ಅವರ ಪುತ್ರಿ. ಮಂಚನಹಳ್ಳಿ ಮಹಾದೇವ್, ಹಿಂದೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳ ಆಪ್ತರಾಗಿದ್ದರು.
* ಅತ್ಯಲ್ಪ ವಯಸ್ಸಿನಲ್ಲೇ ಕಾಂಗ್ರೆಸ್ ಮಹಿಳಾ ಘಟಕದ ಕಾರ್ಯದರ್ಶಿಯಾಗಿದ್ದ ಐಶ್ವರ್ಯಾ, ನಂತರ ರಾಷ್ಟ್ರೀಯ ವಕ್ತಾರೆಯಾಗಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

KPSCVaani

## ರಸಾಯನಶಾಸ್ತ್ರದ ವಿಶ್ವ ದುಂಡು ಮೇಜಿನ ಸಭೆಗೆ ಗಂಗಾವತಿಯ ಯುವ ವಿಜ್ಞಾನಿ ನಸೀಮ್ ಆಯ್ಕೆ



* ಜರ್ಮನಿಯ ಲಿಂಡೌನಲ್ಲಿ ಆರಂಭವಾದ 74ನೇ ಲಿಂಡೌ ಸಮ್ಮೇಳನದಲ್ಲಿ ಗಂಗಾವತಿಯ ಯುವ ವಿಜ್ಞಾನಿ ನಸೀಮ್ ಕೌಸರ್ ಭಾಗವಹಿಸುತ್ತಿದ್ದಾರೆ. ಈ ಸಮ್ಮೇಳನ ಜುಲೈ 4ರವರೆಗೆ ನಡೆಯಲಿದೆ.
* ನಸೀಮ್ ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಅತಿಥಿ ಉಪನ್ಯಾಸಕಿ. ಅವರು ಗಂಗಾವತಿಯ ಉರ್ದು ಹೈಸ್ಕೂಲಿನ ಮುಖ್ಯೋಪಾಧ್ಯಾಯ ಎಂ.ಬಿ. ಕೊಪ್ಪಳ ಹಾಗೂ ಸೂಫಿಯಾ ಬೇಗಂ ದಂಪತಿಯ ಪುತ್ರಿ.
* ಈ ಜಾಗತಿಕ ಸಮ್ಮೇಳನದಲ್ಲಿ ನೊಬೆಲ್ ವಿಜೇತರೊಂದಿಗೆ 600 ಯುವ ವಿಜ್ಞಾನಿಗಳು ಚರ್ಚೆ ನಡೆಸುತ್ತಾರೆ. ಭಾರತದಿಂದ 29 ಮಂದಿ ವಿಜ್ಞಾನಿಗಳು ಆಯ್ಕೆಯಾಗಿದ್ದು, ಅವರ ಎಲ್ಲಾ ಖರ್ಚುಗಳನ್ನು ಡಿಎಸ್‌ಟಿ ಇಲಾಖೆ ಭರಿಸುತ್ತಿದೆ.
* ಈ ಆಯ್ಕೆ ಸಂತಸದ ವಿಷಯವಾಗಿದ್ದು, “ಇದು ಮಗಳ ಸಾಧನೆಗೆ ಹೊಸ ಪ್ರೇರಣೆ” ಎಂದು ನಸೀಮ್ ತಂದೆ ಎಂ.ಬಿ. ಕೊಪ್ಪಳ ತಿಳಿಸಿದ್ದಾರೆ.

02 July 2025

# 02 July 2025

## ಝೌ ಜಿಯಾಯಿ AIIB ನೂತನ ಅಧ್ಯಕ್ಷರಾಗಿ ನೇಮಕ



* ಏಷ್ಯನ್ ಮೂಲಸೌಕರ್ಯ ಹೂಡಿಕೆ ಬ್ಯಾಂಕ್ (AIIB) ತನ್ನ ಮುಂದಿನ ಅಧ್ಯಕ್ಷರನ್ನಾಗಿ ಚೀನಾದ ಮಾಜಿ ಉಪ ಹಣಕಾಸು ಸಚಿವ ಝೌ ಜಿಯಾಯಿ ಅವರನ್ನು ನೇಮಿಸಿದೆ. ಅವರು ಸ್ಥಾಪಕ ಅಧ್ಯಕ್ಷ ಜಿನ್ ಲಿಕ್ಯುನ್ ಅವರಿಂದ ಅಧಿಕಾರ ವಹಿಸಿಕೊಳ್ಳಲಿದ್ದಾರೆ.
* ಜಿನ್ ಅವರು 10 ವರ್ಷಗಳ ಅವಧಿಯನ್ನು ಪೂರ್ಣಗೊಳಿಸುತ್ತಿದ್ದಾರೆ. ಝೌ ಜಿಯಾಯಿ ಜನವರಿ 16, 2026 ರಂದು ಅಧ್ಯಕ್ಷತ್ವ ಸ್ವೀಕರಿಸಲಿದ್ದಾರೆ.
* ಈ ನಿರ್ಧಾರವನ್ನು ಜೂನ್ 24, 2025 ರಂದು ನಡೆದ AIIB ಗವರ್ನರ್‌ಗಳ 10ನೇ ವಾರ್ಷಿಕ ಸಭೆಯಲ್ಲಿ ಘೋಷಿಸಲಾಯಿತು. ಈ ಸಭೆ ಹೊಸ ನಾಯಕತ್ವದ ಅಧ್ಯಾಯಕ್ಕೆ ನಾಂದಿ ಹಾಡಿತು.
* ಝೌ ಜಿಯಾಯಿ ಅವರು ಚೀನಾದ ಹಣಕಾಸು ಸಚಿವಾಲಯ, ವಿಶ್ವ ಬ್ಯಾಂಕ್, ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ADB), ಹೊಸ ಅಭಿವೃದ್ಧಿ ಬ್ಯಾಂಕ್ (NDB) ಮೊದಲಾದ ಜಾಗತಿಕ ಹಣಕಾಸು ಸಂಸ್ಥೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಚೀನಾದ ಜಾಗತಿಕ ಹಣಕಾಸು ಸಂಬಂಧಗಳನ್ನು ಬಲಪಡಿಸುವಲ್ಲಿ ಅವರು ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ.
* AIIB ಅನ್ನು 2016ರಲ್ಲಿ ಸ್ಥಾಪಿಸಲಾಗಿದೆ. ಇದರ ಧ್ಯೇಯವು "ನಾಳೆಗಾಗಿ ಮೂಲಸೌಕರ್ಯ" ಎಂಬದು — ಇದು ಸುಸ್ಥಿರ ಅಭಿವೃದ್ಧಿಯ ಮೇಲೆ ಕೇಂದ್ರೀಕೃತವಾಗಿದೆ. AIIB ಗೆ 110 ಸದಸ್ಯ ರಾಷ್ಟ್ರಗಳಿದ್ದು, ಇದರ ಪ್ರಧಾನ ಕಚೇರಿ ಚೀನಾದ ಬೀಜಿಂಗ್‌ನಲ್ಲಿ ಇದೆ.
* ಭಾರತವು ಚೀನಾದ ನಂತರ ಎರಡನೇ ಅತಿ ದೊಡ್ಡ ಮತಶಕ್ತಿಯ ರಾಷ್ಟ್ರವಾಗಿದೆ.

ಮತದಾನದ ಶಕ್ತಿ ಹಂಚಿಕೆ:
ಚೀನಾ: 26.54%
ಭಾರತ: 7.58%
ರಷ್ಯಾ: 5.9%
ಜರ್ಮನಿ: 4.1%

## ಹೆಚ್ಚಿದ ಹೃದಯಾಘಾತ ಸ್ಟೆಮಿ ಯೋಜನೆ ಜಾರಿಗೆ ಸಂಸದ ಮನವಿ



* ಇತ್ತೀಚೆಗಿರುವ ದಿನಗಳಲ್ಲಿ ಹೃದಯಾಘಾತದಿಂದ ಯುವಕರು ಸಾವಿಗೀಡಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಹಾಸನ ಜಿಲ್ಲೆಯಲ್ಲೇ ಕಳೆದ 39 ದಿನಗಳಲ್ಲಿ 18 ಮಂದಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.
* ಹೃದಯ ತಜ್ಞರೂ ಆಗಿರುವ ಬೆಂಗಳೂರು ಗ್ರಾಮಾಂತರ ಸಂಸದ ಡಾ. ಸಿ.ಎನ್. ಮಂಜುನಾಥ್ ಅವರು ಹೃದಯಾಘಾತಗಳ ನಿಯಂತ್ರಣಕ್ಕಾಗಿ ‘ಸ್ಟೆಮಿ ಯೋಜನೆ’ನ್ನು ರಾಜ್ಯದ ಎಲ್ಲ ಕಡೆ ಜಾರಿಗೆ ತರುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಿದ್ದಾರೆ.
* ಅವರು ಕೇಂದ್ರ ಆರೋಗ್ಯ ಸಚಿವ ಜೆಪಿ ನಡ್ಡಾ ಹಾಗೂ ರಾಜ್ಯ ಸಚಿವ ದಿನೇಶ್ ಗುಂಡೂರಾವ್ ಅವರೊಂದಿಗೆ ಈ ಬಗ್ಗೆ ಚರ್ಚೆ ನಡೆಸಿದ್ದಾರೆ.
* ಹಾಸನ ಜಿಲ್ಲೆಯ ಬೇಲೂರು, ಸಕಲೇಶಪುರ, ಆಲೂರು, ಅರಕಲಗೂಡು ಹಾಗೂ ಚನ್ನರಾಯಪಟ್ಟಣದ ತಾಲೂಕು ಆಸ್ಪತ್ರೆಗಳಲ್ಲಿ ಸ್ಟೆಮಿ ಯೋಜನೆ ಜಾರಿಗೆ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಅನಿಲ್ ಕುಮಾರ್ ಮನವಿ ಮಾಡಿದ್ದಾರೆ. ಜಯದೇವ ಆಸ್ಪತ್ರೆಯ ಸಹಕಾರದಿಂದ ತುರ್ತು ಚಿಕಿತ್ಸೆ ನೀಡುವ ಉದ್ದೇಶವಿದೆ.
* ಸ್ಟೆಮಿ (STEMI) ಯೋಜನೆಯು ಹೃದಯಾಘಾತದಿಂದ ಸಾವಿನ ಪ್ರಮಾಣ ಕಡಿಮೆ ಮಾಡುವುದು ಎಂಬ ಉದ್ದೇಶ ಹೊಂದಿದೆ. ಇದು "ಹಬ್ ಅಂಡ್ ಸ್ಪೋಕ್" ಮಾದರಿಯಲ್ಲಿ ಜಾರಿಗೆ ಇರುತ್ತದೆ.
* ತುರ್ತು ಎದೆನೋವಿನ ಪ್ರಕರಣಗಳಲ್ಲಿ ಇಸಿಜಿ ವರದಿ ತಕ್ಷಣ ಜಯದೇವ ಹೃದ್ರೋಗ ಸಂಸ್ಥೆಗೆ ಕಳಿಸಲಾಗುತ್ತದೆ. ನುರಿತ ವೈದ್ಯರಿಂದ ಮಾರ್ಗದರ್ಶನ ಪಡೆದ ನಂತರ ತುರ್ತು ಚಿಕಿತ್ಸೆ ಅಥವಾ ಹೆಚ್ಚಿನ ಚಿಕಿತ್ಸೆಗೆ ರೋಗಿಯನ್ನು ಸ್ಥಳಾಂತರಿಸಲಾಗುತ್ತದೆ.

## ಗೋಐ ಸ್ಟ್ಯಾಟ್ಸ್ ಆಪ್ ಬಿಡುಗಡೆ: ಸಾಮಾಜಿಕ-ಆರ್ಥಿಕ ಡೇಟಾವಿಗಾಗಿ ಸರಳ ಮೊಬೈಲ್ ಸೌಲಭ್ಯ



* ಭಾರತ ಸರ್ಕಾರ 'GoIStats' ಎಂಬ ಹೊಸ ಮೊಬೈಲ್ ಆ್ಯಪ್ ಅನ್ನು ಪ್ರಾರಂಭಿಸಿದೆ. ಇದು ಬಳಕೆದಾರರಿಗೆ ಅಧಿಕೃತ ಅಂಕಿಅಂಶಗಳನ್ನು ಎಲ್ಲೆಂದರಲ್ಲಿ ಸುಲಭವಾಗಿ ಪ್ರವೇಶಿಸಲು ಸಹಾಯ ಮಾಡುತ್ತದೆ.
* ಅಂಕಿಅಂಶಗಳು ಮತ್ತು ಕಾರ್ಯಕ್ರಮ ನಿರ್ವಹಣಾ ಸಚಿವಾಲಯದ (MoSPI) ಮಾರ್ಗದರ್ಶನದಲ್ಲಿ, ರಾಷ್ಟ್ರೀಯ ಸಂಖ್ಯಾ ಸರ್ವೇಕ್ಷಣಾ ಕಚೇರಿ (NSO) ಈ ಆ್ಯಪ್ ಅನ್ನು ಅಭಿವೃದ್ಧಿಪಡಿಸಿದೆ. ಉದ್ದೇಶವೇನೆಂದರೆ – ಡೇಟಾ ಜನಪ್ರವೇಶ್ಯಗೊಳಿಸುವ ಮೂಲಕ ಪಾರದರ್ಶಕತೆ ಮತ್ತು ಮಾಹಿತಿಯ ಪ್ರವಾಹವನ್ನು ಉತ್ತೇಜಿಸುವುದು.
* GoIStats ಆ್ಯಪ್‌ನಲ್ಲಿ "Key Trends" ಎಂಬ ಡ್ಯಾಶ್‌ಬೋರ್ಡ್ ಇರುತ್ತದೆ. ಇದರ ಮೂಲಕ ಜಿಡಿಪಿ, ದುಡಿಮೆ, ದುಮ್ಮಾನ ಮುಂತಾದ ಪ್ರಮುಖ ಸೂಚಕಗಳನ್ನು ದೃಶ್ಯರೂಪದಲ್ಲಿ ತಿಳಿಯಬಹುದು.
* ಈ ಆ್ಯಪ್ನ ಆಂಡ್ರಾಯ್ಡ್ ಆವೃತ್ತಿ ಈಗ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಉಚಿತವಾಗಿ ಲಭ್ಯವಿದೆ. iOS ಆವೃತ್ತಿ ಶೀಘ್ರದಲ್ಲೇ ಬಿಡುಗಡೆ ಆಗಲಿದೆ.

## 2025 ರ ಯುಎಸ್ ಓಪನ್ ಬ್ಯಾಡ್ಮಿಂಟನ್ ಸಿಂಗಲ್ಸ್ ಪ್ರಶಸ್ತಿ ಗೆದ್ದ ಕರ್ನಾಟಕದ ಆಯುಷ್ ಶೆಟ್ಟಿ



* ಅಯೋವಾದ ಕೌನ್ಸಿಲ್ ಬ್ಲಫ್ಸ್‌ನಲ್ಲಿ ಪ್ರತಿಷ್ಠಿತ ಯುಎಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದ ಆಯುಷ್ ಶೆಟ್ಟಿ ಕರ್ನಾಟಕದಲ್ಲಿ ಹೊಸ ಬ್ಯಾಡ್ಮಿಂಟನ್ ಹೀರೋ ಆಗಿ ಹೊರಹೊಮ್ಮಿದ್ದಾರೆ.
* 20 ವರ್ಷದ ಆಯುಷ್ 2023 ರ ಕೆನಡಾ ಓಪನ್‌ನಲ್ಲಿ ಲಕ್ಷ್ಯ ಸೇನ್ ಗೆಲುವಿನ ನಂತರ ಪುರುಷರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.
* ಇದು ಅವರ ವೃತ್ತಿಜೀವನದ ಮೊದಲ ಸೀನಿಯರ್ ಪ್ರಶಸ್ತಿ ಮತ್ತು 2025 ರ ಬ್ಯಾಡ್ಮಿಂಟನ್ ವರ್ಲ್ಡ್ ಫೆಡರೇಶನ್ (ಬಿಡಬ್ಲ್ಯೂಎಫ್) ವರ್ಲ್ಡ್ ಟೂರ್ ಋತುವಿನಲ್ಲಿ ಯಾವುದೇ ಭಾರತೀಯ ಬ್ಯಾಡ್ಮಿಂಟನ್ ಆಟಗಾರ್ತಿಗೆ ಮೊದಲ ಪ್ರಶಸ್ತಿ ಗೆಲುವು.
* ಲಕ್ಷ್ಯ ಸೇನ್ (ವಿಶ್ವದ ನಂ. 20) ನಂತರ ಎರಡನೇ ಅತಿ ಹೆಚ್ಚು ಶ್ರೇಯಾಂಕಿತ ಭಾರತೀಯ ಶಟ್ಲರ್ ಆಗಿರುವ ವಿಶ್ವದ 34 ನೇ ಶ್ರೇಯಾಂಕಿತ ಆಟಗಾರ, ಮೂರನೇ ಶ್ರೇಯಾಂಕಿತ ಬ್ರಿಯಾನ್ ಯಾಂಗ್ ಅವರನ್ನು ಫೈನಲ್‌ನಲ್ಲಿ 21-18, 21-13 ಅಂತರದಿಂದ ಸೋಲಿಸಲು ಕೇವಲ 47 ನಿಮಿಷಗಳನ್ನು ತೆಗೆದುಕೊಂಡರು, ಇದು ಅವರಿಗೆ ಕೆನಡಾದ ಆಟಗಾರನ ವಿರುದ್ಧ ಸತತ ಮೂರನೇ ಗೆಲುವು ಮತ್ತು ಅವರ ಯುವ ಹಿರಿಯ ವೃತ್ತಿಜೀವನದ ಮೊದಲ ಪ್ರಶಸ್ತಿಯನ್ನು ತಂದುಕೊಟ್ಟಿತು.
* $2,40,000 ಬಹುಮಾನ ಮೊತ್ತ 2025 ರ ಜೂನ್ 24-29 ರವರೆಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದ ಅಯೋವಾದ ಮಿಡ್-ಅಮೇರಿಕಾ ಸೆಂಟರ್‌ನಲ್ಲಿ ನಡೆಯಿತು. ಯುಎಸ್ ಓಪನ್ ಬಿಡಬ್ಲ್ಯೂಎಫ್ ಸೂಪರ್ 300 ಈವೆಂಟ್ ಆಗಿತ್ತು.
* ಆಯುಷ್ ಶರ್ಮಾ 2025 ರ ಬಿಡಬ್ಲ್ಯೂಎಫ್ ಯುಎಸ್ ಓಪನ್‌ನಲ್ಲಿ ಕೆನಡಾದ ಬ್ರಿಯಾನ್ ಯಾಂಗ್ ಅವರನ್ನು 21-18,21-13 ಅಂತರದಿಂದ ಸೋಲಿಸುವ ಮೂಲಕ ತಮ್ಮ ವೃತ್ತಿಜೀವನದ ಮೊದಲ ಸೀನಿಯರ್ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದರು.
* ಕ್ವಾರ್ಟರ್ ಫೈನಲ್‌ನಲ್ಲಿ ಆಯುಷ್ ಶೆಟ್ಟಿ AVARU ಚೈನೀಸ್ ತೈಪೆಯ ಮಾಜಿ ಜೂನಿಯರ್ ವಿಶ್ವ ಚಾಂಪಿಯನ್ ಕುವೊ ಕುವಾನ್-ಲಿನ್ ಅವರನ್ನು 22-20, 21-9 ಅಂತರದಿಂದ ಸೋಲಿಸಿದರು.

## 2025 ರ ಜಾಗತಿಕ ಯುನಿಕಾರ್ನ್ ಸೂಚ್ಯಂಕ ಬಿಡುಗಡೆ




* ಹುರುನ್ ಸಂಶೋಧನಾ ಸಂಸ್ಥೆಯು ಹುರುನ್ ಗ್ಲೋಬಲ್ ಯುನಿಕಾರ್ನ್ ಸೂಚ್ಯಂಕ 2025 ನ್ನು ಪ್ರಕಟಿಸಿದೆ. ಯುನೈಟೆಡ್ ಸ್ಟೇಟ್ಸ್ 758 ಯುನಿಕಾರ್ನ್‌ಗಳೊಂದಿಗೆ ವಿಶ್ವದಲ್ಲೇ ಮುಂಚೂಣಿಯಲ್ಲಿದೆ, 343 ಯುನಿಕಾರ್ನ್‌ಗಳೊಂದಿಗೆ ಚೀನಾ ಎರಡನೇ ಸ್ಥಾನ ಮತ್ತು ಭಾರತ 64 ಯುನಿಕಾರ್ನ್‌ಗಳೊಂದಿಗೆ ಮೂರನೇ ಸ್ಥಾನದಲ್ಲಿದೆ.
* ಹುರುನ್ ಸಂಶೋಧನಾ ಸಂಸ್ಥೆ ಪ್ರಕಟಿಸಿದ ಹುರುನ್ ಗ್ಲೋಬಲ್ ಯುನಿಕಾರ್ನ್ ಸೂಚ್ಯಂಕ 2025 , ಜಾಗತಿಕ ನವೋದ್ಯಮ ಪರಿಸರ ವ್ಯವಸ್ಥೆಯಲ್ಲಿ ಮಹತ್ವದ ಮೈಲಿಗಲ್ಲನ್ನು ಗುರುತಿಸುತ್ತದೆ. ಈ ವರ್ಷ, ಯುನಿಕಾರ್ನ್ಸ್ ಎಂದು ಕರೆಯಲ್ಪಡುವ $1 ಬಿಲಿಯನ್‌ಗಿಂತಲೂ ಹೆಚ್ಚು ಮೌಲ್ಯದ ಖಾಸಗಿಯಾಗಿ ಹೊಂದಿರುವ ನವೋದ್ಯಮಗಳ ಒಟ್ಟು ಸಂಖ್ಯೆ ದಾಖಲೆಯ 1,523 ತಲುಪಿದೆ. ಒಟ್ಟಾರೆಯಾಗಿ $5.6 ಟ್ರಿಲಿಯನ್ ಮೌಲ್ಯದ ಈ ಕಂಪನಿಗಳು ಜಾಗತಿಕ ನಾವೀನ್ಯತೆ ಮತ್ತು ಉದ್ಯಮಶೀಲತೆಯ ಮುಂಚೂಣಿಯನ್ನು ಪ್ರತಿನಿಧಿಸುತ್ತವೆ
* 2019 ರಿಂದ, ಯುನಿಕಾರ್ನ್‌ಗಳನ್ನು ಹೊಂದಿರುವ ದೇಶಗಳ ಸಂಖ್ಯೆ 120% ರಷ್ಟು ಹೆಚ್ಚಾಗಿದ್ದು , ಈಗ ಒಟ್ಟು 52 ರಾಷ್ಟ್ರಗಳಾಗಿವೆ . ಅದೇ ರೀತಿ, ಯುನಿಕಾರ್ನ್‌ಗಳು ಈಗ 307 ನಗರಗಳಲ್ಲಿ ಹರಡಿಕೊಂಡಿವೆ , ಇದು ಭೌಗೋಳಿಕ ವೈವಿಧ್ಯತೆಯಲ್ಲಿ ವರ್ಷದಿಂದ ವರ್ಷಕ್ಕೆ 160% ಹೆಚ್ಚಳವನ್ನು ತೋರಿಸುತ್ತದೆ . ಇದು ಸಾಂಪ್ರದಾಯಿಕ ತಂತ್ರಜ್ಞಾನ ಕೇಂದ್ರಗಳನ್ನು ಮೀರಿ ನವೋದ್ಯಮ ಪರಿಸರ ವ್ಯವಸ್ಥೆಯ ವಿಸ್ತರಿಸುತ್ತಿರುವ ವ್ಯಾಪ್ತಿಯನ್ನು ಪ್ರದರ್ಶಿಸುತ್ತದೆ.

*** ಯುನಿಕಾರ್ನ್‌ಗಳ ಸಂಖ್ಯೆಯ ಪ್ರಕಾರ ಟಾಪ್ 10 ದೇಶಗಳು (2025) :**

1 ಅಮೇರಿಕ ಸಂಯುಕ್ತ ಸಂಸ್ಥಾನ : 758 ಸ್ಯಾನ್ ಫ್ರಾನ್ಸಿಸ್ಕೊ (1), ನ್ಯೂಯಾರ್ಕ್ (2), ಬೋಸ್ಟನ್ (10), ಆಸ್ಟಿನ್ (14)

KPSCVaani

2 ಚೀನಾ : 343 ಬೀಜಿಂಗ್ (3), ಶಾಂಘೈ (4), ಶೆನ್‌ಜೆನ್ (6), ಗುವಾಂಗ್ ಝೌ (11)
3 ಭಾರತ : 64 (ಅನುವಾದ) ಬೆಂಗಳೂರು (7), ಮುಂಬೈ (22), ಗುರುಗ್ರಾಮ್ (27)
4 ಯುನೈಟೆಡ್ ಕಿಂಗ್‌ಡಮ್ : 61 (ಅನುವಾದ) ಲಂಡನ್ (5)
5 ಜರ್ಮನಿ : 36 ಬರ್ಲಿನ್ (13)
6 ಫ್ರಾನ್ಸ್ : 30 ಪ್ಯಾರಿಸ್ (8)
7 ಕೆನಡಾ : 28 ಟೊರೊಂಟೊ (24)
8 ಇಸ್ರೇಲ್ : 20 ಟೆಲ್ ಅವಿವ್ (24)
9 ದಕ್ಷಿಣ ಕೊರಿಯಾ : 18 ಸಿಯೋಲ್ (17)
10 ಸಿಂಗಾಪುರ್ : 18 ಸಿಂಗಾಪುರ (14)

* ಯುನೈಟೆಡ್ ಸ್ಟೇಟ್ಸ್ 758 ಯುನಿಕಾರ್ನ್‌ಗಳೊಂದಿಗೆ ವಿಶ್ವದಲ್ಲೇ ಮುಂಚೂಣಿಯಲ್ಲಿದೆ, ಬೀಜಿಂಗ್ , ಶಾಂಘೈ ಮತ್ತು ಶೆನ್ಜೆನ್‌ನಂತಹ ತಂತ್ರಜ್ಞಾನ ಕೇಂದ್ರಗಳಲ್ಲಿ 343 ಯುನಿಕಾರ್ನ್‌ಗಳೊಂದಿಗೆ ಚೀನಾ ಎರಡನೇ ಸ್ಥಾನದಲ್ಲಿದೆ.

* ಭಾರತವು 64 ಯುನಿಕಾರ್ನ್‌ಗಳೊಂದಿಗೆ ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ, ಬೆಂಗಳೂರು , ಮುಂಬೈ ಮತ್ತು ಗುರುಗ್ರಾಮ್‌ನಂತಹ ನಗರಗಳು ಮುನ್ನಡೆಸುತ್ತವೆ . ಈ ಬೆಳವಣಿಗೆಯನ್ನು ಚಾಲನೆ ಮಾಡುವ ಕ್ಷೇತ್ರಗಳಲ್ಲಿ ಫಿನ್‌ಟೆಕ್ , ಗೇಮಿಂಗ್ ಮತ್ತು ಎಡ್‌ಟೆಕ್ ಸೇರಿವೆ . ಭಾರತದ ಪ್ರಮುಖ ಯುನಿಕಾರ್ನ್‌ಗಳು.

ಜೆರೋಧಾ - $8.2 ಬಿಲಿಯನ್
ಡ್ರೀಮ್ 11 - $8 ಬಿಲಿಯನ್
ರೇಜರ್‌ಪೇ - $7.5 ಬಿಲಿಯನ್

* ಯುನಿಕಾರ್ನ್ ಕೌಂಟ್ ಪ್ರಕಾರ ಟಾಪ್ ನಗರಗಳು
ಸ್ಯಾನ್ ಫ್ರಾನ್ಸಿಸ್ಕೊ - 199 ಯುನಿಕಾರ್ನ್‌ಗಳು
ನ್ಯೂಯಾರ್ಕ್ – 142
ಬೀಜಿಂಗ್ – 91
ಶಾಂಘೈ - 69
ಲಂಡನ್ – 55
ಶೆನ್ಜೆನ್ – 46
ಬೆಂಗಳೂರು – 36
ಪ್ಯಾರಿಸ್ – 32
ಪಾಲೊ ಆಲ್ಟೊ – 30
ಬೋಸ್ಟನ್ – 27

## ಭಾರತದಲ್ಲಿ 97 ಕೋಟಿಗೂ ಅಧಿಕ ಇಂಟರ್ನೆಟ್ ಬಳಕೆ



* ಕಳೆದ 10 ವರ್ಷಗಳಲ್ಲಿ ಡಿಜಿಟಲ್ ಇಂಡಿಯಾ ಸಬಲೀಕರಣಕ್ಕೆ ಆದ್ಯತೆ ನೀಡಿದ ಪರಿಣಾಮವಾಗಿ ಇತ್ತೀಚೆಗೆ ದೇಶದಲ್ಲಿ ಇಂಟರ್ನೆಟ್ ಸಂಪರ್ಕ 97 ಕೋಟಿಗೂ ಮೀರಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ತಿಳಿಸಿದ್ದಾರೆ.

* 2014 ರಲ್ಲಿ ಕೇವಲ 25 ಕೋಟಿ ಇಂಟರ್ನೆಟ್ ಬಳಕೆದಾರರು ಇದ್ದರೆ, ಈಗ ಈ ಸಂಖ್ಯೆ ನಾಲ್ಕು ಪಟ್ಟು ಹೆಚ್ಚಾಗಿದೆ. ಜೊತೆಗೆ, 42 ಲಕ್ಷ ಕಿಲೋಮೀಟರ್‌ಗಳಷ್ಟು ಆಪ್ಟಿಕಲ್ ಫೈಬರ್ ಕೇಬಲ್ ದೇಶಾದ್ಯಂತ ಅಳವಡಿಸಲಾಗಿದೆ. ಇದು ಭೂಮಿ ಮತ್ತು ಚಂದ್ರನ ನಡುವಿನ ಅಂತರದ 11 ಪಟ್ಟು ಹೆಚ್ಚಾಗಿದೆ.

* ಡಿಜಿಟಲ್ ಇಂಡಿಯಾ ಯೋಜನೆಯ 10ನೇ ವಾರ್ಷಿಕೋತ್ಸವದ ಅಂಗವಾಗಿ, ಮೋದಿ ಅವರು ತಂತ್ರಜ್ಞಾನವು ಭಾರತೀಯರ ಆಡಳಿತ, ಆರ್ಥಿಕತೆ ಮತ್ತು ದೈನಂದಿನ ಜೀವನದ ಮೇಲೆ ಬೃಹತ್ ಪರಿಣಾಮ ಬೀರಿದೆಯೆಂದು ಹೇಳಿದ್ದಾರೆ.

* ತಂತ್ರಜ್ಞಾನದ ಬಳಕೆ ಮೇಲೆ ಹಿಂದೆ ಸಂದೇಹವಿದ್ದರೂ, ಈಗ ದೇಶದ ಮನಸ್ಥಿತಿ ಸಂಪೂರ್ಣ ಬದಲಾಗಿದೆ. "ಅವಕಾಶಗಳಿಲ್ಲದವರಿಗೆ ತಂತ್ರಜ್ಞಾನ ಅಂತರ ಸೃಷ್ಟಿಸುವುದಿಲ್ಲ, ಬದಲಾಗಿ ಅದನ್ನು ಕಡಿಮೆ ಮಾಡುವುದು ಸಾಧ್ಯ" ಎಂಬ ನಂಬಿಕೆಗೆ ದಾರಿ ಮಾಡಿದೆ ಎಂದು ಹೇಳಿದರು.

* 5G ಸೇವೆಯು ಭಾರತದಲ್ಲಿ ಅತ್ಯಂತ ವೇಗವಾಗಿ ವಿಸ್ತಾರಗೊಂಡಿದ್ದು, ಕೇವಲ 2 ವರ್ಷಗಳಲ್ಲಿ 4.81 ಲಕ್ಷ ಬೇಸ್ ಸ್ಟೇಷನ್‌ಗಳು ಸ್ಥಾಪನೆಯಾಗಿವೆ. ಗಾಲ್ವಾನ್, ಸಿಯಾಚಿನ್, ಲಡಾಖ್ ಸೇರಿದಂತೆ ಹಿಮಪ್ರದೇಶದ ದೂರದ ಪ್ರದೇಶಗಳಿಗೂ ಈ ಸೇವೆ ತಲುಪಿದೆ.

## ಜುಲೈನಲ್ಲಿ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಅಧ್ಯಕ್ಷತೆ ವಹಿಸಿದ ಪಾಕಿಸ್ತಾನ




* ಜುಲೈ ತಿಂಗಳಿಗೆ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಅಧ್ಯಕ್ಷತೆಯನ್ನು ಪಾಕಿಸ್ತಾನ ಮಂಗಳವಾರ(ಜುಲೈ 01) ವಹಿಸಿಕೊಂಡಿದೆ.

* ಇದು 2013ರ ಬಳಿಕ ಪಾಕಿಸ್ತಾನದ ಪ್ರಥಮ ಅಧ್ಯಕ್ಷತೆಯಾಗಿದೆ. ಈ ತಿಂಗಳಲ್ಲಿ ಎರಡು ಉನ್ನತ ಮಟ್ಟದ ಪ್ರಮುಖ ಕಾರ್ಯಕ್ರಮಗಳು ನಡೆಯಲಿವೆ.

* ಜುಲೈ 22ರಂದು ` ಬಹುಪಕ್ಷೀಯತೆ ಮತ್ತು ವಿವಾದಗಳ ಶಾಂತಿಯುತ ಇತ್ಯರ್ಥದ ಮೂಲಕ ಅಂತರಾಷ್ಟ್ರೀಯ ಶಾಂತಿ ಮತ್ತು ಸುರಕ್ಷತೆಯನ್ನು ಉತ್ತೇಜಿಸುವುದು' ಎಂಬ ವಿಷಯದಲ್ಲಿ ಮುಕ್ತ ಚರ್ಚೆ, ಜುಲೈ 24ರಂದು `ವಿಶ್ವಸಂಸ್ಥೆ ಮತ್ತು ಪ್ರಾದೇಶಿಕ ಮತ್ತು ಉಪ ಪ್ರಾದೇಶಿಕ ಸಂಸ್ಥೆಗಳ ನಡುವಿನ ಸಹಕಾರ' ಕುರಿತು ಸಭೆ ನಡೆಯಲಿದ್ದು, ಎರಡೂ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ಉಪ ಪ್ರಧಾನಿ ಮತ್ತು ವಿದೇಶಾಂಗ ಸಚಿವ ಇಶಾಕ್ ದಾರ್ ವಹಿಸಲಿದ್ದಾರೆ ಎಂದು ವರದಿ ತಿಳಿಸಿದೆ.

* ಈ ಮಧ್ಯೆ, ಭಾರತವು ಸಿಂಧೂ ನದಿ ನೀರು ಹಂಚಿಕೆ ಒಪ್ಪಂದವನ್ನು ಅಮಾನತುಗೊಳಿಸಿರುವುದನ್ನು ಪ್ರಶ್ನಿಸಿ ಪಾಕಿಸ್ತಾನ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ್ದ ಶಾಶ್ವತ ಮಧ್ಯಸ್ಥಿಕೆ ನ್ಯಾಯಾಲಯ ` ಒಪ್ಪಂದವು ಇನ್ನೂ ಮಾನ್ಯವಾಗಿದೆ ಮತ್ತು

KPSC Vaani

ಕ್ರಿಯಾತ್ಮಕವಾಗಿದೆ' ಎಂದು ತೀರ್ಪು ನೀಡಿತ್ತು. ಆದರೆ ತೀರ್ಪನ್ನು ಬಲವಾಗಿ ತಿರಸ್ಕರಿಸುವುದಾಗಿ ಭಾರತ ಹೇಳಿತ್ತು.

* ನ್ಯಾಯಾಲಯ ನೀಡಿರುವ ತೀರ್ಪು ಪಾಕಿಸ್ತಾನದ ನಿಲುವನ್ನು ಸಮರ್ಥಿಸಿದೆ. ಆದ್ದರಿಂದ ಭಾರತ ತಕ್ಷಣ ಸಿಂಧೂ ನದಿ ನೀರು ಹಂಚಿಕೆ ಒಪ್ಪಂದದಡಿಯ ತನ್ನ ಬಾಧ್ಯತೆಗಳನ್ನು ಸಂಪೂರ್ಣವಾಗಿ ಪಾಲಿಸಬೇಕು ಎಂದು ಇಶಾಕ್ ದಾರ್ ಸೋಮವಾರ ಆಗ್ರಹಿಸಿದ್ದಾರೆ.

## ರೈಲ್‌ಒನ್: ಎಲ್ಲಾ ರೈಲ್ವೆ ಸೇವೆಗಳೂ ಒಂದೇ ಆಪ್‌ನಲ್ಲಿ ಲಭ್ಯ

RailOne

* ಭಾರತೀಯ ರೈಲ್ವೆ ಹೊಸದಾಗಿ ಪರಿಚಯಿಸಿರುವ 'ರೈಲ್‌ಒನ್' (Rail One) ಎಂಬ ಸೂಪರ್ ಆಪ್ ಮೂಲಕ ಪ್ರಯಾಣಿಕರು ಈಗ ಟಿಕೆಟ್ ಬುಕ್ಕಿಂಗ್, ಆಹಾರ ಆರ್ಡರ್‌ವರೆಗೆ ಎಲ್ಲಾ ಸೇವೆಗಳನ್ನು ಒಂದೇ ಸ್ಥಳದಲ್ಲಿ ಪಡೆಯಬಹುದಾಗಿದೆ. ರೈಲ್‌ಒನ್ ಮೂಲಕ ಐಆರ್‌ಸಿಟಿಸಿ ಟಿಕೆಟ್ ಕಾಯ್ದಿರಿಕೆ, ಪಿಎನ್‌ಆರ್ ಸ್ಟೇಟಸ್, ರೈಲು ಸ್ಥಿತಿ, ಕೋಚ್ ಮಾಹಿತಿ, ಆಹಾರ ಸೇವೆಗಳು, ಪ್ಲಾಟ್‌ಫಾರ್ಮ್ ಟಿಕೆಟ್ ಬುಕ್ಕಿಂಗ್ ಸೇರಿದಂತೆ ಅನೇಕ ಸೇವೆಗಳು ಲಭ್ಯವಿದೆ.

* ಈ ಆಪ್ 'ಸಿಂಗಲ್ ಸೈನ್ ಇನ್' ವ್ಯವಸ್ಥೆ ಹೊಂದಿದ್ದು, ಮಲ್ಟಿಪಲ್ ಪಾಸ್ವರ್ಡ್ ಅಗತ್ಯವಿಲ್ಲ. ಈಗಿನ Rail Connect ಅಥವಾ UTS ಐಡಿಯಿಂದಲೇ ಲಾಗಿನ್ ಮಾಡಬಹುದು.

* ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಲಭ್ಯವಿರುವ ಈ ಆಪ್, Android ಮತ್ತು iOS ಸ್ಟೋರ್‌ಗಳಲ್ಲಿ ಡೌನ್‌ಲೋಡ್ ಮಾಡಲು ಸಿದ್ಧವಾಗಿದೆ.

* ಬಳಕೆದಾರರು ಸರಳ ಎಂಪಿನ್ ಅಥವಾ ಬಯೋಮೆಟ್ರಿಕ್ ಮೂಲಕ ಲಾಗಿನ್ ಮಾಡಬಹುದು. ಹೊಸ ಬಳಕೆದಾರರಿಗೆ ಸುಲಭ ನೋಂದಣಿ ಆಯ್ಕೆಯಿದೆ.

* ಇನ್ನುಮುಂದೆ ವಿಭಿನ್ನ ರೈಲ್ವೆ ಅಪ್ಲಿಕೇಶನ್ಗಳನ್ನು ಡೌನ್ಲೋಡ್ ಮಾಡಬೇಕಾಗಿಲ್ಲ. ರೈಲ್‌ಒನ್ ಒಂದೇ ಆಪ್ನಲ್ಲಿ ಎಲ್ಲವೂ ಲಭ್ಯ.

* CRIS ಅಭಿವೃದ್ಧಿಪಡಿಸಿರುವ ಈ ಆಪ್ನ ಉದ್ದೇಶ, ಪ್ರಯಾಣಿಕರಿಗೆ ಸುಲಭ ಮತ್ತು ಸ್ಮಾರ್ಟ್ ಅನುಭವ ಒದಗಿಸುವುದು.

* ರೈಲ್‌ಒನ್ ಭಾರತದ ರೈಲ್ವೆ ವ್ಯವಸ್ಥೆಯನ್ನು ಡಿಜಿಟಲೀಕರಣದತ್ತ ಇಂಪು ನೀಡುವ ಹೆಜ್ಜೆಯಾಗಿದೆ. ಪ್ರಯಾಣಿಕರ ಅನುಭವವನ್ನು ಸುಧಾರಿಸಲು ಇದು ಬಹುಮುಖ್ಯ ಸಾಧನವಾಗಲಿದೆ.

## ಭಾರತದ ಡಿಜಿಟಲ್ ಕ್ರಾಂತಿಯ 10 ವರ್ಷಗಳ ಸಂಭ್ರಮ



* ಪ್ರಧಾನಿ ನರೇಂದ್ರ ಮೋದಿ ಅವರು ಡಿಜಿಟಲ್ ಇಂಡಿಯಾ ಕಾರ್ಯಕ್ರಮದ ದಶಕದ ಪ್ರಯಾಣದ ಕುರಿತು ಲಿಂಕ್ಡ್‌ಇನ್‌ನಲ್ಲಿ ಬ್ಲಾಗ್ ಹಂಚಿಕೊಂಡಿದ್ದಾರೆ. ಈ ಬ್ಲಾಗ್‌ನಲ್ಲಿ ಅವರು ತಂತ್ರಜ್ಞಾನವನ್ನು ಅಂಚಿನಲ್ಲಿರುವವರ ಸಬಲೀಕರಣಕ್ಕೆ ಬಳಸಿರುವಂತೆ ವಿವರಿಸಿದ್ದಾರೆ.

* ಮೋದಿ ಅವರು ತಂತ್ರಜ್ಞಾನವನ್ನು ಅಸಮಾನತೆ ಹೆಚ್ಚಿಸಲು ಅಲ್ಲದೆ, ಎಲ್ಲರಿಗೂ ಸಮಾನ ಅವಕಾಶ ನೀಡುವ ಸಾಧನವಾಗಿ ಬಳಸಲಾಗಿದೆ ಎಂದು ಹೇಳಿದ್ದಾರೆ. ತಂತ್ರಜ್ಞಾನವನ್ನು ಎಲ್ಲರಿಗೂ ಲಭ್ಯವಾಗುವಂತೆ ಮಾಡುವುದು ಡಿಜಿಟಲ್ ಇಂಡಿಯಾದ ಧ್ಯೇಯ ಎಂದು ಅವರು ಹೇಳಿದ್ದಾರೆ.

* 2014 ರಲ್ಲಿ 25 ಕೋಟಿ ಇಂಟರ್ನೆಟ್ ಸಂಪರ್ಕಗಳು ಇದ್ದವು, ಇಂದು ಅದು 97 ಕೋಟಿಗೂ ಹೆಚ್ಚಾಗಿದೆ. 42 ಲಕ್ಷ ಕಿಮೀ ಆಪ್ಟಿಕಲ್ ಫೈಬರ್ ಕೇಬಲ್‌ಗಳಿಂದ ದೂರದ ಹಳ್ಳಿಗಳಿಗೂ ಸಂಪರ್ಕ ಒದಗಿಸಲಾಗಿದೆ. 5G ನೆಟ್ವರ್ಕ್ ವೇಗವಾಗಿ ವಿಸ್ತಾರಗೊಂಡಿದೆ.

* ಯುಪಿಐ ಮೂಲಕ ವರ್ಷಕ್ಕೆ 100 ಬಿಲಿಯನ್ ವಹಿವಾಟುಗಳು ನಡೆಯುತ್ತಿವೆ. ಡಿಜಿಟಲ್ ಬೆನ್ನೆಲುಬಾದ ಇಂಡಿಯಾ ಸ್ಟ್ಯಾಕ್ ಸಕ್ರಿಯವಾಗಿದೆ. ಡಿಬಿಟಿ ಮೂಲಕ ₹44 ಲಕ್ಷ ಕೋಟಿ ನೇರವಾಗಿ ಜನರಿಗೆ ವರ್ಗಾಯಿಸಲಾಗಿದೆ ಮತ್ತು ₹3.48 ಲಕ್ಷ ಕೋಟಿ ಸೋರಿಕೆ ತಡೆಗಟ್ಟಲಾಗಿದೆ.

* ONDC ಮೂಲಕ ಸಣ್ಣ ವ್ಯಾಪಾರಿಗಳು ಮಧ್ಯವರ್ತಿಗಳಿಲ್ಲದೇ ವಹಿವಾಟು ಮಾಡುತ್ತಿದ್ದಾರೆ. GeM ಮೂಲಕ 22 ಲಕ್ಷ ಮಾರಾಟಗಾರರು ₹46,000 ಕೋಟಿ ಮೌಲ್ಯದ ಆರ್ಡರ್‌ಗಳನ್ನು ಪೂರೈಸಿದ್ದಾರೆ. ಈ ವೇದಿಕೆಗಳು MSMEಗಳಿಗೆ ಬೃಹತ್ ಮಾರುಕಟ್ಟೆಯನ್ನು ಒದಗಿಸುತ್ತಿವೆ.

* ಆಧಾರ್, ಕೋವಿನ್, ಡಿಜಿಲಾಕರ್, ಫಾಸ್ಟ್‌ಟ್ಯಾಗ್ ಮುಂತಾದ ಯೋಜನೆಗಳು ವಿಶ್ವದ ಗಮನ ಸೆಳೆದಿವೆ. ಭಾರತ G20 ಅಧ್ಯಕ್ಷತೆಯ ಸಮಯದಲ್ಲಿ ಜಾಗತಿಕ ಡಿಪಿಐ ಭಂಡಾರ ಮತ್ತು ಸಾಮಾಜಿಕ ಪರಿಣಾಮ ನಿಧಿಯನ್ನು ಪ್ರಾರಂಭಿಸಿದೆ.

* ಭಾರತವು ಈಗ 1.8 ಲಕ್ಷಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳನ್ನು ಹೊಂದಿರುವ ನವೋದ್ಯಮ ಕೇಂದ್ರವಾಗಿದೆ. $1.2 ಬಿಲಿಯನ್ ಮೌಲ್ಯದ ಇಂಡಿಯಾ AI ಮಿಷನ್ ಮೂಲಕ AI ಕ್ಷೇತ್ರದಲ್ಲಿಯೂ ಭಾರತ ಮುಂಚೂಣಿಯಲ್ಲಿದೆ.

* ಮುಂದಿನ ದಶಕದಲ್ಲಿ ಭಾರತ ಜಾಗತಿಕ ಡಿಜಿಟಲ್ ನಾಯಕತ್ವದತ್ತ ಸಾಗಲಿದ್ದು, ಡಿಜಿಟಲ್ ಇಂಡಿಯಾ ಚಳುವಳಿಯು ಆತ್ಮನಿರ್ಭರ ಭಾರತದ ನಿರ್ಮಾಣಕ್ಕೆ ಕೇಂದ್ರವಾಗಲಿದೆ ಎಂದು ಪ್ರಧಾನಿ ಮೋದಿ ಆಶಯ ವ್ಯಕ್ತಪಡಿಸಿದ್ದಾರೆ.

## "ಖೇಲೋ ಭಾರತ್" : 24 ವರ್ಷಗಳ ಬಳಿಕ ಭಾರತಕ್ಕೆ ನೂತನ ಕ್ರೀಡಾ ನೀತಿ



* ಭಾರತ ಸರ್ಕಾರ "ಖೇಲೋ ಭಾರತ್" ಎಂಬ ಹೆಸರಿನ ಹೊಸ ರಾಷ್ಟ್ರೀಯ ಕ್ರೀಡಾ ನೀತಿಯನ್ನು ಘೋಷಿಸಿದ್ದು, ಮಂಗಳವಾರ(ಜುಲೈ 01) ಕೇಂದ್ರ ಸಚಿವ ಸಂಪುಟ ಇದಕ್ಕೆ ಅನುಮೋದನೆ ನೀಡಿದೆ. ಈ ಮೂಲಕ 24 ವರ್ಷಗಳ ನಂತರ ದೇಶಕ್ಕೆ ಹೊಸ ಕ್ರೀಡಾ ನೀತಿ ಸಿಕ್ಕಿದೆ.

KPSCVaani

* ಈ ನೂತನ ನೀತಿಯು 2001ರ ಕ್ರೀಡಾ ನೀತಿಗೆ ಬದಲಿಯಾಗಿ ಜಾರಿಗೆ ಬರುವುದಾಗಿದೆ. ಮೊದಲ ಕ್ರೀಡಾ ನೀತಿಯನ್ನು ಭಾರತ 1984ರಲ್ಲಿ ಘೋಷಿಸಿತ್ತು.
* "ಖೇಲೋ ಭಾರತ್" ನೀತಿಯ ಮುಖ್ಯ ಉದ್ದೇಶ, ಭಾರತವನ್ನು 2047ರ ಒಳಗಾಗಿ ಜಾಗತಿಕ ಕ್ರೀಡಾ ಕ್ಷೇತ್ರದಲ್ಲಿ ಅಗ್ರ 5 ರಾಷ್ಟ್ರಗಳಲ್ಲಿ ಒಂದಾಗಿ ರೂಪಿಸುವುದಾಗಿದೆ.
* 2036ರ ಒಲಿಂಪಿಕ್ಸ್ ಆತಿಥ್ಯಕ್ಕಾಗಿ ಭಾರತ ಬಿಡ್ಡಿಂಗ್‌ಗೆ ಸಿದ್ಧವಾಗುತ್ತಿರುವ ಹಿನ್ನೆಲೆಯಲ್ಲಿ, ಈ ನೀತಿ ಭಾರತೀಯ ಕ್ರೀಡಾ ಕ್ಷೇತ್ರಕ್ಕೆ ದಿಕ್ಕು ನೀಡಲಿದೆ. ಸದ್ಯ ಭಾರತ 18ನೇ ಸ್ಥಾನದಲ್ಲಿದೆ.
* ನೀತಿಯಲ್ಲಿ ಕ್ರಿಯಾಶೀಲ ಕ್ರೀಡಾ ಪ್ರವಾಸೋದ್ಯಮ, ಬೀಚ್ ಮತ್ತು ಸಾಹಸ ಕ್ರೀಡೆಗಳಿಗೆ ಉತ್ತೇಜನ, ಹೊಸ ಕ್ರೀಡಾ ಲೀಗ್‌ಗಳು, ಆ್ಯತ್ಲೀಟ್‌ಗಳಿಗೆ ಹೂಡಿಕೆ ಮುಂತಾದ ಕ್ರಮಗಳನ್ನು ಒಳಗೊಂಡಿದೆ.
* ಈ ನೀತಿ ಕೇಂದ್ರ-ರಾಜ್ಯ ಸರ್ಕಾರಗಳು, ನೀತಿ ಆಯೋಗ, ಕ್ರೀಡಾ ಒಕ್ಕೂಟಗಳು, ತಜ್ಞರು ಮತ್ತು ಸಾರ್ವಜನಿಕರ ಸಮಾಲೋಚನೆಯ ಫಲವಾಗಿ ರೂಪಿಸಲ್ಪಟ್ಟಿದೆ.
* ಪ್ರಧಾನಿ ನರೇಂದ್ರ ಮೋದಿ ಈ ಕ್ರೀಡಾ ನೀತಿಯನ್ನು ಭಾರತದಲ್ಲಿ ಕ್ರೀಡಾ ಪ್ರತಿಭೆ ಬೆಳವಣಿಗೆಗೆ ಹೆಗ್ಗುರುತು ಎಂದು ಪ್ರಶಂಸಿಸಿದ್ದಾರೆ.

## 03 July 2025

### ಜುಲೈ 3 : ಅಂತರಾಷ್ಟ್ರೀಯ ಪ್ಲಾಸ್ಟಿಕ್ ಬ್ಯಾಗ್ ಮುಕ್ತ ದಿನ




* ಅಂತಾರಾಷ್ಟ್ರೀಯ ಪ್ಲಾಸ್ಟಿಕ್ ಬ್ಯಾಗ್ ಮುಕ್ತ ದಿನವನ್ನು ಪ್ರತಿ ವರ್ಷ ಜುಲೈ 3 ರಂದು ಆಚರಿಸಲಾಗುತ್ತದೆ. ಪ್ಲಾಸ್ಟಿಕ್ ಮಾಲಿನ್ಯಕ್ಕೆ ಶೂನ್ಯ-ಸಹಿಷ್ಣು ವಿಧಾನವನ್ನು ಉತ್ತೇಜಿಸಲು ಮತ್ತು ಪ್ಲಾಸ್ಟಿಕ್ ತ್ಯಾಜ್ಯವನ್ನು ಮರುಬಳಕೆ ಮತ್ತು ಕಾಂಪೋಸ್ಟ್ ಮಾಡುವ ಪ್ರಾಮುಖ್ಯತೆಯನ್ನು ಉತ್ತೇಜಿಸಲು ಈ ದಿನವನ್ನು ಮೀಸಲಿಡಲಾಗಿದೆ.
* ಪರಿಸರದ ಮೇಲೆ ಬಿಸಾಡಬಹುದಾದ ಪ್ಲಾಸ್ಟಿಕ್ ಚೀಲಗಳ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಜುಲೈ 3 ರಂದು ಅಂತರರಾಷ್ಟ್ರೀಯ ಪ್ಲಾಸ್ಟಿಕ್ ಚೀಲ ಮುಕ್ತ ದಿನವನ್ನು ಆಚರಿಸಲಾಗುತ್ತದೆ.
* ಈ ದಿನವು ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ಕಡಿಮೆ ಮಾಡಲು ಮತ್ತು ಹೆಚ್ಚು ಸಮರ್ಥನೀಯ ಪರ್ಯಾಯಗಳನ್ನು ಅನ್ವೇಷಿಸಲು ಜಾಗತಿಕವಾಗಿ ವ್ಯಕ್ತಿಗಳು, ಸಮುದಾಯಗಳು ಮತ್ತು ವ್ಯವಹಾರಗಳಿಗೆ ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ.
* ವಿಶ್ವಾದ್ಯಂತ ಜನರು, ಪರಿಸರ ಗುಂಪುಗಳು ಮತ್ತು ಸಂಸ್ಥೆಗಳು ಪ್ಲಾಸ್ಟಿಕ್ ಚೀಲಗಳ ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ಶಿಕ್ಷಣ ನೀಡಲು ಮತ್ತು ಮರುಬಳಕೆ ಮಾಡಬಹುದಾದ ಬ್ಯಾಗ್ ಆಯ್ಕೆಗಳನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಲು ವೈವಿಧ್ಯಮಯ ಚಟುವಟಿಕೆಗಳು, ಕಾರ್ಯಾಗಾರಗಳು ಮತ್ತು ಅಭಿಯಾನಗಳಲ್ಲಿ ಭಾಗವಹಿಸುತ್ತವೆ.
* ಆಸ್ಟ್ರೇಲಿಯಾ ಮೂಲದ ಮಿಂಡರೂ ಫೌಂಡೇಶನ್‌ನ ವರದಿಯ ಪ್ರಕಾರ, ಏಕ-ಬಳಕೆಯ ಪ್ಲಾಸ್ಟಿಕ್‌ನಿಂದ ಭಾರತದಲ್ಲಿ ಪ್ರತಿ ವ್ಯಕ್ತಿಯಿಂದ 4 ಕೆ.ಜಿ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ ಎಂದು ಹೇಳಿದೆ.
* ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB) ಪ್ರಕಾರ, 2022-23 ರವರೆಗೆ, ರಾಜ್ಯದಲ್ಲಿ ವಾರ್ಷಿಕವಾಗಿ 2.96 ಲಕ್ಷ ಟನ್ ಪ್ಲಾಸ್ಟಿಕ್ ಉತ್ಪಾದನೆಯಾಗುತ್ತಿದೆ ಎಂದು ತಿಳಿಸಿದೆ.
* ಜುಲೈ 3, 2008 ರಂದು ಆಚರಿಸಲಾದ ಮೊದಲ ಅಂತರರಾಷ್ಟ್ರೀಯ ಪ್ಲಾಸ್ಟಿಕ್ ಬ್ಯಾಗ್ ಮುಕ್ತ ದಿನವನ್ನು ಪ್ರಾರಂಭಿಸಿತು. 2015 ರಲ್ಲಿ, ಯುರೋಪಿಯನ್ ಒಕ್ಕೂಟವು ಏಕ-ಬಳಕೆಯ ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ಕಡಿಮೆ ಮಾಡಲು ಕೆಲವು ನಿರ್ದೇಶನಗಳನ್ನು ಸಹ ಅಂಗೀಕರಿಸಿತು. 2022 ರಲ್ಲಿ ಅಧಿಕೃತವಾಗಿ ಏಕ-ಬಳಕೆಯ, ತೆಳುವಾದ ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ನಿಷೇಧಿಸಿದ ಮೊದಲ ದೇಶ ಬಾಂಗ್ಲಾದೇಶವಾಯಿತು.

### ಪ್ರಧಾನಿ ಮೋದಿಗೆ ಘಾನಾದಲ್ಲಿ 'ಆರ್ಡರ್ ಆಫ್ ದಿ ಸ್ಟಾರ್' ಗೌರವ



* ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬುಧವಾರ (ಜುಲೈ 02) ಘಾನಾ ದೇಶದ ರಾಷ್ಟ್ರೀಯ ಪ್ರಶಸ್ತಿ 'ದಿ ಆಫೀಸರ್ ಆಫ್ ದಿ ಆರ್ಡರ್ ಆಫ್ ದಿ ಸ್ಟಾರ್ ಆಫ್ ಘಾನಾ' ಪ್ರದಾನ ಮಾಡಿ ಗೌರವಿಸಲಾಗಿದೆ. ಅವರ 'ವಿಶಿಷ್ಟ ರಾಜನೀತಿ ಮತ್ತು ಪ್ರಭಾವಶಾಲಿ ಜಾಗತಿಕ ನಾಯಕತ್ವ'ಕ್ಕಾಗಿ ಈ ಗೌರವ ನೀಡಲಾಗಿದೆ ಎಂದು ಘಾನಾ ಪ್ರಕಟಣೆಯಲ್ಲಿ ತಿಳಿಸಿದೆ.
* ಘಾನಾದ ಅಧ್ಯಕ್ಷ ಜಾನ್ ಡ್ರಾಮಾನಿ ಮಹಾಮ ಅವರು ಮೋದಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. "140 ಕೋಟಿ ಭಾರತೀಯರ ಪರವಾಗಿ ನಾನು ಈ ಪ್ರಶಸ್ತಿಯನ್ನು ವಿನಮ್ರವಾಗಿ ಸ್ವೀಕರಿಸುತ್ತೇನೆ" ಎಂದು ಭಾರತದ ಪ್ರಧಾನಿ ಮೋದಿಯವರು ಹೇಳಿದ್ದಾರೆ.
* ಭಾರತದ ಪ್ರಧಾನಿ ಈ ಪ್ರಶಸ್ತಿಯನ್ನು ಭಾರತದ ಯುವಜನರಿಗೆ, ಅದರ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಗೆ ಮತ್ತು ಎರಡು ರಾಷ್ಟ್ರಗಳ ನಡುವಿನ ಹಂಚಿಕೆಯ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಅರ್ಪಿಸಿದರು. 'ದಿ ಆಫೀಸರ್ ಆಫ್ ದಿ ಆರ್ಡರ್ ಆಫ್ ದಿ ಸ್ಟಾರ್ ಆಫ್ ಘಾನಾ'ಪ್ರಶಸ್ತಿಗೆ ಭಾಜನರಾಗಿದ್ದು, ಗೌರವದ ವಿಷಯ'ಎಂದು ಪ್ರಧಾನಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.
* ಮೂರು ದಶಕಗಳಲ್ಲಿ ಭಾರತದಿಂದ ಘಾನಾಗೆ ಪ್ರಧಾನಿಯೊಬ್ಬರು ನೀಡುತ್ತಿರುವ ಮೊದಲ ಭೇಟಿ ಇದಾಗಿದೆ.
* ಭಾರತದ ಪ್ರಧಾನಿ ಮೋದಿ ಮತ್ತು ಘಾನಾದ ಅಧ್ಯಕ್ಷ ಜಾನ್ ಡ್ರಾಮಾನಿ ಮಹಾಮ ಇಬ್ಬರೂ ನಾಯಕರು ದ್ವಿಪಕ್ಷೀಯ ಸಹಕಾರವನ್ನು ಬಲಪಡಿಸಲು ಶಿಕ್ಷಣ ಮತ್ತು ಯುವಜನ ಅಭಿವೃದ್ಧಿ, ಕೃಷಿ ಮತ್ತು ಆಹಾರ ಭದ್ರತೆ, ಆರೋಗ್ಯ ರಕ್ಷಣೆ, ಡಿಜಿಟಲ್ ಮತ್ತು ಹಣಕಾಸು ಏಕೀಕರಣ ಮತ್ತು ವ್ಯಾಪಾರ ಸಂಬಂಧಗಳು ಒಪ್ಪಂದಗಳನ್ನು ಮಾಡಿಕೊಂಡಿದ್ದಾರೆ.




## ಬೆಂಗಳೂರು ವಿವಿಯನ್ನು ಮನಮೋಹನ್ ಸಿಂಗ್ ವಿವಿ ಎಂದು ಮರುನಾಮಕರಣ



* ನಂದಿಬೆಟ್ಟದಲ್ಲಿ ಬುಧವಾರ(ಜುಲೈ 02) ನಡೆದ ಸಚಿವ ಸಂಪುಟ ಸಭೆಯಲ್ಲಿ ಪ್ರಮುಖ ನಾಮಬದಲಾವಣೆಗಳಿಗೆ ತೀರ್ಮಾನವಾಯಿತು. ಬೆಂಗಳೂರು ನಗರ ವಿಶ್ವವಿದ್ಯಾಲಯವನ್ನು ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿವಿಯಾಗಿ ಬದಲಾವಣೆಗೆ ತೀರ್ಮಾನವಾಯಿತು.

* ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಬೆಂಗಳೂರು ಉತ್ತರ ಜಿಲ್ಲೆಯಾಗಿ ಹಾಗೂ ಬಾಗೇಪಲ್ಲಿ ತಾಲ್ಲೂಕು ಕೇಂದ್ರದ ಹೆಸರನ್ನು ಭಾಗ್ಯನಗರ ಎಂದು ಬದಲಾಯಿಸಲು ನಿರ್ಣಯಿಸಲಾಯಿತು.

* ಸಭೆಯಲ್ಲಿ ಒಟ್ಟು 48 ವಿಷಯಗಳು ಚರ್ಚೆಗೆ ಒಳಪಟ್ಟಿದ್ದು, ಅವುಗಳಲ್ಲಿ ಶೇ. 90ರಷ್ಟು ಬೆಂಗಳೂರು ವಿಭಾಗಕ್ಕೆ ಸಂಬಂಧಪಟ್ಟವು.

* ಅಕ್ರಮ ಗಣಿಗಾರಿಕೆ ಕುರಿತು ಇಂದಿನವರೆಗೆ ತೆಗೆದುಕೊಳ್ಳಲಾಗಿರುವ ಕ್ರಮಗಳ ಪರಿಶೀಲನೆಗಾಗಿ ಎಚ್.ಕೆ. ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿಯು ರಚನೆಗೆ ತೀರ್ಮಾನವಾಯಿತು.

* ಎತ್ತಿನಹೊಳೆ ಯೋಜನೆ, ಕಾರ್ಮಿಕರ ಮಕ್ಕಳಿಗಾಗಿ ಪ್ರತಿ ಜಿಲ್ಲೆಯಲ್ಲಿ ವಸತಿ ಶಾಲೆಗಳ ಸ್ಥಾಪನೆ ಸೇರಿ ಹಲವು ಅಭಿವೃದ್ಧಿ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

## ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಜಾಗತಿಕ ಮಟ್ಟದಲ್ಲಿ 10 ಪ್ರಶಸ್ತಿಗಳ ಗೌರವ



* ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎಎಲ್) ಇತ್ತೀಚೆಗೆ ಜಾಗತಿಕ ಮಟ್ಟದಲ್ಲಿ 10 ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ. ಈ ಪ್ರಶಸ್ತಿಗಳು ಆಹಾರ, ಪಾನೀಯ ಹಾಗೂ ಆತಿಥ್ಯ ಕ್ಷೇತ್ರದಲ್ಲಿ ವಿಮಾನ ನಿಲ್ದಾಣದ ಉನ್ನತ ಸೇವೆಗೆ ನೀಡಿ ಗೌರವಿಸಲಾಗಿದೆ.

* ಸ್ಪೇನ್‌ನ ಬಾರ್ಸಿಲೋನಾದಲ್ಲಿ ನಡೆದ 'ವಿಮಾನ ನಿಲ್ದಾಣ ಎಫ್ ಎಂಡ್‌ಬಿ ಮತ್ತು ಆತಿಥ್ಯ ಪ್ರಶಸ್ತಿ ಸಮಾರಂಭ-2025'ನಲ್ಲಿ ಈ ಪ್ರಶಸ್ತಿಗಳನ್ನು ಸ್ವೀಕರಿಸಲಾಯಿತು ಎಂದು ಕೆಐಎಎಲ್ ಮುಖ್ಯ ವಾಣಿಜ್ಯ ಅಧಿಕಾರಿ ಕೆನ್ನೆತ್ ಗುಲ್ಡ್‌ಬೈರ್ಗ್ ತಿಳಿಸಿದ್ದಾರೆ.

* ಟರ್ಮಿನಲ್ 2 ರಲ್ಲಿರುವ 080 ಲೌಂಜ್ ಒಟ್ಟು ಏಳು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಇದರಲ್ಲಿ ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ 'ಅತ್ಯುತ್ತಮ ಲೌಂಜ್', 'ಏರ್‌ಪೋರ್ಟ್ ಎಫ್ ಎಂಡ್‌ಬಿ ಆಫರ್ ಆಫ್ ದಿ ಇಯರ್ - ಸೆನ್ಸ್ ಆಫ್ ಪ್ಲೇಸ್', ಮತ್ತು ಕಿಲಾ ರೆಸ್ಟೋರೆಂಟ್‌ಗೆ 'ಅತ್ಯುತ್ತಮ ರೆಸ್ಟೋರೆಂಟ್ ವಿನ್ಯಾಸ' ಪ್ರಶಸ್ತಿಗಳು ಸೇರಿವೆ.

* ಇದರಿಂದ ಬೆಂಗಳೂರು ವಿಮಾನ ನಿಲ್ದಾಣದ ಲೌಂಜ್‌ಗಳು ಮತ್ತು ರೆಸ್ಟೋರೆಂಟ್‌ಗಳು ಭಾರತೀಯ ಹಾಗೂ ಜಾಗತಿಕ ಮಟ್ಟದಲ್ಲಿ ತಮ್ಮ ಶ್ರೇಷ್ಠತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿವೆ.

## ರಿಷಭ್ ಪಂತ್ ಅವಳಿ ಶತಕಗಳಿಂದ ಟೆಸ್ಟ್ ಶ್ರೇಯಾಂಕದಲ್ಲಿ 6ನೇ ಸ್ಥಾನಕ್ಕೆ ಏರಿಕೆ



* ಇಂಗ್ಲೆಂಡ್ ವಿರುದ್ಧ ಹೆಡಿಂಗ್ಲೆ ಟೆಸ್ಟ್‌ನಲ್ಲಿ 134 ಮತ್ತು 118 ರನ್ ಗಳಿಸಿದ ರಿಷಭ್ ಪಂತ್ ಟೆಸ್ಟ್ ಬ್ಯಾಟಿಂಗ್ ಶ್ರೇಯಾಂಕದಲ್ಲಿ 6ನೇ ಸ್ಥಾನಕ್ಕೆ ಏರಿದ್ದಾರೆ. ಅವರ ಒಟ್ಟಾರೆ ರೇಟಿಂಗ್ 801 ಅಂಕಗಳು.

* ಜೋ ರೂಟ್ 888 ಅಂಕಗಳೊಂದಿಗೆ ಟೆಸ್ಟ್ ಬ್ಯಾಟಿಂಗ್ ಶ್ರೇಯಾಂಕದಲ್ಲಿ ನಂ.1 ಸ್ಥಾನದಲ್ಲಿದ್ದಾರೆ. ಇಂಗ್ಲೆಂಡ್ ಬ್ಯಾಟ್ಸ್‌ಮನ್ ಬೆನ್ ಡಕೆಟ್ 149 ರನ್ ಗಳಿಸಿ 8ನೇ ಸ್ಥಾನದಲ್ಲಿದ್ದಾರೆ.

* ವೆಸ್ಟ್ ಇಂಡೀಸ್ ವಿರುದ್ಧ ಟ್ರಾವಿಸ್ ಹೆಡ್ ಅರ್ಧಶತಕಗಳ ಮೂಲಕ 10ನೇ ಸ್ಥಾನಕ್ಕೆ ಏರಿದ್ದಾರೆ.

* ಬೌಲಿಂಗ್ ಶ್ರೇಯಾಂಕದಲ್ಲಿ ಜಸ್ಪ್ರೀತ್ ಬುಮ್ರಾ ನಂ.1 ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಜೋಶ್ ಹ್ಯಾಜಲ್‌ವುಡ್ 4ನೇ, ಜೇಡನ್ ಸೀಲ್ಸ್ 9ನೇ ಸ್ಥಾನಕ್ಕೆ ಏರಿದ್ದಾರೆ.

* ಆಲ್‌ರೌಂಡರ್‌ಗಳ ಶ್ರೇಯಾಂಕದಲ್ಲಿ ರವೀಂದ್ರ ಜಡೇಜಾ ನಂ.1 ಸ್ಥಾನದಲ್ಲಿ ಮುಂದುವರೆದಿದ್ದಾರೆ. ವಿಯಾನ್ ಮುಲ್ಡರ್ ಮತ್ತು ಕಾರ್ಬಿನ್ ಬಾಷ್ ಟಾಪ್ 20ರಲ್ಲಿ ಪ್ರವೇಶಿಸಿದ್ದಾರೆ.

## ಆರ್‌ಬಿಐ ಹೊಸ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕೇಶವನ್ ರಾಮಚಂದ್ರನ್ ನೇಮಕ



* ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕೇಶವನ್ ರಾಮಚಂದ್ರನ್ ಅವರನ್ನು ಜುಲೈ 1, 2025 ರಿಂದ ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಿಸಿದೆ. ಅವರು ಪ್ರುಡೆನ್ಶಿಯಲ್ ನಿಯಂತ್ರಣ ವಿಭಾಗವಿರುವ ನಿಯಂತ್ರಣ ವಿಭಾಗವನ್ನು ನೋಡಿಕೊಳ್ಳಲಿದ್ದಾರೆ.
* ರಾಮಚಂದ್ರನ್ ಅವರು ಮೂರು ದಶಕಗಳಿಗೂ ಹೆಚ್ಚಿನ ಸೇವಾ ಅನುಭವ ಹೊಂದಿದ್ದು, ಕರೆನ್ಸಿ ನಿರ್ವಹಣೆ, ಬ್ಯಾಂಕಿಂಗ್ ಮೇಲ್ವಿಚಾರಣೆ, ತರಬೇತಿ ಮತ್ತು ಆಡಳಿತ ಮುಂತಾದ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಅವರು ಆರ್‌ಬಿಐ ಸ್ಟಾಫ್ ಕಾಲೇಜಿನ ಪ್ರಾಂಶುಪಾಲರಾಗಿಯೂ ಕಾರ್ಯನಿರ್ವಹಿಸಿದ್ದಾರೆ.
* ಈ ನೇಮಕಾತಿಗೆ ಮೊದಲು ಅವರು ಅಪಾಯ ಮೇಲ್ವಿಚಾರಣಾ ವಿಭಾಗದಲ್ಲಿ ಪ್ರಧಾನ ಮುಖ್ಯ ಜನರಲ್ ಮ್ಯಾನೇಜರ್ ಆಗಿದ್ದರು.
* ಅವರು ಐದು ವರ್ಷಗಳ ಕಾಲ ಕೆನರಾ ಬ್ಯಾಂಕ್ ಮಂಡಳಿಯಲ್ಲಿ ಆರ್‌ಬಿಐ ನಾಮನಿರ್ದೇಶಕರಾಗಿ ಹಾಗೂ ಐಸಿಎಐನ ಆಡಿಟ್ ಮಂಡಳಿಯಲ್ಲಿ ಎರಡು ವರ್ಷಗಳ ಕಾಲ ಸದಸ್ಯರಾಗಿದ್ದರು.
* ರಾಮಚಂದ್ರನ್ ಅವರು ಬ್ಯಾಂಕಿಂಗ್ ಮತ್ತು ಹಣಕಾಸಿನಲ್ಲಿ ಸ್ನಾತಕೋತ್ತರ ಪದವಿ, ಎಂಬಿಎ, ಎಸಿಸಿಸಿ ಇಂಗ್ಲೆಂಡಿನ ಡಿಪ್ಲೊಮಾ ಹಾಗೂ ಐಐಬಿಎಫ್‌ನ ಸಹವರ್ತಿತ್ವ ಹೊಂದಿದ್ದಾರೆ.

## ಖೋ ಖೋ ಫೆಡರೇಷನ್ ಉಪಾಧ್ಯಕ್ಷ ಸ್ಥಾನಕ್ಕೆ ಲೋಕೇಶ್ವರ್ ಮರು ಆಯ್ಕೆ

* ಕರ್ನಾಟಕ ಖೋ ಖೋ ಸಂಸ್ಥೆಯ ಅಧ್ಯಕ್ಷ ಲೋಕೇಶ್ವರ್ ಅವರನ್ನು ಭಾರತ ಖೋ ಖೋ ಫೆಡರೇಷನ್‌ನ (ಕೆಕೆಎಫ್‌ಐ) ಉಪಾಧ್ಯಕ್ಷರಾಗಿ ಮತ್ತೊಮ್ಮೆ ನೇಮಕ ಮಾಡಲಾಗಿದೆ.
* ಜುಲೈ 2ರಂದು ನಡೆದ ಆಡಳಿತ ಸಮಿತಿಯ ಸಭೆಯಲ್ಲಿ ಹೊಸ ಪದಾಧಿಕಾರಿಗಳ ಘೋಷಣೆ ನಡೆಯಿತು.
* ನವದೆಹಲಿಯ ಬಿಜೆಪಿ ಮುಖಂಡ ಸುಧಾಂಶು ಮಿತ್ತಲ್ ಅವರು ಮತ್ತೊಂದು ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.
* ಲೋಕೇಶ್ವರ್ ಅವರು ಮೊದಲ ಬಾರಿಗೆ 2021ರಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದ್ದರು, ಈಗ ಎರಡನೇ ಅವಧಿಗೆ ಮುಂದುವರಿದಿದ್ದಾರೆ.
* 2021ರಿಂದ ಕರ್ನಾಟಕ ಖೋ ಖೋ ಸಂಸ್ಥೆಯ ಅಧ್ಯಕ್ಷರಾಗಿರುವ ಅವರು, ಮೂರು ತಿಂಗಳು ಹಿಂದೆ ಮರು ಆಯ್ಕೆಯಾಗಿ ಪದವಿಯಲ್ಲಿ ಮುಂದುವರಿದಿದ್ದಾರೆ.

## ಅನಿಲ್ ಮೆನನ್: ಬಾಹ್ಯಾಕಾಶ ನಿಲ್ದಾಣದತ್ತ ಭಾರತೀಯ ಮೂಲದ ಗಗನಯಾತ್ರಿ



* ಅನಿಲ್ ಮೆನನ್ ಎಂಬ ಭಾರತೀಯ ಮೂಲದ ಅಮೆರಿಕನ್ ಗಗನಯಾತ್ರಿಯು 2026ರ ಜೂನ್‌ನಲ್ಲಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ (ISS) ಕಾರ್ಯಾಚರಣೆಗೆ ಹಾರಲು ಸಿದ್ಧರಾಗಿದ್ದಾರೆ.
* ನಾಸಾ ಆಯ್ಕೆ ಮಾಡಿದ ಈ ಮಿಷನ್‌ನಲ್ಲಿ ಅವರು ಫ್ಲೈಟ್ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸಲಿದ್ದು, ರೋಸ್ಕೋಸ್ಮೋಸ್‌ನ ಪಯೋಟರ್ ಡುಬ್ರೊವ್ ಮತ್ತು ಅನ್ನಾ ಕಿಕಿನಾ ಅವರೊಂದಿಗೆ ಭಾಗವಹಿಸಲಿದ್ದಾರೆ.
* ಅನಿಲ್ ಮೆನನ್ ಈ ಕಾರ್ಯಾಚರಣೆಯಲ್ಲಿ ಎಕ್ಸ್‌ಪೆಡಿಶನ್ 75 ನ ಸದಸ್ಯರಾಗಿ, ಸುಮಾರು ಎಂಟು ತಿಂಗಳುಗಳ ಕಾಲ ಬಾಹ್ಯಾಕಾಶ ಪ್ರಯೋಗಾಲಯದಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ. ನಾಸಾ ಈ ಬಗ್ಗೆ ಅಧಿಕೃತ ಪ್ರಕಟಣೆ ಹೊರಡಿಸಿದೆ.
* ಅನಿಲ್ ಮೆನನ್ ತುರ್ತು ವೈದ್ಯಕೀಯ ತಜ್ಞರು ಮತ್ತು ಯುಎಸ್ ಏರ್ ಫೋರ್ಸ್‌ನ ಲೆಫ್ಟಿನೆಂಟ್ ಕರ್ನಲ್ ಆಗಿದ್ದು, ಭಾರತೀಯ ಮೂಲದವರು. ಅವರ ಪೋಷಕರು ಭಾರತ ಮತ್ತು ಉಕ್ರೇನ್‌ನ ಸಂಪರ್ಕ ಹೊಂದಿದ್ದಾರೆ. ಕುಟುಂಬವು ಕೇರಳದ ಮಲಬಾರ್ ಮೂಲದವರೆಂದು ತಿಳಿದುಬರುತ್ತದೆ.
* ಅನಿಲ್ ಮೆನನ್ ಅವರ ಪತ್ನಿ ಅನ್ನಾ ಮೆನನ್, ಸ್ಪೇಸ್‌ಎಕ್ಸ್‌ನ ಮುಖ್ಯ ಬಾಹ್ಯಾಕಾಶ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿದ್ದಾರೆ. ದಂಪತಿಗೆ ಇಬ್ಬರು ಮಕ್ಕಳು ಇದ್ದಾರೆ. ಅನಿಲ್ ಅಮೆರಿಕದಲ್ಲಿ ಹುಟ್ಟಿ ಬೆಳೆದರೂ, ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಒಂದು ವರ್ಷದ ಕೋರ್ಸ್ ಮಾಡಿದ್ದಾರೆ.
* ಶೈಕ್ಷಣಿಕ ಪಾಠದಲ್ಲಿ ಮೆನನ್ ಹಾರ್ವರ್ಡ್‌ನಿಂದ ನ್ಯೂರೋಬಯಾಲಜಿಯಲ್ಲಿ ಪದವಿ, ಸ್ಟ್ಯಾನ್‌ಫೋರ್ಡ್‌ನಿಂದ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಮತ್ತು ವೈದ್ಯಕೀಯದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ.
* ನಾಸಾಗೆ ಸೇರುವ ಮೊದಲು ಅವರು ಯುಎಸ್ ಏರ್ ಫೋರ್ಸ್ ನಲ್ಲಿ ಫ್ಲೈಟ್ ಸರ್ಜನ್ ಆಗಿ ಸೇವೆ ಸಲ್ಲಿಸಿದ್ದಾರೆ. ಸ್ಪೇಸ್‌ಎಕ್ಸ್‌ನಲ್ಲಿ ಅವರು ಡೆಮೊ-2 ಮತ್ತು ಇನ್ಸ್ಪಿರೇಷನ್-4 ಮಿಷನ್‌ಗಳಲ್ಲಿ ಪ್ರಮುಖ ಪಾತ್ರವಹಿಸಿದ್ದರು.
* 2021 ರಲ್ಲಿ ನಾಸಾ ಆಯ್ಕೆ ಮಾಡಿದ 10 ಗಗನಯಾತ್ರಿಗಳ ಪೈಕಿ ಅನಿಲ್ ಒಬ್ಬರಾಗಿದ್ದು, ಅವರು ಎರಡು ವರ್ಷಗಳ ಗಟ್ಟಿಯಾದ ತರಬೇತಿಯನ್ನು ಜನವರಿ 2022ರಿಂದ ಮಾರ್ಚ್ 2024ರವರೆಗೆ

ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ತರಬೇತಿಯಲ್ಲಿ ಇವಿಎ, ಟಿ-38 ಜೆಟ್ ಹಾರಾಟ, ಬಾಹ್ಯಾಕಾಶ ನೌಕೆ ನಿರ್ವಹಣೆ ಮತ್ತು ರಷ್ಯನ್ ಭಾಷಾ ಪಾಠ ಸೇರಿತ್ತು.

## ಪ್ರಧಾನಿ ಮೋದಿ ಐದು ರಾಷ್ಟ್ರಗಳ ಪ್ರವಾಸ ಆರಂಭ



* ಬ್ರಿಕ್ಸ್ ಮೂಲಕ ಉದಯೋನ್ಮುಖ ಆರ್ಥಿಕತೆಗಳ ನಡುವಿನ ಸಹಕಾರ ಬಲಪಡಿಸಲು ಭಾರತ ಬದ್ಧವಾಗಿದೆ ಎಂದು ಮೋದಿ ತಿಳಿಸಿದರು. ಶಾಂತಿಯುತ, ಸಮಾನ ಮತ್ತು ಪ್ರಜಾಪ್ರಭುತ್ವಾತ್ಮಕ ವಿಶ್ವ ವ್ಯವಸ್ಥೆಗಾಗಿ ಭಾರತ ಶ್ರಮಿಸುತ್ತಿದೆ.

* **ಘಾನಾ** : ಜುಲೈ 2–3ರಂದು ಅವರು ಘಾನಾ ಭೇಟಿಯ ದೆಸೆಯಿಂದ ಅಧ್ಯಕ್ಷ ಜಾನ್ ಮಹಾಮಾ ಅವರ ಆಹ್ವಾನದ ಮೇರೆಗೆ ಅಲ್ಲಿಗೆ ತೆರಳಿದರು. ಹೂಡಿಕೆ, ಇಂಧನ, ಆರೋಗ್ಯ, ಭದ್ರತೆ ಸೇರಿದಂತೆ ಸಹಕಾರ ಹೆಚ್ಚಿಸುವ ಗುರಿಯಿದೆ. ಅಲ್ಲಿನ ಸಂಸತ್ತಿನಲ್ಲಿ ಅವರು ಭಾಷಣ ಮಾಡುವ ನಿರೀಕ್ಷೆಯೂ ಇದೆ.

* **ಟ್ರಿನಿಡಾಡ್ ಮತ್ತು ಟೊಬಾಗೊ**: ಜುಲೈ 4–5 ರಂದು ಮೋದಿ ಈ ದೇಶಕ್ಕೆ ಭೇಟಿ ನೀಡಿ ಅಧ್ಯಕ್ಷೆ ಕಂಗಲೂ ಮತ್ತು ಪ್ರಧಾನಿ ಬಿಸ್ಸೆಸ್ಸರ್ ಅವರನ್ನು ಭೇಟಿಮಾಡಲಿದ್ದಾರೆ. ಈ ಭೇಟಿಯಿಂದ ಐತಿಹಾಸಿಕ ಜನರ ಸಂಪರ್ಕ ಪುನರುಜ್ಜೀವನಗೊಳ್ಳಲಿದೆ.


* **ಅರ್ಜೆಂಟೀನಾ**: 57 ವರ್ಷಗಳ ಬಳಿಕ ಭಾರತದ ಪ್ರಧಾನಿ ಅರ್ಜೆಂಟೀನಾಗೆ ದ್ವಿಪಕ್ಷೀಯ ಭೇಟಿಗೆ ತೆರಳುತ್ತಿದ್ದಾರೆ. ಕೃಷಿ, ಖನಿಜ, ಇಂಧನ, ಹೂಡಿಕೆ ಮತ್ತಿತರ ಕ್ಷೇತ್ರಗಳಲ್ಲಿ ಸಹಕಾರ ಹೆಚ್ಚಿಸಲು ಅವರು ಅಧ್ಯಕ್ಷ ಮಿಲಿ ಅವರನ್ನು ಭೇಟಿಮಾಡಲಿದ್ದಾರೆ.

* **ಬ್ರೆಜಿಲ್ ಮತ್ತು ಬ್ರಿಕ್ಸ್ ಶೃಂಗಸಭೆ**: ಜುಲೈ 6–7ರಂದು ರಿಯೋ ಡಿ ಜನೈರೊದಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಮೋದಿ ಭಾಗವಹಿಸಲಿದ್ದಾರೆ. ನಂತರ ಬ್ರೆಸಿಲಿಯಾ ದ್ವಿಪಕ್ಷೀಯ ಭೇಟಿಗೆ ತೆರಳಲಿದ್ದಾರೆ. ಬ್ರೆಜಿಲ್ ಅಧ್ಯಕ್ಷ ಲುಲಾ ದ ಸಿಲ್ವಾ ಜತೆಗೆ ಜಾಗತಿಕ ದಕ್ಷಿಣದ ಒಗ್ಗಟ್ಟಿಗೆ ಭಾರತ ಬದ್ಧವಾಗಿದೆ ಎಂದು ತಿಳಿಸಿದರು.

* **ನಮೀಬಿಯಾ**: ಕೊನೆಗೆ ಅವರು ನಮೀಬಿಯಾಗೆ ಭೇಟಿ ನೀಡಿ ಅಧ್ಯಕ್ಷ ನೆಟುಂಬೊ ನಂದಿ-ನ್ಡೈಟ್ವಾ ಅವರನ್ನು ಭೇಟಿಮಾಡಲಿದ್ದಾರೆ. ಸಂಸತ್ತಿನಲ್ಲಿ ಭಾಷಣ ಮಾಡುವ ಯೋಜನೆಯಿದೆ. ಭಾರತ–ನಮೀಬಿಯಾ ಬಾಂಧವ್ಯವನ್ನು ಬಲಪಡಿಸುವ ಗುರಿಯಿದೆ.

* ಈ ಐದು ರಾಷ್ಟ್ರಗಳ ಪ್ರವಾಸದ ಮೂಲಕ ಭಾರತ ಜಾಗತಿಕ ದಕ್ಷಿಣದ ಬಾಂಧವ್ಯವನ್ನು ಗಾಢಗೊಳಿಸಿ, ಅಟ್ಲಾಂಟಿಕ್‌ನ ಎರಡೂ ತೀರದ ಪಾಲುದಾರಿಕೆಯನ್ನು ಬಲಪಡಿಸಲು ಪ್ರಯತ್ನಿಸುತ್ತಿದೆ.

## ಭಾರತದ ಮೇಲೆ 500ರಷ್ಟು ಸುಂಕ



* ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾದ ವಿರುದ್ಧ ಕಠಿಣ ಆರ್ಥಿಕ ನಿರ್ಬಂಧಗಳನ್ನು ವಿಧಿಸುವ ಮಸೂದೆಗೆ ಅನುಮೋದನೆ ನೀಡಿದ್ದಾರೆ.

* ಈ ಮಸೂದೆ ಪ್ರಕಾರ, ರಷ್ಯಾದ ತೈಲ ಮತ್ತು ಇಂಧನ ಉತ್ಪನ್ನಗಳನ್ನು ಖರೀದಿಸುವ ದೇಶಗಳ ಮೇಲೆ ಶೇ 500 ರಷ್ಟು ಸುಂಕ ವಿಧಿಸಬಹುದು.

* ಅಮೆರಿಕ ಸೆನೆಟರ್ ಲಿಂಡ್ಸೆ ಗ್ರಹಾಂ ಈ ಮಸೂದೆಯನ್ನು "ದೊಡ್ಡ ಪ್ರಗತಿ" ಎಂದು ವಿವರಿಸಿದ್ದಾರೆ.

* ಅವರು ಈ ಕ್ರಮವು ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಉಕ್ರೇನ್ ವಿರುದ್ಧದ ಯುದ್ಧದ ಕುರಿತು ಮಾತುಕತೆಗೆ ಒತ್ತಾಯಿಸಲು ದಡಪಡಿಸುವ ಕ್ರಮವೆಂದು ಹೇಳಿದ್ದಾರೆ.

* ಈ ಮಸೂದೆಯು ವಿಶೇಷವಾಗಿ ಭಾರತ ಮತ್ತು ಚೀನಾವನ್ನು ಗುರಿಯಾಗಿರಿಸಬಹುದು. ಈ ಎರಡು ದೇಶಗಳು ರಷ್ಯಾದಿಂದ ಶೇ 70ರಷ್ಟು ತೈಲ ಖರೀದಿಸುತ್ತವೆ ಎಂದು ಗ್ರಹಾಂ ತಿಳಿಸಿದ್ದಾರೆ.

## 04 July 2025

## ರಾಷ್ಟ್ರೀಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆಗೆ ಸಾವಿತ್ರಿಬಾಯಿ ಫುಲೆ ಹೆಸರು



* ಜುಲೈ 2, 2025 ರಂದು, ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು NIPCCD ಅನ್ನು "ಸಾವಿತ್ರಿಬಾಯಿ ಫುಲೆ ರಾಷ್ಟ್ರೀಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ" ಎಂದು ಮರುನಾಮಕರಣ ಮಾಡಿತು. ಈ ಕ್ರಮವು ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಸರ್ಕಾರದ ಬದ್ಧತೆಯ ಪ್ರತಿಬಿಂಬವಾಗಿದೆ.

* ಮರುನಾಮಕರಣದ ಮುಖ್ಯ ಉದ್ದೇಶವು ಭಾರತದ ಮೊದಲ ಮಹಿಳಾ ಶಿಕ್ಷಕಿ ಮತ್ತು ಸಾಮಾಜಿಕ ಸುಧಾರಕಿ ಸಾವಿತ್ರಿಬಾಯಿ ಫುಲೆಯವರ ಹೆಸರನ್ನು ಗೌರವಿಸುವುದಾಗಿದೆ.

* ತರಬೇತಿ ಮತ್ತು ಸೇವೆಗಳ ವಿಕೇಂದ್ರೀಕರಣದಿಂದ ಶ್ರೇಷ್ಠ ನೀತಿ ಅನುಷ್ಠಾನಕ್ಕೆ ನೆರವಾಗುವುದು.

* ಜುಲೈ 4, 2025 ರಂದು ಜಾರ್ಖಂಡ್‌ನ ರಾಂಚಿಯಲ್ಲಿ ಹೊಸ ಪ್ರಾದೇಶಿಕ ಕೇಂದ್ರವನ್ನು ಉದ್ಘಾಟಿಸಲಾಗುತ್ತಿದೆ. ಇದು ಪೂರ್ವ ಭಾರತದ ಜಾರ್ಖಂಡ್, ಬಿಹಾರ, ಒಡಿಶಾ ಮತ್ತು ಪಶ್ಚಿಮ ಬಂಗಾಳದ 115 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 7 ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರಿಗೆ ಸಹಾಯ ಮಾಡಲಿದೆ.

* ಈ ಕೇಂದ್ರವು ಮಿಷನ್ ಶಕ್ತಿ, ಮಿಷನ್ ವಾತ್ಸಲ್ಯ, ಮಿಷನ್ ಸಕ್ಷಮ್ ಅಂಗನವಾಡಿ ಮತ್ತು ಪೋಶನ್ 2.0 ಹೀಗೆ ಪ್ರಮುಖ ಯೋಜನೆಗಳಿಗೆ ಸಹಕಾರ ನೀಡಲಿದೆ. ಇದಲ್ಲದೇ ಮಕ್ಕಳ ಮಾರ್ಗದರ್ಶನ, ಹದಿಹರೆಯದವರ ಆರೋಗ್ಯ, ಮತ್ತು ಕಸ್ಟಮೈಸ್ ತರಬೇತಿಗಳಿಗೆ ನೆರವಾಗಲಿದೆ.

* ಗುವಾಹಟಿ ಮತ್ತು ಲಕ್ನೋ ಪ್ರಾದೇಶಿಕ ಕೇಂದ್ರಗಳು ದೂರವಿರುವುದರಿಂದ ಹೊಸ ಕೇಂದ್ರವು ಸ್ಥಳೀಯ ಪ್ರಭಾವಕಾರಿತ್ವ

KPSC Vaani

ಮತ್ತು ಸುಲಭ ಪ್ರವೇಶಕ್ಕೆ ಮಾರ್ಗ ಸದುಪಯೋಗ ಮಾಡಿಕೊಳ್ಳುತ್ತದೆ.
* ಲಿಂಗ ಸಮತೆ, ತಳಮಟ್ಟದ ಸಬಲೀಕರಣ ಮತ್ತು ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಗೆ ಸಹಾಯಮಾಡುತ್ತದೆ.

## ಟೆಸ್ಟ್‌ನಲ್ಲಿ ಐತಿಹಾಸಿಕ ದ್ವಿಶತಕ ದಾಖಲಿಸಿದ ಕ್ಯಾಪ್ಟನ್ ಶುಭಮನ್ ಗಿಲ್



* ಭಾರತದ ಯುವ ನಾಯಕ ಶುಭಮನ್ ಗಿಲ್ ಅವರು ತಮ್ಮ ಟೆಸ್ಟ್ ನಾಯಕತ್ವದ ಕೇವಲ ಎರಡನೇ ಪಂದ್ಯದಲ್ಲೇ ವಿಶಿಷ್ಟ ಸಾಧನೆ ಮಾಡಿದ್ದಾರೆ.
* ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯ ಎರಡನೇ ಪಂದ್ಯದಲ್ಲಿ, ಅವರು 387 ಎಸೆತಗಳನ್ನು ಎದುರಿಸಿ 30 ಬೌಂಡರಿ ಮತ್ತು 3 ಸಿಕ್ಸ್‌ಗಳೊಂದಿಗೆ 269 ರನ್ ಗಳಿಸಿದರು.
* ಈ ಮೂಲಕ ಗಿಲ್ ಏಕದಿನ ಮತ್ತು ಟೆಸ್ಟ್ ಎರಡೂ ಮಾದರಿಗಳಲ್ಲಿ ಇನಿಂಗ್ಸ್‌ವೊಂದರಲ್ಲಿ ದ್ವಿಶತಕ ಬಾರಿಸಿದ ವಿಶ್ವದ ಐದನೇ ಬ್ಯಾಟರ್ ಎಂಬ ದಾಖಲೆ ಮುಡಿಗೇರಿಸಿಕೊಂಡಿದ್ದಾರೆ.
* ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್, ಕ್ರಿಸ್ ಗೇಲ್, ಹಾಗೂ ರೋಹಿತ್ ಶರ್ಮಾ. ಇವರಂತೆ ಗಿಲ್ ಕೂಡ ಎರಡು ಮಾದರಿಗಳಲ್ಲಿ ದ್ವಿಶತಕ ಬಾರಿಸಿ ವಿಶಿಷ್ಟ ಗುಂಪಿಗೆ ಸೇರಿದ್ದಾರೆ.
* ಗಿಲ್ ಈ ಹಿಂದೆ 2023ರಲ್ಲಿ ನ್ಯೂಜಿಲೆಂಡ್ ವಿರುದ್ಧದ ಏಕದಿನ ಪಂದ್ಯದಲ್ಲಿ 208 ರನ್ ಬಾರಿಸಿದ್ದರು.
* ಪಂದ್ಯವಿಚಾರಕ್ಕೆ ಬಂದ್ರೆ, ಬರ್ಮಿಂಗ್‌ಹ್ಯಾಮ್‌ನ ಎಜ್‌ಬಾಸ್ಟನ್‌ನಲ್ಲಿ ನಡೆಯುತ್ತಿರುವ ಈ ಟೆಸ್ಟ್ ಪಂದ್ಯದಲ್ಲಿ ಟಾಸ್ ಸೋತರೂ ಮೊದಲು ಬ್ಯಾಟಿಂಗ್ ಮಾಡಿದ ಭಾರತ, ಮೊದಲ ಇನಿಂಗ್ಸ್‌ನಲ್ಲಿ 587 ರನ್‌ಗಳ ಭಾರೀ ಮೊತ್ತ ಕಲೆಹಾಕಿದೆ.
* ಗಿಲ್ ಅವರೊಂದಿಗೆ ಯಶಸ್ವಿ ಜೈಸ್ವಾಲ್ (87) ಹಾಗೂ ರವೀಂದ್ರ ಜಡೇಜಾ (87) ಉತ್ತಮ ಕೊಡುಗೆ ನೀಡಿದ್ದಾರೆ.
* ಇಂಗ್ಲೆಂಡ್ ಪ್ರತುತ್ತರದ ಆರಂಭದಲ್ಲಿ ನಲುಗಿದಂತಾಗಿದೆ. ಎರಡನೇ ದಿನದಾಟದ ಅಂತ್ಯಕ್ಕೆ 3 ವಿಕೆಟ್ ಕಳೆದುಕೊಂಡು 77 ರನ್ ಗಳಿಸಿದೆ. ಜೋ ರೂಟ್ (18) ಮತ್ತು ಹ್ಯಾರಿ ಬ್ರೂಕ್ (30) ಕ್ರೀಸ್‌ನಲ್ಲಿದ್ದಾರೆ.
* ಮೂರನೇ ದಿನದಾಟ ಭಾರತಕ್ಕೆ ಹೆಚ್ಚು ಪ್ರಬಲ ಮುನ್ನಡೆ ನೀಡಬಹುದಾದ ನಿರೀಕ್ಷೆಯಿದೆ.

## ಇಂದೋರ್‌ನ ಡಿಜಿಟಲ್ ಹೌಸ್ ಅಡ್ರೆಸ್ ಯೋಜನೆ




* ಸ್ಮಾರ್ಟ್ ಸಿಟಿ ಮಿಷನ್ ಅಡಿಯಲ್ಲಿ ಇಂದೋರ್ ಮುನ್ಸಿಪಲ್ ಕಾರ್ಪೊರೇಷನ್ (IMC) "ಡಿಜಿಟಲ್ ಹೌಸ್ ಅಡ್ರೆಸ್" ಯೋಜನೆಯನ್ನು ಪ್ರಾರಂಭಿಸಿದ್ದು, ದೇಶದ ಮೊದಲ ಎಕ್ಸ್‌ಪೆರಿಮೆಂಟಲ್ ಡಿಜಿಟಲ್ ವಿಳಾಸ ವ್ಯವಸ್ಥೆಯಾಗಿದೆ.
* ಇದು QR ಕೋಡ್ ಮತ್ತು GPS ತಂತ್ರಜ್ಞಾನವನ್ನು ಬಳಸಿ, ಸಾಂಪ್ರದಾಯಿಕ ವಿಳಾಸ ವ್ಯವಸ್ಥೆಗೆ ಪರ್ಯಾಯ ನೀಡುತ್ತದೆ.
* ಈ ಯೋಜನೆ ಇತ್ತೀಚೆಗೆ ಸುದಾಮಾ ನಗರ ವಾರ್ಡ್ 82ರಲ್ಲಿ ಪೈಲಟ್ ಪ್ರಾಜೆಕ್ಟ್ ರೂಪದಲ್ಲಿ ಯಶಸ್ವಿಯಾಗಿ ಚಾಲನೆಯಾಯಿತು. ಇದು ದೇಶದ ಮೊದಲ ಅಧಿಕೃತ QR ಆಧಾರಿತ ವಿಳಾಸ ನಿಯೋಜನೆ ಆಗಿದ್ದು, ಡಿಜಿಪಿನ್ ವ್ಯವಸ್ಥೆಯೊಂದಿಗೆ ಏಕೀಕೃತವಾಗಿದೆ.

ಮುಖ್ಯ ವೈಶಿಷ್ಟ್ಯಗಳು:

• QR ಕೋಡ್ ಪ್ಲೇಟ್‌ಗಳು: ಪ್ರತಿ ಮನೆಗೆ ವಿಶಿಷ್ಟ ಲೋಹದ ಫಲಕ.
• GPS ನಿಖರತೆ: ಕ್ಯೂಆರ್ ಕೋಡ್‌ಗಳು ನಿಖರವಾದ ಸ್ಥಳದ ಜೊತೆ ಲಿಂಕ್.
• ಡಿಜಿಪಿನ್ ಏಕೀಕರಣ: ವಿಳಾಸಗಳು ಕೇಂದ್ರ ಡಿಜಿಪಿನ್ ವ್ಯವಸ್ಥೆಯೊಂದಿಗೆ ಸಿಂಕ್ರೊನೈಸ್.
• ನಾಗರಿಕ ಸಂಪರ್ಕ: ತೆರಿಗೆ ಪಾವತಿ, ಕುಂದುಕೊರತೆ ಸಲ್ಲಿಕೆ ಮೊಬೈಲ್‌ನಿಂದ ಸಾಧ್ಯ.
• ಸ್ಮಾರ್ಟ್ ಸಿಟಿ ಹೊಂದಾಣಿಕೆ: ಡಿಜಿಟಲ್ ಇಂಡಿಯಾ ಗುರಿಗೆ ಬೆಂಬಲ.

* ಮನೆಗೆ ಡಿಜಿಟಲ್ ವಿಳಾಸ ಫಲಕ ಅಳವಡಿಸಿ, ಮೊಬೈಲ್ ಬಳಸಿ ಸ್ಕ್ಯಾನ್ ಮಾಡಿದರೆ GPS ಆಧಾರಿತ ವಿಳಾಸ ಮತ್ತು ಸೇವಾ ಮಾಹಿತಿ ಲಭ್ಯವಾಗುತ್ತದೆ.
* ವಿಳಾಸ ಗುರುತಿಸುವಿಕೆಯನ್ನು ಸರಳಗೊಳಿಸಿ, ಸಾರ್ವಜನಿಕ ಸೇವಾ ವಿತರಣೆಯನ್ನು ಸುಧಾರಿಸಿ, ತುರ್ತು ಪ್ರತಿಕ್ರಿಯೆ ಸುಲಭಗೊಳಿಸಿ, ಡಿಜಿಟಲ್ ಆಡಳಿತಕ್ಕೆ ಪ್ರೋತ್ಸಾಹ ನೀಡಿ.

ಪ್ರಯೋಜನಗಳು:

• ಸೇವಾ ದಕ್ಷತೆ: ಪುರಸಭಾ ಸೇವೆ ತ್ವರಿತ ವಿತರಣೆ.
• ತುರ್ತು ಸಹಾಯ: ಆಂಬ್ಯುಲೆನ್ಸ್, ಪೋಲಿಸ್ ಸೇವೆ ತಕ್ಷಣದ ಪತ್ತೆ.
• ಡಿಜಿಟಲ್ ಆಡಳಿತ: ನಿಖರ ಆಸ್ತಿ ನಕ್ಷೆ ಮತ್ತು ದೂರು ಪರಿಹಾರ.
• ನಗರ ಯೋಜನೆ: ದತ್ತಾಂಶ ಆಧಾರಿತ ಯೋಜನೆ.
• ಇ-ಕಾಮರ್ಸ್ ಬೆಂಬಲ: ವಿಳಾಸ ಸ್ಪಷ್ಟತೆಗಳಿಂದ ಸರಿಯಾದ ವಿತರಣೆ.

* ಈ ಯೋಜನೆಯು ಇತರ ನಗರಗಳಿಗೆ ಮಾದರಿಯಾಗಲಿದ್ದು, ಡಿಜಿಟಲ್ ಇಂಡಿಯಾದ ಭವಿಷ್ಯಕ್ಕೆ ಬಲ ನೀಡಲಿದೆ.

## ಸೆಬಿಯ ಹೊಸ ಕಾರ್ಯನಿರ್ವಹಣಾ ನಿರ್ದೇಶಕರಾಗಿ ಸುನಿಲ್ ಕದಂ



* ಭಾರತೀಯ ಲಾಭಾಂಶ ಮತ್ತು ವಿನಿಮಯ ಮಂಡಳಿ (SEBI) ಯಲ್ಲಿ ಸುನಿಲ್ ಕದಂ ಅವರನ್ನು ಕಾರ್ಯನಿರ್ವಹಣಾ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ.
* ಅವರು ಕಳೆದ 30 ವರ್ಷಗಳಿಂದ ಸೆಬಿಯಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದು, ಈ ಹೊಸ ಜವಾಬ್ದಾರಿ ಮೂಲಕ ಸೆಬಿಗೆ ಅನುಭವಸಂಪನ್ನ ನೇತೃತ್ವ ಸಿಗಲಿದೆ.

KPSCVaani

* ಕದಂ ಅವರು ಮಾಹಿತಿ ತಂತ್ರಜ್ಞಾನ, ಹೂಡಿಕೆದಾರರ ಸಹಾಯ ಮತ್ತು ಶಿಕ್ಷಣ, ಧೋರಣಾ ವಿಶ್ಲೇಷಣೆ, ಆಡಳಿತ ವಿಭಾಗಗಳು, ಹಾಗೂ ನಿಷ್ಪಕ್ಷಪಾತ ಸೇವೆಗಳಿಗೆ ಸಂಬಂಧಿಸಿದ ಹಲವಾರು ವಿಭಾಗಗಳನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಹೊಂದಿದ್ದಾರೆ.
* ಜೊತೆಗೆ ಅವರು ರಾಷ್ಟ್ರೀಯ ಲಾಭಾಂಶ ಮಾರುಕಟ್ಟೆ ಸಂಸ್ಥೆ (NISM) ನ ಕಾರ್ಯಗಳಲ್ಲೂ ಪಾತ್ರವಹಿಸಲಿದ್ದಾರೆ.
* 1996ರಲ್ಲಿ ಸೇವೆ ಆರಂಭಿಸಿದ ಅವರು ಮುಂಚಿತವಾಗಿ ಮುಖ್ಯ ಮಹಾಪ್ರಬಂಧಕರಾಗಿ ಕಾರ್ಯನಿರ್ವಹಿಸಿದ್ದರು. ಕಾರುಪರಾತ್ಮಕ ಹಣಕಾಸು, ಮಾರುಕಟ್ಟೆ ನಿಯಂತ್ರಣ, ಮೇಲ್ವಿಚಾರಣೆ ಮತ್ತು ತನಿಖೆ ಇತ್ಯಾದಿ ಪ್ರಮುಖ ಕ್ಷೇತ್ರಗಳಲ್ಲಿ ತಜ್ಞರಾಗಿದ್ದಾರೆ. ಅವರು NISM ನ ರಿಜಿಸ್ಟ್ರಾರ್ ಹಾಗೂ ಸೆಬಿಯ ಪ್ರಾದೇಶಿಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.
* ಅವರು ಫಾರೆನ್ಸಿಕ್ ಲೆಕ್ಕಪತ್ರ, ಇ-ಮತದಾನ, ಡೆಪಾಸಿಟರಿ ರಸೀದುಗಳು, ಜವಾಬ್ದಾರಿ ವರದಿಗಳು ಹಾಗೂ ಕಾನೂನು ಕಾರ್ಯವೈಖರಿಯಲ್ಲಿ ಪರಿಣತಿಯಾಗಿದ್ದಾರೆ. ಅಂತಾರಾಷ್ಟ್ರೀಯ ಸಮಿತಿಗಳಲ್ಲಿಯೂ ಪಾಲ್ಗೊಂಡು ಗ್ಲೋಬಲ್ ಪಥದರ್ಶನ ನೀಡಿದ್ದಾರೆ.
* ಶೈಕ್ಷಣಿಕವಾಗಿ ಅವರು ಪೂಣೆ ವಿಶ್ವವಿದ್ಯಾಲಯದಿಂದ ಎಂ.ಬಿ.ಎ ಹಾಗೂ ಮುಂಬೈನ ಲಾ ಕಾಲೇಜಿನಿಂದ ಸೆಕ್ಯುರಿಟೀಸ್ ಕಾನೂನಿನಲ್ಲಿ pós ಗ್ರಾಜುಯೇಟ್ ಪದವಿ ಪಡೆದಿದ್ದಾರೆ.
* ಸುನಿಲ್ ಕದಂ ಅವರ ನೇಮಕಾತಿ ಮೂಲಕ ಸೆಬಿಗೆ ವಿಶ್ಲೇಷಣಾತ್ಮಕ, ತಾಂತ್ರಿಕ ಹಾಗೂ ನೈತಿಕ ದೃಷ್ಟಿಯಿಂದ ಶಕ್ತಿಶಾಲಿ ನಾಯಕ ಸಿಕ್ಕಿದ್ದು, ಮಾರುಕಟ್ಟೆ ಸ್ಥಿರತೆ ಹಾಗೂ ಹೂಡಿಕೆದಾರರ ವಿಶ್ವಾಸವನ್ನು ಬಲಪಡಿಸುವುದರಲ್ಲಿ ಇದು ಪ್ರಮುಖ ಪಾತ್ರವಹಿಸಲಿದೆ.

## ಭಾರತ–ಯುಎಇ: ಹಸಿರು ಉಕ್ಕು ಮತ್ತು ಅಲ್ಯೂಮಿನಿಯಂ ಉತ್ಪಾದನೆಗೆ ಉನ್ನತ ಮಟ್ಟದ ಚರ್ಚೆ



* ಭಾರತ ಮತ್ತು ಯುಎಇ ನಡುವೆ ಕೈಗೊಂಡ ನವೀಕೃತ ಕೈಪಿಡಿ ಅನುಸಾರ, ಹಸಿರು ಉಕ್ಕು ಮತ್ತು ಉನ್ನತ ದರ್ಜೆಯ ಅಲ್ಯೂಮಿನಿಯಂ ತಯಾರಿಕೆಯಲ್ಲಿ ಸಹಕಾರ ನಡೆಸಲು ಉಭಯ ರಾಷ್ಟ್ರಗಳು ಜುಲೈ 1, 2025ರಂದು ಉನ್ನತ ಮಟ್ಟದ ಚರ್ಚೆ ನಡೆಸಿದವು.
* CEPA (Comprehensive Economic Partnership Agreement) ಅಡಿಯಲ್ಲಿ ಕೈಗಾರಿಕಾ ಬಾಂಧವ್ಯ ಬಲಪಡಿಸಲು ಮತ್ತು ಶುದ್ಧ ಇಂಧನ ಆಧಾರಿತ ಧಾತು ಉತ್ಪಾದನೆಯಲ್ಲಿ ಸಹಕಾರ ಹೆಚ್ಚಿಸಲು ಉದ್ದೇಶಿಸಲಾಗಿದೆ.
* ಸಹಕಾರದ ಪ್ರಮುಖ ಗುರಿಗಳಲ್ಲಿ ಹಸಿರು ಉಕ್ಕು ಉತ್ಪಾದನೆ, ಎಫಿಶಿಯಂಟ್ ತಂತ್ರಜ್ಞಾನ ವಿನಿಮಯ, ಆಟೋಮೊಬೈಲ್ ಮತ್ತು ರಕ್ಷಣಾ ಕ್ಷೇತ್ರಗಳಿಗಾಗಿ ಪ್ರೀಮಿಯಂ ಉಕ್ಕು ಅಭಿವೃದ್ಧಿ ಸೇರಿವೆ.
* SAIL, NMDC, MECON ಮುಂತಾದ ಕೇಂದ್ರ ಸಾರ್ವಜನಿಕ ಉದ್ದಿಮೆಗಳು ಯುಎಇನಲ್ಲಿ ತಮ್ಮ ಅಂತರಾಷ್ಟ್ರೀಯ ಕಚೇರಿಗಳನ್ನು ಸ್ಥಾಪಿಸಿ, ಗಣಿಗಾರಿಕೆ, ಇಂಜಿನಿಯರಿಂಗ್ ಮತ್ತು ಸರಬರಾಜು ಒಪ್ಪಂದಗಳಲ್ಲಿ ಸಕ್ರಿಯವಾಗಿವೆ.
* CEPA ಅಡಿಯಲ್ಲಿ ಸಂಯುಕ್ತ ಕಾರ್ಯದಳ ರಚನೆ, ಲಾಜಿಸ್ಟಿಕ್ಸ್ ಸುಧಾರಣೆ, ಬಂಡವಾಳ ಹೂಡಿಕೆ ಸುಲಭೀಕರಣ ಮತ್ತು ತಂತ್ರಜ್ಞಾನ ವಿನಿಮಯಕ್ಕೆ ಒತ್ತು ನೀಡಲಾಗಿದೆ.
* ಯುಎಇ ಭಾರತದ ಕೈಗಾರಿಕಾ ವೃದ್ಧಿಗೆ ಕೇವಲ ಮಾರುಕಟ್ಟೆಯಲ್ಲ, ಭವಿಷ್ಯದ ಸ್ಥಿರತೆಯ ಪಾಲುದಾರವಾಗಿದೆ. ಈ ಸಹಕಾರದಿಂದ ಭಾರತ 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಗುರಿ ಸಾಧಿಸಬಹುದು.

## ಜುಲೈ 4 : 'ವಿಶ್ವ ಹಲಸಿನ ದಿನ'



* **ಪ್ರತಿ ವರ್ಷ ಜುಲೈ 4 ರಂದು 'ವಿಶ್ವ ಹಲಸಿನ ದಿನ' ಆಚರಿಸಲಾಗುತ್ತದೆ.** ಆದರೆ ತುಮಕೂರು ಜಿಲ್ಲೆಯ ಹಲಸಿನ ಬೆಳೆಗಾರರಿಗೆ ಇದರ ಬಗ್ಗೆ ಕಡಿಮೆ ಅರಿವು ಇದೆ.
* ಚೇಳೂರು ಹಲಸಿನ ಮಾರುಕಟ್ಟೆ ಭಾರತದಲ್ಲಿ ಪ್ರಸಿದ್ಧಿ ಪಡೆದಿದ್ದು, ತುಮಕೂರಿನ ತೋವಿನಕೆರೆ ಸುತ್ತಮುತ್ತಲಿನ ಪ್ರದೇಶವು ಎಳೆಯ ಕಾಯಿಗಳ ಮಾರಾಟಕ್ಕೆ ಹೆಸರುವಾಸಿಯಾಗಿದೆ. ಪ್ರತಿ ವರ್ಷ 500 ಟನ್ ಎಳೆಯ ಕಾಯಿಗಳನ್ನು ಬೇರೆ ಕಡೆಗೆ ಕಳುಹಿಸುತ್ತಾರೆ.
* ಜಿಲ್ಲೆಯಲ್ಲಿ 25ಕ್ಕೂ ಹೆಚ್ಚು ಹಲಸಿನ ಮೇಳಗಳು ನಡೆಯುತ್ತಿದ್ದರೂ, ಈ ವರ್ಷ ಬಹುತೇಕ ಚಟುವಟಿಕೆಗಳು ನಡೆಯಲಿಲ್ಲ. ಹಣದ ಕೊರತೆಯಿಂದ ಹಲಸಿನ ಮೇಳಗಳು ರದ್ದು ಆಗಿವೆ.
* ಗ್ರಾಮದ ಮಹಿಳಾ ಸಂಘಟನೆ ಹಲಸಿನ ಹಣ್ಣು, ಕಾಯಿ ಮತ್ತು ಬೀಜಗಳಿಂದ ವಿವಿಧ ಖಾದ್ಯಗಳು ತಯಾರಿಸುತ್ತಿದ್ದು, ಪ್ರತಿ ವರ್ಷ 10 ಸಾವಿರ ಎಳೆಯ ಕಾಯಿಗಳು ಹಾಗೂ ಹಲಸಿನ ಹಣ್ಣುಗಳು ದೇಶದ ಇತರೆ ರಾಜ್ಯಗಳಿಗೆ ಮಾರಾಟವಾಗುತ್ತವೆ. ಆದರೆ ಈವರೆಗೆ ಜಿಲ್ಲೆಯಲ್ಲಿ ಹಲಸಿನ ಖಾದ್ಯಗಳ ಮೇಳ ಏರ್ಪಟ್ಟಿಲ್ಲ.

## ಏರ್ ಮಾರ್ಷಲ್ ಜಸ್ವೀರ್ ಸಿಂಗ್ ಮಾನ್ ಪಶ್ಚಿಮ ವಾಯು ಕಮಾಂಡ್‌ಗೆ ಹಿರಿಯ ಅಧಿಕಾರಿಯಾಗಿ ನೇಮಕ



* ಜೂನ್ 1 ರಂದು , ಏರ್ ಮಾರ್ಷಲ್ ಜಸ್ವೀರ್ ಸಿಂಗ್ ಮಾನ್ ಅವರು ಭಾರತೀಯ ವಾಯುಪಡೆಯ ಪ್ರಮುಖ ಕ್ಷೇತ್ರಗಳಲ್ಲಿ ಒಂದಾದ ಪಶ್ಚಿಮ ವಾಯು ಕಮಾಂಡ್‌ನ ಹಿರಿಯ ವಾಯು ಸಿಬ್ಬಂದಿ ಅಧಿಕಾರಿಯಾದರು.
* ಅವರು ದೀರ್ಘ ಮತ್ತು ಯಶಸ್ವಿ ವೃತ್ತಿಜೀವನವನ್ನು ಹೊಂದಿದ್ದಾರೆ

ಮತ್ತು ಅವರ ನಾಯಕತ್ವ ಮತ್ತು ಹಾರುವ ಕೌಶಲ್ಯಕ್ಕೆ ಹೆಸರುವಾಸಿಯಾಗಿದ್ದಾರೆ .

* ಅವರು ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ ತರಬೇತಿ ಪಡೆದರು ಮತ್ತು ಡಿಸೆಂಬರ್ 16, 1989 ರಂದು IAF ನಲ್ಲಿ ಫೈಟರ್ ಪೈಲಟ್ ಆದರು . ಅಂದಿನಿಂದ, ಅವರು ವಿವಿಧ ಯುದ್ಧ ವಿಮಾನಗಳಲ್ಲಿ 3,000 ಗಂಟೆಗಳಿಗೂ ಹೆಚ್ಚು ಕಾಲ ಹಾರಾಟ ನಡೆಸಿದ್ದಾರೆ.

* ಅವರು ಪೈಲಟ್ ಅಟ್ಯಾಕ್ ಬೋಧಕರಾಗಿದ್ದಾರೆ ಮತ್ತು ಫೈಟರ್ ಸ್ಕ್ವಾಡ್ರನ್ ಅನ್ನು ಮುನ್ನಡೆಸಿದ್ದಾರೆ , ಫಾರ್ವರ್ಡ್ ಏರ್ ಬೇಸ್‌ನಲ್ಲಿ ಮುಖ್ಯ ಕಾರ್ಯಾಚರಣೆ ಅಧಿಕಾರಿಯಾಗಿ ಕೆಲಸ ಮಾಡಿದ್ದಾರೆ ಮತ್ತು ಉನ್ನತ ಯುದ್ಧ ವಿಮಾನ ನೆಲೆಯಲ್ಲಿ ಏರ್ ಆಫೀಸರ್ ಕಮಾಂಡಿಂಗ್ ಆಗಿಯೂ ಸೇವೆ ಸಲ್ಲಿಸಿದ್ದಾರೆ.

**ವಾಯುಪಡೆಯ ಉಪ ಮುಖ್ಯಸ್ಥರಾಗಿ ಏರ್ ಮಾರ್ಷಲ್ ನರ್ಮದೇಶ್ವರ ತಿವಾರಿ ನೇಮಕ**

* ಮೇ 2 ರಂದು , ಮತ್ತೊಬ್ಬ ಹಿರಿಯ ಅಧಿಕಾರಿ ಏರ್ ಮಾರ್ಷಲ್ ನರ್ಮದೇಶ್ವರ ತಿವಾರಿ ಅವರು ವಾಯುಪಡೆಯ ಉಪ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡರು . ಇದು ಭಾರತೀಯ ವಾಯುಪಡೆಯ ಎರಡನೇ ಅತ್ಯುನ್ನತ ಹುದ್ದೆಯಾಗಿದೆ.

* ಈ ಹುದ್ದೆಗೆ ಮೊದಲು, ಅವರು ವಾಯುಪಡೆಯ ಕಮಾಂಡಿಂಗ್-ಇನ್-ಚೀಫ್ ಆಗಿ ನೈಋತ್ಯ ವಾಯು ಕಮಾಂಡ್ ಅನ್ನು ಮುನ್ನಡೆಸುತ್ತಿದ್ದರು .

* ಅವರ ಅಸಾಧಾರಣ ಸೇವೆಗಾಗಿ ಭಾರತದ ಅತ್ಯುನ್ನತ ಮಿಲಿಟರಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ . 2025 ರಲ್ಲಿ , ಅವರು ಪರಮ ವಿಶಿಷ್ಟ ಸೇವಾ ಪದಕ (PVSM) ಪಡೆದರು. ಇದಕ್ಕೂ ಮೊದಲು, ಅವರಿಗೆ 2022 ರಲ್ಲಿ ಅತಿ ವಿಶಿಷ್ಟ ಸೇವಾ ಪದಕ (AVSM) ಮತ್ತು 2008 ರಲ್ಲಿ ವಾಯು ಸೇನಾ ಪದಕ (VM) ನೀಡಲಾಯಿತು.

## ನೌಕಾಪಡೆಯ ಮೊದಲ ಮಹಿಳಾ ಯುದ್ಧ ಪೈಲಟ್: ಐತಿಹಾಸಿಕ ಹೆಜ್ಜೆಯೊಂದಿಗೆ ಆಸ್ತಾ ಪೂನಿಯಾ



* ಸಬ್ ಲೆಫ್ಟಿನೆಂಟ್ ಆಸ್ತಾ ಪೂನಿಯಾ ಅವರು ಭಾರತೀಯ ನೌಕಾಪಡೆಯ ಮೊದಲ ಮಹಿಳಾ ಫೈಟರ್ ಪೈಲಟ್ ಆಗಿ ಐತಿಹಾಸಿಕ ಮೈಲಿಗಲ್ಲು ನಿರ್ಮಿಸಿದ್ದಾರೆ. ಈ ಸಾಧನೆ ಭಾರತೀಯ ನೌಕಾ ವಾಯುಯಾನದಲ್ಲಿ ನಾರಿ ಶಕ್ತಿಗೆ ಹೊಸ ದಾರಿ ತೆರೆದಿದೆ.

* ಜುಲೈ 3, 2025ರಂದು ಐಎನ್‌ಎಸ್ ದೇಗಾದಲ್ಲಿ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ, ಅವರು "ವಿಂಗ್ಸ್ ಆಫ್ ಗೋಲ್ಡ್" ಪ್ರಶಸ್ತಿಯನ್ನು ಪಡೆದು ಹಾಕ್ 132 ಜೆಟ್ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು.

* ಈ ಸಾಧನೆ ನೌಕಾಪಡೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ವಿಸ್ತರಿಸುವ ಗುರಿಯ ಭಾಗವಾಗಿದ್ದು, ಫೈಟರ್ ಪೈಲಟ್ ಪಾತ್ರದಲ್ಲಿ ಅವರ ಸೇರ್ಪಡೆಯು ಹೊಸ ಯುಗಕ್ಕೆ ಚಾಲನೆ ನೀಡಿದೆ.

* ಆಸ್ತಾ ಪೂನಿಯಾ ಮುಂದಿನ ದಿನಗಳಲ್ಲಿ MiG-29K ಅಥವಾ ನೌಕಾ ರಫೇಲ್ ಜೆಟ್‌ಗಳನ್ನು ಹಾರಿಸಲು ತಯಾರಾಗಿದ್ದಾರೆ, ಇವು ಭಾರತಕ್ಕೆ ಸೇರಿದ ವಿಮಾನವಾಹಕ ನೌಕೆಗಳಿಂದ ಕಾರ್ಯನಿರ್ವಹಿಸುತ್ತವೆ.

* ಭಾರತೀಯ ನೌಕಾಪಡೆಯು ಈ ಸಾಧನೆಯನ್ನು ಮಹಿಳಾ ಸಬಲೀಕರಣದ ಸಂಕೇತವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಹೆಮ್ಮೆಯಿಂದ ಹಂಚಿಕೊಂಡಿದೆ.

## ರಷ್ಯಾ ತಾಲಿಬಾನ್ ಆಡಳಿತವನ್ನು ಅಧಿಕೃತವಾಗಿ ಗುರುತಿಸಿದ ಮೊದಲ ದೇಶ



* ಗುರುವಾರ(ಜುಲೈ 03) ರಷ್ಯಾ ಇಸ್ಲಾಮಿಕ್ ಎಮಿರೇಟ್ ಎಂಬ ತಾಲಿಬಾನ್ ಆಡಳಿತವನ್ನು ಅಧಿಕೃತವಾಗಿ ಗುರುತಿಸಿದ ಮೊದಲ ರಾಷ್ಟ್ರವಾಗಿದೆ ಎಂದು ಅಫ್ಘಾನಿಸ್ತಾನ ಪ್ರಕಟಿಸಿದೆ.

* ಕಾಬೂಲ್‌ನಲ್ಲಿ ವಿದೇಶಾಂಗ ಸಚಿವ ಅಮೀರ್ ಖಾನ್ ಮುತಾಕಿ ಮತ್ತು ರಷ್ಯಾದ ರಾಯಭಾರಿ ಡಿಮಿಟ್ರಿ ಝಿರ್ನೋವ್ ನಡುವಿನ ಸಭೆಯ ಬಳಿಕ ಈ ಘೋಷಣೆ ಹೊರಬಂದಿತು.

* ಮುತಾಕಿ ಈ ನಿರ್ಧಾರವನ್ನು "ಕೆಚ್ಚೆದೆಯಾದ ಮತ್ತು ಧೈರ್ಯಶಾಲಿ ಹೆಜ್ಜೆ" ಎಂದು ವರ್ಣಿಸಿದರು ಹಾಗೂ ಇತರ ರಾಷ್ಟ್ರಗಳಿಗೆ ಇದು ಮಾದರಿಯಾಗಲಿದೆ ಎಂದು ಹೇಳಿದರು.

* ತಾಲಿಬಾನ್ ವಿದೇಶಾಂಗ ಇಲಾಖೆ ವಕ್ತಾರ ಟಕಲ್, ರಷ್ಯಾ ಅವರ ಆಡಳಿತವನ್ನು ಅಧಿಕೃತವಾಗಿ ಗುರುತಿಸಿದಂತೆಯೇ ಎಂದು ಸ್ಪಷ್ಟಪಡಿಸಿದರು. ಇದನ್ನು ರಷ್ಯಾದ ಮಾಸ್ಕೋ ಪ್ರತಿನಿಧಿ ಕಬುಲೋವ್ ಮತ್ತು ವಿದೇಶಾಂಗ ಇಲಾಖೆ ಸಹ ದೃಢಪಡಿಸಿದ್ದಾರೆ.

*ಚೀನಾ ಮತ್ತು ಪಾಕಿಸ್ತಾನ ಸೇರಿದಂತೆ ಕೆಲವು ರಾಷ್ಟ್ರಗಳು ತಾಲಿಬಾನ್ ರಾಯಭಾರಿಗಳನ್ನು ತಾವು ಹೊಂದಿದ್ದರೂ, ಇಸ್ಲಾಮಿಕ್ ಎಮಿರೇಟ್ ಅನ್ನು ಇನ್ನೂ ಅಧಿಕೃತವಾಗಿ ಗುರುತಿಸಿಲ್ಲ.

# 05 July 2025

## ಪ್ರಧಾನಿ ಮೋದಿಗೆ ಟ್ರಿನಿಡಾಡ್ ಮತ್ತು ಟೊಬಾಗೋದ ಅತ್ಯುನ್ನತ ನಾಗರಿಕ ಪ್ರಶಸ್ತಿ



* ಜುಲೈ 4, 2025 ರಂದು ಪ್ರಧಾನಿ ನರೇಂದ್ರ ಮೋದಿಯವರಿಗೆ ಕೆರಿಬಿಯನ್ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಆರ್ಡರ್ ಆಫ್ ದಿ ರಿಪಬ್ಲಿಕ್ ಆಫ್ ಟ್ರಿನಿಡಾಡ್ ಮತ್ತು ಟೊಬಾಗೊವನ್ನು ನೀಡಿ ಗೌರವಿಸಲಾಯಿತು. ಈ ಗೌರವವು ಪ್ರಪಂಚದಾದ್ಯಂತ ಅವರ ನಾಯಕತ್ವ ಮತ್ತು ವಿದೇಶಗಳಲ್ಲಿ ವಾಸಿಸುವ ಭಾರತೀಯ

ಮೂಲದ ಜನರೊಂದಿಗಿನ ಅವರ ನಿಕಟ ಸಂಬಂಧವನ್ನು ಗುರುತಿಸಿತು.
* ಕೆರಿಬಿಯನ್ ರಾಷ್ಟ್ರಕ್ಕೆ ಅವರ ಎರಡು ದಿನಗಳ ಭೇಟಿಯ ಸಂದರ್ಭದಲ್ಲಿ ಈ ಸಮಾರಂಭ ನಡೆಯಿತು. ಅವರ ಜಾಗತಿಕ ನಾಯಕತ್ವ ಮತ್ತು ಭಾರತೀಯ ವಲಸೆಗಾರರೊಂದಿಗಿನ ಬಲವಾದ ಸಂಪರ್ಕಕ್ಕಾಗಿ ಈ ಪ್ರಶಸ್ತಿಯನ್ನು ನೀಡಲಾಯಿತು. ಟ್ರಿನಿಡಾಡ್ ಮತ್ತು ಟೊಬಾಗೊ ಜೊತೆಗಿನ ಭಾರತದ ಸಂಬಂಧಗಳನ್ನು ಬಲಪಡಿಸುವಲ್ಲಿ ಇದು ಒಂದು ಪ್ರಮುಖ ಕ್ಷಣವಾಗಿದೆ.
* ಪ್ರಧಾನಿಯಾಗಿ ಟ್ರಿನಿಡಾಡ್ ಮತ್ತು ಟೊಬಾಗೋಗೆ ಪ್ರಧಾನಿ ಮೋದಿಯವರ ಮೊದಲ ಅಧಿಕೃತ ಭೇಟಿ ಇದಾಗಿದೆ. 1999 ರ ನಂತರ ಇದು ಆ ದೇಶಕ್ಕೆ ಭಾರತದ ಪ್ರಧಾನ ಮಂತ್ರಿ ಮೊದಲ ಭೇಟಿಯಾಗಿದೆ.
* ಟ್ರಿನಿಡಾಡ್ ಮತ್ತು ಟೊಬಾಗೊದ ಪ್ರಧಾನಿ ಕಮಲಾ ಪರ್ಸಾದ್-ಬಿಸ್ಸೆಸ್ಸರ್ ಅವರು ಪ್ರಶಸ್ತಿಯನ್ನು ಪ್ರದಾನ ಮಾಡಿದರು ಮತ್ತು ಶ್ರೀ ಮೋದಿಯವರ ಭೇಟಿಯು ಎರಡೂ ರಾಷ್ಟ್ರಗಳ ನಡುವಿನ ಹೆಮ್ಮೆ ಮತ್ತು ಸಂಪರ್ಕದ ಕ್ಷಣವಾಗಿದೆ ಎಂದು ಹೇಳಿದರು.
* ಭಾರತದ ಪ್ರಧಾನಿ ನರೇಂದ್ರ ಮೋದಿ 140 ಕೋಟಿ ಭಾರತೀಯರ ಪರವಾಗಿ ಅದನ್ನು ಸ್ವೀಕರಿಸಿದರು. ಭೇಟಿಯ ಭಾಗವಾಗಿ, ಅವರು ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಏಕತೆಯನ್ನು ಸಂಕೇತಿಸುವ ಮಹಾಕುಂಭದ ಪವಿತ್ರ ಜಲ ಮತ್ತು ರಾಮ ಮಂದಿರದ ಪ್ರತಿಕೃತಿಯನ್ನು ಟ್ರಿನಿಡಾಡ್ ಮತ್ತು ಟೊಬಾಗೋದ ಪ್ರಧಾನ ಮಂತ್ರಿಗೆ ನೀಡಿದರು.

## ಏರ್ ಮಾರ್ಷಲ್ ಎಸ್. ಶಿವಕುಮಾರ್ ವಾಯುಪಡೆಯ ನೂತನ ಆಡಳಿತಾಧಿಕಾರಿಯಾಗಿ ನೇಮಕ



* ಭಾರತೀಯ ವಾಯುಪಡೆಯ (IAF) ಹಿರಿಯ ಮತ್ತು ಅತ್ಯಂತ ಗೌರವಾನ್ವಿತ ಅಧಿಕಾರಿಯಾಗಿರುವ ಏರ್ ಮಾರ್ಷಲ್ ಎಸ್. ಶಿವಕುಮಾರ್ ಅವರು ಈಗ ನವದೆಹಲಿಯಲ್ಲಿರುವ ವಾಯುಪಡೆಯ ಪ್ರಧಾನ ಕಚೇರಿಯಲ್ಲಿ ವಾಯುಪಡೆಯ ಉಸ್ತುವಾರಿ ಆಡಳಿತ (AOA) ಅಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.
* ಏರ್ ಮಾರ್ಷಲ್ ಶಿವಕುಮಾರ್ ಅವರು ಜೂನ್ 1990 ರಲ್ಲಿ ಆಡಳಿತ ಶಾಖೆಗೆ ಸೇರಿದಾಗಿನಿಂದ IAF ನ ಭಾಗವಾಗಿದ್ದಾರೆ . ಇವರು ಪಾಂಡಿಚೇರಿ ವಿಶ್ವವಿದ್ಯಾಲಯದಿಂದ ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ MBA ಪದವಿ ಮತ್ತು ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ರಕ್ಷಣಾ ಮತ್ತು ಕಾರ್ಯತಂತ್ರದ ಅಧ್ಯಯನದಲ್ಲಿ MPHIL ಪದವಿಯನ್ನು ಪಡೆದಿದ್ದಾರೆ.
* 35 ವರ್ಷಗಳಿಗೂ ಹೆಚ್ಚಿನ ಸುದೀರ್ಘ ವೃತ್ತಿಜೀವನದಲ್ಲಿ ಅವರು ಅನೇಕ ಪ್ರಮುಖ ಪಾತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಅವರು ವಾಯುನೆಲೆಗಳನ್ನು ನಡೆಸಲು ಸಹಾಯ ಮಾಡಿದ್ದಾರೆ, ವಾಯು ಸಂಚಾರವನ್ನು ನೋಡಿಕೊಂಡಿದ್ದಾರೆ, ಕಾಂಗೋದಲ್ಲಿನ ವಿಶ್ವಸಂಸ್ಥೆಯ ಮಿಷನ್‌ನಲ್ಲಿ ಸೇವೆ ಸಲ್ಲಿಸಿದ್ದಾರೆ ಮತ್ತು ಹಾರುವ ಕೇಂದ್ರಗಳಲ್ಲಿ ಉನ್ನತ ಆಡಳಿತಾತ್ಮಕ ಕರ್ತವ್ಯಗಳನ್ನು ನಿರ್ವಹಿಸಿದ್ದಾರೆ.
* ಶಿವಕುಮಾರ್ ಅವರು ವಾಯು ಪ್ರಧಾನ ಕಚೇರಿಯಲ್ಲಿ ಮಹಾನಿರ್ದೇಶಕರಾಗಿ (ಆಡಳಿತ) ಕೆಲಸ ಮಾಡುತ್ತಿದ್ದರು. ಅತ್ಯುತ್ತಮ ಸೇವೆಗಾಗಿ ನೀಡಲಾಗುವ ವಿಶಿಷ್ಟ ಸೇವಾ ಪದಕ (VSM) ವನ್ನು ಅವರು ಹೆಮ್ಮೆಯಿಂದ ಸ್ವೀಕರಿಸಿದ್ದಾರೆ.

## ಡೆಹ್ರಾಡೂನ್ ಸೇನಾ ತರಬೇತಿ ಸಂಸ್ಥೆಗೆ ಭವ್ಯ ನರಸಿಂಹ ಮೂರ್ತಿ ಮೊದಲ ಮಹಿಳೆ



* ಎಐಸಿಸಿ ರಾಷ್ಟ್ರೀಯ ಸಂಯೋಜಕಿ ಭವ್ಯ ನರಸಿಂಹ ಮೂರ್ತಿ ಭಾರತೀಯ ಪ್ರಾದೇಶಿಕ ಸೇನೆಯಲ್ಲಿ ಕಮಿಷನ್ಡ್ ಆಫೀಸರ್ ಆಗಿ ನೇಮಕಗೊಂಡಿದ್ದಾರೆ. ಅವರು ಲೆಫ್ಟಿನೆಂಟ್ ಹುದ್ದೆಗೆ ಭದ್ರಪಡೆಯಾಗಿ ಕಾಶ್ಮೀರ ಗಡಿಯಲ್ಲಿ ತರಬೇತಿ ಪಡೆದಿದ್ದಾರೆ.
* ಭವ್ಯ ಅವರು ದಕ್ಷಿಣ ಭಾರತದಿಂದ ಆಯ್ಕೆಯಾಗಿರುವ ಮೊದಲ ಮಹಿಳಾ ಪ್ರಾದೇಶಿಕ ಸೇನಾ ಅಧಿಕಾರಿ ಎಂಬ ಗೌರವವನ್ನು ಪಡೆದುಕೊಂಡಿದ್ದಾರೆ.
* 2022ರ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ಏಕೈಕ ಮಹಿಳಾ ಅಭ್ಯರ್ಥಿಯೂ ಕೂಡ ಅವರು.
* ತಮ್ಮ ಪ್ರತಿಕ್ರಿಯೆಯಲ್ಲಿ ಭವ್ಯ, “ರಾಜಕೀಯವಾಗಿ ಜನರ ಸೇವೆ ಮಾಡುವುದರ ಜೊತೆಗೆ, ಸೇನಾಧಿಕಾರಿಯಾಗಿ ದೇಶದ ಕರೆಯಾದಾಗ ಗಡಿಯಲ್ಲಿ ಸೇವೆ ಮಾಡಲು ಸಿದ್ಧಳಿದ್ದೇನೆ,” ಎಂದು ಹೇಳಿದ್ದಾರೆ.
* ಪ್ರಾದೇಶಿಕ ಸೇನೆಯಲ್ಲಿರುವ ಇತರೆ ಪ್ರಮುಖ ವ್ಯಕ್ತಿಗಳಲ್ಲಿ ಎಂ.ಎಸ್. ಧೋನಿ, ಸಚಿನ್ ಪೈಲಟ್ ಹಾಗೂ ಅನುರಾಗ ಠಾಕುರ್ ಅವರಂತವರು ಕೂಡ ಸೇರಿದ್ದಾರೆ.

## ಜೇನ್ ಸ್ಟ್ರೀಟ್ ವಂಚನೆ: ಭಾರತೀಯ ಷೇರುಮಾರುಕಟ್ಟೆಗೆ ₹36,500 ಕೋಟಿ ಹೊಡೆದ ಅಮೆರಿಕದ ಕಂಪನಿ



* ಅಮೆರಿಕ ಮೂಲದ ಟ್ರೇಡಿಂಗ್ ಕಂಪನಿ ಜೇನ್ ಸ್ಟ್ರೀಟ್ ಗ್ರೂಪ್ ಅನ್ನು ಭಾರತೀಯ ಷೇರು ಮಾರುಕಟ್ಟೆಯಿಂದ ಸೆಬಿ ನಿಷೇಧಿಸಿದೆ. 2023ರಿಂದ 2025ರ ನಡುವೆ ಕಂಪನಿಯು ವಂಚನೆಯ ಮೂಲಕ ₹36,500 ಕೋಟಿ ಲಾಭ ಮಾಡಿದೆ ಎಂಬ ಆರೋಪವಿದೆ.
* ಜೇನ್ ಸ್ಟ್ರೀಟ್ ಬ್ಯಾಂಕ್ ನಿಫ್ಟಿ ಫ್ಯೂಚರ್ಸ್, ಆಪ್ಷನ್, ಮತ್ತು ಇಕ್ವಿಟಿ ಸೆಗ್ಮೆಂಟ್‌ಗಳಲ್ಲಿ "ಇಂಟ್ರಾಡೇ ಮ್ಯಾನುಪುಲೇಶನ್" ಮತ್ತು "ಮಾರ್ಕಿಂಗ್ ದಿ ಕ್ಲೋಸ್" ತಂತ್ರ ಬಳಸಿದೆ.

* ಒಂದು ದಿನದೊಳಗೆ ಷೇರುಗಳ ಖರೀದಿ ಮತ್ತು ಮಾರಾಟದಿಂದ ಬೆಲೆಗಳನ್ನು ಉಬ್ಬಿಸಿ ಅಥವಾ ಕುಸಿಸಿ ಅದರಿಂದ ಲಾಭ ಪಡೆದಿದೆ.
* ಕಂಪನಿಯು JS Investments ಸೇರಿದಂತೆ ನಾಲ್ಕು ಅಂಗಸಂಸ್ಥೆಗಳ ಮೂಲಕ ಭಾರತದಲ್ಲಿ ಟ್ರೇಡಿಂಗ್ ಮಾಡುತ್ತಿತ್ತು. 2,600 ಉದ್ಯೋಗಿಗಳಿರುವ ಈ ಕಂಪನಿ ಅತ್ಯಾಧುನಿಕ ಕ್ವಾಂಟ್ ಮಾದರಿಗಳು ಹಾಗೂ ಆಟೊಮೇಟೆಡ್ ವಿಧಾನಗಳಿಂದ ಕೆಲಸ ನಡೆಸುತ್ತಿತ್ತು.
* ಆಲ್ಗೋ ಟ್ರೇಡರ್ ಕೃಪಾಕರನ್ ಟೊಮೆಟೋ-ಕೆಚಪ್ ಉದಾಹರಣೆ ನೀಡಿ, ಈಕ್ವಿಟಿ ಮತ್ತು ಫ್ಯೂಚರ್ಸ್‌ಗಳಲ್ಲಿ ನಷ್ಟ ಕಂಡು, ಆಪ್ಷನ್ ಗಳಲ್ಲಿ ಲಾಭ ಮಾಡುವ ತಂತ್ರವನ್ನು ವಿವರಿಸಿದ್ದಾರೆ.
* ಜೇನ್ ಸ್ಟ್ರೀಟ್‌ನ ₹4,843 ಕೋಟಿ ಮೊತ್ತವನ್ನು ಸೆಬಿ ಮುಟ್ಟುಗೋಲು ಹಾಕಿದ್ದು, ಕಂಪನಿಗೆ 21 ದಿನಗಳೊಳಗೆ ಪ್ರತಿಕ್ರಿಯೆ ನೀಡುವ ಸೂಚನೆ ನೀಡಿದೆ.






## ಭಾರತದ ಬತ್ತಳಿಕೆಗೆ ಸೇರಲಿವೆ 3 ಅಪಾಚೆ 64ಇ ಹೆಲಿಕಾಪ್ಟರ್‌ಗಳು



* ಭಾರತೀಯ ಸೇನೆ ಜುಲೈ 15 ರಂದು ಅಮೆರಿಕದಿಂದ ಮೂರು AH-64E ಅಪಾಚೆ ಹೆಲಿಕಾಪ್ಟರ್‌ಗಳನ್ನು ಪಡೆಯಲಿದೆ. ಇದು 5,691 ಕೋಟಿ ರೂ.ಗಳ ಒಪ್ಪಂದದ ಭಾಗವಾಗಿದೆ. ಈ ಹೆಲಿಕಾಪ್ಟರ್‌ಗಳು ನೆಲದ ಪಡೆಗಳಿಗೆ ಸಮರ್ಥವಾದ ವಾಯುಸಹಾಯ ಒದಗಿಸಲು ಬಳಕೆಯಾಗಲಿವೆ.
* ದಾಳಿ ಹೆಲಿಕಾಪ್ಟರ್‌ಗಳು ನೆಲದ ಪಡೆಗಳಿಗೆ ಕ್ಲೋಸ್ ಏರ್ ಸಪೋರ್ಟ್ ನೀಡುತ್ತವೆ, ಶಸ್ತ್ರಸಜ್ಜಿತ ಗುರಿಗಳನ್ನು ನಾಶಮಾಡುತ್ತವೆ ಮತ್ತು ಹಲವು ಮಲ್ಟಿ-ಡೊಮೈನ್ ಕಾರ್ಯಾಚರಣೆಗಳಲ್ಲಿ ಭಾಗವಹಿಸುತ್ತವೆ.
* AH-64E ಅಪಾಚೆ ಅತ್ಯಾಧುನಿಕ ದಾಳಿ ಹೆಲಿಕಾಪ್ಟರ್ ಆಗಿದ್ದು, ಬೋಯಿಂಗ್ ಸಂಸ್ಥೆ ನಿರ್ಮಿಸಿದೆ. ಇದು ಹಗಲು-ರಾತ್ರಿ ಕಾರ್ಯಾಚರಣೆ, ಜಿಟಿಪಿಎಸ್, ನವೀನ ಶಸ್ತ್ರಾಸ್ತ್ರಗಳು ಮತ್ತು ಎರಡು ಪೈಲಟ್‌ಗಳ ತಂತ್ರಜ್ಞಾನ ಹೊಂದಿದೆ. ಇದನ್ನು 15+ ದೇಶಗಳು ಬಳಸುತ್ತಿವೆ.
* ಭಾರತ ಈಗಾಗಲೇ 22 ಅಪಾಚೆಗಳನ್ನು ವಾಯುಪಡೆಗೆ ಪಡೆದಿದೆ. ಸೇನೆಗೆ ಹೆಚ್ಚುವರಿಯಾಗಿ ಆರು ಹೆಲಿಕಾಪ್ಟರ್‌ಗಳ ಪೂರೈಕೆ ನಡೆಯುತ್ತಿದೆ. ಭಾರತ ದಾಳಿ ಹೆಲಿಕಾಪ್ಟರ್‌ಗಳ ಸಂಖ್ಯೆಯಲ್ಲಿ ವಿಶ್ವದಲ್ಲಿ 9ನೇ ಸ್ಥಾನದಲ್ಲಿದೆ.
* AH-64E ಹೆಲಿಕಾಪ್ಟರ್‌ಗಳು ಗರಿಷ್ಠ 23,000 ಪೌಂಡು ತೂಕ, 150+ ನಾಟ್ ವೇಗ, 20,000 ಅಡಿ ಹಾರಾಟ ಸಾಮರ್ಥ್ಯ ಹೊಂದಿದ್ದು, ಹೆಲ್ಫೈರ್ ಕ್ಷಿಪಣಿಗಳು, ರಾಕೆಟ್‌ಗಳು ಮತ್ತು 30 ಎಂಎಂ ಚೈನ್ ಗನ್ ಗಳಿಂದ ಶಸ್ತ್ರಸಜ್ಜಿತವಾಗಿದೆ.
* AH-64E ಅಪಾಚೆ, Mi-28NM ಹ್ಯಾವೋಕ್, AH-1Z ವೈಪರ್, ಯೂರೋಕಾಪ್ಟರ್ ಟೈಗರ್, T129 ATAK, ಕಾ-52, A129 ಮಂಗುಸ್ತಾ, Mi-24, Z-10 ಮತ್ತು ರೂಯಿವಾಲ್ಕ್ — ಇವೆಲ್ಲಾ ಪ್ರಭಾವಿ ದಾಳಿ ಸಾಮರ್ಥ್ಯವನ್ನು ಹೊಂದಿವೆ.

## ಸಿ-ಫ್ಲಡ್ ಏಕೀಕೃತ ಜಲಾವೃತ ಪೂರ್ವಾನುಮಾನ ವ್ಯವಸ್ಥೆ ಉದ್ಘಾಟನೆ



* ಕೇಂದ್ರ ಜಲಶಕ್ತಿ ಸಚಿವ ಶ್ರೀ ಸಿ.ಆರ್. ಪಾಟೀಲ್ ಇಂದು "ಸಿ-ಫ್ಲಡ್" ಎಂಬ ಏಕೀಕೃತ ಜಲಾವೃತ ಪೂರ್ವಾನುಮಾನ ವ್ಯವಸ್ಥೆಯನ್ನು ಉದ್ಘಾಟಿಸಿದರು. ಈ ಯೋಜನೆಯನ್ನು ಪುಣೆಯ ಸಿ-ಡ್ಯಾಕ್ ಮತ್ತು ಕೇಂದ್ರ ಜಲ ಆಯೋಗ (CWC) ಸಹಕಾರದಿಂದ ಅಭಿವೃದ್ಧಿಪಡಿಸಲಾಗಿದೆ.
* ಸಿ-ಫ್ಲಡ್ ಒಂದು ವೆಬ್ ಆಧಾರಿತ ವೇದಿಕೆಯಾಗಿದ್ದು, ಎರಡು ದಿನಗಳ ಮುಂಚಿತವಾಗಿ ಗ್ರಾಮ ಮಟ್ಟದವರೆಗೆ ಜಲಾವೃತ ಭೂಪಟ ಮತ್ತು ನೀರಿನ ಮಟ್ಟದ ಪೂರ್ವಾನುಮಾನ ಒದಗಿಸುತ್ತದೆ.
* ಇದರಿಂದ ವಿಪತ್ತು ನಿರ್ವಹಣಾಧಿಕಾರಿಗಳಿಗೆ ಸುಲಭ ನಿರ್ಧಾರ ತೆಗೆದುಕೊಳ್ಳಲು ಸಹಾಯವಾಗುತ್ತದೆ.
* ಈ ವ್ಯವಸ್ಥೆಯ ಪ್ರಸ್ತುತ ವ್ಯಾಪ್ತಿ ಮಹಾನದಿ, ಗೋದಾವರಿ ಮತ್ತು ತಾಪಿ ನದೀ ಕುಹರಗಳಿಗೆ ಸೀಮಿತವಾಗಿದ್ದು, ಭವಿಷ್ಯದಲ್ಲಿ ಇನ್ನು ಹೆಚ್ಚಿನ ನದೀ ಪ್ರದೇಶಗಳನ್ನು ಸೇರಿಸಲಾಗುತ್ತದೆ. ಈ ಮಾದರಿಯೀಕರಣಕ್ಕಾಗಿ ಹೈಪರ್ಫಾರ್ಮೆನ್ಸ್ ಕಂಪ್ಯೂಟಿಂಗ್ (HPC) ಸೌಲಭ್ಯಗಳನ್ನು ಬಳಸಲಾಗುತ್ತದೆ.

* ಸಮಾರಂಭದಲ್ಲಿ ಸಚಿವರು ಸಾರ್ವಜನಿಕ ಜಾಗೃತಿ, ಸಿದ್ಧತೆ ಹೆಚ್ಚಿಸುವಂತೆ, ಎಲ್ಲಾ ನದೀ ಕುಹರಗಳ ಅಧ್ಯಯನಕ್ಕೆ ಯೋಜನೆ ತಯಾರಿಸುವಂತೆ ಮತ್ತು ಈ ಪೂರ್ವಾನುಮಾನಗಳನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪೋರ್ಟಲ್‌ಗೆ ತಕ್ಷಣ ಏಕೀಕರಿಸುವಂತೆ ಸೂಚಿಸಿದರು.
* ಅಂತಿಮವಾಗಿ, ಸಚಿವರು ಈ ಯಶಸ್ವಿ ಪ್ರಯತ್ನಕ್ಕಾಗಿ ಸಿ-ಡ್ಯಾಕ್, CWC ಮತ್ತು ಎನ್‌ಆರ್‌ಎಸ್‌ಸಿ ತಂಡವನ್ನು ಅಭಿನಂದಿಸಿದರು ಮತ್ತು ಸರ್ಕಾರದ ವಿಪತ್ತು ನಿರ್ವಹಣಾ ಬದ್ಧತೆಯನ್ನು ಪುನರುಚ್ಚರಿಸಿದರು.

## CBDT ಅಧ್ಯಕ್ಷರಾಗಿ ರವಿ ಅಗರ್ವಾಲ್ ಅವರ ಅಧಿಕಾರ ವಿಸ್ತರಣೆ



* ಕೇಂದ್ರೀಯ ನೇರ ತೆರಿಗೆ ಮಂಡಳಿಯ (CBDT) ಅಧ್ಯಕ್ಷರಾಗಿ ರವಿ ಅಗರ್ವಾಲ್ ಅವರ ಅಧಿಕಾರಾವಧಿಯನ್ನು ಮತ್ತೊಂದು ವರ್ಷ ವಿಸ್ತರಿಸಲಾಗಿದೆ.
* ಈ ಬಗ್ಗೆ ಜುಲೈ 1, 2025 ರಿಂದ ಜೂನ್ 30, 2026 ರವರೆಗೆ ಅಥವಾ ಮುಂದಿನ ಆದೇಶದವರೆಗೆ ನಿಯೋಜನೆ ಮುಂದುವರೆಯಲಿದೆ ಎಂದು ಸರ್ಕಾರ ತಿಳಿಸಿದೆ.
* ಅಗರ್ವಾಲ್ ಅವರು 1988ರ ಬ್ಯಾಚ್‌ನ ಭಾರತೀಯ ಕಂದಾಯ ಸೇವೆಯ (IRS) ಹಿರಿಯ ಅಧಿಕಾರಿ. ಅವರು ಜೂನ್ 2024 ರಲ್ಲಿ ನಿತಿನ್ ಗುಪ್ತಾ ಅವರ ನಂತರ CBDT ಅಧ್ಯಕ್ಷರಾಗಿದ್ದು, ಹಿಂದೆ ಸದಸ್ಯ (ಆಡಳಿತ) ಹುದ್ದೆಯಲ್ಲಿದ್ದರು.
* ಸಿಬಿಡಿಟಿಯು ಒಬ್ಬ ಅಧ್ಯಕ್ಷ ಮತ್ತು ಆರು ಸದಸ್ಯರನ್ನು ಒಳಗೊಂಡಿದೆ. ಈ ಮಂಡಳಿ ಆದಾಯ ತೆರಿಗೆ ಇಲಾಖೆಯ ನೀತಿ ನಿರ್ಧಾರಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.
* ಇದಕ್ಕಾಗಿ CBDT ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಮಾರ್ಗಸೂಚಿಗಳನ್ನು ನೀಡಲಾಗಿದೆ. ತೆರಿಗೆ ಮೌಲ್ಯಮಾಪನ ಸಂದರ್ಭದಲ್ಲಿ ಬರುವ ಎಲ್ಲಾ ಪ್ರಶ್ನೆಗಳು ಸ್ಪಷ್ಟ, ಪ್ರಸ್ತುತ ಮತ್ತು ಸಮರ್ಥನೀಯವಾಗಿರಬೇಕು ಎಂದು ಸೂಚಿಸಲಾಗಿದೆ. ಅಪ್ರಸ್ತುತ ಪ್ರಶ್ನೆಗಳನ್ನು ಸಂಪೂರ್ಣ ತಪ್ಪಿಸುವಂತೆ ಆಗ್ರಹಿಸಲಾಗಿದೆ.
* ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತೆರಿಗೆದಾರ ಸ್ನೇಹಿ ವ್ಯವಸ್ಥೆ ಮಾಡಲು ಸೂಚನೆ ನೀಡಿದ್ದಾರೆ. ತೆರಿಗೆ ದಾವೆಗಳ ಮೇಲ್ಮನವಿ ವಿಲೇವಾರಿಗೆ ಆದ್ಯತೆ ನೀಡಲಾಗುವುದು. 2025-26ರಲ್ಲಿ 225,000 ಕ್ಕೂ ಹೆಚ್ಚು ಮೇಲ್ಮನವಿಗಳನ್ನು ವಿಲೇವಾರಿ ಮಾಡುವ ಗುರಿಯಿದೆ.

## ಬಿಹಾರ ಸರ್ಕಾರದ ಮುಖ್ಯಮಂತ್ರಿಯವರ ಪ್ರತಿಜ್ಞಾ ಯೋಜನೆ



* ಬಿಹಾರ ಸರ್ಕಾರ "ಮುಖ್ಯಮಂತ್ರಿ ಪ್ರತಿಜ್ಞಾ ಯೋಜನೆ"ಯನ್ನು ಆರಂಭಿಸಿದ್ದು, 12ನೇ ತರಗತಿ ನಂತರ ಯುವಕರಿಗೆ ಇಂಟರ್ನ್‌ಶಿಪ್‌ಗೆ ಆರ್ಥಿಕ ಸಹಾಯ ನೀಡುತ್ತದೆ.
* 18 ರಿಂದ 28 ವರ್ಷ ವಯಸ್ಸಿನವರು, 12ನೇ ತರಗತಿ, ಐಟಿಐ, ಪದವಿ ಅಥವಾ ಸ್ನಾತಕೋತ್ತರ ಪದವಿದಾರರು 3 ರಿಂದ 12 ತಿಂಗಳ ಇಂಟರ್ನ್‌ಶಿಪ್‌ಗೆ ತಿಂಗಳಿಗೆ ₹4,000 ರಿಂದ ₹6,000 ವರೆಗೆ ಪಡೆಯುತ್ತಾರೆ.
- ಪಿಯುಸಿ: ₹4,000,
- ITI ಡಿಪ್ಲೋಮಾ: ₹5,000,
- ಪದವಿ/ಸ್ನಾತಕೋತ್ತರ: ₹6,000

ಹೆಚ್ಚುವರಿ ₹2,000 (ಜಿಲ್ಲೆಗೆ ಹೊರಗಿನ ಇಂಟರ್ನ್‌ಷಿಪ್) ಹಾಗೂ ₹5,000 (ರಾಜ್ಯಕ್ಕೆ ಹೊರಗಿನ ಇಂಟರ್ನ್‌ಷಿಪ್) ಆಹಾರ ಸಹಾಯ ಲಭ್ಯ.
ಇದು 3-12 ತಿಂಗಳ ಅವಧಿಗೆ ಅನ್ವಯವಾಗುತ್ತದೆ.
* ಮುಖ್ಯಮಂತ್ರಿ ಕಲಾವಿದ ಪಿಂಚಣಿ ಯೋಜನೆ: ಪರಂಪರವಾಗಿ ಕಲಾ ಕ್ಷೇತ್ರದಲ್ಲಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಿದ 50 ವರ್ಷ ಮೇಲ್ಪಟ್ಟ ಕಲಾವಿದರಿಗೆ ₹3,000 ಪಿಂಚಣಿ ಲಭ್ಯ. ವಾರ್ಷಿಕ ಆದಾಯ ₹1.2 ಲಕ್ಷ ಮೀರಬಾರದು.
* ಮುಖ್ಯಮಂತ್ರಿ ಗುರು-ಶಿಷ್ಯ ಪರಂಪರೆ ಯೋಜನೆ: ಪ್ರಾಚೀನ ಕಲೆಗಳ ಸಂರಕ್ಷಣೆಗೆ ₹15,000 (ಗುರು), ₹7,500 (ಸಂಗೀತಗಾರ), ₹3,000 (ಶಿಷ್ಯ) ಪ್ರೋತ್ಸಾಹ ಧನ. ಈ ಯೋಜನೆಗೆ ₹1.11 ಕೋಟಿ ಅನುದಾನ.
* ಚಿಕಿತ್ಸೆ ಸಹಾಯ ಕೋಶ ವಿಸ್ತರಣೆ: ಪಂಚಾಯತಿ ಪ್ರತಿನಿಧಿಗಳಿಗೆ ಪ್ರಮುಖ ಕಾಯಿಲೆಗಳ ಚಿಕಿತ್ಸೆಗೆ ₹20,000 ರಿಂದ ₹3 ಲಕ್ಷವರೆಗೆ ನೆರವು. (ಉದಾ: ಕ್ಯಾನ್ಸರ್, ಹೃದಯ, ಕಿಡ್ನಿ, ಮೆದುಳು, ಮೂಳೆ ಶಸ್ತ್ರಚಿಕಿತ್ಸೆಗಳು)
* ನಿವೃತ್ತ ನ್ಯಾಯಮೂರ್ತಿಗಳಿಗೆ ನೆರವು: ನಿವೃತ್ತ ಮುಖ್ಯ ನ್ಯಾಯಮೂರ್ತಿಗೆ ₹60,000, ಇತರರಿಗೆ ₹55,000 ಗೃಹ ಸಹಾಯ. ಸಂವಹನ ವೆಚ್ಚವಾಗಿ ₹15,000/month ಅನುಮತಿಸಲಾಗಿದೆ.
* ಯುವಕರ ಉದ್ಯೋಗ ಯೋಗ್ಯತೆ, ಕಲಾ ಪರಂಪರೆ ಸಂರಕ್ಷಣೆ ಮತ್ತು ಸಮಾಜದ ಹಲವೊತ್ತಿನ ಕಲ್ಯಾಣಕ್ಕಾಗಿ ಬಿಹಾರ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ.

## ಜಾಗ್ರೆಬ್‌ನಲ್ಲಿ ಗುಕೇಶ್ ರ್ಯಾಪಿಡ್ ಚೆಸ್ ಪ್ರಶಸ್ತಿ ಗೆದ್ದರು



KPSCVaani

* ಜುಲೈ 4, 2025 ರಂದು ಕ್ರೊಯೇಷಿಯಾದ ಜಾಗ್ರೆಬ್‌ನಲ್ಲಿ ನಡೆದ ಸೂಪರ್‌ಯುನೈಟೆಡ್ ರಾಪಿಡ್ & ಬ್ಲಿಟ್ಜ್ 2025 ಪಂದ್ಯಾವಳಿಯಲ್ಲಿ ವಿಶ್ವ ಚೆಸ್ ಚಾಂಪಿಯನ್ ಡಿ ಗುಕೇಶ್ ರ್ಯಾಪಿಡ್ ಪ್ರಶಸ್ತಿಯನ್ನು ಗೆದ್ದರು.
* ಗುಕೇಶ್ ಅವರು ಒಟ್ಟು 18 ಅಂಕಗಳಲ್ಲಿ 14 ಅಂಕಗಳನ್ನು ಗಳಿಸಿದರು ಮತ್ತು ಈಗ ಗ್ರ್ಯಾಂಡ್ ಚೆಸ್ ಟೂರ್ ಈವೆಂಟ್‌ನಲ್ಲಿ ಮುನ್ನಡೆಸುತ್ತಿದ್ದಾರೆ. ಅವರ ಬಲವಾದ ಪ್ರದರ್ಶನವು ಅವರನ್ನು ಜಾನ್-ಕ್ರಿಜ್ಟೋಫ್ ಡುಡಾ ಮತ್ತು ಮ್ಯಾಗ್ನಸ್ ಕಾರ್ಲ್‌ಸೆನ್‌ರಂತಹ ಉನ್ನತ ಆಟಗಾರರಿಗಿಂತ ಮುಂದಿದೆ.
* ವಿಶ್ವ ಚೆಸ್ ಚಾಂಪಿಯನ್ ಡಿ ಗುಕೇಶ್, ಪಂದ್ಯಾವಳಿಯ ಮೂರು ದಿನಗಳ ರ್ಯಾಪಿಡ್ ವಿಭಾಗದಲ್ಲಿ ಅತ್ಯುತ್ತಮ ಫಾರ್ಮ್ ತೋರಿಸಿದರು. ಎರಡನೇ ದಿನದಂದು ಅವರು ವಿಶೇಷವಾಗಿ ಉತ್ತಮವಾಗಿ ಆಡಿದರು, ಸತತ ಐದು ಪಂದ್ಯಗಳನ್ನು ಗೆದ್ದರು. ಅಂತಿಮ ದಿನದಂದು, ಅವರು ಅನೀಶ್ ಗಿರಿ (ನೆದರ್ಲ್ಯಾಂಡ್ಸ್) ಮತ್ತು ಇವಾನ್ ಸಾರಿಕ್ (ಕ್ರೊಯೇಷಿಯಾ) ವಿರುದ್ಧ ಎರಡು ಡ್ರಾ ಸಾಧಿಸಿದರು, ನಂತರ USA ಯ ವೆಸ್ಲಿ ಸೋ ವಿರುದ್ಧ ಜಯಗಳಿಸಿದರು. ಈ ಅಂತಿಮ ಗೆಲುವು ಅವರು 14 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರಲು ಸಹಾಯ ಮಾಡಿತು.
* ಮೊದಲ ಸುತ್ತಿನಲ್ಲಿ ಗುಕೇಶ್ ಅವರನ್ನು ಸೋಲಿಸಿದ್ದ ಜಾನ್-ಕ್ರಿಜ್ಟೋಫ್ ಡುಡಾ 11 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು. ವಿಶ್ವದ ಅಗ್ರ ಶ್ರೇಯಾಂಕಿತ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್ಸನ್ 10 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು. ಫ್ಯಾಬಿಯಾನೊ ಕರುವಾನಾ ವಿರುದ್ಧದ ಗೆಲುವಿನೊಂದಿಗೆ ಅವರು ಬಲಿಷ್ಠ ಆರಂಭ ಪಡೆದರು, ಆದರೆ ನೋಡಿರ್ಬೆಕ್ ಅಬ್ದುಸತ್ತೊರೊವ್ ವಿರುದ್ಧದ ಡ್ರಾ ಫಲಿತಾಂಶವು ಬಲಿಷ್ಠ ಮುಕ್ತಾಯವನ್ನು ತಡೆಯಿತು.
* ಭಾರತದ ಆರ್. ಪ್ರಜ್ಞಾನಂದ ಕೂಡ ಉತ್ತಮ ಪ್ರದರ್ಶನ ನೀಡಿದರು. ಅವರು 7 ನೇ ಸುತ್ತಿನಲ್ಲಿ ಇವಾನ್ ಸಾರಿಕ್ ಅವರನ್ನು ಸೋಲಿಸಿದರು ಮತ್ತು ಕೊನೆಯ ಎರಡು ಸುತ್ತುಗಳಲ್ಲಿ ವೆಸ್ಲಿ ಸೋ ಮತ್ತು ಡುಡಾ ಅವರೊಂದಿಗೆ ಡ್ರಾ ಮಾಡಿಕೊಂಡರು. ಅವರು ಕರುವಾನಾ ಅವರಂತೆಯೇ 9 ಅಂಕಗಳೊಂದಿಗೆ ಮುಗಿಸಿದರು. ಫಿರೌಜ್ಜಾ, ಗಿರಿ ಮತ್ತು ಸೋ ಅವರಂತಹ ಇತರ ಗಮನಾರ್ಹ ಆಟಗಾರರು ತಲಾ 8 ಅಂಕಗಳನ್ನು ಗಳಿಸಿದರು.

## 07 July 2025

### ರಾಜ್ಯಾದ್ಯಂತ 'ಅಕ್ಕ ಪೊಲೀಸ್ ಪಡೆ' ವಿಸ್ತರಣೆ : ಲಕ್ಷ್ಮೀ ಹೆಬ್ಬಾಳ್ಕರ್



* ಮಹಿಳೆಯರ ಸುರಕ್ಷತೆಗಾಗಿ ಜಿಲ್ಲೆಯಾದ್ಯಂತ 'ಅಕ್ಕಪಡೆ' ಎಂಬ ವಿಶೇಷ ಮಹಿಳಾ ಪೊಲೀಸ್ ಪಡೆ ರಚಿಸಲಾಗಿದೆ. ಇದರ ರಾಜ್ಯಾದ್ಯಂತ ವಿಸ್ತರಣೆ ಕುರಿತು ಗೃಹ ಸಚಿವರೊಂದಿಗೆ ಚರ್ಚೆ ಮಾಡುವುದಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದ್ದಾರೆ.
* ಈ ಪಡೆ ಮಹಿಳೆಯರ ಸಮಸ್ಯೆಗಳಿಗೆ ಧ್ವನಿಯಾಗುತ್ತದೆ ಮತ್ತು ಶಾಲಾ ಮಕ್ಕಳಲ್ಲಿ ಧೈರ್ಯ ಜಾಗೃತಿಗೆ ಸಹಕಾರಿಯಾಗಲಿದೆ.
* ಈ ಯೋಜನೆಯ ಹಿಂದೆ ಜಿಲ್ಲೆ ಮಾಜಿ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಲಂಗೋಟಿಯ ಪರಿಕಲ್ಪನೆ ಇದೆ. 2023ರ ನವೆಂಬರ್ ನಲ್ಲಿ 35 ಮಹಿಳಾ ಪೊಲೀಸ್ ಸಿಬ್ಬಂದಿಯಿಂದ ತಂಡವನ್ನು ರಚಿಸಿ 'ಅಕ್ಕಪಡೆ' ಎಂದು ಹೆಸರು ನೀಡಲಾಯಿತು.
* ಬಡವರ ಹೊಟ್ಟೆ ತುಂಬಿಸುವ ಉದ್ದೇಶದಿಂದ ಕಾಂಗ್ರೆಸ್ ಸರ್ಕಾರ ಬದ್ಧತೆಯಿಂದ ಯೋಜನೆಗಳನ್ನು ರೂಪಿಸಿದೆ ಎಂದು ಸಚಿವೆ ಹೆಬ್ಬಾಳ್ಕರ್ ಹೇಳಿದರು. ಮುಖ್ಯಮಂತ್ರಿಗಳ ಕನಸಿನ 'ಇಂದಿರಾ ಕ್ಯಾಂಟೀನ್' ಯೋಜನೆಯ ಮೂಲಕ ಕಡಿಮೆ ದರದಲ್ಲಿ ಪೌಷ್ಟಿಕ ಆಹಾರವನ್ನು ಬಡವರಿಗೆ ನೀಡಲಾಗುತ್ತಿದೆ.
* ಬೈಂದೂರು ಕ್ಷೇತ್ರದಲ್ಲಿ ಮಾಜಿ ಶಾಸಕ ಗೋಪಾಲ್ ಪೂಜಾರಿ ಮತ್ತು ಶಾಸಕರಾದ ಗುರುರಾಜ್ ಗಂಟಿಹೊಳೆ ರಾಜಕೀಯ ಭಿನ್ನಮತವನ್ನು ಮೀರಿ ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಸಚಿವೆ ಪ್ರಶಂಸಿಸಿದರು.

### NC ಕ್ಲಾಸಿಕ್ 2025 : ನೀರಜ್ ಚೋಪ್ರಾಗೆ ಪ್ರಥಮ ಸ್ಥಾನ



* ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ ಬೆಂಗಳೂರಿನಲ್ಲಿ ನಡೆದ 'ಎನ್ ಕ್ಲಾಸಿಕ್ 2025' ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ 86.18 ಮೀಟರ್ ಎಸೆದು ಚಿನ್ನದ ಪದಕ ಗೆದ್ದಿದ್ದಾರೆ. ಇದು ಅವರ ಹೆಸರಿನಲ್ಲಿ ಆಯೋಜನೆಯಾದ ಮೊದಲ ಸ್ಪರ್ಧೆಯಾಗಿದೆ.
* ಈ ಟೂರ್ನಿಗೆ ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೆವೆಲ್ ಮಾನ್ಯತೆ ದೊರೆತಿದ್ದು, ಭಾರತದಲ್ಲಿ ಇದೇ ಮೊದಲ ಬಾರಿಗೆ ಇಂತಹ ಕೂಟ ಆಯೋಜನೆಯಾಗಿದೆ. ಸ್ಪರ್ಧೆ ವೇಳೆ ಎದುರಿನಿಂದ ರಭಸವಾಗಿ ಬೀಸುತ್ತಿದ್ದ ಗಾಳಿಯು ದೊಡ್ಡ ಸವಾಲಾಗಿತ್ತು ಎಂದು ನೀರಜ್ ತಿಳಿಸಿದ್ದಾರೆ.
* ಆರಂಭದಲ್ಲಿ ತಾಂತ್ರಿಕ ತೊಂದರೆ ಎದುರಾದರೂ ಕೋಚ್ ಜಾನ್ ಝೆಲೆಜ್ನಿಯ ಸಲಹೆಯಿಂದ ಅವರು ಉತ್ತಮ ಪ್ರದರ್ಶನ ನೀಡಿದ್ದು, ತಮ್ಮ ಮೊದಲ ಥ್ರೋ ಫೌಲ್ ಆದ ಬಳಿಕ ಗಮನ ಕೇಂದ್ರೀಕರಿಸಿದರು.
* 15,000ಕ್ಕೂ ಹೆಚ್ಚು ಜನರು ಈ ಕೂಟ ವೀಕ್ಷಿಸಿದ್ದು, ಬೆಂಗಳೂರಿನ ಅಭಿಮಾನಿಗಳು ನೀಡಿದ ಬೆಂಬಲಕ್ಕೆ ನೀರಜ್ ಧನ್ಯವಾದ ಹೇಳಿದ್ದಾರೆ. ಕ್ರೀಡೆಗೆ ಇನ್ನಷ್ಟು ಪ್ರೋತ್ಸಾಹ ನೀಡುವಂತೆ ದೇಶವಾಸಿಗಳಿಗೆ ವಿನಂತಿಸಿದರು.
* ಈ ಕೂಟದಲ್ಲಿ ಕೆನ್ಯಾದ ಜೂಲಿಯಸ್ ಯಿಗೊ ಬೆಳ್ಳಿ, ಶ್ರೀಲಂಕಾದ ರುಮೇಶ್ ಪತಿರಾ ಕಂಚು ಪದಕ ಗೆದ್ದಿದ್ದಾರೆ. ಈಗ ನೀರಜ್ ಜಾವೆಲಿನ್ ಥ್ರೋ ವಿಶ್ವ ರ್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿದ್ದು, ಒಟ್ಟು 1,445 ಅಂಕ ಹೊಂದಿದ್ದಾರೆ.

## ಸಮಾನತೆ ಸೂಚ್ಯಂಕ : ವಿಶ್ವದಲ್ಲಿ ಭಾರತ ನಾಲ್ಕನೇ ಸ್ಥಾನ




* ವಿಶ್ವಸಂಸ್ಥೆ ಬಿಡುಗಡೆ ಮಾಡಿದ ಜಾಗತಿಕ ಸಮಾನತೆ ಸೂಚ್ಯಂಕದಲ್ಲಿ ಭಾರತ 25.5 ಅಂಕ ಗಳಿಸಿ 167 ದೇಶಗಳ ಪೈಕಿ 4ನೇ ಸ್ಥಾನದಲ್ಲಿದೆ.
* ಈ ಮೂಲಕ ಭಾರತ ಅಮೆರಿಕ, ಬ್ರಿಟನ್, ಚೀನಾ ದೇಶಗಳನ್ನು ಹಿಂದಿಕ್ಕಿದೆ. ಮೊದಲ ಮೂರು ಸ್ಥಾನಗಳಲ್ಲಿ ಸ್ಲೊವಾಕಿಯಾ, ಸ್ಲೊವೇನಿಯಾ ಮತ್ತು ಬೆಲಾರಸ್ ರಾಷ್ಟ್ರಗಳಿವೆ.
* ಈ ಸೂಚ್ಯಂಕವು ದೇಶವೊಂದರ ಆದಾಯ, ಸಂಪತ್ತು ಮತ್ತು ಬಳಕೆ ಇತ್ಯಾದಿ ಅಂಶಗಳಲ್ಲಿ ಸಮಾನತೆ ಎಷ್ಟಿದೆ ಎಂಬುದನ್ನು ಅಳೆಯುತ್ತದೆ. 0 ಅಂಕ ಸಮಾನತೆಯ ಗುರಿಯಾಗಿದ್ದು, 100 ಅಂಕ ಅತಿದೊಡ್ಡ ಅಸಮಾನತೆಯನ್ನು ಸೂಚಿಸುತ್ತದೆ.
* ಕಳೆದ ದಶಕದಲ್ಲಿ ಭಾರತದಲ್ಲಿ ತೀವ್ರ ಬಡತನ ಶೇ.29ರಿಂದ ಶೇ.11.3ಕ್ಕೆ ಇಳಿದಿದೆ. 20 ಕೋಟಿ ಜನರು ಬಡತನದಿಂದ ಹೊರಬಂದಿದ್ದಾರೆ. ತಲಾ ಜಿಡಿಪಿ ಹೆಚ್ಚಿದ್ದು, ಬಹು ಆಯಾಮದ ಬಡತನ ಇಳಿಕೆಯಾಗಿದೆ.
* ಈ ಸಾಧನೆಗಳ ನಡುವೆಯೂ ಸುಮಾರು 35 ಕೋಟಿ ಜನರು ಗುಣಮಟ್ಟದ ಆಹಾರ, ಮನೆ, ಆರೋಗ್ಯ ಹಾಗೂ ಶಿಕ್ಷಣದಿಲ್ಲದ ಬದುಕು ನಡೆಸುತ್ತಿದ್ದಾರೆ. ಶೇ.1 ಶ್ರೀಮಂತರು ದೇಶದ ಶೇ.40 ಸಂಪತ್ತನ್ನು ಹೊಂದಿದ್ದು, ಕೆಳಗಿನ ಶೇ.50ರಷ್ಟು ಜನ ಶೇ.6.4 ಸಂಪತ್ತಿಗೆ ಮಾತ್ರ ಸೀಮಿತ.
* ಗುಣಮಟ್ಟದ ಜೀವನಕ್ಕಾಗಿ ಪ್ರತಿದಿನದ ಖರ್ಚು ಕನಿಷ್ಠ ₹350 ಇರಬೇಕು. ನಗರದಲ್ಲಿ ಬಾಡಿಗೆ ಮತ್ತು ಸ್ಥಿರ ಉದ್ಯೋಗದ ಕೊರತೆ, ಗ್ರಾಮೀಣದಲ್ಲಿ ಭೂಮಿ ವಿಭಜನೆಯಂತಹ ಅಂಶಗಳು ಪ್ರಮುಖ ಅಡೆತಡೆಯಾಗಿವೆ.
* ಆರೋಗ್ಯ ತುರ್ತು ಸಂದರ್ಭಗಳು ಬಡವರನ್ನು ಆರ್ಥಿಕ ಸಂಕಷ್ಟಕ್ಕೆ ತಳ್ಳುತ್ತಿದೆ.

## ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪ್ರೊ.ಎ.ಎಂ.ಖಾನ್ ನೂತನ ಕುಲಪತಿಯಾಗಿ ನೇಮಕ



* ಉತ್ತರ ಕರ್ನಾಟಕದ ಪ್ರತಿಷ್ಠಿತ ವಿಶ್ವವಿದ್ಯಾಲಯವಾಗಿರುವ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪ್ರೊ.ಎ.ಎಂ.ಖಾನ್ ನೂತನ ಕುಲಪತಿಯಾಗಿ ನೇಮಕಗೊಂಡಿದ್ದಾರೆ.
* ಮೂಲತಃ ಧಾರವಾಡದವರೇ ಆಗಿರುವ ಪ್ರೊ.ಖಾನ್ ಪ್ರಸ್ತುತ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ 22 ವರ್ಷಗಳ ಹಿಂದೆ ಮುಸ್ಲಿಂ ಸಮುದಾಯಕ್ಕೆ ಸೇರಿದ ಪ್ರೊ.ಪಠಾನ್ ಅವರು ಕವಿವಿ ಕುಲಪತಿಯಾಗಿದ್ದರು.
* ಎಂಎಸ್‌ಸಿ ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡಿರುವ ಡಾ.ಖಾನ್ ಕಳೆದ 26ವರ್ಷಗಳಿಂದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಂತರಾಷ್ಟ್ರೀಯ ಮಟ್ಟದ ಅನೇಕ ವಿಚಾರ ಸಂಕಿರಣಗಳಲ್ಲಿ ತಮ್ಮ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿ ಸೈ ಎನಿಸಿಕೊಂಡಿರುವ ಅವರು ಇಸ್ರೋದ ಜೊತೆಗೂ ಸಂಶೋಧನಾ ವಿಚಾರದಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.
* ರಾಯಚೂರಿನ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯಕ್ಕೆ ಡಾ.ಶಿವಾನಂದ ಕೆಳಗಿನಮನಿ ಕುಲಪತಿಯಾಗಿದ್ದಾರೆ. ಇವರು ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿದ್ದರು.
* ವಿಜಯಪುರದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಸ್ಥಾನಕ್ಕೆ ಇದೇ ವಿವಿಯ ಸಮಾಜಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಪ್ರೊ. ವಿಜಯಾ ಬಿ. ಕೋರಿಶೆಟ್ಟಿ ಅವರನ್ನು ನೇಮಿಸಲಾಗಿದೆ.

## 2025 ರ ಬ್ರಿಟಿಷ್ ಗ್ರ್ಯಾಂಡ್ ಪ್ರಿಕ್ಸ್ : ಲ್ಯಾಂಡೊ ನಾರ್ರಿಸ್ ಗೆ ಅಗ್ರಸ್ಥಾನ



* ಜುಲೈ 6, 2025 ರಂದು ಸಿಲ್ವರ್‌ಸ್ಟೋನ್‌ನಲ್ಲಿ ನಡೆದ ಓಟದಲ್ಲಿ ಲ್ಯಾಂಡೊ ನಾರ್ರಿಸ್ ಬ್ರಿಟಿಷ್ ಗ್ರ್ಯಾಂಡ್ ಪ್ರಿಕ್ಸ್ ಅನ್ನು ಗೆದ್ದರು. ತನ್ನ ತವರು ಟ್ರ್ಯಾಕ್‌ನಲ್ಲಿ ಗೆಲ್ಲುವ ಕನಸು ಕಂಡಿದ್ದ ನಾರ್ರಿಸ್‌ಗೆ ಇದು ವಿಶೇಷ ಗೆಲುವಾಗಿತ್ತು.
* ಓಟದ ನಾಯಕ ಆಸ್ಕರ್ ಪಿಯಾಸ್ಟ್ರಿಗೆ 10-ಸೆಕೆಂಡ್ ಪೆನಾಲ್ಟಿ ನೀಡಿ ಎರಡನೇ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು. ಜರ್ಮನಿಯ ಅನುಭವಿ ಆಟಗಾರ ಸೌಬರ್‌ನ ನಿಕೊ ಹಲ್ಕೆನ್‌ಬರ್ಗ್ 239 ರೇಸ್‌ಗಳಲ್ಲಿ ಮೂರನೇ ಸ್ಥಾನ ಪಡೆದರು. ನಿಕೊ ಹಲ್ಕೆನ್‌ಬರ್ಗ್ ತಮ್ಮ 239-ರೇಸಿಂಗ್ ವೃತ್ತಿಜೀವನದಲ್ಲಿ ಮೊದಲ ಪೋಡಿಯಂ ಅನ್ನು ಪಡೆದರು.
* ನಾರ್ರಿಸ್ ತಂಡದ ಸಹ ಆಟಗಾರ ಮತ್ತು ಪ್ರಶಸ್ತಿ ಪ್ರತಿಸ್ಪರ್ಧಿ ಆಸ್ಕರ್ ಪಿಯಾಸ್ಟ್ರಿ ಎರಡನೇ ಸ್ಥಾನ ಪಡೆದರು. ಅವರು ಓಟವನ್ನು ಮುನ್ನಡೆಸುತ್ತಿದ್ದರು ಆದರೆ ಸುರಕ್ಷತಾ ಕಾರು ಮರುಪ್ರಾರಂಭದ ಸಮಯದಲ್ಲಿ ತುಂಬಾ ತೀಕ್ಷ್ಣವಾಗಿ ಬ್ರೇಕ್ ಮಾಡಿದ್ದಕ್ಕಾಗಿ ದಂಡ ವಿಧಿಸಲಾಯಿತು, ಇದರಿಂದಾಗಿ ವರ್ಸ್ಟಪ್ಪೆನ್ ಹಠಾತ್ ಕ್ರಮ ಕೈಗೊಳ್ಳಬೇಕಾಯಿತು. ಪೆನಾಲ್ಟಿ ಅನ್ಯಾಯವಾಗಿದೆ ಎಂದು ಪಿಯಾಸ್ಟ್ರಿ ನಂಬಿದ್ದರು ಮತ್ತು ಮೆಕ್‌ಲಾರೆನ್ ಅವರನ್ನು ಮತ್ತೆ ಮುನ್ನಡೆ ಸಾಧಿಸಲು ಬಿಡಬಹುದು ಎಂದು ಸೂಚಿಸಿದರು, ಆದರೆ ತಂಡವು ಒಪ್ಪಲಿಲ್ಲ.

## ₹2 ಸಾವಿರ ಕೋಟಿ ಡ್ರೋನ್ ಪ್ರೋತ್ಸಾಹ ಯೋಜನೆ ಆರಂಭ

KPSCVaani



* ಕೇಂದ್ರ ಸರ್ಕಾರವು ನಾಗರಿಕ ಬಳಕೆದಾರರು ಮತ್ತು ಭದ್ರತಾ ಪಡೆಗಳಿಗೆ ಡ್ರೋನ್ ಉತ್ಪಾದನೆ ಹೆಚ್ಚಿಸಲು 234 ಮಿಲಿಯನ್ ಡಾಲರ್ (ಅಂದಾಜು ₹2 ಸಾವಿರ ಕೋಟಿ) ಮೊತ್ತದ ಪ್ರೋತ್ಸಾಹಕ ಯೋಜನೆಯನ್ನು ಘೋಷಿಸಲು ತಯಾರಿ ನಡೆಸುತ್ತಿದೆ ಎಂದು 'ರಾಯಿಟರ್ಸ್' ವರದಿ ಮಾಡಿದೆ.

*ಚೀನಾ ದಾಳಿ ಬಳಿಕ ದೇಶೀಯ ಡ್ರೋನ್ ಉತ್ಪಾದನೆಗೆ ಹೆಚ್ಚು ಒತ್ತು ನೀಡಲಾಗಿದ್ದು, ಡ್ರೋನ್‌ಗಳಿಗೆ ಬೇಕಾದ ಭಾಗಗಳನ್ನು ಸ್ಥಳೀಯವಾಗಿ ತಯಾರಿಸುವ ಯೋಜನೆಯೂ ಇದೆ. ಇದರ ಮೂಲಕ ಆತ್ಮನಿರ್ಭರ ಭಾರತವನ್ನು ಸಾಧಿಸುವ ಉದ್ದೇಶ ಹೊಂದಲಾಗಿದೆ.

* ಈ ಯೋಜನೆಯು ಡ್ರೋನ್, ಡ್ರೋನ್ ಸಾಫ್ಟ್‌ವೇರ್, ಕೌಂಟರ್ ಡ್ರೋನ್ ಸಿಸ್ಟಂಗಳು ಮತ್ತು ಸಂಬಂಧಿತ ಸೇವೆಗಳ ತಯಾರಿಕೆಯನ್ನು ಒಳಗೊಂಡಿದೆ. ಯೋಜನೆಗೆ ನಾಗರಿಕ ವಿಮಾನಯಾನ ಮತ್ತು ರಕ್ಷಣಾ ಸಚಿವಾಲಯ ನೇತೃತ್ವ ವಹಿಸುತ್ತಿದೆ.

* 2028ರ ಆರ್ಥಿಕ ವರ್ಷದ ವೇಳೆಗೆ ದೇಶೀಯ ಉತ್ಪಾದನೆಯ ಶೇ.40ರಷ್ಟು ಭಾಗ ದೇಶದಲ್ಲಿಯೇ ತಯಾರಿಸುವ ಗುರಿ ಇದೆ.

* ಡ್ರೋನ್ ಆಮದು ಕಡಿಮೆ ಮಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

## ಪಂಚಾಯತ್‌ಗಳಿಗೆ ಪ್ರತ್ಯೇಕ ಲಾಂಛನ : ಕರ್ನಾಟಕದಲ್ಲೇ ದೇಶದ ಮೊದಲು




* ಕರ್ನಾಟಕ ರಾಜ್ಯದಲ್ಲಿ ಪ್ರತಿ ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತಿಗಳಿಗೆ ತಮ್ಮದೇ ಆದ ಪ್ರತ್ಯೇಕ ಲಾಂಛನವನ್ನು ರೂಪಿಸಿ ಬಳಸಲು ಅವಕಾಶ ನೀಡಲಾಗಿದೆ.

* ಇದು ಭಾರತದಲ್ಲಿ ಮೊದಲ ಬಾರಿ ಪಂಚಾಯತ್‌ಗಳಿಗೆ ಪ್ರತ್ಯೇಕ ಲಾಂಛನ ನೀಡುತ್ತಿರುವ ರಾಜ್ಯವಾಗಿದೆ. ಈ ಸಂಬಂಧ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕೃತ ಆದೇಶ ಹೊರಡಿಸಿದ್ದು, ಲಾಂಛನ ವಿನ್ಯಾಸ ಮತ್ತು ಬಳಕೆಯ ಬಗ್ಗೆ ಮಾರ್ಗಸೂಚಿಗಳನ್ನೂ ನೀಡಲಾಗಿದೆ.

* ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯೆ ನೀಡಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ-1993ರ ಪ್ರಕಾರ, ಪ್ರತಿಯೊಂದು ಗ್ರಾಮ ಪಂಚಾಯತಿಗೂ ಸ್ವಾಯತ್ತ ಅಧಿಕಾರವಿದೆ.

* ಈ ಶಾಶ್ವತತೆ ಹಿನ್ನಲೆಯಲ್ಲಿ ಲಾಂಛನ ಮತ್ತು ಮೊಹರ ಬಳಸಲು ಅವಕಾಶ ನೀಡಲಾಗಿದೆ. ಇಲಾಖೆಯು ಈ ಬಗ್ಗೆ ಸ್ಪಷ್ಟ ಆದೇಶ ಹೊರಡಿಸಿರುವುದಾಗಿ ಖರ್ಗೆ ತಿಳಿಸಿದ್ದಾರೆ.

* ಪಂಚಾಯತ್‌ಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ತಮ್ಮ ಅಧಿಕಾರದ ಅವಧಿಯಲ್ಲಿ ಮಾತ್ರ ತಮ್ಮ ಅಧಿಕೃತ ವಿಸಿಟಿಂಗ್ ಕಾರ್ಡ್‌ಗಳಲ್ಲಿ ಈ ಲಾಂಛನವನ್ನು ಬಳಸಬಹುದಾಗಿದೆ.

* ನಿವೃತ್ತ ಸದಸ್ಯರು, ಮಾಜಿ ಜನಪ್ರತಿನಿಧಿಗಳು, ಸಿಬ್ಬಂದಿಗೆ ಮತ್ತು ಇತರ ಸಂದರ್ಭಗಳಲ್ಲಿ ಈ ಲಾಂಛನ ಬಳಕೆಯ ಮೇಲೆ ನಿರ್ಬಂಧ ಹೇರಲಾಗಿದೆ.

* ಈ ಹಿಂದೆ ನಡೆದ ಮಹಾ ಒಕ್ಕೂಟದ ಸಭೆಯಲ್ಲಿ ಲಾಂಛನ ಬಳಕೆ ಕುರಿತ ಭರವಸೆ ನೀಡಲಾಗಿದ್ದು, ಇದೀಗ ಅದು ಅಧಿಕೃತ ಆದೇಶ ರೂಪದಲ್ಲಿ ಜಾರಿಗೆ ಬಂದಿದೆ.

## ತೆಲಂಗಾಣದಲ್ಲಿ 10 ಗಂಟೆಗಳ ಕೆಲಸದ ಅನುಮತಿ



* ತೆಲಂಗಾಣ ಸರ್ಕಾರ ವಾಣಿಜ್ಯ ಸಂಸ್ಥೆಗಳಲ್ಲಿ ಉದ್ಯೋಗಿಗಳಿಗೆ ದಿನಕ್ಕೆ 10 ಗಂಟೆಗಳ ಕೆಲಸ ಮಾಡುವಂತೆ ಅನುಮತಿ ನೀಡಿದೆ. ಆದರೆ ವಾರಕ್ಕೆ 48 ಗಂಟೆ ಮಿತಿಯನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಸೂಚಿಸಿದೆ. ಈ ಕ್ರಮ ಉದ್ಯಮ ಸ್ನೇಹಿ ನೀತಿಯ ಅಂಗವಾಗಿದೆ.

* ಅಂಗಡಿಗಳನ್ನು ಹೊರತುಪಡಿಸಿ ಇತರ ವಾಣಿಜ್ಯ ಸಂಸ್ಥೆಗಳಲ್ಲಿ ಈ ನಿಯಮ ಅನ್ವಯವಾಗುತ್ತದೆ.

* ಉದ್ಯೋಗಿ ದಿನಕ್ಕೆ 6 ಗಂಟೆ ಕೆಲಸ ಮಾಡಿದರೆ 30 ನಿಮಿಷ ವಿಶ್ರಾಂತಿ ಕಡ್ಡಾಯ. ದಿನದ ಗರಿಷ್ಠ ಕೆಲಸ 12 ಗಂಟೆ (ಓವರ್‌ಟೈಂ ಸೇರಿ) ಹಾಗೂ 3 ತಿಂಗಳಿಗೆ 144 ಗಂಟೆಗಳ ಮಿತಿಯನ್ನು ಸರ್ಕಾರ ನಿಗದಿ ಮಾಡಿದೆ.

* ವಿಶ್ವದ ಶ್ರೇಷ್ಠ ವರ್ಕ್ ಲೈಫ್ ಬ್ಯಾಲೆನ್ಸ್ ಹೊಂದಿರುವ ದೇಶಗಳ ಪಟ್ಟಿಯಲ್ಲಿ ನ್ಯೂಝಿಲ್ಯಾಂಡ್ ಮೊದಲ ಸ್ಥಾನದಲ್ಲಿದ್ದು, ವಾರ್ಷಿಕ 32 ರಜೆ, 26 ವಾರ ಮೆಟರ್ನಿಟಿ ಲೀವ್ ಅನ್ನು ನೀಡುತ್ತದೆ.

* ಐರ್ಲ್ಯಾಂಡ್‌ನಲ್ಲಿ 77.89% ವರ್ಕ್ ಲೈಫ ಬ್ಯಾಲೆನ್ಸ್, 30 ರಜೆ ಹಾಗೂ 26 ವಾರ ವೇತನದ ಮೆಟರ್ನಿಟಿ ಲೀವ್ ಇದೆ. ಬೆಲ್ಜಿಯಂನಲ್ಲಿ 73.45% ಬ್ಯಾಲೆನ್ಸ್, 30 ರಜೆ ಹಾಗೂ 15 ವಾರಗಳ ಮೆಟರ್ನಿಟಿ ಲೀವ್ ನೀಡಲಾಗುತ್ತದೆ.

* ಡೆನ್ಮಾರ್ಕ್‌ನಲ್ಲಿ 35 ವಾರ್ಷಿಕ ರಜೆ, 15 ವಾರ ಮೆಟರ್ನಿಟಿ ಲೀವ್ ಮತ್ತು 100% ವೇತನದ ಸಿಕ್ ಲೀವ್ ಇದೆ. ಕೆನಡಾದಲ್ಲಿ 17 ವಾರ್ಷಿಕ ರಜೆ, 17 ವಾರ ಮೆಟರ್ನಿಟಿ ಲೀವ್ ಇದೆ, ಬ್ಯಾಲೆನ್ಸ್ ಶೇಕಡಾ 72.75.

* ಭಾರತ ಟಾಪ್ 50 ದೇಶಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಆದರೆ ಕೆಲಸದ ಒತ್ತಡ, ನಿರ್ದಿಷ್ಟ ಬೇನೆಗಳ ಕೊರತೆಗಳಿಂದ ಕೆಲಸ-ಜೀವನ ಸಮತೋಲನ ಇನ್ನೂ ಉತ್ತಮಗೊಳ್ಳಬೇಕಿದೆ.

## ಬೆಂಗಳೂರಿಗೆ ಹೈಪರ್‌ಲೂಪ್, ಪಾಡ್ ಟ್ಯಾಕ್ಸಿ ಮತ್ತು ಎಲೆಕ್ಟ್ರಿಕ್ ಬಸ್ ಯೋಜನೆ



* ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ, ಹೆಚ್ಚಿನ ಜನಸಂಖ್ಯೆ ಮತ್ತು ಸಂಚಾರದ ಸಮಸ್ಯೆ ಎದುರಿಸುತ್ತಿರುವ ಮಹಾನಗರಗಳಲ್ಲಿ (ಜೆಸೆ: ಬೆಂಗಳೂರು, ದೆಹಲಿ), ಹೈಪರ್‌ಲೂಪ್, ಮೆಟ್ರಿನೋ ಪಾಡ್ ಟ್ಯಾಕ್ಸಿ, ಪಿಲ್ಲರ್ ಆಧಾರಿತ ಬಸ್ ಮಾರ್ಗ ಹಾಗೂ 135 ಸೀಟುಗಳ ಎಲೆಕ್ಟ್ರಿಕ್ ಬಸ್ಸಳನ್ನು ಪರಿಚಯಿಸಲು ಉದ್ದೇಶಿಸಲಾಗಿದೆ.

* ಪ್ರಯೋಗಾತ್ಮಕವಾಗಿ ನಾಗ್ಪುರದಲ್ಲಿ ಆರಂಭಿಸಿರುವ 135 ಸೀಟುಗಳ ಇ-ಬಸ್ ಯಶಸ್ವಿಯಾದರೆ, ಬಿಎನ್‌ಜಿ-ಚೆನ್ನೈ, ದೆಹಲಿ-ಜೈಪುರ ಮುಂತಾದ ಪ್ರಮುಖ ಮಾರ್ಗಗಳಲ್ಲಿ ಬಳಸಲಾಗುವುದು.

* ಈ ಬಸ್‌ಗಳು ಮೂರು ಬೋಗಿಗಳೊಂದಿಗೆ ಮೆಟ್ರೋ ರೀತಿ ಆಧುನಿಕ ತಂತ್ರಜ್ಞಾನ, ಎಸಿ, ವೈರ್‌ಲೆಸ್ ಚಾರ್ಜಿಂಗ್ ಹೊಂದಿವೆ. ವೇಗ: 120–125 ಕಿ.ಮೀ/ಗಂ.

* 2–6 ಜನರಿಗೆ ಸೂಕ್ತವಾದ ಪಾಡ್ ಟ್ಯಾಕ್ಸಿ ಮೋನೋ ರೈಲು ಮಾದರಿಯಲ್ಲಿ ನಿರ್ದಿಷ್ಟ ಹಳಿಗಳ ಮೇಲೆ ಚಲಿಸುತ್ತದೆ. ಇದು ನಿಗದಿತ ನಿಲ್ದಾಣಗಳಲ್ಲಿ ಮಾತ್ರ ನಿಲ್ಲುತ್ತದೆ ಮತ್ತು 60–130 ಕಿ.ಮೀ/ಗಂ ವೇಗ ಹೊಂದಿರುತ್ತದೆ.

* ಇದು ನಿರ್ವಾತ (vacuum) ನಳಿಗಳ ಮೂಲಕ 700–1200 ಕಿ.ಮೀ/ಗಂ ವೇಗದಲ್ಲಿ ಸಂಚರಿಸಬಲ್ಲ ಮಿನಿ ರೈಲು ವ್ಯವಸ್ಥೆ. ಪ್ರಪಂಚದಲ್ಲಿ ಎಲ್ಲೆಡೆ ಇದು ಇನ್ನೂ ಪ್ರಯೋಗದ ಹಂತದಲ್ಲಿದೆ, ಆದರೆ ಭಾರತದಲ್ಲಿ ಇದು ಅಳವಡಿಸುವ ಮಹತ್ವಾಕಾಂಕ್ಷೆ ಇದೆ.

**ಮಹತ್ವದ ಯೋಜನೆಗಳು:**

- 25,000 ಕಿ.ಮೀ.ದ್ವಿಪಥ ಹೆದ್ದಾರಿಗಳನ್ನು ಚತುಷ್ಪಥಗೊಳಿಸುವುದು
- ದಿನಕ್ಕೆ 100 ಕಿ.ಮೀ. ರಸ್ತೆ ನಿರ್ಮಾಣ
- ರಾಷ್ಟ್ರೀಯ ಹೆದ್ದಾರಿಗಳ ಒಟ್ಟಾರೆ ಗುಣಮಟ್ಟ ಮತ್ತು ಸೌಲಭ್ಯಗಳಲ್ಲಿ ವೃದ್ಧಿ
- ಪ್ರತಿಯೊಂದು ಕಡಿದ ಮರಕ್ಕೆ 5 ಮರ ನೆಡುವ ಪ್ಲಾನ್
- 360 ಕ್ಷೇತ್ರಗಳಲ್ಲಿ ರೋಪ್‌ವೇ, ಕೇಬಲ್ ಕಾರು, ಫನಿಕುಲರ್ ರೈಲು ಯೋಜನೆಗಳು

ಬೆಂಗಳೂರುಕ್ಕೆ ವಿಶೇಷ ಯೋಜನೆಗಳು:

- ಮೆಟ್ರೋ ಮಾದರಿಯ ಎಲೆಕ್ಟ್ರಿಕ್ ಬಸ್
- ಪಾಡ್ ಟ್ಯಾಕ್ಸಿ
- ಹೈಪರ್‌ಲೂಪ್ ಯೋಜನೆ (ಭವಿಷ್ಯದ ಪ್ರಯೋಗ)

* ವೇಗ, ಸುರಕ್ಷತೆ, ಪರಿಸರ ಸ್ನೇಹಿ ಸಂಚಾರ ಮತ್ತು ಭವಿಷ್ಯದ ತಲೆಮಾರಿಗೆ ಅನುವುಮಾಡಿಕೊಳ್ಳುವ ಕ್ರಾಂತಿಕಾರಿ ಸಾರಿಗೆ ವ್ಯವಸ್ಥೆ ನಿರ್ಮಾಣ ಈ ಎಲ್ಲ ಯೋಜನೆಗಳ ಒಟ್ಟಾರೆಯ ಗುರಿಯಾಗಿದೆ.

## ಐಸಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಸಂಜೋಗ್ ಗುಪ್ತಾ ನೇಮಕ




* ಭಾರತೀಯ ಪ್ರಸಾರಕ ಸಂಜೋಗ್ ಗುಪ್ತಾ ಅವರನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ (ಐಸಿಸಿ) ಹೊಸ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಿಸಲಾಗಿದೆ.

* ಗುಪ್ತಾ ಅವರ ನೇಮಕಾತಿಯನ್ನು ಘೋಷಿಸಿದ ಐಸಿಸಿ ಅಧ್ಯಕ್ಷ ಜಯ್ ಶಾ, ಶ್ರೀ ಗುಪ್ತಾ ಅವರು ಕ್ರೀಡಾ ತಂತ್ರ ಮತ್ತು ವಾಣಿಜ್ಯೀಕರಣದಲ್ಲಿ ವ್ಯಾಪಕ ಅನುಭವವನ್ನು ತರಲಿದ್ದಾರೆ, ಇದು ಐಸಿಸಿಗೆ ಅಮೂಲ್ಯವಾಗಿರುತ್ತದೆ ಎಂದು ತಿಳಿಸಿದ್ದಾರೆ.

* ಈ ವರ್ಷದ ಆರಂಭದಲ್ಲಿ ರಾಜೀನಾಮೆ ನೀಡಿದ ಜೆಫ್ ಅಲಾರ್ಡೈಸ್ ಅವರ ಸ್ಥಾನವನ್ನು ಅವರು ವಹಿಸಿಕೊಂಡಿದ್ದಾರೆ. ಗುಪ್ತಾ ಅವರ ಕ್ರೀಡಾ ಪ್ರಸಾರ ಮತ್ತು ಮಾಧ್ಯಮ ಉದ್ಯಮದಲ್ಲಿ ನಾಯಕತ್ವದ ಅನುಭವವು ವಿಶ್ವ ಕ್ರಿಕೆಟ್‌ನ ಭವಿಷ್ಯಕ್ಕೆ ಪ್ರಮುಖ ಉತ್ತೇಜನಕಾರಿಯಾಗಿದೆ ಎಂದು ಪರಿಗಣಿಸಲಾಗಿದೆ.

* 25 ದೇಶಗಳಿಂದ 2,500 ಕ್ಕೂ ಹೆಚ್ಚು ಜನರು ಅರ್ಜಿ ಸಲ್ಲಿಸಿದರು. ಆಯ್ಕೆ ಸಮಿತಿಯಲ್ಲಿ ಭಾರತ (ಬಿಸಿಸಿಐ), ಶ್ರೀಲಂಕಾ (ಎಸ್‌ಎಲ್‌ಸಿ), ಇಂಗ್ಲೆಂಡ್ (ಇಸಿಬಿ) ಮತ್ತು ಐಸಿಸಿ ಉಪ ಅಧ್ಯಕ್ಷ ಇಮ್ರಾನ್ ಖ್ವಾಜಾ ನಾಯಕರು ಸೇರಿದ್ದಾರೆ.

* 12 ಅಭ್ಯರ್ಥಿಗಳನ್ನು ಶಾರ್ಟ್‌ಲಿಸ್ಟ್ ಮಾಡಿದರು ಮತ್ತು ಹಲವಾರು ಸುತ್ತಿನ ಪರಿಶೀಲನೆಯ ನಂತರ ಗುಪ್ತಾ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಅಂತಿಮ ನಿರ್ಧಾರವನ್ನು ಐಸಿಸಿ ಅಧ್ಯಕ್ಷ ಜಯ್ ಶಾ ಮತ್ತು ಐಸಿಸಿ ಮಂಡಳಿ ಅನುಮೋದಿಸಿತು.

## 08 July 2025

## ಎಲಾನ್ ಮಸ್ಕ್ ಹೊಸ ಪಕ್ಷ ಸ್ಥಾಪನೆ : ಟ್ರಂಪ್'ಗೆ ತಿರುಗೇಟು



* ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಉದ್ಯಮಿ ಇಲಾನ್ ಮಸ್ಕ್ ಸ್ಥಾಪಿಸಿರುವ ಹೊಸ ರಾಜಕೀಯ ಪಕ್ಷವನ್ನು ಹಾಸ್ಯಾಸ್ಪದವೆಂದು ಲೇವಡಿ ಮಾಡಿದ್ದಾರೆ.

* ಮಸ್ಕ್ ಅವರು ರಿಪಬ್ಲಿಕನ್ ಮತ್ತು ಡೆಮಾಕ್ರಟಿಕ್ ಪಕ್ಷಗಳಿಗೆ ಪರ್ಯಾಯವಾಗಿ 'ಅಮೆರಿಕನ್ ಪಕ್ಷ' ಎಂಬ ಹೊಸ ರಾಜಕೀಯ ವೇದಿಕೆಯನ್ನು ಘೋಷಿಸಿದ್ದು, ಇದನ್ನು ಟ್ರಂಪ್ ಕಟು ಟೀಕಿಸಿದ್ದಾರೆ.

* ಟ್ರಂಪ್ ಅವರು ಹೇಳಿರುವಂತೆ, ಅಮೆರಿಕದ ರಾಜಕೀಯದಲ್ಲಿ ಕೇವಲ ಎರಡು ಪಕ್ಷಗಳ ವ್ಯವಸ್ಥೆಯೇ ಅಸ್ತಿತ್ವದಲ್ಲಿರುತ್ತದೆ.

* ಮೂರನೇ ಪಕ್ಷದ ಸ್ಥಾಪನೆ ಜನರಲ್ಲಿ ಗೊಂದಲ ಉಂಟುಮಾಡಬಹುದು ಎಂದು ಅವರು ಎಚ್ಚರಿಸಿದ್ದಾರೆ.

* 'ಟ್ರೂಥ್' ಸಾಮಾಜಿಕ ಜಾಲತಾಣದಲ್ಲೂ ಈ ಕುರಿತು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡ ಟ್ರಂಪ್, "ಇಲಾನ್ ಮಸ್ಕ್ ದಾರಿ ತಪ್ಪಿದ್ದಾರೆ. ಮೂರನೇ ಪಕ್ಷದಿಂದ ಅವರಿಗೆ ಯಶಸ್ಸು ದೊರಕದು" ಎಂದು ಸ್ಪಷ್ಟಪಡಿಸಿದ್ದಾರೆ.

## ಜೊಮ್ಯಾಟೊ ಆಹಾರ ವಿತರಣಾ ವ್ಯವಹಾರದ CEO ಆಗಿ ಆದಿತ್ಯ ಮಂಗ್ಲಾ ನೇಮಕ




* ಎಟರ್ನಲ್ ಲಿಮಿಟೆಡ್ (ಹಿಂದೆ ಜೊಮಾಟೊ) ತನ್ನ ಆಹಾರ ಆರ್ಡರ್ ಮತ್ತು ವಿತರಣಾ ವ್ಯವಹಾರದ ಸಿಇಒ ಆಗಿ ಆದಿತ್ಯ ಮಂಗ್ಲಾ ಅವರನ್ನು ನೇಮಿಸಿದೆ ಎಂದು ಕಂಪನಿಯು ಜುಲೈ 6, 2025 ರಂದು (ಭಾನುವಾರ) ಷೇರು ವಿನಿಮಯ ಕೇಂದ್ರಗಳಿಗೆ ತಿಳಿಸಿದೆ.
* ಭಾರತದ ವೇಗವಾಗಿ ಬೆಳೆಯುತ್ತಿರುವ ಆಹಾರ ವಿತರಣಾ ಮಾರುಕಟ್ಟೆಯಲ್ಲಿ ತನ್ನ ಸ್ಥಾನವನ್ನು ಬಲಪಡಿಸಲು ಎಟರ್ನಲ್ ನೋಡುತ್ತಿರುವುದರಿಂದ ಇದು ಒಂದು ಪ್ರಮುಖ ಕ್ರಮವಾಗಿದೆ.
* ರಾಕೇಶ್ ರಂಜನ್ ಅವರು ತಮ್ಮ ಎರಡು ವರ್ಷಗಳ ಅವಧಿಯನ್ನು ಪೂರ್ಣಗೊಳಿಸಿರುವುದರಿಂದ ಅವರು ಅಧಿಕಾರವನ್ನು ಮಂಗ್ಲಾ ಅವರು ವಹಿಸಿಕೊಳ್ಳುತ್ತಾರೆ.
* ಮಂಗಳಾ ಆಹಾರ ಆರ್ಡರ್ ಮತ್ತು ವಿತರಣಾ ವಿಭಾಗಕ್ಕೆ ಎಟರ್ನಲ್ ಪ್ರಾಡಕ್ಟ್ ಮುಖ್ಯಸ್ಥರಾಗಿದ್ದಾರೆ.
* ಆದಿತ್ಯ ಮಂಗ್ಲಾ ಮುಂದಿನ ಎರಡು ವರ್ಷಗಳ ಕಾಲ ಎಟರ್ನಲ್‌ನ ಆಹಾರ ವಿತರಣಾ ಕಾರ್ಯಾಚರಣೆಗಳ ನಾಯಕತ್ವವನ್ನು ವಹಿಸಿಕೊಳ್ಳಲಿದ್ದಾರೆ. ಕಳೆದ ಎರಡು ವರ್ಷಗಳಿಂದ ಅದೇ ವಿಭಾಗಕ್ಕೆ ಸಿಇಒ ಆಗಿ ಸೇವೆ ಸಲ್ಲಿಸಿದ್ದ ರಾಕೇಶ್ ರಂಜನ್ ಅವರನ್ನು ಅವರು ಬದಲಾಯಿಸಲಿದ್ದಾರೆ.
* 2025 ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ, ಎಟರ್ನಲ್ ನಿವ್ವಳ ಲಾಭದಲ್ಲಿ ವರ್ಷದಿಂದ ವರ್ಷಕ್ಕೆ 77% ರಷ್ಟು ತೀವ್ರ ಕುಸಿತವನ್ನು ₹ 39 ಕೋಟಿಗೆ ತಲುಪಿದೆ ಎಂದು ವರದಿ ಮಾಡಿದೆ.

## ಅರ್ಜೆಂಟೀನಾ : ಪ್ರಧಾನಿ ಮೋದಿಗೆ 'ಬ್ಯೂನಸ್ ಐರಿಸ್ ನಗರದ ಕೀಲಿಕೈ' ಪ್ರಶಸ್ತಿ ಪ್ರಧಾನ



* ಜುಲೈ 6, 2025 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಅರ್ಜೆಂಟೀನಾಕ್ಕೆ ಎರಡು ದಿನಗಳ ಅಧಿಕೃತ ಭೇಟಿಯ ಸಂದರ್ಭದಲ್ಲಿ 'ಬ್ಯೂನಸ್ ಐರಿಸ್ ನಗರದ ಕೀಲಿಕೈ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.
* ಭಾರತ ಮತ್ತು ಅರ್ಜೆಂಟೀನಾ ನಡುವಿನ ಸಂಬಂಧವನ್ನು ಬಲಪಡಿಸಲು ಅವರು ಮಾಡಿದ ಪ್ರಯತ್ನಗಳನ್ನು ಗುರುತಿಸಿ ಈ ಸಾಂಕೇತಿಕ ಪ್ರಶಸ್ತಿಯನ್ನು ನೀಡಲಾಯಿತು. ಈ ಭೇಟಿ ಐತಿಹಾಸಿಕವಾಗಿತ್ತು, ಏಕೆಂದರೆ ಇದು 57 ವರ್ಷಗಳಲ್ಲಿ ಭಾರತೀಯ ಪ್ರಧಾನಿಯೊಬ್ಬರು ನೀಡಿದ ಮೊದಲ ಭೇಟಿಯಾಗಿತ್ತು.
* "ಬ್ಯೂನಸ್ ಐರಿಸ್ ನಗರ ಸರ್ಕಾರದ ಮುಖ್ಯಸ್ಥ ಜಾರ್ಜ್ ಮ್ಯಾಕ್ರಿ ಅವರಿಂದ 'ಬ್ಯೂನಸ್ ಐರಿಸ್ ನಗರದ ಕೀಲಿಕೈ' ಸ್ವೀಕರಿಸಲು ಗೌರವವಾಗಿದೆ" ಎಂದು ಪ್ರಧಾನಿ ಮೋದಿ ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಬರೆದಿದ್ದಾರೆ.
* "ವಿಶ್ವಾಸ ಮತ್ತು ಸ್ನೇಹದ ಸಂಕೇತ. ಅರ್ಜೆಂಟೀನಾದ ಬ್ಯೂನಸ್ ಐರಿಸ್ ನಗರ ಸರ್ಕಾರದ ಮುಖ್ಯಸ್ಥರಾದ ಶ್ರೀ ಜಾರ್ಜ್ ಮ್ಯಾಕ್ರಿ ಅವರು ಪ್ರಧಾನಿ @narendramodi ಅವರಿಗೆ 'ಬ್ಯೂನಸ್ ಐರಿಸ್ ನಗರದ ಕೀಲಿಕೈ'ಯನ್ನು ಪ್ರದಾನ ಮಾಡಿದರು. ಭಾರತ-ಅರ್ಜೆಂಟೀನಾ ಸಂಬಂಧಗಳನ್ನು ಬಲಪಡಿಸುವಲ್ಲಿ ಪ್ರಧಾನಿಯವರ ಕೊಡುಗೆಗಳನ್ನು ಗುರುತಿಸಿ ಈ ವಿಧ್ಯುಕ್ತ ಗೌರವ ನೀಡಲಾಗಿದೆ" ಎಂದು ವಿದೇಶಾಂಗ ಸಚಿವಾಲಯದ (MEA) ವಕ್ತಾರ ರಣಧೀರ್ ಜೈಸ್ವಾಲ್ X ನಲ್ಲಿ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.
* ಇದಕ್ಕೂ ಮೊದಲು, ಟ್ರಿನಿಡಾಡ್ ಮತ್ತು ಟೊಬಾಗೋದಲ್ಲಿ, ಪ್ರಧಾನ ಮಂತ್ರಿಯವರು ಅವರ ಅತ್ಯುನ್ನತ ನಾಗರಿಕ ಗೌರವವಾದ "ದಿ ಆರ್ಡರ್ ಆಫ್ ದಿ ರಿಪಬ್ಲಿಕ್" ಅನ್ನು ಪಡೆದರು.
* ಅವರು ಇದನ್ನು ಪಡೆದ ಮೊದಲ ವಿದೇಶಿ ನಾಯಕ. ಆ ಭೇಟಿಯ ಸಮಯದಲ್ಲಿ, ಎರಡೂ ದೇಶಗಳು ಹೆಚ್ಚು ನಿಕಟವಾಗಿ ಕೆಲಸ ಮಾಡಲು ಆರು ಒಪ್ಪಂದಗಳಿಗೆ ಸಹಿ ಹಾಕಿದವು. ತಮ್ಮನ್ನು ಗೌರವಿಸಿದ್ದಕ್ಕಾಗಿ ಪ್ರಧಾನಿ ಮೋದಿ ಟ್ರಿನಿಡಾಡ್‌ಗೆ ಧನ್ಯವಾದ ಅರ್ಪಿಸಿದರು ಮತ್ತು ಈ ಪ್ರಶಸ್ತಿ ತಮಗೆ ಮಾತ್ರವಲ್ಲ, 1.4 ಬಿಲಿಯನ್ ಭಾರತೀಯರಿಗೂ ಎಂದು ಹೇಳಿದರು.
* "ಗುರುದೇವ್ ಟ್ಯಾಗೋರ್ ಅವರಿಗೆ ಬ್ಯೂನಸ್ ಐರಿಸ್‌ನಲ್ಲಿ ಗೌರವ ಸಲ್ಲಿಸಲಾಯಿತು. ಗುರುದೇವ್ ಟ್ಯಾಗೋರ್ 1924 ರಲ್ಲಿ ಅರ್ಜೆಂಟೀನಾಕ್ಕೆ ಭೇಟಿ ನೀಡಿದ್ದರು ಮತ್ತು ಈ ದೇಶದ ಅನೇಕ ಜನರ, ವಿಶೇಷವಾಗಿ ವಿದ್ವಾಂಸರು ಮತ್ತು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಶಾಶ್ವತವಾದ ಛಾಪು ಮೂಡಿಸಿದ್ದರು. ನಮ್ಮ ರಾಷ್ಟ್ರದ ಇತಿಹಾಸ ಮತ್ತು ಸಂಸ್ಕೃತಿಗೆ ಗುರುದೇವ್ ಟ್ಯಾಗೋರ್ ಅವರ ಕೊಡುಗೆಗಳ ಬಗ್ಗೆ ಭಾರತದಲ್ಲಿ ನಾವು ಅಪಾರ ಹೆಮ್ಮೆ ಪಡುತ್ತೇವೆ. ಕಲಿಕೆ ಮತ್ತು ಶಿಕ್ಷಣದ ಮೇಲೆ ಅವರ ಒತ್ತು ಕೂಡ ಬಹಳ ಪ್ರೇರಣಾದಾಯಕವಾಗಿದೆ" ಎಂದು ಪ್ರಧಾನಿ ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ತಿಳಿಸಿದ್ದಾರೆ.

## ಜುಲೈ 14ರಿಂದ ಸಂಚಾರಕ್ಕೆ ಮುಕ್ತವಾಗಲಿದೆ 'ಸಿಗಂದೂರು ಸೇತುವೆ'



* ಸಾಗರ ತಾಲ್ಲೂಕಿನ ಅಂಬಾರಗೋಡ್ಲು-ಕಳಸವಳ್ಳಿ ನಡುವಿನ ನೂತನ ಸಿಂಗದೂರು ತೂಗು ಸೇತುವೆಯನ್ನು ಜುಲೈ 14ರಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಲೋಕಾರ್ಪಣೆ ಮಾಡಲಿದ್ದಾರೆ.
* ₹473 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಈ ಸೇತುವೆ 2.44 ಕಿ.ಮೀ ಉದ್ದವಿದ್ದು, ಇದು ದೇಶದಲ್ಲಿಯೇ ಎರಡನೇ ಅತಿ ದೊಡ್ಡ ತೂಗು ಸೇತುವೆಯಾಗಿದೆ.
* ಈ ಸೇತುವೆ ಸಿಗಂದೂರು ಯಾತ್ರಾ ಸ್ಥಳಕ್ಕೆ ಸಂಪರ್ಕ ಕಲ್ಪಿಸುವ ಕಾರಣ 'ಸಿಗಂದೂರು ಶ್ರೀ ಚೌಡೇಶ್ವರಿ ಸೇತುವೆ' ಎಂದು ನಾಮಕರಣ ಮಾಡಲು ನಿರ್ಧರಿಸಲಾಗಿದೆ.
* ಸೇತುವೆ ನಿರ್ಮಾಣಕ್ಕೆ ಪಕ್ಷಾತೀತ ಹೋರಾಟ ನಡೆದಿದ್ದರೂ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಶ್ರಮ ಮತ್ತು ₹100 ಕೋಟಿಯ ಕೊಡುಗೆ ಪ್ರಮುಖವಾಗಿದೆ.

* ಲೋಕಾರ್ಪಣೆಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿಯು ಸಹ ಭಾಗವಹಿಸಲಿದ್ದಾರೆ. ಸ್ಥಳ ಮತ್ತು ಸಮಯದ ಬಗ್ಗೆ ಶೀಘ್ರ ನಿರ್ಧಾರವಾಗಲಿದೆ. ಜುಲೈ 4 ರಂದು ಸೇತುವೆಯ ಎರಡನೇ ಹಂತದ ಲೋಡ್ ಟೆಸ್ಟ್ ಆರಂಭವಾಗಿದ್ದು, ಕೊನೆಯ ಹಂತದ ಕೆಲಸಗಳು ಶೀಘ್ರದಲ್ಲಿ ಪೂರ್ಣಗೊಳ್ಳಲಿವೆ.
* ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಕೆ. ಜಗದೀಶ್, ಶಾಸಕರು ಮತ್ತು ಮಾಜಿ ಶಾಸಕರು ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

## 2029, 2031ರ ಅಥ್ಲೆಟಿಕ್ಸ್ ವಿಶ್ವ ಚಾಂಪಿಯನ್ ಷಿಪ್ ಆತಿಥ್ಯಕ್ಕಾಗಿ ಬಿಡ್ ಸಲ್ಲಿಸಲಿದೆ ಭಾರತ



* ಭಾರತ ಅಥ್ಲೆಟಿಕ್ಸ್ ಫೆಡರೇಶನ್(AFI) 2029 ಮತ್ತು 2031ರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗಳ ಆತಿಥ್ಯಕ್ಕಾಗಿ ಬಿಡ್ ಸಲ್ಲಿಸಲು ಸಿದ್ಧತೆ ನಡೆಸುತ್ತಿದೆ ಎಂದು ಅಧ್ಯಕ್ಷ ಅದಿಲ್ ಸುಮರಿವಾಲಾ ತಿಳಿಸಿದ್ದಾರೆ.
* ಬಿಡ್ ಸಲ್ಲಿಕೆ ಪ್ರಕ್ರಿಯೆ ಈ ವರ್ಷ ಆರಂಭವಾಗಲಿದೆ ಮತ್ತು ಅಕ್ಟೋಬರ್ 1 ಕೊನೆಯ ದಿನವಾಗಿದೆ. ಆಯೋಜನೆ ಹಕ್ಕು ಪಡೆದ ದೇಶಗಳ ಘೋಷಣೆ 2025ರ ಸೆಪ್ಟೆಂಬರ್‌ನಲ್ಲಿ ವಿಶ್ವ ಅಥ್ಲೆಟಿಕ್ಸ್ (WA) ಪ್ರಕಟಿಸಲಿರುವುದು.
* ಭಾರತವು ಎರಡೂ ವರ್ಷಗಳಿಗೂ ಬಿಡ್ ಸಲ್ಲಿಸಲು ಉತ್ಸುಕವಾಗಿದೆ. ಕನಿಷ್ಠ ಒಂದರ ಆತಿಥ್ಯ ದೊರೆತರೂ ಸಾಕು ಎಂದು ಎಎಫ್‌ಐ ಉಪಾಧ್ಯಕ್ಷರೂ ಆಗಿರುವ ಸುಮರಿವಾಲಾ ತಿಳಿಸಿದರು.
* ಭಾರತವು 2028ರ ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್ ಹಾಗೂ ವಿಶ್ವ ಅಥ್ಲೆಟಿಕ್ಸ್ ರಿಲೆ ಕೂಟಗಳ ಆತಿಥ್ಯಕ್ಕೂ ಈಗಾಗಲೇ ಬಿಡ್ ಸಲ್ಲಿಸಿದೆ.
* 2026ರ ರಿಲೆ ಕೂಟ ಬೋತ್ಸ್ವಾನಾ ಮತ್ತು 2028ರ ರಿಲೆ ಕೂಟ ಬಹಮಾಸ್‌ನಲ್ಲಿ ನಡೆಯಲಿದೆ. ಈ ನಂತರದ ಕೂಟಗಳನ್ನು ಆಯೋಜಿಸಲು ಭಾರತ ಉತ್ಸುಕರಾಗಿದೆ.

## ಭಾರತದ "100 ದೇಶಿಯ ಡೀಪ್-ಟೆಕ್" ಯೋಜನೆಗೆ ಚಾಲನೆ




* ಭಾರತವು ಇತ್ತೀಚೆಗೆ 100 ದೇಶಿಯ ಡೀಪ್-ಟೆಕ್ಸ್ (100DesiDeepTechs) ಹೆಸರಿನಲ್ಲಿ ಹೊಸ ಯೋಜನೆ ಆರಂಭಗೊಂಡಿದ್ದು, ದೇಶದ ಪ್ರಮುಖ 100 ಡೀಪ್-ಟೆಕ್ ಸ್ಟಾರ್ಟ್ ಅಪ್‌ಗಳನ್ನು ಗುರುತಿಸಿ ಬೆಂಬಲಿಸಲು ಈ ಉಪಕ್ರಮ ಕೈಗೊಳ್ಳಲಾಗಿದೆ.
* ಈ ಬಹುಪಾಲುದಾರರ ಯೋಜನೆಯು ಸ್ಟಾರ್ಟ್‌ಅಪ್ ಪಾಲಿಸಿ ಫೋರಂ (SPF), ಸ್ಟಾರ್ಟ್‌ಅಪ್ ಇಂಡಿಯಾ, ಐಐಟಿ ಮದ್ರಾಸ್ ಸೇರಿ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ನಡೆಯುತ್ತದೆ.
* ಡೀಪ್-ಟೆಕ್ ಸ್ಟಾರ್ಟ್‌ಅಪ್‌ಗಳಿಗೆ ದೃಢ ನೀತಿ ವ್ಯವಸ್ಥೆ ಒದಗಿಸಲು, ಈ ಯೋಜನೆ ಸರ್ಕಾರ, ಶಿಕ್ಷಣ ಸಂಸ್ಥೆಗಳು, ಹೂಡಿಕೆದಾರರು ಹಾಗೂ ಉದ್ಯಮ ನಾಯಕರನ್ನು ಒಟ್ಟುಗೂಡಿಸುತ್ತದೆ. ನಾವೀನ್ಯತೆ, ಸಂಶೋಧನೆ ಹಾಗೂ ಅಭಿವೃದ್ಧಿಗೆ ಸರ್ಕಾರದಿಂದ ನಿರ್ದಿಷ್ಟ ಯೋಜನೆಗಳ ಮೂಲಕ ಬೆಂಬಲ ಸಿಗಲಿದೆ.
* ಆಗಸ್ಟ್ ಮಧ್ಯದವರೆಗೆ ಭಾರತದೆಲ್ಲೆಡೆಗಿನ ಸ್ಟಾರ್ಟ್‌ಅಪ್‌ಗಳು ಅರ್ಜಿ ಸಲ್ಲಿಸಬಹುದು. ಆಯ್ದ ಕಂಪನಿಗಳೊಂದಿಗೆ ನೀತಿ ರೂಪಕರು, ಹೂಡಿಕೆದಾರರು, ನಿಯಂತ್ರಕರು ಸಂವಾದ ನಡೆಸಲಿದ್ದಾರೆ. ಈ ಸಂವಾದಗಳ ಆಧಾರದಲ್ಲಿ ಸಮಗ್ರ ನೀತಿ ಶ್ವೇತಪತ್ರವನ್ನು ರೂಪಿಸಲಾಗುವುದು.
* ಸಂವಾದಗಳಿಂದ ರೂಪುಗೊಳ್ಳುವ ನೀತಿಯ ಶ್ವೇತಪತ್ರವನ್ನು ಡೀಪ್‌ಟೆಕ್ ಬೈಠಕ್ ವೇದಿಕೆಯಲ್ಲಿ ಬಿಡುಗಡೆ ಮಾಡಲಾಗುತ್ತದೆ. ಜೊತೆಗೆ ಡೀಪ್‌ಟೆಕ್ ನೀತಿ ಸಂಶೋಧನಾ ಕೇಂದ್ರ (CDPR) ಪ್ರಾರಂಭವಾಗಲಿದೆ.
* ಸೆಮಿಕಂಡಕ್ಟರ್, ರಕ್ಷಣಾ ತಂತ್ರಜ್ಞಾನ, ಕ್ವಾಂಟಮ್ ಕಂಪ್ಯೂಟಿಂಗ್, ಹಸಿರು ಹೈಡ್ರೋಜನ್, ಬಾಹ್ಯಾಕಾಶ, ಡ್ರೋನ್‌ಗಳು, ಇಲೆಕ್ಟ್ರಿಕ್ ವಾಹನಗಳು, ಜೈವಿಕ ತಂತ್ರಜ್ಞಾನ, ರೋಬಾಟಿಕ್ಸ್, ಸಂವಹನ ಮೂಲಸೌಕರ್ಯಗಳು ಮೊದಲಾದವು ಪ್ರಮುಖ ಕ್ಷೇತ್ರಗಳಾಗಿವೆ.
* ವಿಶೇಷ ಮಾರ್ಗದರ್ಶಕ ಮಂಡಳಿ ಸ್ಟಾರ್ಟ್‌ಅಪ್‌ಗಳಿಗೆ ತಾಂತ್ರಿಕ ಮತ್ತು ಕಾರ್ಯತಂತ್ರದ ಸಲಹೆ ನೀಡಲಿದೆ. ಇದು ಆಯ್ದ ನವೋದ್ಯಮಗಳ ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಸಹಕಾರಿಯಾಗಲಿದೆ.

## ಫಿನೋಮ್ ಇಂಡಿಯಾ ನ್ಯಾಷನಲ್ ಬಯೋಬ್ಯಾಂಕ್ ಸ್ಥಾಪನೆ



* ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಗಡ್ಕರಿ ಅವರು ನವದೆಹಲಿಯ ಸಿಎಸ್‌ಐಆರ್ ಇನ್ಸ್ಟಿಟ್ಯೂಟ್ ಆಫ್ ಜೀನೋಮಿಕ್ಸ್ ಆ್ಯಂಡ್ ಇಂಟಿಗ್ರೇಟಿವ್ ಬಯಾಲಜಿಯಲ್ಲಿ ಫಿನೋಮ್ ಇಂಡಿಯಾ ನ್ಯಾಷನಲ್ ಬಯೋಬ್ಯಾಂಕ್ ಉದ್ಘಾಟಿಸಿದರು.
* ಈ ಬಯೋಬ್ಯಾಂಕ್‌ನಲ್ಲಿ 10,000 ವ್ಯಕ್ತಿಗಳ ಜೀನೋಮಿಕ್ ಹಾಗೂ ಕ್ಲಿನಿಕಲ್ ಡೇಟಾವನ್ನು ಸಂಗ್ರಹಿಸಲಾಗುತ್ತದೆ. ಈ ಡೇಟಾ ಮೂಲಕ ಮಧುಮೇಹ, ಕ್ಯಾನ್ಸರ್, ಹೃದಯ ರೋಗ, ಅಪರೂಪದ ಅನುವಂಶಿಕ ಕಾಯಿಲೆಗಳ ಕುರಿತು ಅಧ್ಯಯನ ಮಾಡಲಾಗುತ್ತದೆ.
* ಭಾರತದ ಜನಾಂಗಗಳಲ್ಲಿ ಯಾವುದೇ ರೋಗ ಹೆಚ್ಚು ಕಾಣಿಸಿಕೊಳ್ಳುತ್ತಿದೆ ಎಂಬ ಮಾಹಿತಿಗೆ ಸಹ ಈ ಯೋಜನೆ ನೆರವಾಗಲಿದೆ. ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳ ಸಹಿತ ದತ್ತಾಂಶ ಸಂಗ್ರಹಿಸಲು ಎಐ ಮತ್ತು ಕ್ವಾಂಟಮ್ ತಂತ್ರಜ್ಞಾನ

KPSCVaani

ಬಳಸಲಾಗುತ್ತಿದೆ.

* ಈ ಯೋಜನೆಯು ಸರ್ಕಾರ, ಸಂಶೋಧನಾ ಸಂಸ್ಥೆಗಳು ಹಾಗೂ ಖಾಸಗಿ ಉದ್ಯಮಗಳ ನಡುವೆ ಪಾಲುದಾರಿಕೆಯನ್ನು ನಿರ್ಮಿಸುತ್ತಿದ್ದು, ದೀರ್ಘಕಾಲಿಕ ಆರೋಗ್ಯ ಸಂಶೋಧನೆಗೆ ಮಹತ್ವಪೂರ್ಣವಾಗಲಿದೆ.

* ಜೀನೋಮಿಕ್ಸ್ ಸಂಶೋಧನೆಯಲ್ಲಿ ಭಾರತದಲ್ಲಿ ಸಿಎಸ್ಐಆರ್ ಮತ್ತು ಐಜಿಐಬಿ ಪ್ರಮುಖ ಪಾತ್ರವಹಿಸುತ್ತಿವೆ.

* ಐಜಿಐಬಿ, ಭಾರತದಲ್ಲಿ ಮಾನವ ಜಿನೋಮ್ ಡಿಕೋಡ್ ಮಾಡಿದ ಮೊದಲ ಸಂಸ್ಥೆಯಾಗಿದ್ದು, ಮಹಿಳಾ ಆರೋಗ್ಯ ಸಂಬಂಧಿತ ರೋಗಗಳ ಪತ್ತೆ ಹಾಗೂ ಔಷಧ ಅಭಿವೃದ್ಧಿಯಲ್ಲಿ ಮುಂದಿರುವುದು ಗಮನಾರ್ಹವಾಗಿದೆ.

## ಭಾರತದ ಅಧ್ಯಕ್ಷತೆಯಲ್ಲಿ 2026ರ ಬ್ರಿಕ್ಸ್ ಶೃಂಗ ಸಭೆ : 'ಮಾನವೀಯತೆಗೆ ಮೊದಲ ಆದ್ಯತೆ'




* 2026ರ ಬ್ರಿಕ್ಸ್ ಶೃಂಗಸಭೆ ಭಾರತದ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, 'ಮಾನವೀಯತೆಗೆ ಮೊದಲು ಆದ್ಯತೆ' ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಬ್ರೆಜಿಲ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ಘೋಷಿಸಿದರು.

* ಹವಾಮಾನ ಬದಲಾವಣೆ ಕುರಿತು ಅವರು ತಂತ್ರಜ್ಞಾನದ ವರ್ಗಾವಣೆ ಮತ್ತು ಹಣಕಾಸಿನ ನೆರವಿನ ಅಗತ್ಯವಿದೆ ಎಂದೂ, ಅಭಿವೃದ್ಧಿಶೀಲ ದೇಶಗಳಿಗೆ ಈ ಸಂಬಂಧ ಹೆಚ್ಚುವರಿ ಜವಾಬ್ದಾರಿ ಇದೆ ಎಂದು ಹೇಳಿದರು.

* ಆಹಾರ, ಇಂಧನ, ರಸಗೊಬ್ಬರ ಹಾಗೂ ಆರ್ಥಿಕ ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಎಲ್ಲಾ ರಾಷ್ಟ್ರಗಳೊಂದಿಗೆ ಸಹಕಾರ ರೂಪಿಸಬೇಕೆಂದು ಅವರು ಒತ್ತಿಹೇಳಿದರು.

* ಭಾರತದ ಅಧ್ಯಕ್ಷತೆಯಲ್ಲಿ ಬ್ರಿಕ್ಸ್ ಶೃಂಗಸಭೆ ಸಹಕಾರ, ಸುಸ್ಥಿರತೆ ಮತ್ತು ನಾವೀನ್ಯತೆಯತ್ತ ಗಮನ ಹರಿಸಲು ಪ್ರಯತ್ನಿಸಲಿದೆ ಎಂದು ಮೋದಿ ಹೇಳಿದರು.




## ಏಷ್ಯನ್ ಶೂಟಿಂಗ್ : ಮನು ಭಾಕರ್ ನಾಯಕತ್ವದ ಭಾರತೀಯ ತಂಡ



* ಒಲಿಂಪಿಕ್ ಅವಳಿ ಪದಕ ವಿಜೇತೆ ಮನು ಭಾಕರ್ ಅವರ ನಾಯಕತ್ವದಲ್ಲಿ 35 ಶೂಟರ್‌ಗಳನ್ನು ಒಳಗೊಂಡ ಭಾರತೀಯ ಶೂಟಿಂಗ್ ತಂಡವು ಆಗಸ್ಟ್ 16ರಿಂದ 30ರವರೆಗೆ ಕಜಕಿಸ್ತಾನದಲ್ಲಿ ನಡೆಯಲಿರುವ 16ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ಗೆ ಘೋಷಣೆಗೊಂಡಿದೆ.

* 23 ವರ್ಷದ ಮನು ಭಾಕರ್ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಮತ್ತು 25 ಮೀಟರ್ ಪಿಸ್ತೂಲ್ ವಿಭಾಗಗಳಲ್ಲಿ ಸ್ಪರ್ಧಿಸಲಿದ್ದು, ವೈಯಕ್ತಿಕ ವಿಭಾಗದ ಎರಡು ಸ್ಪರ್ಧೆಗಳಿಗೆ ಆಯ್ಕೆಯಾದ ಏಕೈಕ ಭಾರತೀಯ ಶೂಟರ್ ಆಗಿದ್ದಾರೆ.

* ತಂಡದಲ್ಲಿ ರುದ್ರಾಂಕ್ಷ್ ಪಾಟೀಲ್, ಅಂಜುಮ್ ಮೌದ್ಗಿಲ್, ಐಶ್ವರ್ಯ ತೋಮರ್, ಸೌರಭ್ ಚೌಧರಿ ಮತ್ತು ಕೈನಾನ್ ಚೆನೈ ಸೇರಿದಂತೆ ಅನೇಕ ಅನುಭವದ ಶೂಟರ್‌ಗಳು ಸೇರಿದ್ದಾರೆ.

* ಎನ್‌ಆರ್‌ಎಐ ಸೆಪ್ಟೆಂಬರ್‌ನಲ್ಲಿ ಚೀನಾದಲ್ಲಿ ನಡೆಯುವ ಐಎಸ್ಎಸ್‌ಎಫ್ ವಿಶ್ವಕಪ್, ನವದೆಹಲಿಯಲ್ಲಿ ನಡೆಯಲಿರುವ ಜೂನಿಯರ್ ವಿಶ್ವಕಪ್ ಹಾಗೂ ಕಜಕಿಸ್ತಾನದಲ್ಲಿ ನಡೆಯುವ ಜೂನಿಯರ್ ಏಷ್ಯನ್ ಚಾಂಪಿಯನ್‌ಷಿಪ್‌ಗಳಿಗೂ ತಂಡಗಳನ್ನು ಘೋಷಿಸಿದೆ.

* ಸ್ವಪ್ನಿಲ್ ಕುಸಾಳೆ ಮತ್ತು ರಾಹಿ ಸರ್ನೋಬತ್ ಅವರು ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

## ಭಾರತದ ಮೊದಲ ಖಾಸಗಿ ಉಪಗ್ರಹ ಇಂಟರ್ನೆಟ್ ಸೇವೆಯನ್ನು ಆರಂಭಿಸಲಿರುವ ಅನಂತ್ ಟೆಕ್



* ಹೈದರಾಬಾದ್‌ನ ಅನಂತ್ ಟೆಕ್ನಾಲಜೀಸ್ ಕಂಪನಿಗೆ ಭಾರತದಲ್ಲಿ ಮೊದಲ ಖಾಸಗಿ ಉಪಗ್ರಹ ಬ್ರಾಡ್‌ಬ್ಯಾಂಡ್ ಸೇವೆ ಪ್ರಾರಂಭಿಸಲು ಅನುಮತಿ ದೊರೆತಿದೆ.
* IN-SPACe (ಇಂಡಿಯನ್ ನ್ಯಾಷನಲ್ ಸ್ಪೇಸ್ ಪ್ರೊಮೋಶನ್ ಅಂಡ್ ಅಥೋರೈಸೇಶನ್ ಸೆಂಟರ್) ಈ ಯೋಜನೆಗೆ ಅನುಮತಿ ನೀಡಿದ್ದು, 2028ರೊಳಗೆ ಸೇವೆ ಆರಂಭವಾಗಲಿದೆ.
* ಈ ಯೋಜನೆಗೆ ಭಾರತದಲ್ಲಿಯೇ ತಯಾರಾಗುವ ಉಪಗ್ರಹಗಳನ್ನು ಬಳಸಲಾಗುವುದು. ಸ್ಟಾರ್ಲಿಂಕ್, ವನ್‌ವೆಬ್ ಮತ್ತು ಅಮೆಜಾನ್ ಕ್ಯೈಪರ್‌ನಂತಹ ಜಾಗತಿಕ ಕಂಪನಿಗಳಿಗೆ ಇದು ಪೈಪೋಟಿ ನೀಡುವ ಮಹತ್ವದ ಹೆಜ್ಜೆಯಾಗಲಿದೆ.
* ಅನಂತ್ ಟೆಕ್ನಾಲಜೀಸ್ ಭಾರತದಲ್ಲಿ ಉಪಗ್ರಹ ಆಧಾರಿತ ಇಂಟರ್ನೆಟ್ ಸೇವೆ ನೀಡಲು ಅನುಮತಿ ಪಡೆದ ಮೊದಲ ಖಾಸಗಿ ಕಂಪನಿಯಾಗಿ ಇತಿಹಾಸ ನಿರ್ಮಿಸಿದೆ. ಈ ಸೇವೆಯನ್ನು 2028ರೊಳಗೆ ಪ್ರಾರಂಭಿಸಲಾಗುವುದು, ಹಾಗೂ ಇದನ್ನು ದೇಶದಾದ್ಯಂತ, ಇಂಟರ್ನೆಟ್ ಸಂಪರ್ಕ ಕಡಿಮೆಯಾಗಿರುವ ಹಳ್ಳಿ ಮತ್ತು ನಿರ್ಗಮ ಪ್ರದೇಶಗಳಿಗೂ ನೀಡಲಾಗುತ್ತದೆ.
* ಈ ಸೇವೆಗಾಗಿ ಭೂಸ್ಥಿರ ಕಕ್ಷೆಯಲ್ಲಿ (geostationary orbit) ಇರುವ ಉಪಗ್ರಹವನ್ನು ಬಳಸಲಾಗುವುದು, ಇದು ಭೂಮಿಯಿಂದ 35,000 ಕಿಮೀ ಎತ್ತರದಲ್ಲಿದ್ದು, ನಿರ್ದಿಷ್ಟ ಬಿಂದು ಮೇಲೆ ನಿಲ್ಲುತ್ತದೆ. ಇದರಿಂದ ಸ್ಥಿರವಾದ ಇಂಟರ್ನೆಟ್ ಸೇವೆ ಲಭ್ಯವಾಗುತ್ತದೆ.* ಈ ಯೋಜನೆಗೆ IN-SPACe ಅನುಮತಿ ನೀಡಿದ್ದು, ಇದು ಭಾರತದಲ್ಲಿ ಖಾಸಗಿ ಕಂಪನಿಗಳಿಗೆ ಅಂತಾರಿಕ್ಷ ಕ್ಷೇತ್ರವನ್ನು ತೆರೆಯುವ ಮಹತ್ವದ ನಿರ್ಧಾರವಾಗಿದೆ. ಇದರಿಂದ ನವೀನತೆ, ವೇಗದ ಅಭಿವೃದ್ಧಿಗೆ ಉತ್ತೇಜನ ದೊರೆಯುತ್ತದೆ.
* ಈ ಕ್ಷೇತ್ರದಲ್ಲಿ ಸ್ಟಾರ್ಲಿಂಕ್ (ಎಲಾನ್ ಮಸ್ಕ್), ವನ್‌ವೆಬ್ ಮತ್ತು ಅಮೆಜಾನ್ ಕ್ಯೈಪರ್‌ನಂತಹ ವಿದೇಶಿ ಕಂಪನಿಗಳೇ ಮುಂದಿದ್ದವು. ಈಗ ಅನಂತ್ ಟೆಕ್ ಈ ಕ್ಷೇತ್ರಕ್ಕೆ ಪ್ರವೇಶ ಮಾಡಿರುವುದು, ಭಾರತದಲ್ಲಿಯೂ ತನ್ನದೇ ಆದ ಸ್ಪರ್ಧಿಯನ್ನು ರೂಪಿಸೋಲ್ಲಿದೆ.
* ಈ ಯೋಜನೆಗೆ ಅನಂತ್ ಟೆಕ್ ₹3,000 ಕೋಟಿ ಹಣ ವೆಚ್ಚ ಮಾಡುವ ಯೋಜನೆ ಹೊಂದಿದೆ. ದೇಶದ ಪ್ರತಿಯೊಂದು ಭಾಗಕ್ಕೂ ವೇಗದ ಇಂಟರ್ನೆಟ್ ತಲುಪಿಸುವ ಗುರಿಯಿದೆ.
* ವಿಶೇಷವಾಗಿ ಮೊಬೈಲ್ ಟವರ್ ಅಥವಾ ಫೈಬರ್ ಕೇಬಲ್ ಇಲ್ಲದ ಹಳ್ಳಿ ಪ್ರದೇಶಗಳಲ್ಲಿ. ಇದರಿಂದ ಶಿಕ್ಷಣ, ಆರೋಗ್ಯ, ವ್ಯವಹಾರ ಮತ್ತು ಸಂವಹನ ಕ್ಷೇತ್ರಗಳಲ್ಲಿ ದೊಡ್ಡ ಬದಲಾವಣೆ ಸಾಧ್ಯವಾಗಲಿದೆ.
* ಉಪಗ್ರಹ ನಿರ್ಮಾಣ ಮತ್ತು ಸೇವೆ ಯೋಜನೆ ಈಗಾಗಲೇ ಪ್ರಾರಂಭವಾಗಿದ್ದು, ನಿಖರ ಲಾಂಚ್ ದಿನಾಂಕವನ್ನು ಕಂಪನಿ ಇನ್ನೂ ಪ್ರಕಟಿಸಿಲ್ಲ.


## 09 July 2025

## ಯುಎಇ ಭಾರತೀಯರಿಗೆ ಗೋಲ್ಡನ್ ವೀಸಾ ಅವಕಾಶ




* ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಭಾರತೀಯರಿಗೆ ನಾಮನಿರ್ದೇಶನ ಆಧಾರಿತ ಹೊಸ ಗೋಲ್ಡನ್ ವೀಸಾ ಸ್ಕೀಮ್ ಪರಿಚಯಿಸಿದೆ. ಈ ವೀಸಾ ಯುಎಇನಲ್ಲಿ ಶಾಶ್ವತವಾಗಿ ನೆಲೆಸಲು ಅವಕಾಶ ನೀಡುತ್ತದೆ.
* ಸಂಪ್ರದಾಯಿಕ ಮಾರ್ಗದಲ್ಲಿ 4.66 ಕೋಟಿ ರೂಪಾಯಿ ಹೂಡಿಕೆಯಿಂದ ವೀಸಾ ಸಿಗುತ್ತಿದ್ದರೆ, ಹೊಸ ಸ್ಕೀಮ್ನಡಿ ಕೇವಲ 23 ಲಕ್ಷ ರೂಪಾಯಿಗೆ ವೀಸಾ ಪಡೆಯಲು ಸಾಧ್ಯವಿದೆ. ಇದರಿಂದ ಮಧ್ಯಮ ವರ್ಗಕ್ಕೂ ವಿದೇಶ ಪ್ರವಾಸ ಮತ್ತು ನೆಲೆಸುವ ಆಸೆ ಈಡೇರಲಿದೆ.
* ಈ ವೀಸಾ ಎಲ್ಲರಿಗೂ ಲಭ್ಯವಿಲ್ಲ. ಶಿಕ್ಷಕರು, ವೈದ್ಯರು, ಇಂಜಿನಿಯರ್‌ಗಳು, ಎಐ ತಜ್ಞರು, ಕೌಶಲ್ಯಯುತ ವೃತ್ತಿಪರರು ಹಾಗೂ ಯಶಸ್ವಿ ಉದ್ಯಮಿಗಳು ಅರ್ಹರಾಗಿರುತ್ತಾರೆ.
* ಈ ಯೋಜನೆಯನ್ನು ಪ್ರಾಯೋಗಿಕ ಹಂತದಲ್ಲಿ ಭಾರತ ಮತ್ತು ಬಾಂಗ್ಲಾದೇಶದಲ್ಲಿ ಆರಂಭಿಸಲಾಗಿದೆ. ಮುಂಬರುವ ತಿಂಗಳಲ್ಲಿ 5,000 ಜನರಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದೆ.
* ಗೋಲ್ಡನ್ ವೀಸಾ ಪಡೆದವರು ತಮ್ಮ ಕುಟುಂಬದ ಸದಸ್ಯರು, ಡ್ರೈವರ್, ಮನೆ ಕೆಲಸದವರನ್ನು ಕೂಡ ಕರೆದುಕೊಳ್ಳಬಹುದು. ಆಸ್ತಿ ಮಾರಾಟ ಅಥವಾ ಹಂಚಿಕೆಯಿಂದ ದೂರವಿದ್ದರೆ, ನಾಮನಿರ್ದೇಶನ ಆಧಾರಿತ ವೀಸಾ ಶಾಶ್ವತವಾಗಿ ಅಮಲಲ್ಲಿರುತ್ತದೆ.
* 1 ಕೋಟಿಗೂ ಹೆಚ್ಚು ಭಾರತೀಯರು ಈಗಾಗಲೇ ಯುಎಇನಲ್ಲಿ ನೆಲೆಸಿದ್ದಾರೆ. ಈ ಹೊಸ ವೀಸಾ ಸ್ಕೀಮ್ ಶಾಶ್ವತ ನೆಲೆಯ ಕನಸು ಕಾಣುವವರಿಗೆ ಅತ್ಯುತ್ತಮ ಅವಕಾಶವಾಗಿದೆ.

## ಪ್ರಧಾನಿ ನರೇಂದ್ರ ಮೋದಿಗೆ ಬ್ರೆಜಿಲ್ನ ಅತ್ಯುನ್ನತ ನಾಗರಿಕ ಪ್ರಶಸ್ತಿ ಪ್ರದಾನ



* ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬ್ರೆಜಿಲ್ನ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಗ್ರ್ಯಾಂಡ್ ಕಾಲರ್ ಆಫ್ ದಿ ನ್ಯಾಷನಲ್ ಆರ್ಡರ್ ಆಫ್ ದಿ ಸದರ್ನ್ ಕ್ರಾಸ್' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.
* ಭಾರತ ಮತ್ತು ಬ್ರೆಜಿಲ್ ನಡುವಿನ ಬೆಳೆಯುತ್ತಿರುವ ರಾಜತಾಂತ್ರಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿಗೆ ಗೌರವದ ಸಂಕೇತವಾಗಿ ಈ ಮನ್ನಣೆಯನ್ನು ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡ ಸಿಲ್ವಾ ಅವರು ಈ ಪ್ರಶಸ್ತಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರದಾನ ಮಾಡಿದ್ದಾರೆ.
* 'ಬ್ರೆಜಿಲ್ನ ಅಧ್ಯಕ್ಷರು ದೇಶದ ಅತ್ಯನ್ನತ್ತ ಪ್ರಶಸ್ತಿ ನೀಡಿ ಗೌರವಿಸಿರುವುದು ನನಗೆ ಮಾತ್ರವಲ್ಲ, 140 ಕೋಟಿ ಭಾರತೀಯರಿಗೂ

KPSCVaani

ಸಂದ ಗೌರವ ಹಾಗೂ ಹೆಮ್ಮೆಯ ಕ್ಷಣವಾಗಿದೆ' ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ.

* ಈ ಪ್ರಶಸ್ತಿಯನ್ನು ಸೇರಿಸಿ ಪ್ರಧಾನಿ ನರೇಂದ್ರ ಮೋದಿಯವರಿಗೆ ವಿವಿಧ ದೇಶಗಳು ನೀಡಿದ ಒಟ್ಟು ನಾಗರಿಕ ಪ್ರಶಸ್ತಿಗಳ ಸಂಖ್ಯೆ 26ಕ್ಕೆ ಏರಿಕೆಯಾಗಿದೆ,

* ಪ್ರಧಾನಿ ಮೋದಿ ಅವರಿಗೆ ಈ ಗೌರವವನ್ನು ನೀಡುವ ಮೂಲಕ, ಭಾರತ-ಬ್ರೆಜಿಲ್ ಕಾರ್ಯತಂತ್ರದ ಪಾಲುದಾರಿಕೆಯನ್ನು ಹೆಚ್ಚಿಸುವಲ್ಲಿ ಅವರ ಪ್ರಯತ್ನಗಳನ್ನು ಹಾಗೂ ಬ್ರಿಕ್ಸ್, ಜಿ20 ಮತ್ತು ವಿಶ್ವಸಂಸ್ಥೆಯಂತಹ ಅಂತರರಾಷ್ಟ್ರೀಯ ವೇದಿಕೆಗಳ ಮೂಲಕ ಸಹಕಾರವನ್ನು ಮುನ್ನಡೆಸುವಲ್ಲಿ ಅವರ ಪಾತ್ರವನ್ನು ಬ್ರೆಜಿಲ್ ಗುರುತಿಸಿದೆ.

* ಭಾರತ ಮತ್ತು ಬ್ರೆಜಿಲ್ ಸಾರ್ವಭೌಮತ್ವಕ್ಕೆ ಗೌರವ, ಸುಸ್ಥಿರ ಅಭಿವೃದ್ಧಿ ಮತ್ತು ಬಹುಧ್ರುವೀಯ ವಿಶ್ವ ಕ್ರಮದಂತಹ ಸಾಮಾನ್ಯ ಮೌಲ್ಯಗಳನ್ನು ಹಂಚಿಕೊಳ್ಳುತ್ತವೆ. ವರ್ಷಗಳಲ್ಲಿ, ಎರಡೂ ದೇಶಗಳು ಈ ಕೆಳಗಿನ ಕ್ಷೇತ್ರಗಳಲ್ಲಿ ಸಹಕರಿಸಿವೆ.

## ಜನಗಣತಿ ದತ್ತಾಂಶ ದಾಖಲಿಸಲು ಪೋರ್ಟಲ್



* ಕೇಂದ್ರ ಸರ್ಕಾರ ಈ ಬಾರಿ ದೇಶದ ಮೊದಲ ಡಿಜಿಟಲ್ ಜನಗಣತಿಗೆ ತಯಾರಿ ನಡೆಸುತ್ತಿದೆ. ಇದರ ಭಾಗವಾಗಿ ಜನಗಣತಿಯ ಪ್ರಕ್ರಿಯೆಗೆ ಪೋರ್ಟಲ್ ಹಾಗೂ ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

* ಈ ಬಾರಿ ನಾಗರಿಕರು ತಾವೇ ತಮ್ಮ ದತ್ತಾಂಶವನ್ನು ಆ್ಯಪ್ ಅಥವಾ ಪೋರ್ಟಲ್ ಮೂಲಕ ದಾಖಲಿಸಬಹುದಾಗಿದೆ. ಇದು ಮೊಬೈಲ್ ಆ್ಯಪ್ ಮೂಲಕ ನಡೆಯುವ ಮೊದಲ ಜನಗಣತಿ ಆಗಲಿದೆ.

* ಜನಗಣತಿಗೆ ಬಳಸುವ ಆ್ಯಪ್ಗಳು ಇಂಗ್ಲಿಷ್, ಹಿಂದಿ ಹಾಗೂ ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಾಗಲಿವೆ, ಇದರಿಂದಾಗಿ ಹೆಚ್ಚು ಜನರಿಗೆ ಬಳಸಲು ಸುಲಭವಾಗುತ್ತದೆ.

* ದತ್ತಾಂಶ ಸಂಗ್ರಹ, ವರ್ಗಾವಣೆ ಮತ್ತು ಶೇಖರಣೆಯ ಎಲ್ಲ ಹಂತಗಳಲ್ಲಿ ಭದ್ರತೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಬಿಹಾರದಲ್ಲಿ ಸ್ಥಳೀಯ ಮಹಿಳೆಯರಿಗೆ 35% ಸರ್ಕಾರಿ ಉದ್ಯೋಗ ಮೀಸಲು



* ಬಿಹಾರ ಸರ್ಕಾರ ಜುಲೈ 8, 2025ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ, ಬಿಹಾರದ ಸ್ಥಳೀಯ ಮಹಿಳೆಯರಿಗೆ ಮಾತ್ರ 35% ಸರ್ಕಾರೀ ಉದ್ಯೋಗ ಮೀಸಲಾತಿ ನೀಡಲು ನಿರ್ಧರಿಸಿದೆ.

* ಈಗಾಗಲೇ ಇರುವ ಮೀಸಲಾತಿಯನ್ನು ಸ್ಥಳೀಯ ನಿವಾಸಿತ್ವಕ್ಕೆ ನಿಬಂಧನೆ ವಿಧಿಸಿ, ಬಿಹಾರದ ಮಹಿಳೆಯರ ಹಕ್ಕುಗಳ ಬೆಂಬಲಕ್ಕೆ ಈ ತೀರ್ಮಾನ ಕೈಗೊಳ್ಳಲಾಗಿದೆ.

* ಈ ಹೊಸ ನೀತಿ ಅನ್ವಯ, ಇತರ ರಾಜ್ಯಗಳ ಮಹಿಳಾ ಅಭ್ಯರ್ಥಿಗಳಿಗೆ ಮೀಸಲಾತಿ ಸೌಲಭ್ಯ ಲಭ್ಯವಿಲ್ಲ. ಅವರು ಸಾಮಾನ್ಯ ವರ್ಗದ ಅಭ್ಯರ್ಥಿಗಳಾಗಿರುತ್ತಾರೆ.

* ವಿಧಾನಸಭೆ ಚುನಾವಣೆಗಳ ಮೊದಲು ಬಂದಿರುವ ಈ ನಿರ್ಧಾರ, ಮಹಿಳಾ ಮತದಾರರನ್ನು ಸೆಳೆಯಲು ಉದ್ದೇಶಿತ ರಾಜಕೀಯ ತಂತ್ರವೆಂದು ವಿಶ್ಲೇಷಣೆ ನಡೆಯುತ್ತಿದೆ.

* ಲಿಂಗ ಸಮಾನತೆಗೆ ನಿತೀಶ್ ಕುಮಾರ್ ಸರ್ಕಾರ ನೀಡುತ್ತಿರುವ ಪ್ರಾಮುಖ್ಯತೆಯೂ ಇದು ಪ್ರತಿಬಿಂಬಿಸುತ್ತದೆ.

* ಸಚಿವ ಸಂಪುಟ ಸಭೆಯಲ್ಲಿ ಮತ್ತೊಂದು ಮಹತ್ವದ ನಿರ್ಧಾರವಾಗಿ, ಬಿಹಾರ ಯುವ ಆಯೋಗ ರಚನೆಗೂ ಅನುಮೋದನೆ ನೀಡಲಾಗಿದೆ. ಈ ಆಯೋಗವು ರಾಜ್ಯದ ಯುವಕರಿಗೆ ಶಿಕ್ಷಣ, ಉದ್ಯೋಗ ಹಾಗೂ ಕೌಶಲ್ಯಾಭಿವೃದ್ಧಿಗೆ ಸಹಾಯಮಾಡಲಿದೆ.

* ಈ ಆಯೋಗದಲ್ಲಿ ಒಬ್ಬ ಅಧ್ಯಕ್ಷ, ಇಬ್ಬರು ಉಪಾಧ್ಯಕ್ಷರು ಮತ್ತು ಏಳು ಸದಸ್ಯರು ಇರಲಿದ್ದಾರೆ. ಆಯೋಗವು ಹಿಂದುಳಿದ, ನಿರುದ್ಯೋಗಿ ಮತ್ತು ಪ್ರತಿಭಾವಂತ ಯುವಕರ ಪರ ನಿಲ್ದಾಣ ಹೊಂದಿ, ರಾಜ್ಯ ಸರ್ಕಾರಕ್ಕೆ ಸೂಕ್ತ ನೀತಿ ಸಲಹೆ ನೀಡಲಿದೆ.

## ಗದಗ ಜಿಲ್ಲೆಯಲ್ಲಿ ಶಿಕ್ಷಕರ ಆನ್ಲೈನ್ ಹಾಜರಾತಿ ಆರಂಭ



* ರಾಜ್ಯದಲ್ಲೇ ಮೊದಲ ಬಾರಿಗೆ ಗದಗ ಜಿಲ್ಲೆಯಲ್ಲಿ ಫೇಸ್ ರೆಕಗ್ನಿಷನ್ ಸಿಸ್ಟಂ (ಎಫ್ಆರ್ಎಸ್) ಮೂಲಕ ಶಿಕ್ಷಕರ ಆನ್ಲೈನ್ ಹಾಜರಾತಿಗೆ ಚಾಲನೆ ದೊರೆತಿದೆ. ಈ ಯೋಜನೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಚಾಲನೆ ನೀಡಿದರು.

* ಆಗಸ್ಟ್ನಲ್ಲಿ ರಾಜ್ಯದ 57 ಲಕ್ಷ ಮಕ್ಕಳ ಫೇಸ್ ರೆಕಗ್ನಿಷನ್ ಹಾಜರಾತಿಗೂ ಆರಂಭ ಮಾಡಲಿದ್ದು, ಈ ಯೋಜನೆ statewide ಆಗಿ ಜಾರಿಯಾಗಲು ಎಚ್.ಕೆ. ಪಾಟೀಲ ಅವರ ಸಹಕಾರ ಅಗತ್ಯ ಎಂದು ಹೇಳಿದರು.

* ಶಿಕ್ಷಕರು ಶಾಲೆಗೆ ತಲುಪಿದ ಬಳಿಕವೇ ಹಾಜರಾತಿ ನೀಡಬೇಕಿದ್ದು, ಮನೆಯಿಂದ ಹಾಜರಾತಿಗೆ ಅವಕಾಶವಿಲ್ಲ. ಇದರಿಂದ ಸಮಯಪಾಲನೆ ಸಾಧ್ಯವಾಗುತ್ತದೆ ಹಾಗೂ ಮಕ್ಕಳ ಶಿಕ್ಷಣ ಗುಣಮಟ್ಟ ಸುಧಾರಿಸಲು ಸಹಕಾರಿಯಾಗುತ್ತದೆ ಎಂದು ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ.

* ಈ ಪ್ರಕ್ರಿಯೆಗೆ ಗದಗ ಜಿಲ್ಲೆಯಲ್ಲಿ 4,789 ಶಿಕ್ಷಕರು ಮತ್ತು ಸಿಬ್ಬಂದಿ ನೋಂದಾಯಿತರಾಗಿದ್ದು, 715 ಶಾಲೆಗಳು ಹಾಗೂ 14 ಕಚೇರಿಗಳಲ್ಲಿ ಯೋಜನೆ ಯಶಸ್ವಿಯಾಗಿ ಜಾರಿಯಲ್ಲಿದೆ.

KPSCVaani

## ಯೂರೋಜೋನ್ ನ 21 ನೇ ಸದಸ್ಯ ರಾಷ್ಟ್ರವಾಗಿ ಬಲ್ಗೇರಿಯಾ



* ಬಲ್ಗೇರಿಯಾ 2026ರ ಜನವರಿ 1ರಿಂದ ತನ್ನ ಪ್ರಸ್ತುತ ನಾಣ್ಯವಾದ ಲೆವ್‌ನ್ನು ಯೂರೋದೊಂದಿಗೆ ಬದಲಾಯಿಸಲು ನಿರ್ಧರಿಸಿದೆ.
* ಜುಲೈ 8, 2025ರಂದು ಯೂರೋಪಿಯನ್ ಯೂನಿಯನ್ ಈ ಬದಲಾವಣೆಗೆ ಅನುಮೋದನೆ ನೀಡಿದ್ದು, ಬಲ್ಗೇರಿಯಾ ಯೂರೋ ವಲಯದ 21ನೇ ಸದಸ್ಯ ರಾಷ್ಟ್ರವಾಗಲಿದೆ.
* ನಿಶ್ಚಿತ ವಿನಿಮಯ ದರ 1.95583 ಲೆವ್ = 1 ಯೂರೋ ಎಂದು ಘೋಷಿಸಲಾಗಿದೆ. ಪ್ರಧಾನಮಂತ್ರಿ ರೋಸೆನ್ ಜೆಲಿಯಜ್ಕೋವ್ ಈ ಘೋಷಣೆಯನ್ನು ಐತಿಹಾಸಿಕ ಕ್ಷಣ ಎಂದು ವರ್ಣಿಸಿದರು.
* ಈ ನಿರ್ಧಾರಕ್ಕೆ ಇಯು ನಾಯಕರಿಂದ ಬಲವಾದ ಬೆಂಬಲ ವ್ಯಕ್ತವಾಯ್ತು. ಯೂರೋಪಿಯನ್ ಆಯೋಗದ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೆಯೆನ್, ಯೂರೋಪಿಯನ್ ಕೇಂದ್ರ ಬ್ಯಾಂಕ್ ಅಧ್ಯಕ್ಷೆ ಕ್ರಿಸ್ಟಿನ್ ಲಾಗಾರ್ಡ್, ಹಾಗೂ ಇಯು ಅರ್ಥವ್ಯವಸ್ಥಾ ಆಯುಕ್ತ ವಾಲ್ಡಿಸ್ ಡಾಂಬ್ರೋವ್ಸ್ಕಿಸ್ ಬಲ್ಗೇರಿಯಾ ಯೂರೋ ವಲಯ ಸೇರ್ಪಡಿಕೆಗೆ ಪ್ರಶಂಸಿಸಿದ್ದಾರೆ.
* ಆದರೆ ಈ ಬದಲಾವಣೆ ರಾಜಕೀಯ ಅಸ್ಥಿರತೆ ಮತ್ತು ಜನಮತ ವಿಭಜನೆ ನಡುವೆ ನಡೆಯುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಬಲ್ಗೇರಿಯಾ ಏಳು ಚುನಾವಣೆಗಳನ್ನು ಎದುರಿಸಿದೆ.
* ಬೆಲೆ ಏರಿಕೆ ಮತ್ತು ಖರೀದಿ ಶಕ್ತಿಯ ಕುಸಿತದ ಭೀತಿಯಿಂದ ಕೆಲವರು ಪ್ರತಿಭಟನೆ ನಡೆಸುತ್ತಿದ್ದಾರೆ. ರೆಫರೆಂಡಂ ನಡೆಸಬೇಕೆಂಬ ವಿರೋಧಪಕ್ಷದ ಬೇಡಿಕೆಯನ್ನು ಸಂಸತ್ತು ತಿರಸ್ಕರಿಸಿದೆ.
* ಯೂರೋ ವಲಯ ಸೇರ್ಪಡೆ ಬಲ್ಗೇರಿಯಾದ ಆರ್ಥಿಕ ಸ್ಥಿರತೆ, ಪಾಶ್ಚಾತ್ಯ ಯುರೋಪಿನೊಂದಿಗೆ ಬಲಿಷ್ಠ ಬಾಂಧವ್ಯ, ಮತ್ತು ರಷ್ಯಾದ ಹಸ್ತಕ್ಷೇಪದ ವಿರುದ್ಧ ಭದ್ರತೆ ನೀಡಲಿದೆ. ಈ ವಿಸ್ತರಣೆಯೊಂದಿಗೆ ಯೂರೋ ವಲಯದ ಸದಸ್ಯರ ಸಂಖ್ಯೆ 21ಕ್ಕೆ ಏರಲಿದೆ.

## ನಾಮಿಬಿಯಾದ ವಿಂಡ್‌ಹೋಕ್ ನಗರಕ್ಕೆ ಪ್ರಧಾನಿ ಮೋದಿ ಭೇಟಿ – ಐದು ರಾಷ್ಟ್ರ ಪ್ರವಾಸದ ಅಂತಿಮ ಹಂತ



* ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಐದು ರಾಷ್ಟ್ರಗಳ ಪ್ರವಾಸದ ಅಂತಿಮ ಹಂತವಾಗಿ ನಾಮಿಬಿಯಾದ ವಿಂಡ್‌ಹೋಕ್ ನಗರಕ್ಕೆ ಆಗಮಿಸಿದ್ದಾರೆ.
* ಅವರು ನಾಮಿಬಿಯಾ ಅಧ್ಯಕ್ಷೆ ನೆಟುಂಬೋ ನಂದಿ-ದೈತ್ವಾ ನೆಟುಂಬೋ ಅವರ ಆಹ್ವಾನದ ಮೇರೆಗೆ ಈ ಪ್ರವಾಸ ಕೈಗೊಂಡಿದ್ದು, ಇದು ಭಾರತದಿಂದ ನಾಮಿಬಿಯಾಗೆ ಮೂರನೇ ಪ್ರಧಾನಿ ಮಟ್ಟದ ಭೇಟಿ.
* ವಿಂಡ್‌ಹೋಕ್‌ನ ಹೊಸಿಯಾ ಕುಟಾಕೋ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಧಾನಿ ಮೋದಿಗೆ ಅಧಿಕೃತ ಸ್ವಾಗತ ಸಿಕ್ಕಿತು. ಬಳಿಕ ಹಿಲ್ಟನ್ ಹೋಟೆಲ್‌ಗೆ ಆಗಮಿಸಿದಾಗ, ಭಾರತೀಯ ಸಮುದಾಯದಿಂದ ಉತ್ಸಾಹಭರಿತ ಸ್ವಾಗತವೂ ಲಭಿಸಿತು.
* ಭಾರತ ಹಾಗೂ ನಾಮಿಬಿಯಾ ನಡುವಿನ ಪ್ರತಿನಿಧಿ ಮಟ್ಟದ ಮಾತುಕತೆ ಸ್ಥಳೀಯ ಸಮಯದಂತೆ ಬೆಳಿಗ್ಗೆ 11ಕ್ಕೆ ನಡೆಯಲಿದೆ.
* ಇಂಧನ, ಆರೋಗ್ಯಸೇವೆ ಮತ್ತು ಔಷಧೋತ್ಪಾದನೆ ಕ್ಷೇತ್ರಗಳಲ್ಲಿ ಸಹಕಾರಕ್ಕಾಗಿ ಹಲವು ಒಪ್ಪಂದಗಳಿಗೆ ಸಹಿ ನಿರೀಕ್ಷಿಸಲಾಗಿದೆ.
* ಮೋದಿಯವರು ನಾಮಿಬಿಯಾದ ಮೊದಲ ಅಧ್ಯಕ್ಷ ಡಾ. ಸ್ಯಾಮ್ ನುಜೊಮಾ ಅವರಿಗೆ ನಮನ ಸಲ್ಲಿಸಲಿದ್ದು, ಭಾರತದೊಂದಿಗೆ ಸಂಬಂಧ ಬಲಪಡಿಸಿದ್ದಕ್ಕಾಗಿ ನಾಮಿಬಿಯಾದ ಅತ್ಯುನ್ನತ ನಾಗರಿಕ ಗೌರವವನ್ನು ಸ್ವೀಕರಿಸಲಿದ್ದಾರೆ. ನಂತರ ಅವರು ನಾಮಿಬಿಯಾ ಸಂಸತ್ತಿನಲ್ಲಿ ಭಾಷಣ ಮಾಡಲಿದ್ದಾರೆ.

## ಹರಿಯಾಣದಲ್ಲಿ ಏಷ್ಯಾದ ಅತಿದೊಡ್ಡ ಜಂಗಲ್ ಸಫಾರಿ



* ಹರಿಯಾಣ ಸರ್ಕಾರವು ಅರಾವಳಿ ಬೆಟ್ಟಗಳಲ್ಲಿ ಏಷ್ಯಾದ ಅತಿದೊಡ್ಡ ಜಂಗಲ್ ಸಫಾರಿ ನಿರ್ಮಾಣವನ್ನು ಘೋಷಿಸಿದೆ. ಜುಲೈ 6, 2025ರಂದು ಹಂಚಿಕೊಳ್ಳಲಾದ ಈ ಯೋಜನೆ ಸುಮಾರು 10,000 ಎಕರೆ ಅರಣ್ಯ ಪ್ರದೇಶವನ್ನು ಒಳಗೊಂಡಿದೆ.
* ಈ ಸಫಾರಿಯ ಮುಖ್ಯ ಗುರಿಗಳು ಪ್ರಾಣಿಗಳು ಮತ್ತು ಪ್ರಕೃತಿಯನ್ನು ರಕ್ಷಿಸುವುದು, ಪ್ರವಾಸೋದ್ಯಮವನ್ನು ಉತ್ತೇಜಿಸುವುದು ಮತ್ತು ಉದ್ಯೋಗಾವಕಾಶಗಳನ್ನು ನಿರ್ಮಿಸುವುದು.
* ಯೋಜನೆಗಾಗಿ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ, ಕೇಂದ್ರ ಸಚಿವ ಮನೋಹರ್ ಲಾಲ್ ಮತ್ತು ಪರಿಸರ ಸಚಿವ ರಾವ್ ನರಬೀರ್ ಸಿಂಗ್ ಅವರು ಗುಜರಾತ್‌ನ ಜಾಮ್ನಗರದಲ್ಲಿರುವ ವಂಟಾರಾ ವನ್ಯಜೀವಿ ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು. ಅಲ್ಲಿಯ ಸೌಲಭ್ಯದಿಂದ ಪ್ರೇರಿತವಾಗಿಯೇ ಸಫಾರಿ ರೂಪುಗೊಳ್ಳುತ್ತಿದೆ.
* ಸಫಾರಿ ಹಸಿರು ತಂತ್ರಜ್ಞಾನವನ್ನು ಆಧರಿಸಿ ನಿರ್ಮಾಣವಾಗುತ್ತದೆ. ನೈಸರ್ಗಿಕ ಪರಿಸರ, ಕಾಡುಗಳು ಮತ್ತು ಸ್ಥಳೀಯ ಸಮುದಾಯಗಳಿಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸಲಾಗುತ್ತದೆ.
* ಪ್ರವಾಸೋದ್ಯಮ, ಮಾರ್ಗದರ್ಶನ, ಹೋಟೆಲ್ ಮತ್ತು ವನ್ಯಜೀವಿ ಆರೈಕೆಯ ಮೂಲಕ ಉದ್ಯೋಗ ಸೃಷ್ಟಿಯಾಗುತ್ತದೆ. ಅರಣ್ಯ ಸಂರಕ್ಷಣೆಗೆ ಸಹಾಯವಾಗುತ್ತದೆ ಮತ್ತು ಪರಿಸರ ಪ್ರವಾಸೋದ್ಯಮ ಉತ್ತೇಜಿತವಾಗುತ್ತದೆ.
* ಮುಖ್ಯಮಂತ್ರಿ ಸೈನಿ ಈ ಯೋಜನೆಯ ಪ್ರಗತಿಯನ್ನು ನೇರವಾಗಿ ಗಮನಿಸುತ್ತಿದ್ದಾರೆ. ಇದು ಇತರ ರಾಜ್ಯಗಳಿಗೆ ಮಾದರಿಯಾಗಿದೆ ಎಂದು ಸರ್ಕಾರ ಆಶಿಸುತ್ತದೆ.

KPSCVaani

## BMW ಇಂಡಿಯಾದ CEO ಆಗಿ ಹರ್ದೀಪ್ ಸಿಂಗ್ ಬ್ರಾರ್ ನೇಮಕ



* BMW ಗ್ರೂಪ್ ಇಂಡಿಯಾ, ಶ್ರೀ ಹರ್ದೀಪ್ ಸಿಂಗ್ ಬ್ರಾರ್ ಅವರನ್ನು ಸೆಪ್ಟೆಂಬರ್ 1, 2025 ರಿಂದ ಅಧ್ಯಕ್ಷ ಹಾಗೂ CEO ಆಗಿ ನೇಮಿಸಿದೆ.
* ಈಗಿನ CEO ವಿಕ್ರಮ್ ಪವಾಹ್ ಅವರ ಸ್ಥಾನವನ್ನು ಭದ್ರಪಡಿಸಲಿದ್ದಾರೆ, ಅವರು BMW ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನ CEO ಆಗಿ ತೆರಳುತ್ತಿದ್ದಾರೆ.
* 30 ವರ್ಷಕ್ಕೂ ಹೆಚ್ಚು ಆಟೋ ಉದ್ಯಮ ಅನುಭವ ಹೊಂದಿರುವ ಶ್ರೀ ಬ್ರಾರ್, ಇತ್ತೀಚೆಗೆ ಕಿಯಾ ಇಂಡಿಯಾದಲ್ಲಿ ಮಾರಾಟ ಮತ್ತು ಮಾರ್ಕೆಟಿಂಗ್ ವಿಭಾಗದ ಹಿರಿಯ ಉಪಾಧ್ಯಕ್ಷರಾಗಿದ್ದರು.
* ಅವರು ಮಾರುತಿ, ವೋಕ್ಸ್‌ವ್ಯಾಗನ್, GM, ನಿಸ್ಸಾನ್ ಹಾಗೂ ಗ್ರೇಟ್ ವಾಲ್ ಮೋಟಾರ್ಸ್‌ನಲ್ಲಿ ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದ್ದಾರೆ.
* 2020 ರಿಂದ BMW ಇಂಡಿಯಾದ CEO ಆಗಿ ಕಾರ್ಯನಿರ್ವಹಿಸಿದ್ದ ವಿಕ್ರಮ್ ಪವಾಹ್ ಅವರು, ಕಂಪನಿಯನ್ನು ವಿದ್ಯುತ್ ವಾಹನ, ಡಿಜಿಟಲ್ ಸೇವೆ ಮತ್ತು ಗ್ರಾಹಕ ಅನುಭವದ ಕ್ಷೇತ್ರಗಳಲ್ಲಿ ಬೆಳೆಸಿದರು. ಇದೀಗ ಅವರು ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ಗೆ ಮರಳಲಿದ್ದಾರೆ.
* 2007 ರಿಂದ ಕಾರ್ಯನಿರ್ವಹಿಸುತ್ತಿರುವ BMW ಇಂಡಿಯಾ, BMW, MINI ಮತ್ತು Motorrad ಬ್ರ್ಯಾಂಡ್‌ಗಳನ್ನು ಒಳಗೊಂಡಿದೆ.
* ಚೆನ್ನೈಯಲ್ಲಿ ಉತ್ಪಾದನಾ ಘಟಕ, ಪುಣೆಯಲ್ಲಿ ವಿತರಣಾ ಕೇಂದ್ರ ಮತ್ತು ಗುರುಗ್ರಾಮ್‌ನಲ್ಲಿ ತರಬೇತಿ ಕೇಂದ್ರವನ್ನು ಹೊಂದಿದೆ. ಕಂಪನಿಯು ಭಾರತದೆಲ್ಲೆಡೆ 80+ ಡೀಲರ್‌ಶಿಪ್‌ಗಳನ್ನು ಹೊಂದಿದೆ.
* ಶ್ರೀ ಬ್ರಾರ್ ನೇತೃತ್ವದಲ್ಲಿ, BMW ಇಂಡಿಯಾ ಭಾರತದ ಪ್ರೀಮಿಯಂ ಕಾರು ಮಾರುಕಟ್ಟೆಯಲ್ಲಿ ತನ್ನ ಸ್ಥಾನವನ್ನು ಇನ್ನಷ್ಟು ಬಲಪಡಿಸಲು ಮತ್ತು ಗ್ರಾಹಕರೊಂದಿಗೆ ನಿಕಟ ಸಂಪರ್ಕ ನಿರ್ಮಿಸಲು ನಿರೀಕ್ಷಿಸಿದೆ.

## ಜನನಿಬಿಡ ಏರ್ಪೋರ್ಟ್ ಜಗತ್ತಲ್ಲೇ ದಿಲ್ಲಿಗೆ 9ನೇ ಸ್ಥಾನ




* 2024ರಲ್ಲಿ ದೆಹಲಿ ವಿಮಾನ ನಿಲ್ದಾಣ 7.7 ಕೋಟಿ ಪ್ರಯಾಣಿಕರನ್ನು ನಿರ್ವಹಿಸಿದ್ದು, ಇದು ವಿಶ್ವದ 9ನೇ ಅತ್ಯಂತ ಜನನಿಬಿಡ ವಿಮಾನ ನಿಲ್ದಾಣ ಎಂಬ ಗೌರವಕ್ಕೆ ಪಾತ್ರವಾಗಿದೆ. ಇದು 2023ರಲ್ಲಿ 10ನೇ ಸ್ಥಾನದಲ್ಲಿತ್ತು.
* ಏರ್‌ಪೋರ್ಟ್ ಕೌನ್ಸಿಲ್ ಇಂಟರ್‌ನ್ಯಾಷನಲ್ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ, ಅಮೆರಿಕದ ಅಟ್ಲಾಂಟಾ ವಿಮಾನ ನಿಲ್ದಾಣ 10.8 ಕೋಟಿ ಪ್ರಯಾಣಿಕರೊಂದಿಗೆ ಮೊದಲ ಸ್ಥಾನದಲ್ಲಿದೆ.
* ದುಬೈ (9.23 ಕೋಟಿ) ಎರಡನೇ, ಡಲ್ಲಾಸ್/ಫೋರ್ಟ್‌ವರ್ಥ್ (8.78 ಕೋಟಿ) ಮೂರನೇ ಸ್ಥಾನದಲ್ಲಿವೆ.
* 2024ರಲ್ಲಿ ಜಾಗತಿಕ ವಿಮಾನ ಪ್ರಯಾಣಿಕರ ಸಂಖ್ಯೆ 9.4 ಶತಕೋಟಿಗೆ ತಲುಪಿದ್ದು, ಇದು 2023ಕ್ಕಿಂತ ಶೇ. 8.4 ಹೆಚ್ಚು. 2019ರ ಕೊವಿಡ್ ಪೂರ್ವ ಮಟ್ಟಕ್ಕಿಂತ ಶೇ. 2.7 ಹೆಚ್ಚಳವಾಗಿದೆ. ಟಾಪ್ 20 ಪಟ್ಟಿಯಲ್ಲಿ ಅಮೆರಿಕದ 6 ವಿಮಾನ ನಿಲ್ದಾಣಗಳು ಸೇರಿವೆ.
* ವಿಮಾನಗಳ ಸಂಚಾರದ ಆಧಾರದ ಮೇಲೆ ದೆಹಲಿ ವಿಮಾನ ನಿಲ್ದಾಣ 2023ರಲ್ಲಿ 13ನೇ ಸ್ಥಾನದಲ್ಲಿದ್ದು, 2024ರಲ್ಲಿ 15ನೇ ಸ್ಥಾನಕ್ಕೆ ಇಳಿದಿದೆ.

## ನಮ್ಮ ಮೆಟ್ರೋ ಟಿಕೆಟ್ ಈಗ 9 ಆ್ಯಪ್‌ಗಳಲ್ಲಿ ಲಭ್ಯ



* ಇನ್ನು ಮುಂದೆ ಮೆಟ್ರೋ ಪ್ರಯಾಣಿಕರು ಕೇವಲ ಪೇಟಿಎಂ, ವ್ಯಾಟ್ಸಪ್, ಮತ್ತು BMRCL ಆಪ್‌ಗಳಲ್ಲಷ್ಟೇ ಅಲ್ಲದೆ, ಒಟ್ಟು 9 ಹೊಸ ಜನಪ್ರಿಯ ಆ್ಯಪ್‌ಗಳಲ್ಲಿಯೂ ಟಿಕೆಟ್ ಬುಕ್ ಮಾಡಬಹುದು.
* BMRCL ಮತ್ತು ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್ (ONDC) ಸಹಯೋಗದಿಂದ ಈ ಸೇವೆ ಆರಂಭವಾಗಿದ್ದು, ಕ್ಯೂಆರ್ ಟಿಕೆಟ್‌ಗಳು ಈಗ ಹೆಚ್ಚಿನ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ಲಭ್ಯ.
* ಬಿಎಂಆರ್‌ಸಿಎಲ್ ನಿರ್ದೇಶಕ ಎಂ. ಮಹೇಶ್ವರ ರಾವ್ ಅವರು ಈ ವ್ಯವಸ್ಥೆಯು ಶಹರದ ಒಗ್ಗಟ್ಟಿನ ಹಾಗೂ ನಗದುರಹಿತ ಸಂಚಾರಕ್ಕೆ ದಾರಿ ಹಾಕಲಿದೆ ಎಂದಿದ್ದಾರೆ. ಈಗ 8.5 ಲಕ್ಷಕ್ಕಿಂತ ಹೆಚ್ಚು ಮಂದಿ ದಿನಪತ್ರಿಯಲ್ಲಿ ಮೆಟ್ರೋ ಬಳಕೆ ಮಾಡುತ್ತಿದ್ದಾರೆ.

ಬೆಂಗಳೂರು ಮೆಟ್ರೋ ಪ್ರಯಾಣಿಕರಿಗೆ ಸುಲಭ ಮತ್ತು ಸ್ಮಾರ್ಟ್ ಟಿಕೆಟ್ ವ್ಯವಸ್ಥೆಯನ್ನು ಒದಗಿಸುವ ಉದ್ದೇಶದಿಂದ ಒನ್‌ಡಿಸಿ ಮೋಲ್ಕ ಕ್ಯೂಆರ್ ಟಿಕೆಟ್ ವ್ಯವಸ್ಥೆ ಆರಂಭಿಸಲಾಗಿದೆ. ಈ ಯೋಜನೆ ಡಿಜಿಟಲ್ ವೇದಿಕೆಯಿಂದ ಟಿಕೆಟ್ ಖರೀದಿಸಲು ಅನುಕೂಲ ಮಾಡಿಕೊಡಲಿದೆ.

ಈ ಟಿಕೆಟ್ ವ್ಯವಸ್ಥೆ ಮೂಲಕ ಪ್ರಯಾಣಿಕರು ತಮ್ಮ ಮೊಬೈಲ್ ಫೋನ್‌ಗಳಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್ ಖರೀದಿಸಬಹುದಾಗಿದೆ.

ಇದರಿಂದ ಮೆಟ್ರೋ ಸ್ಟೇಷನ್‌ಗಳಲ್ಲಿ ಬಿಗಿ, ಲೈನ್‌ಗಳು ಮತ್ತು ನಗದು ತೊಡಗಿಸುವ ಅಗತ್ಯತೆ ಕಡಿಮೆಯಾಗಲಿದೆ.

ಪ್ರಯಾಣಿಕರು ಡಿಜಿಟಲ್ ಟಿಕೆಟ್ ಮೂಲಕ ನೇರವಾಗಿ ಗೇಟ್ ಮೂಲಕ ಪ್ರವೇಶ ಪಡೆಯಬಹುದು.

*** ಹೊಸ ಸೇರ್ಪಡೆಗೊಂಡ ಆಪ್ಲಿಕೇಶನ್‌ಗಳು:**

1) ಈಜ್ ಮೈ ಟ್ರಿಪ್
2) ಹೈವೇ ಡಿಲೈಟ್
3) ಮೈಲ್ಸ್ ಅಂಡ್ ಕಿಲೋಮೀಟರ್ಸ್
4) ನಮ್ಮ ಯಾತ್ರಿ
5) ವನ್ ಟಿಕೆಟ್
6) ರಾಪಿಡೋ
7) ರೆಡ್ಬಸ್
8) ಟಮ್ಮಾಕ್

9) ಯಾತ್ರಿ – ಸಿಟಿ ಟ್ರಾವೆಲ್ ಗೈಡ್

## ಶಕ್ತಿ ಯೋಜನೆ: 500 ಕೋಟಿ ಉಚಿತ ಪ್ರಯಾಣದ ಮಹತ್ವದ ಮೈಲಿಗಲ್ಲು – 500ನೇ ಕೋಟಿ ಪ್ರಯಾಣಿಕೆಗೆ ವಿಶೇಷ ಸನ್ಮಾನ



* 'ಶಕ್ತಿ' ಯೋಜನೆ ಅಡಿಯಲ್ಲಿ ಸರ್ಕಾರಿ ಸಾರಿಗೆ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರು 500 ಕೋಟಿ ಉಚಿತ ಪ್ರಯಾಣದ ಗುರಿಯನ್ನು ಶೀಘ್ರದಲ್ಲಿ ತಲುಪುತ್ತಿದ್ದು, ಆ ಹಿನ್ನೆಲೆಯಲ್ಲಿ ವಿಶೇಷ ಕಾರ್ಯಕ್ರಮ ಆಯೋಜನೆ ಕುರಿತು ಚರ್ಚಿಸಿ ನಿರ್ಧರಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

* 2023ರ ಜೂ. 11ರಂದು ಆರಂಭಿಸಲಾದ ಶಕ್ತಿ ಯೋಜನೆ ಅಡಿ ಇದೇ ಜು. 14 ಅಥವಾ 15ಕ್ಕೆ ರಾಜ್ಯದ ಮಹಿಳೆಯರು 500 ಕೋಟಿ ಉಚಿತ ಪ್ರಯಾಣ ಮಾಡಿದ ಗುರಿ ತಲುಪಲಿದ್ದಾರೆ. ಈ ಐತಿಹಾಸಿಕ ಕ್ಷಣವನ್ನು ಸ್ಮರಣೀಯವಾಗಿಸಲು ವಿಶೇಷ ಕಾರ್ಯಕ್ರಮ ಆಯೋಜಿಸುವ ಕುರಿತು ಚಿಂತನೆಯಿದೆ. ಆ ಬಗ್ಗೆ ಮುಖ್ಯಮಂತ್ರಿ ಅವರು ಸೇರಿದಂತೆ ಇತರರೊಂದಿಗೆ ಚರ್ಚಿಸಲಾಗುವುದು. ಜತೆಗೆ 500 ಕೋಟಿಯ ಉಚಿತ ಪ್ರಯಾಣದ ಟಿಕೆಟ್ ಪಡೆಯುವ ಮಹಿಳಾ ಪ್ರಯಾಣಕಿಗೆ ವಿಶೇಷ ಬಹುಮಾನ ನೀಡುವ ಚಿಂತನೆಯಿದೆ ಎಂದು ಹೇಳಿದರು.

* ಶಕ್ತಿ ಯೋಜನೆ ಜಾರಿ ನಂತರ ಪ್ರತಿ ದಿನ 84 ಲಕ್ಷ ಇದ್ದ ಪ್ರಯಾಣಿಕರ ಸಂಖ್ಯೆ 1 ಕೋಟಿ ಮೀರಿದೆ ಎಂದು ವಿವರಿಸಿದರು. **ಈವರೆಗೆ ₹12534 ಕೋಟಿ ಮೌಲ್ಯದ ಟಿಕೆಟ್‌ಗಳು ಖರೀದಿಯಾಗಿವೆ.**

**ಸಮಾರಂಭದ ಯೋಜನೆ**

- 'ಶಕ್ತಿ' ಯೋಜನೆ ಅಡಿಯಲ್ಲಿ ಸರ್ಕಾರಿ ಸಾರಿಗೆ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರು 500 ಕೋಟಿ ಉಚಿತ ಪ್ರಯಾಣದ ಗುರಿ ಶೀಘ್ರ
- ಶೇಷ ಕಾರ್ಯಕ್ರಮ ಆಯೋಜನೆ ಕುರಿತು ಚರ್ಚಿಸಿ ನಿರ್ಧರಿಸಲಾಗುವುದು ಎಂದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ
- 2023ರ ಜೂ. 11ರಂದು ಆರಂಭಿಸಲಾದ ಶಕ್ತಿ ಯೋಜನೆ ಅಡಿ ಇದೇ ಜು. 14 ಅಥವಾ 15ಕ್ಕೆ ರಾಜ್ಯದ ಮಹಿಳೆಯರು 500 ಕೋಟಿ ಉಚಿತ ಪ್ರಯಾಣ ಮಾಡಿದ ಗುರಿ
- 500 ಕೋಟಿಯ ಉಚಿತ ಪ್ರಯಾಣದ ಟಿಕೆಟ್ ಪಡೆಯುವ ಮಹಿಳಾ ಪ್ರಯಾಣಕಿಗೆ ವಿಶೇಷ ಬಹುಮಾನ.

**ಯೋಚನೆ ಮತ್ತು ಪರಿಣಾಮ**

* ಶಕ್ತಿ ಯೋಜನೆಯ ಪ್ರಮುಖ ಗುರಿಗಳಲ್ಲಿ ಮಹಿಳೆಯರ ಸ್ವತಂತ್ರ ಸಂಚರ ಸ್ವಾತಂತ್ರ್ಯ, ಶೋಷಿತ, ಸಾಮಾಜಿಕ oportunidades ಗಳ್ಳ ವಿಸ್ತಾರ, ಹಾಗೂ ನೋಡಿ ಕಂಡಾಗಿದೆ.

* ಸಮಗ್ರ ಮಾದರಿ: ಸಾಮಾನ್ಯ ನಾಗರಿಕರಿಗೆ ಸವಾಲುಗಳನ್ನು ಎದುರಿಸಬೇಕಾಗಿದ್ದರೂ (ಉದಾಹರಣೆ: ಸಿಬ್ಬಂದಿ ಕೊರತೆ, ವಹಿವಾಟು ನೇರವಳಿಕೆ), ಯೋಜನೆಯ ಇಡೀ ಯಶಸ್ಸು ಅದರ ವ್ಯಾಪ್ತಿ, ದೈನಂದಿನ ಬಳಕೆ ಮತ್ತು ಕೇಂದ್ರ-ರಾಜ್ಯ ನಿಲುವುಗಳ ಮೆಚ್ಚುಗೆ ಕಂಡಿದೆ.

# 10 July 2025

## ಆ್ಯಪಲ್ ಕಂಪನಿಯ COO ಆಗಿ ಭಾರತ ಮೂಲದ ಸಾಬಿಹ್ ಖಾನ್ ನೇಮಕ



* ಮೊಬೈಲ್ ತಯಾರಿಕೆಯಲ್ಲಿ ಜಾಗತಿಕವಾಗಿ ಮುಂಚೂಣಿಯಲ್ಲಿರುವ ಅಮೆರಿಕದ ಆ್ಯಪಲ್ ಕಂಪನಿಯು ತನ್ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಗೆ (COO) ಭಾರತ ಮೂಲಕ ಸಾಬಿಹ್ ಖಾನ್ (58) ಅವರನ್ನು ನೇಮಕ ಮಾಡಿದೆ.

* ಕಳೆದ 30 ವರ್ಷಗಳಿಂದ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಸಾಬಿಹ್ ಖಾನ್ ಅವರು ಪ್ರಸ್ತುತ ಕಾರ್ಯನಿರ್ವಹಣಾ ವಿಭಾಗದ ಹಿರಿಯ ಉಪಾಧ್ಯಕ್ಷರಾಗಿದ್ದಾರೆ. ಈ ತಿಂಗಳ ಕೊನೆಯಲ್ಲಿ ನಿವೃತ್ತಿಯಾಗಲಿರುವ ಸಿಒಒ ಜೆಫ್ ವಿಲಿಯಮ್ಸ್ ಅವರ ಜಾಗಕ್ಕೆ ಸಾಬಿಹ್ ಖಾನ್ ಅವರು ನೇಮಕಗೊಳ್ಳುತ್ತಿದ್ದಾರೆ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

* ಜೆಫ್ ವಿಲಿಯಮ್ಸ್ ಅವರು 1995 ರಲ್ಲಿ ಆಪಲ್ನ ಖರೀದಿ ಗುಂಪಿಗೆ ಸೇರುವ ಮೊದಲು, ಅವರು GE ಪ್ಲಾಸ್ಟಿಕ್ಸ್‌ನಲ್ಲಿ ಅಪ್ಲಿಕೇಶನ್ಗಳ ಅಭಿವೃದ್ಧಿ ಎಂಜಿನಿಯರ್ ಮತ್ತು ಪ್ರಮುಖ ಖಾತೆ ತಾಂತ್ರಿಕ ನಾಯಕರಾಗಿ ಕೆಲಸ ಮಾಡಿದ್ದರು.

* 1966ರಲ್ಲಿ ಉತ್ತರ ಪ್ರದೇಶದ ಮೊರಾದಾಬಾದ್‌ನಲ್ಲಿ ಜನಿಸಿದ್ದ ಖಾನ್, ತಮ್ಮ ಶಾಲಾ ಶಿಕ್ಷಣವನ್ನು ಸಿಂಗಪುರದಲ್ಲಿ ಪೂರೈಸಿದ್ದರು. ನಂತರ ಅಮೆರಿಕದಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಉನ್ನತ ಪದವಿ ಪಡೆದಿದ್ದಾರೆ.

* 3 ದಶಕಗಳ ಕಾಲ ಆ್ಯಪಲ್‌ನಲ್ಲಿ ಸೇವೆ ಸಲ್ಲಿಸಿರುವ ಖಾನ್ ಅವರು 2019ರಲ್ಲಿ ಕಾರ್ಯನಿರ್ವಹಣಾ ವಿಭಾಗದ ಹಿರಿಯ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದರು.

* ಖಾನ್ ಅವರು ಆ್ಯಪಲ್ ಉತ್ಪನ್ನಗಳ ಜಾಗತಿಕ ಪೂರೈಕೆ ಸರಪಳಿ, ಯೋಜನೆ, ಸಂಗ್ರಹಣೆ, ಉತ್ಪಾದನೆ, ಲಾಜಿಸ್ಟಿಕ್ಸ್ ಮತ್ತು ಉತ್ಪನ್ನ ಪೂರೈಕೆಯ ಮೇಲ್ವಿಚಾರಣೆ ನಡೆಸುತ್ತಿದ್ದರು.

## ಪ್ರವಾಸೋದ್ಯಮ ಉತ್ತೇಜನೆಗೆ ಚೀನಾ ವೀಸಾ ಮುಕ್ತ ಯೋಜನೆ ಜಾರಿ



* ಚೀನಾ ಪ್ರವಾಸೋದ್ಯಮಕ್ಕೆಅಧಿಕ ಪ್ರೋತ್ಸಾಹ ನೀಡಲು, 2025ರ ಜುಲೈ 16 ರಿಂದ 74 ದೇಶಗಳಿಂದ (ಮುಂದೆ ಆಜರ್ಬೈಜಾನ್ ಸೇರಿಸಿಕೊಂಡು 75) ಪ್ರವಾಸಿಗರಿಗೆ 30 ದಿನಗಳ ವೀಸಾಮುಕ್ತ ಪ್ರವೇಶದ ಅವಕಾಶ ನೀಡುತ್ತಿದೆ . ಇದನ್ನು "ವಿಸಾ ಸರಳೀಕರಣ"

KPSCVaani

ಕ್ಕಾಗಿ ಅವರು ಮಾಡುತ್ತಿದ್ದಾರೆ – ಭೌಗೋಳಿಕ, ಸಾಂಸ್ಕೃತಿಕ, ಮತ್ತು ಆರ್ಥಿಕ ಬಲವರ್ಧನೆಯ ಉದ್ದೇಶಗಳನ್ನೊಳಗೊಂಡಿದೆ.

* ಚೀನಾ ಸರ್ಕಾರ 74 ದೇಶಗಳ ಪ್ರವಾಸಿಗರಿಗೆ ವೀಸಾವಿಲ್ಲದೇ ಪ್ರವೇಶ ನೀಡುವ ಮಹತ್ವದ ನಿರ್ಧಾರ ಕೈಗೊಂಡಿದೆ. ಇದರಿಂದ ಅವರು ಚೀನಾಕ್ಕೆ ಸುಲಭವಾಗಿ ಪ್ರವೇಶ ಪಡೆದು ಪ್ರವಾಸ ಮಾಡಬಹುದು. ಆದರೆ ಈ ಪಟ್ಟಿಯಲ್ಲಿ ಭಾರತವಿಲ್ಲ.

* ವಿದೇಶಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಉದ್ದೇಶದಿಂದ ಈ ಕ್ರಮ ಕೈಗೊಂಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಈ ಹೊಸ ನೀತಿ 2025ರ ಜುಲೈ ತಿಂಗಳಲ್ಲಿ ಜಾರಿಗೆ ಬರಲಿದೆ. ಈ ವೀಸಾರಹಿತ ಪ್ರವೇಶವು 2 ಕೋಟಿಗೂ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಲಿದೆ ಎಂದು ನಿರೀಕ್ಷಿಸಲಾಗಿದೆ.

* 2024ರಲ್ಲಿ, ವೀಸಾ ಇಲ್ಲದೆಯೇ 2 ಕೋಟಿ ವಿದೇಶಿಗರು ಚೀನಾಕ್ಕೆ ಪ್ರವೇಶ ಮಾಡಿದ್ದಾರೆ. ಇದು ಹಿಂದಿನ ವರ್ಷಕ್ಕಿಂತ ದ್ವಿಗುಣ ಪ್ರಮಾಣದಲ್ಲಿದೆ ಎಂದು ರಾಷ್ಟ್ರೀಯ ವಲಸೆ ಆಡಳಿತ ವಿಭಾಗ ತಿಳಿಸಿದೆ.

* ಸಾಮಾನ್ಯವಾಗಿ ಚೀನಾದ ಪ್ರಮುಖ ಪ್ರವೇಶ ಕಿವಾಟುಗಳಾದ ಬಿಜಿಂಗ್, ಶಾಂಘೈ, ಕ್ವಾಂಗ್ಝೌ ಮುಂತಾದ ಸ್ಥಳಗಳಲ್ಲಿ ಪ್ರವೇಶ ನೀಡಲಾಗುವುದು. ಆದರೆ ಹೊಸ ದೇಶಗಳ ಪ್ರವಾಸಿಗರನ್ನು ಸೆಳೆಯುವ ಹೊಸ ತಂತ್ರವಾಗಿ ಇದು ಪ್ರಸ್ತುತ ಚರ್ಚೆಯಲ್ಲಿದೆ.

ಮುಖ್ಯ ಅಂಶಗಳು:

# ಭಾರತ ಬಿಟ್ಟು 74 ದೇಶಗಳ ಪ್ರವಾಸಿಗರಿಗೆ ವೀಸಾವಿಲ್ಲದೇ ಪ್ರವೇಶ ನೀಡುವ ಮಹತ್ವದ ನಿರ್ಧಾರ.

# ಜರ್ಮನಿ, ಫ್ರಾನ್ಸ್, ಇಟಲಿ, ಸ್ಪೇನ್ ಮುಂತಾದ ಯುರೋಪಿನ ದೇಶಗಳು ಸೇರಿವೆ.

# ಮಧ್ಯ ಪೂರ್ವದಿಂದ: ಸೌದಿ ಅರೇಬಿಯಾ, ಓಮಾನ, ಕುವೈತ್, ಬಹರೇನ್.

# ಲ್ಯಾಟಿನ್ ಅಮೇರಿಕಾದ ಕೆಲವು ರಾಷ್ಟ್ರಗಳು.

# ಭಾರತ ಈ ಪಟ್ಟಿಗೆ ಸೇರಿಲ್ಲ.

* ಈ ನೀತಿಯ ಪರಿಣಾಮವಾಗಿ, ಹಲವಾರು ಪ್ರಮುಖ ಪ್ರವಾಸಿ ತಾಣಗಳು ವಿದೇಶಿಗರಿಂದ ಭರ್ತಿಯಾಗುತ್ತಿದ್ದು, ಪ್ರವಾಸೋದ್ಯಮದಲ್ಲಿ ನವಚೈತನ್ಯ ಮೂಡಿಸಿದೆ.

## ಇಂದು ಶುಭಾಂಶು ಶುಕ್ಲಾ ಭೂಮಿಗೆ ಮರಳುವ ಸಾಧ್ಯತೆ



* ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಸೇರಿದಂತೆ ನಾಲ್ವರು ಗಗನಯಾತ್ರಿಗಳು ಇಂದು (ಜುಲೈ 10) ಭೂಮಿಗೆ ಮರಳುವ ಸಾಧ್ಯತೆ ಇದೆ. ಆದರೆ ಈ ದಾವಣೆ ಭೂಮಿಯ ಹವಾಮಾನ ಪರಿಸ್ಥಿತಿಯ ಮೇಲೂ ಅವಲಂಬಿತವಾಗಿದೆ.

* ಇವರು ಫಾಲ್ಕನ್-9 ರಾಕೆಟ್ನ ಡ್ರ್ಯಾಗನ್ ಕ್ಯಾಪ್ಸ್ಯುಲ್ ಮೂಲಕ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ISS) ತಲುಪಿದ್ದರು. ಇದೀಗ ಇದೇ ಕ್ಯಾಪ್ಸ್ಯುಲ್ನ ಮೂಲಕ ಭೂಮಿಗೆ ಮರಳಲಿದ್ದಾರೆ.

* ಈ ನಾಲ್ವರಲ್ಲೂ ಮೂರು ಮಂದಿ ಮೊದಲ ಬಾರಿಗೆ ಬಾಹ್ಯಾಕಾಶ ಪ್ರವೇಶಿಸಿದ್ದು, 14 ದಿನಗಳ ಕಾಲ ಇವರು ಅಲ್ಲಿಯೇ ಇರುವಂತೆ ಅನೇಕ ವಿಜ್ಞಾನ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ.

* ಆಕ್ಸಿಯಂ-4 ಮಿಷನ್ನ ಭಾಗವಾಗಿ ಬಾಹ್ಯಾಕಾಶಕ್ಕೆ ತೆರಳಿರುವ ಶುಕ್ಲಾ ಇತ್ತೀಚೆಗಷ್ಟೆ ವಿದ್ಯಾರ್ಥಿಗಳ ಜೊತೆ ಹ್ಯಾಮ್ ರೇಡಿಯೋ ಮೂಲಕ ಸಂವಾದ ನಡೆಸಿದರು. ಅವರು ವಿದ್ಯಾರ್ಥಿಗಳಿಗೆ ಗಗನಯಾನವನ್ನು ಗುರಿಯಾಗಿಸಿಕೊಳ್ಳುವಂತೆ ಪ್ರೇರಣೆಯ ಸಂದೇಶ ನೀಡಿದರು.

## ಜಾಕ್ ಡೋರ್ಸಿಯಿಂದ ಹೊಸ ಮೆಸೇಜಿಂಗ್ ಆ್ಯಪ್ 'ಬಿಟ್ಚ್ಯಾಟ್' ಬಿಡುಗಡೆ




* ಟ್ವಿಟರ್ ಸಹಸಂಸ್ಥಾಪಕ ಜಾಕ್ ಡೋರ್ಸಿ ಹೊಸ ಮೆಸೇಜಿಂಗ್ ಆ್ಯಪ್ 'ಬಿಟ್ಚ್ಯಾಟ್' ಅನ್ನು ಅಭಿವೃದ್ಧಿಪಡಿಸಿದ್ದಾರೆ. ಅವರು ಇದೀಗ ಬ್ಲಾಕ್ ಕಂಪನಿಯ ಸಿಇಒ ಕೂಡಾ ಆಗಿದ್ದಾರೆ.

* ಈ ಆ್ಯಪ್ ಇಂಟರ್ನೆಟ್, ವೈಫೈ, ಸರ್ವರ್, ಫೋನ್ ನಂಬರ್ ಅಥವಾ ಇಮೇಲ್ ಇಲ್ಲದೆಯೇ ಕಾರ್ಯನಿರ್ವಹಿಸುತ್ತದೆ. ಕೇವಲ ಬ್ಲೂಟೂಥ್ನ ಆಧಾರದಲ್ಲಿ ಬಳಕೆದಾರರು ಪರಸ್ಪರ ಸಂದೇಶಗಳನ್ನು ವಿನಿಮಯ ಮಾಡಿಕೊಳ್ಳಬಹುದು.

* ಸಾಮಾನ್ಯವಾಗಿ ಬ್ಲೂಟೂಥ್ನಿಂದ ಸಮೀಪದ ಸಾಧನಗಳೊಂದಿಗೆ ಮಾತ್ರ ಸಂಪರ್ಕ ಸಾಧ್ಯವಾದರೂ, ಈ ಆ್ಯಪ್ ದೂರದಲ್ಲಿರುವ ಸಾಧನಗಳಿಗೂ ಸಂಪರ್ಕ ಸಾಧಿಸಿ ಸಂದೇಶ ಕಳಿಸಲು ಸಹಾಯ ಮಾಡುತ್ತದೆ.

* ಇದು ಇಂಟರ್ನೆಟ್ ಇಲ್ಲದ ಪರಿಸ್ಥಿತಿಗಳಲ್ಲಿ ಕೂಡ ಸಂಪರ್ಕ ಸಾಧಿಸಲು ಉಪಯುಕ್ತವಾಗಬಹುದು. ಮುಂದಿನ ಹಂತದಲ್ಲಿ ವೈಫೈ ಆಧಾರಿತ ವೇಗದ ಮೆಸೇಜಿಂಗ್ ಅಭಿವೃದ್ಧಿಯ ಮೇಲೂ ಕೆಲಸ ನಡೆಯುತ್ತಿದೆ.

## ತ್ರಿಭಾಷಾ ನೀತಿಗೆ ವಿರೋಧ: ದ್ವಿಭಾಷಾ ನೀತಿ ಜಾರಿಗೊಳಿಸಲು ಆಗ್ರಹ



* ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ.ನಾರಾಯಣಗೌಡ ಬಣ) ಚಾಮರಾಜನಗರದ ಜಿಲ್ಲಾಡಳಿತ ಭವನದ ಮುಂದೆ ತ್ರಿಭಾಷಾ ನೀತಿಗೆ ವಿರೋಧಿಸಿ ಪ್ರತಿಭಟನೆ ನಡೆಸಿತು. ಇವರು ರಾಜ್ಯದಲ್ಲಿ ತ್ರಿಭಾಷಾ ನೀತಿಗೆ ಬದಲು ದ್ವಿಭಾಷಾ ನೀತಿ ಜಾರಿಗೆ ಒತ್ತಾಯಿಸಿದರು.

* ಕರವೇ ಜಿಲ್ಲಾಧ್ಯಕ್ಷ ಮಂಜೇಶ್ ಎಚ್.ಎನ್. ಮಾತನಾಡಿ, ರಾಜ್ಯ ಪಠ್ಯಕ್ರಮದಲ್ಲಿ ಕನ್ನಡ ಪ್ರಥಮ ಭಾಷೆ, ಇಂಗ್ಲೀಷ್ ದ್ವಿತೀಯ ಭಾಷೆ, ಹಿಂದಿ ತೃತೀಯ ಭಾಷೆ ಎಂದು ಕಲಿಸಲಾಗುತ್ತಿದೆ.

KPSCVaani

* ಆದರೆ ಹಿಂದಿ ಕಲಿಕೆಗೆ ವಿದ್ಯಾರ್ಥಿಗಳ ಮೇಲೆ ಅನಗತ್ಯ ಒತ್ತಡ ಇದ್ದು, 2024 ಮತ್ತು 2025ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಹಿಂದಿ ವಿಷಯದಲ್ಲಿ ಅನುತ್ತೀರ್ಣರಾಗಿದ್ದಾರೆ ಎಂದು ಆಕ್ಷೇಪಿಸಿದರು.
* ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಭಾಗ್ಯಲಕ್ಷ್ಮೀ, ತಮಿಳುನಾಡು ಮತ್ತು ಮಹಾರಾಷ್ಟ್ರ ದ್ವಿಭಾಷಾ ನೀತಿಯನ್ನು ಅನುಸರಿಸುತ್ತಿರುವುದನ್ನು ಉದಾಹರಿಸಿ, ಕರ್ನಾಟಕದಲ್ಲೂ ಕನ್ನಡ ಮತ್ತು ಇಂಗ್ಲೀಷ್‌ಗೆ ಆದ್ಯತೆ ನೀಡುವ ದ್ವಿಭಾಷಾ ನೀತಿ ಜಾರಿಗೆ ತರಬೇಕೆಂದು ಒತ್ತಾಯಿಸಿದರು.
* ಬಳಿಕ, ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಕರವೇನ ಹಲವಾರು ನಾಯಕರು ಮತ್ತು ಸದಸ್ಯರು ಭಾಗವಹಿಸಿದ್ದರು.

## ಪ್ರಧಾನಿ ಮೋದಿಗೆ ನಮೀಬಿಯಾದ ಅತ್ಯುನ್ನತ ನಾಗರಿಕ ಗೌರವ



* ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ನಮೀಬಿಯಾದ ಅತ್ಯುನ್ನತ ನಾಗರಿಕ ಗೌರವವಾದ "ಆರ್ಡರ್ ಆಫ್ ದಿ ಮೋಸ್ಟ್ ಏನ್ಸಿಯೆಂಟ್ ವೆಲ್ವಿಟ್ಚಿಯಾ ಮಿರಾಬಿಲಿಸ್" ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಅವರು ಈ ಗೌರವವನ್ನು ಭಾರತ ಮತ್ತು ನಮೀಬಿಯಾ ದೇಶಗಳ ಜನತೆಗೆ ಅರ್ಪಿಸಿದ್ದಾರೆ.
* ಪ್ರಶಸ್ತಿ ಸ್ವೀಕರಿಸಿದ ಪ್ರಧಾನಿ ಮೋದಿ, ಇದನ್ನು ತಮ್ಮ ಜೀವನದ ಹೆಮ್ಮೆಪಡುವ ಕ್ಷಣವೆಂದು ಹೇಳಿದ್ದು, ನಮೀಬಿಯಾ ಸರ್ಕಾರ ಹಾಗೂ ಜನರಿಗೆ ಹೃತ್ಪೂರ್ವಕ ಕೃತಜ್ಞತೆ ವ್ಯಕ್ತಪಡಿಸಿದರು.
* "ಈ ಗೌರವವನ್ನು ನಾನು 140 ಕೋಟಿ ಭಾರತೀಯರ ಪರವಾಗಿ ವಿನಮ್ರವಾಗಿ ಸ್ವೀಕರಿಸುತ್ತೇನೆ" ಎಂದು ಹೇಳಿದರು.
* ಭಾರತ-ನಮೀಬಿಯಾ ನಡುವಿನ ದೀರ್ಘಕಾಲದ ಸ್ನೇಹವನ್ನು ಪ್ರಮುಖವಾಗಿ ಉಲ್ಲೇಖಿಸಿದ ಮೋದಿ, ಈ ಸಂಬಂಧ ರಾಜಕೀಯವಲ್ಲದೇ ಪರಸ್ಪರ ಹೋರಾಟ, ನಂಬಿಕೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಿಂದ ಬೆಳೆದದ್ದೆಂದು ಹೇಳಿದರು.
* ಭವಿಷ್ಯದಲ್ಲಿಯೂ ಸಹ ಎರಡೂ ದೇಶಗಳು ಅಭಿವೃದ್ಧಿಯ ಹಾದಿಯಲ್ಲಿ ಕೈಗೂಡಿಸಿಕೊಳ್ಳುತ್ತವೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

## ಮುಂದಿನ ವರ್ಷ ಕರ್ನಾಟಕಕ್ಕೆ ಮೊದಲ ಸಮುದ್ರ ಆಂಬುಲೆನ್ಸ್




* ರಾಜ್ಯದ ಬಹುನಿರೀಕ್ಷಿತ ಸಮುದ್ರ ಆಂಬುಲೆನ್ಸ್ ಯೋಜನೆ ಮುಂದಿನ ವರ್ಷ ಸಾಕಾರಗೊಳ್ಳಲಿದೆ. ಮೀನುಗಾರಿಕೆ ಇಲಾಖೆ 7.85 ಕೋಟಿ ರೂ. ವೆಚ್ಚದಲ್ಲಿ 800 ಎಚ್‌ಪಿ ಸಾಮರ್ಥ್ಯದ ಆಂಬುಲೆನ್ಸ್ ನಿರ್ಮಾಣಕ್ಕೆ ಮುಂದಾಗಿದೆ.
* ಈ ಆಂಬುಲೆನ್ಸ್ ನಲ್ಲಿ ಅಗ್ನಿಶಾಮಕ 4-5 ಹಾಸಿಗೆಗಳು, ಅರೆವೈದ್ಯಕೀಯ ಸಿಬ್ಬಂದಿ, ಆಕ್ಸಿಜನ್ ಘಟಕ, ಶವಾಗಾರ, ಸ್ಟ್ರೆಚರ್, ವ್ಯವಸ್ಥೆ, ಲೈಫ್ ಜಾಕೆಟ್‌ಗಳು ಹಾಗೂ GPS ಹೊಂದಿರಲಿದೆ. ಬೋಟ್‌ಗಳಲ್ಲಿ ತೊಂದರೆ ಎದುರಿಸುವ ಮೀನುಗಾರರಿಗೆ ತಕ್ಷಣ ನೆರವು ನೀಡುವುದು ಉದ್ದೇಶ.
* ಮಾಲ್ಡೀವ್ಸ್ ಹಾಗೂ ಕೇರಳ ಮಾದರಿಯಲ್ಲಿ ತಯಾರಾಗುವ ಈ ಆಂಬುಲೆನ್ಸ್ ಬಗ್ಗೆ ಅಧ್ಯಯನ ನಡೆದಿದ್ದು, 2024-25 ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಘೋಷಿಸಿದ್ದಾರೆ. ರಾಹುಲ್ ಗಾಂಧಿ ನೀಡಿದ ಭರವಸೆ ಈಡೇರಿಸುವ ನಿಟ್ಟಿನಲ್ಲಿ ಯೋಜನೆ ಆರಂಭವಾಗಿದೆ.
* ಕಾರ್ಯಾದೇಶ ಮುಂದಿನ ವಾರ ಜಾರಿಗೆ ಬರುವ ಸಾಧ್ಯತೆ ಇದೆ. ಏಳು ತಿಂಗಳಲ್ಲೇ ಆಂಬುಲೆನ್ಸ್ ಸಿದ್ಧವಾಗುವ ನಿರೀಕ್ಷೆ ಇದೆ. ಮಲ್ಪೆ ಅಥವಾ ಮಂಗಳೂರು ಬಂದರುಗಳಿಂದ ಕಾರ್ಯಾಚರಿಸಲಿದೆ.

## ಏಷ್ಯಾದ ಹಿರಿಯ ಆನೆ ವತ್ಸಲಾ ನಿಧನ



* ಪನ್ನಾ ಹುಲಿ ಅಭಯಾರಣ್ಯದಲ್ಲಿ ವಾಸಿಸುತ್ತಿದ್ದ ಏಷ್ಯಾದ ಹಿರಿಯ ಆನೆ ವತ್ಸಲಾ ಮಂಗಳವಾರ(ಜುಲೈ 08) ಮಧ್ಯಾಹ್ನ ಮೃತಪಟ್ಟಿದೆ. ಮರುಳು ತುಂಬಿಸುವ ಈ ಆನೆಗೆ 100 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿತ್ತು.
* ಅವಳನ್ನು 1971ರಲ್ಲಿ ಕೇರಳದ ನೀಲಂಬೂರಿನಿಂದ ಮಧ್ಯಪ್ರದೇಶಕ್ಕೆ ತರಲಾಗಿತ್ತು. ಮೊದಲು ನರ್ಮದಾಪುರಂನಲ್ಲಿ ಇಟ್ಟು, ಬಳಿಕ ಪನ್ನಾ ಹುಲಿ ಅಭಯಾರಣ್ಯದ ಹಿನೌಟಾ ಶಿಬಿರಕ್ಕೆ ಸ್ಥಳಾಂತರಿಸಲಾಯಿತು.
* ಇತ್ತೀಚೆಗೆ ಶಾರೀರಿಕ ಅಸ್ವಸ್ಥತೆ ಹಾಗೂ ಮುಂಭಾಗದ ಕಾಲು ಬೆರಳ ಉಗುರು ಗಾಯಗಳಿಂದ ಬಳಲುತ್ತಿದ್ದ ವತ್ಸಲಾ, ಮಧ್ಯಾಹ್ನ 1.30ರ ವೇಳೆಗೆ ಕೊನೆಯುಸಿರೆಳೆದಳು. ಅವಳನ್ನು 'ದಾದಿ' ಅಥವಾ 'ದಾಯಿ ಮಾ' ಎಂದು ಪ್ರೀತಿಯಿಂದ ಕರೆಯಲಾಗುತ್ತಿತ್ತು.
* ಅಂತಿಮ ವರ್ಷಗಳಲ್ಲಿ ವತ್ಸಲಾಳಿಗೆ ಮೃದುವಾದ ಆಹಾರ, ಗಂಜಿ ಮತ್ತು ಸ್ನಾನ ಸೇವೆಗಳನ್ನು ನಿತ್ಯ ನೀಡಲಾಗುತ್ತಿತ್ತು. ವತ್ಸಲಾ, ಪ್ರವಾಸಿಗರಿಗೆ ಆಕರ್ಷಣೆಯಾಗಿದ್ದಷ್ಟೇ ಅಲ್ಲ, ಇತರ ಆನೆಗಳಿಗೆ ನಾಯಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಳು.
* ಅಂತ್ಯಕ್ರಿಯೆಯನ್ನು ಪನ್ನಾ ಅಭಯಾರಣ್ಯದ ಸಿಬ್ಬಂದಿ ಗೌರವದೊಂದಿಗೆ ನೆರವೇರಿಸಿದರು.

## ಕಸಾಪದ ಗೌರವ ಕೋಶಾಧ್ಯಕ್ಷರಾಗಿ ಡಿ.ಆರ್. ವಿಜಯ್ ಕುಮಾರ್ ಆಯ್ಕೆ



* ಮಾಜಿ ಕೆನರಾ ಬ್ಯಾಂಕ್ ಡಿವಿಜನಲ್ ಮ್ಯಾನೇಜರ್ ಡಿ.ಆರ್. ವಿಜಯ್ ಕುಮಾರ್ ಬುಧವಾರ(ಜುಲೈ 09) ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ನೂತನ ಗೌರವ ಕೋಶಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಈ ಸಮಾರಂಭವು ಕಸಾಪದ ಕೇಂದ್ರ ಕಚೇರಿಯಲ್ಲಿ ನಡೆಯಿತು.

* ವಿಜಯ್ ಕುಮಾರ್ ಅವರು ಬ್ಯಾಂಕಿಂಗ್ ಕ್ಷೇತ್ರದಲ್ಲಿ 38 ವರ್ಷಗಳ ಕಾಲ ಹಣಕಾಸು ಮತ್ತು ಆಡಳಿತಾತ್ಮಕ ಜವಾಬ್ದಾರಿಗಳನ್ನು ನಿಭಾಯಿಸಿ ಅಪಾರ ಅನುಭವ ಹೊಂದಿದ್ದಾರೆ.

* ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ನಿಷ್ಠೆಯುಳ್ಳ ವಿಜಯ್ ಕುಮಾರ್ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ.

* ಕಸಾಪ ನಿಬಂಧನೆ 9(3) ಅಡಿಯಲ್ಲಿ ಮಾನ್ಯ ಅಧ್ಯಕ್ಷರು ಹೊಂದಿರುವ ಅಧಿಕಾರದಡಿ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ಅವರಿಂದ ವಿಜಯ್ ಕುಮಾರ್ ಅವರನ್ನು ಗೌರವ ಕೋಶಾಧ್ಯಕ್ಷರಾಗಿ ನಾಮನಿರ್ದೇಶನ ಮಾಡಲಾಯಿತು.

## ಬೆಂಗಳೂರಿನಲ್ಲಿ ಎರಡು ದಿನಗಳ ಕ್ವಾಂಟಮ್ ಇಂಡಿಯಾ ಸಮಾವೇಶ




* ಕ್ವಾಂಟಮ್ ತಂತ್ರಜ್ಞಾನ ಅಭಿವೃದ್ಧಿಗೆ ಬೆಂಗಳೂರು ಸೂಕ್ತ ಸೌಕರ್ಯಗಳನ್ನು ಹೊಂದಿರುವ ಹಿನ್ನೆಲೆಯಲ್ಲಿ ಜುಲೈ 31 ಮತ್ತು ಆಗಸ್ಟ್ 1 ರಂದು 'ಕ್ವಾಂಟಮ್ ಇಂಡಿಯಾ ಬೆಂಗಳೂರು ಸಮ್ಮೇಳನ' ಆಯೋಜಿಸಲಾಗಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಹೇಳಿದ್ದಾರೆ.

* ಇದು ದೇಶದಲ್ಲೇ ಮೊದಲ ಬಾರಿಗೆ ನಡೆಯುತ್ತಿರುವ ಸಮಾವೇಶವಾಗಿದ್ದು, ಮೊದಲ ದಿನ ನೊಬೆಲ್ ಪುರಸ್ಕೃತರಾದ ಪ್ರೊ. ಡಂಕನ್ ಹಲ್ಡಾನೆ ಮತ್ತು ಪ್ರೊ. ಡೇವಿಡ್ ಗ್ರಾಸ್ ಮುಖ್ಯ ಭಾಷಣ ಮಾಡಲಿದ್ದಾರೆ.

* ಸಮಾವೇಶದಲ್ಲಿ ಕ್ವಾಂಟಮ್ ಕಂಪ್ಯೂಟಿಂಗ್, ಫೈನಾನ್ಸ್, ಹೆಲ್ತ್ ಕೇರ್, ಸೆಕ್ಯೂರಿಟಿ, ಹಾರ್ಡ್ವೇರ್ ಮತ್ತು ಆರ್ಟ್ ಕ್ಷೇತ್ರಗಳಲ್ಲಿ ತಜ್ಞರಿಂದ ಮಾಹಿತಿ ವಿನಿಮಯ ನಡೆಯಲಿದೆ.

* ರಾಜ್ಯ ಸರ್ಕಾರ ಕರ್ನಾಟಕವನ್ನು ಕ್ವಾಂಟಮ್ ತಂತ್ರಜ್ಞಾನದಲ್ಲಿ ಮುಂಚೂಣಿ ರಾಜ್ಯವನ್ನಾಗಿ ರೂಪಿಸಲು ಬದ್ಧವಾಗಿದೆ. ಈ ದಿಕ್ಕಿನಲ್ಲಿ 'ಕರ್ನಾಟಕ ಕ್ವಾಂಟಮ್ ಕ್ರಿಯಾ ಯೋಜನೆ' ರೂಪಿಸಲಾಗುತ್ತಿದ್ದು, ತಜ್ಞರನ್ನೊಳಗೊಂಡ ಕಾರ್ಯಪಡೆ ರಚನೆಗೂ ಸಿದ್ಧತೆ ನಡೆಯುತ್ತಿದೆ.

* ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಏಕರೂಪ್ ಕೌರ್, ಕೆಸ್ಟೆಪ್ಸ್ ನಿರ್ದೇಶಕ ಸದಾಶಿವ ಪ್ರಭು ಹಾಗೂ ಸಮ್ಮೇಳನದ ಸಂಚಾಲಕರಾದ ಪ್ರೊ. ಅರಿಂದಮ್ ಘೋಷ್ ಮತ್ತು ಪ್ರೊ. ಅಕ್ಷಯ್ ನಾಯ್ಕ್ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ.

# 11 July 2025

## ನಗರ ಪ್ರದೇಶದ ಬಡ ಮಹಿಳೆಯರ ಸಬಲೀಕರಣಕ್ಕಾಗಿ ಆಂಧ್ರಪ್ರದೇಶದ 'ಡಿಜಿ-ಲಕ್ಷ್ಮಿ' ಯೋಜನೆ ಪ್ರಾರಂಭ




* ನಗರ ಪ್ರದೇಶದ ಬಡ ಮಹಿಳೆಯರು ಡಿಜಿಟಲ್ ಸೇವಾ ಪೂರೈಕೆದಾರರಾಗಲು ಸಹಾಯ ಮಾಡಲು ಆಂಧ್ರಪ್ರದೇಶ ಸರ್ಕಾರ 'ಡಿಜಿ-ಲಕ್ಷ್ಮಿ' ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಿದೆ.

* ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಯುಎಲ್ಬಿ) 9,034 ಸಾಮಾನ್ಯ ಸೇವಾ ಕೇಂದ್ರಗಳನ್ನು (ಸಿಎಸ್ಸಿ) ಸ್ಥಾಪಿಸಲು ರಾಜ್ಯ ಯೋಜಿಸಿದೆ. ಡಿಜಿಟಲ್ ಉದ್ಯೋಗಗಳು ಮತ್ತು ಮಹಿಳಾ ನೇತೃತ್ವದ ವ್ಯವಹಾರಗಳನ್ನು ಉತ್ತೇಜಿಸಲು ಇದು ಒಂದು ಪ್ರಮುಖ ಹೆಜ್ಜೆಯಾಗಿದೆ.

* ಸ್ವ-ಸಹಾಯ ಗುಂಪುಗಳ (ಎಸ್ಎಚ್ಜಿ) ಮಹಿಳೆಯರು ಸಣ್ಣ ವ್ಯಾಪಾರ ಮಾಲೀಕರಾಗಲು ಸಹಾಯ ಮಾಡಲು ಡಿಜಿ-ಲಕ್ಷ್ಮಿ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ.

* ಈ ಯೋಜನೆಯು 'ಒಂದು ಕುಟುಂಬ, ಒಂದು ಉದ್ಯಮಿ' (OF-OE) ಎಂಬ ದೊಡ್ಡ ಯೋಜನೆಯ ಭಾಗವಾಗಿದೆ, ಇದು ಮಹಿಳೆಯರು ಉದ್ಯಮಿಗಳಾಗಲು ಬೆಂಬಲ ನೀಡುವ ಗುರಿಯನ್ನು ಹೊಂದಿದೆ.

* ಪ್ರಮಾಣೀಕೃತ 'ಎಟಿಎಂ ಕಿಯೋಸ್ಕ್‌ಗಳು' ಎಂದು ವಿನ್ಯಾಸಗೊಳಿಸಲಾದ ಪ್ರತಿ ಕೇಂದ್ರವು ಸುಮಾರು 250 ಸಾರ್ವಜನಿಕ ಸೇವೆಗಳನ್ನು ಒದಗಿಸುತ್ತದೆ.

* 21–40 ವರ್ಷ ವಯಸ್ಸಿನ ಸ್ವ-ಸಹಾಯ ಗುಂಪು ಮಹಿಳೆಯರು, ಪದವಿ, ಕನಿಷ್ಠ ಮೂರು ವರ್ಷಗಳ ಸಕ್ರಿಯ ಸ್ವ-ಸಹಾಯ ಗುಂಪು ಸದಸ್ಯತ್ವ ಮತ್ತು ಸಾಕಷ್ಟು ತಾಂತ್ರಿಕ ಅರ್ಹತೆಯೊಂದಿಗೆ, ಈ ಕೇಂದ್ರಗಳನ್ನು ನಿರ್ವಹಿಸಲು ಅರ್ಹರಾಗಿರುತ್ತಾರೆ.

* ಈ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು G.O. MEPMA ಯ ಮಿಷನ್ ನಿರ್ದೇಶಕರಿಗೆ ಅಧಿಕಾರ ನೀಡಿದೆ. MEPMA ತರಬೇತಿ ಮತ್ತು ಆರ್ಥಿಕ ಬೆಂಬಲವನ್ನು ಒದಗಿಸುತ್ತದೆ, ಮಹಿಳೆಯರು ತಮ್ಮ ಕೇಂದ್ರಗಳನ್ನು ಸ್ಥಾಪಿಸಲು ₹2 ರಿಂದ ₹2.5 ಲಕ್ಷ ಸಾಲಗಳನ್ನು ಪಡೆಯಲು ಅನುವು ಮಾಡಿಕೊಡುತ್ತದೆ.




## ಅಸ್ಸಾಂನಲ್ಲಿ ಗಾರ್ಸಿನಿಯಾ ಕುಸುಮೆ ಎಂಬ ಹೊಸ ಮರ ಪ್ರಭೇದ ಪತ್ತೆ



* ಅಸ್ಸಾಂನ ಬಕ್ಸಾ ಜಿಲ್ಲೆಯಲ್ಲಿ ಗಾರ್ಸಿನಿಯಾ ಕುಸುಮೆ ಎಂಬ ಹೊಸ ಮರ ಪ್ರಭೇದ ಪತ್ತೆಯಾಗಿದೆ. ಗಾರ್ಸಿನಿಯಾ ಕುಲದ ಭಾಗವಾಗಿರುವ ಈ ಮರವನ್ನು ಹಿರಿಯ ಸಸ್ಯಶಾಸ್ತ್ರಜ್ಞ ಜತೀಂದ್ರ ಶರ್ಮಾ ಕಂಡುಹಿಡಿದರು ಮತ್ತು ಅವರ ದಿವಂಗತ ತಾಯಿ ಕುಸುಮ್ ದೇವಿ ಅವರ ಸ್ಮರಣಾರ್ಥ ಇದಕ್ಕೆ ಹೆಸರಿಡಲಾಗಿದೆ.

* ಈ ಆವಿಷ್ಕಾರವು ಭಾರತದ ಸಸ್ಯಶಾಸ್ತ್ರೀಯ ವೈವಿಧ್ಯತೆಗೆ ಸೇರ್ಪಡೆಯಾಗುವುದರಿಂದ ಮತ್ತು ಅಸ್ಸಾಂನ ಶ್ರೀಮಂತ ಸಸ್ಯ ಪರಂಪರೆಯನ್ನು ಎತ್ತಿ ತೋರಿಸುವುದರಿಂದ ಇದು ಮುಖ್ಯವಾಗಿದೆ.

* ಅಸ್ಸಾಂನ ಬಕ್ಸಾ ಜಿಲ್ಲೆಯ ಬಮುನ್ಬರಿಯಲ್ಲಿ ಏಪ್ರಿಲ್ 2025 ರಲ್ಲಿ ನಡೆದ ಸಸ್ಯ ಸಮೀಕ್ಷೆಯ ಸಮಯದಲ್ಲಿ ಈ ಪ್ರಭೇದ ಕಂಡುಬಂದಿದೆ. ಅಸ್ಸಾಂನ ರಾಜ್ಯ ತಜ್ಞರ ಮೌಲ್ಯಮಾಪನ ಸಮಿತಿಯ ಅಧ್ಯಕ್ಷರಾಗಿರುವ ಸಸ್ಯಶಾಸ್ತ್ರಜ್ಞ ಜತೀಂದ್ರ ಶರ್ಮಾ, ಸ್ಥಳೀಯವಾಗಿ ಥೋಯಿಕೋರ ಎಂದು ಕರೆಯಲ್ಪಡುವ ಈ ಮರದ ಮಾದರಿಯನ್ನು ಸಂಗ್ರಹಿಸಿದರು.

* ಒಣಗಿಸುವುದು ಮತ್ತು ಒತ್ತುವಂತಹ ಹರ್ಬೇರಿಯಂ ವಿಧಾನಗಳನ್ನು ಬಳಸಿಕೊಂಡು ಸಸ್ಯವನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಲಾಯಿತು. ಅದರ ವಿಶೇಷ ಲಕ್ಷಣಗಳನ್ನು ಗುರುತಿಸಿದ ನಂತರ, ಇದು ಹೊಸ ಜಾತಿ ಎಂದು ದೃಢಪಡಿಸಲಾಯಿತು.

* ಶ್ರೀ ಶರ್ಮಾ ಅವರು ಹೊಸ ಸಸ್ಯಕ್ಕೆ ಕುಟುಂಬದ ಸದಸ್ಯರ ಹೆಸರಿಡುತ್ತಿರುವುದು ಇದು ನಾಲ್ಕನೇ ಬಾರಿ. ಇದಕ್ಕೂ ಮೊದಲು ಅವರು ತಮ್ಮ ಮಗಳು, ಪತ್ನಿ ಮತ್ತು ತಂದೆಯ ಹೆಸರನ್ನು ಸಸ್ಯಗಳಿಗೆ ಇಟ್ಟರು. ಇದು ಅವರ ಹತ್ತಿರದ ಸಂಬಂಧಿಗಳ ಹೆಸರನ್ನು ನಾಲ್ಕು ವಿಭಿನ್ನ ಪ್ರಭೇದಗಳಿಗೆ ಹೆಸರಿಸಿದ ಮೊದಲ ಭಾರತೀಯ ಸಸ್ಯಶಾಸ್ತ್ರಜ್ಞ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

* ಗಾರ್ಸಿನಿಯಾ ಕುಸುಮೆ ಎಂಬುದು 18 ಮೀಟರ್‌ಗಳಷ್ಟು ಎತ್ತರದ ನಿತ್ಯಹರಿದ್ವರ್ಣ ಮರವಾಗಿದ್ದು, ಇದು ಫೆಬ್ರವರಿ ಮತ್ತು ಏಪ್ರಿಲ್ ನಡುವೆ ಅರಳುತ್ತದೆ ಮತ್ತು ಇದರ ಹಣ್ಣುಗಳು ಮೇ ನಿಂದ ಜೂನ್‌ವರೆಗೆ ಹಣ್ಣಾಗುತ್ತವೆ. ಈ ಸಸ್ಯವು ಇತರ ಗಾರ್ಸಿನಿಯಾ ಮರಗಳಂತೆಯೇ ಕಾಣುತ್ತದೆ ಆದರೆ ವಿಭಿನ್ನ ಹೂವು ಮತ್ತು ಹಣ್ಣಿನ ವೈಶಿಷ್ಟ್ಯಗಳನ್ನು ಹೊಂದಿದೆ.

* ಈ ಹಣ್ಣು ಕಪ್ಪು ರಾಳವನ್ನು ಹೊಂದಿರುತ್ತದೆ ಮತ್ತು ಇದನ್ನು ಸ್ಥಳೀಯ ಆಹಾರ ಮತ್ತು ಔಷಧದಲ್ಲಿ ಬಳಸಲಾಗುತ್ತದೆ. ಜನರು ಒಣಗಿದ ತಿರುಳನ್ನು ತಂಪಾಗಿಸುವ ಪಾನೀಯವನ್ನು ತಯಾರಿಸಲು ಅಥವಾ ಮೀನಿನ ಮೇಲೋಗರಗಳೊಂದಿಗೆ ಬೆರೆಸಲು ಬಳಸುತ್ತಾರೆ. ಇದು ಮಧುಮೇಹ ಮತ್ತು ಭೇದಿಗೆ ಸಹಾಯ ಮಾಡುತ್ತದೆ ಎಂದು ನಂಬಲಾಗಿದೆ.

* ಭಾರತದಲ್ಲಿ ಕಂಡುಬರುವ 33 ಪ್ರಭೇದಗಳಲ್ಲಿ ಅಸ್ಸಾಂ 12 ಗಾರ್ಸಿನಿಯಾ ಪ್ರಭೇದಗಳು ಮತ್ತು 3 ಪ್ರಭೇದಗಳಿಗೆ ನೆಲೆಯಾಗಿದೆ. ಈ ಆವಿಷ್ಕಾರವು ಅಸ್ಸಾಂ ಹೊಸ ಸಸ್ಯ ಪ್ರಭೇದಗಳಿಗೆ ಹೇಗೆ ತಾಣವಾಗಿ ಮುಂದುವರೆದಿದೆ ಎಂಬುದನ್ನು ತೋರಿಸುತ್ತದೆ.

* ಈ ಸಂಶೋಧನೆಗಳನ್ನು ಸಸ್ಯ ವರ್ಗೀಕರಣದ ಅಂತರರಾಷ್ಟ್ರೀಯ ಜರ್ನಲ್ ಫೆಡ್ಡೆಸ್ ರೆಪರ್ಟೋರಿಯಂನಲ್ಲಿ ಪ್ರಕಟಿಸಲಾಗಿದೆ. ಮುಂಬೈನ ಭಾಭಾ ಪರಮಾಣು ಸಂಶೋಧನಾ ಕೇಂದ್ರದ ಹುಸೇನ್ ಎ. ಬರ್ಭುಯ್ಯಾ ಅವರು ಶ್ರೀ ಶರ್ಮಾ ಅವರೊಂದಿಗೆ ಈ ಅಧ್ಯಯನವನ್ನು ಸಹ-ಲೇಖಕರಾಗಿದ್ದಾರೆ.

## 11 ಜುಲೈ 2025: ವಿಶ್ವ ಜನಸಂಖ್ಯಾ ದಿನ




* ಪ್ರತಿ ವರ್ಷ ಜುಲೈ 11 ರಂದು ವಿಶ್ವ ಜನಸಂಖ್ಯಾ ದಿನವನ್ನು ಆಚರಿಸಲಾಗುತ್ತದೆ. ವೇಗವಾಗಿ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಅದರ ಪರಿಣಾಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶವಾಗಿದೆ.

* **2025ರ ಧ್ಯೇಯವಾಕ್ಯ (ಥೀಮ್): "ನ್ಯಾಯಯುತ ಮತ್ತು ಭರವಸೆಯ ಜಗತ್ತಿನಲ್ಲಿ ಯುವಜನರು ಬಯಸುವ ಕುಟುಂಬಗಳನ್ನು ರಚಿಸಲು ಅವರನ್ನು ಸಬಲೀಕರಣಗೊಳಿಸುವುದು"** ಈ ಥೀಮ್ ಯುವಜನರಿಗೆ ಕುಟುಂಬ ಯೋಜನೆ ಕುರಿತು ಸಜ್ಜನ ಮಾಹಿತಿ ಮತ್ತು ಆಯ್ಕೆಗಳನ್ನು ನೀಡುವತ್ತ ಗಮನಹರಿಸುತ್ತದೆ.

* ಜನಸಂಖ್ಯೆ ಹೆಚ್ಚಳದ ಪರಿಣಾಮವಾಗಿ ವಸತಿ, ಆರೋಗ್ಯ, ಶಿಕ್ಷಣ, ಪರಿಸರ, ಉದ್ಯೋಗಾವಕಾಶದ ಕೊರತೆ, ಬಡತನ ಮತ್ತು

ನಿರುದ್ಯೋಗದಂತಹ ಹಲವು ಸಮಸ್ಯೆಗಳು ಉದ್ಭವಿಸುತ್ತವೆ. ಈ ಸಮಸ್ಯೆಗಳನ್ನು ಮನನ ಮಾಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

* 1987ರ ಜುಲೈ 11ರಂದು ವಿಶ್ವ ಜನಸಂಖ್ಯೆ ಐದು ಶತಕೋಟಿ ತಲುಪಿತು. ಇದನ್ನು ಗುರಿಯಾಗಿ 1989ರಲ್ಲಿ ಯುಎನ್ಡಿಪಿ ಈ ದಿನವನ್ನು ವಿಶ್ವ ಜನಸಂಖ್ಯಾ ದಿನವನ್ನಾಗಿ ಘೋಷಿಸಿತು.

ಅತ್ಯಧಿಕ ಜನಸಂಖ್ಯೆ ಹೊಂದಿರುವ ದೇಶಗಳು (2025):

- ಭಾರತ – 1.46 ಶತಕೋಟಿ
- ಚೀನಾ – 1.42 ಶತಕೋಟಿ
- ಅಮೆರಿಕ – 347 ಮಿಲಿಯನ್
-ಇಂಡೋನೇಷ್ಯಾ, ಪಾಕಿಸ್ತಾನ, ನೈಜೀರಿಯಾ, ಬ್ರೆಜಿಲ್, ಬಾಂಗ್ಲಾದೇಶ, ರಷ್ಯಾ, ಇಥಿಯೋಪಿಯಾ

* ವಿಶ್ವ ಜನಸಂಖ್ಯಾ ದಿನವು ಮಾನವ ಹಕ್ಕುಗಳು, ಕುಟುಂಬ ಯೋಜನೆ, ಮಹಿಳಾ ಆರೋಗ್ಯ, ಹಾಗೂ ತಲೆಮಾರಿನ ಭವಿಷ್ಯವನ್ನು ರೂಪಿಸಲು ಅವಶ್ಯಕವಾದ ನೀತಿ ಮತ್ತು ಜಾಗೃತಿ ರೂಪಿಸಲು ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

## 'ಎಕ್ಸ್' ಸಿಇಒ ಹುದ್ದೆಗೆ ಲಿಂಡಾ ಯಾಕಾರಿನೊ ರಾಜೀನಾಮೆ




* ಲಿಂಡಾ ಯಾಕರಿನೊ (Linda Yaccarino ) ಎಲಾನ್ ಮಸ್ಕ್ (Elon Musk) ಒಡೆತನದ ಎಕ್ಸ್ ಸಾಮಾಜಿಕ ಜಾಲತಾಣ ಸಂಸ್ಥೆಯ ಸಿಇಒ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

* ಲಿಂಡಾ ಯಾಕರಿನೊ ಕಳೆದ 2 ವರ್ಷಗಳಿಂದ ಎಕ್ಸ್ ಸಂಸ್ಥೆಯ ಸಿಇಒ ಹುದ್ದೆಯಲ್ಲಿದ್ದರು.

* 2023ರ ಜೂನ್ ನಲ್ಲಿ ಟ್ವಿಟರ್ನ ಸಿಇಒ ಆಗಿ ಲಿಂಡಾ ಯಾಕಾರಿನೊ ಅವರು ನೇಮಕಗೊಂಡಿದ್ದರು. ಇದಕ್ಕೂ ಮುನ್ನ ಅವರು 2011ರಿಂದಲೂ ಎನ್ ಬಿ ಸಿ ಯೂನಿವರ್ಸಲ್ ನ ಜಾಹೀರಾತು ಮತ್ತು ಪಾಲುದಾರಿಕೆ ವಿಭಾಗದ ಕಾರ್ಯ ನಿರ್ವಾಹಕಿಯಾಗಿ ಕೆಲಸ ಮಾಡುತ್ತಿದ್ದರು.

* 2022ರಲ್ಲಿ ಟ್ವಿಟರ್ ಖರೀದಿಸಿದ್ದ ಮಸ್ಕ್, ಸಿಇಒ ಆಗಿದ್ದ ಭಾರತದ ಪರಾಗ್ ಅಗರ್ವಾಲ್ ಅವರನ್ನು ವಜಾಗೊಳಿಸಿ ತಾವೇ ಅಧಿಕಾರ ವಹಿಸಿಕೊಂಡಿದ್ದರು. ಇದಾದ ಆರು ವಾರಗಳ ಬಳಿಕ ಲಿಂಡಾ ಸಿಇಒ ಆಗಿ ಅಧಿಕಾರ ಸ್ವೀಕರಿದ್ದರು.

## Nvidia $4 ಟ್ರಿಲಿಯನ್ ಮೌಲ್ಯ ತಲುಪಿದ ಮೊದಲ ಕಂಪನಿ

* ಎನ್ವಿಡಿಯಾ $4 ಟ್ರಿಲಿಯನ್ ಮಾರುಕಟ್ಟೆ ಮೌಲ್ಯ ತಲುಪಿದ ಮೊದಲ ಕಂಪನಿಯಾಗಿದೆ. ಇದರ ಷೇರುಗಳು ಆರಂಭದಲ್ಲಿ $164.42 ಕ್ಕೆ ಏರಿದರೂ, ದಿನದ ಅಂತ್ಯಕ್ಕೆ $162.88 ಕ್ಕೆ ತಲುಪಿದವು.

* AI ಕ್ಷೇತ್ರದಲ್ಲಿ ಭವಿಷ್ಯ ಉಜ್ವಲ ಎಂದು ಹೂಡಿಕೆದಾರರು ನಂಬಿದ್ದು, ಎನ್ವಿಡಿಯಾ ಈ ಕ್ರಾಂತಿಯ ಪ್ರಮುಖ ಲಾಭಾರ್ಥಿಯಾಗಿ ಹೊರಹೊಮ್ಮಿದೆ. ಕಂಪನಿಯ ಮೌಲ್ಯ ಈಗ ಬ್ರಿಟನ್, ಫ್ರಾನ್ಸ್ ಅಥವಾ ಭಾರತದ ಜಿಡಿಪಿಗಿಂತ ಹೆಚ್ಚಾಗಿದೆ.

* US ರಫ್ತು ನಿಯಂತ್ರಣಗಳಿಂದ $4.5 ಬಿಲಿಯನ್ ಹಾನಿಯಾಗಿದ್ದರೂ ಕೂಡ, ಎನ್ವಿಡಿಯಾ ಮೊದಲ ತ್ರೈಮಾಸಿಕದಲ್ಲಿ $19 ಬಿಲಿಯನ್ ಆದಾಯ ಗಳಿಸಿದೆ. ಚೀನಾದಲ್ಲಿ AI ಮೂಲಸೌಕರ್ಯ ಒಪ್ಪಂದದಿಂದ ಕಂಪನಿಗೆ ಮತ್ತಷ್ಟು ಬಲ ಸಿಕ್ಕಿದೆ.

* ಮೈಕ್ರೋಸಾಫ್ಟ್, ಗೂಗಲ್, ಅಮೆಜಾನ್, ಮೆಟಾ ಸೇರಿ ಹಲವು ದಿಗ್ಗಜ ಸಂಸ್ಥೆಗಳು AI ರೇಸ್ನಲ್ಲಿ ಸ್ಪರ್ಧಿಸುತ್ತಿವೆ. UBS ಸಮೀಕ್ಷೆಯ ಪ್ರಕಾರ, ಎನ್ವಿಡಿಯಾ ತನ್ನ ಮುನ್ನಡೆಯನ್ನು ಇತರರಿಗಿಂತ ಹೆಚ್ಚಿಸಿಕೊಳ್ಳುತ್ತಿದೆ.

* AI ಏಜೆಂಟ್ಸ್‌ಗಳಲ್ಲಿ ಎನ್ವಿಡಿಯಾ ಮುಂಚೂಣಿಯಲ್ಲಿ ಇದೆ. ಇದರ ಬಳಕೆ 2026ರವರೆಗೆ ಹೆಚ್ಚುವ ನಿರೀಕ್ಷೆ ಇದೆ, ಆದರೆ AI ನ ತ್ವರಿತ ಬೆಳವಣಿಗೆ ವೈಟ್-ಕಾಲರ್ ಉದ್ಯೋಗ ನಷ್ಟದ ಆತಂಕವೂ ಉಂಟುಮಾಡಿದೆ.

* ಷೇರು ಮಾರುಕಟ್ಟೆ ಮುಚ್ಚುವಾಗ ಎನ್ವಿಡಿಯಾ $162.88 ಕ್ಕೆ ಇಳಿದಿದ್ದು, ಮೌಲ್ಯ $4 ಟ್ರಿಲಿಯನ್ ಗಿಂತ ಸ್ವಲ್ಪ ಕಡಿಮೆಯಾಯಿತು.

## ಕಾರ್ನಾಕ್ ಸೇತುವೆಗೆ 'ಸಿಂಧೂರ್ ಸೇತುವೆ' ಎಂದು ಮರುನಾಮಕರಣ



* ಬ್ರಿಟಿಷ್ ಕಾಲದಲ್ಲಿ ನಿರ್ಮಿತ ಕಾರ್ನಾಕ್ ಸೇತುವೆ, ಈಗ ಪುನರ್ ನಿರ್ಮಿಸಲಾಗಿದ್ದು, 'ಸಿಂಧೂರ ಸೇತುವೆ' ಎಂದು ಮರುನಾಮಕರಣ ಮಾಡಲಾಗಿದೆ. ಗುರುವಾರ(ಜುಲೈ 10) ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಉದ್ಘಾಟಿಸಿದರು.

* ಸೇತುವೆಗೆ ಈ ಹೆಸರು ಇಡುವ ಮೂಲಕ 'ಆಪರೇಷನ್ ಸಿಂಧೂರ' ಸಂದರ್ಭದಲ್ಲಿ ಭಾರತೀಯ ಸೇನೆಯ ಧೈರ್ಯವನ್ನು ಗೌರವಿಸಲಾಗಿದೆ ಎಂದು ಅವರು ತಿಳಿಸಿದರು.

* ಈ ಸೇತುವೆ ಮೂಲತಃ ಜೇಮ್ಸ್ ರಿವೆಟ್ ಕಾರ್ನಾಕ್ ಎಂಬ ಬ್ರಿಟಿಷ್ ಗವರ್ನರ್ ಕಾಲದಲ್ಲಿ ನಿರ್ಮಾಣವಾಗಿತ್ತು ಮತ್ತು ಪೂರ್ವ-ಪಶ್ಚಿಮ ಮುಂಬೈನ ಸಂಪರ್ಕಕ್ಕೆ ಸಹಾಯ ಮಾಡುತ್ತಿತ್ತು.

* 2022ರ ಆಗಸ್ಟ್‌ನಲ್ಲಿ ಸೆಂಟ್ರಲ್ ರೈಲ್ವೆ ಇದನ್ನು ಅಸುರಕ್ಷಿತ ಎಂದು ಘೋಷಿಸಿದ ಬಳಿಕ ಬಿಎಂಸಿ ಇದರ ಪುನರ್ ನಿರ್ಮಾಣ ನಡೆಸಿತು.

KPSCVaani

* ಈ ಸೇತುವೆ ಸಂಚಾರ ದಟ್ಟಣೆ ಕಡಿಮೆ ಮಾಡುವುದು ಹಾಗೂ ಪಿ ಡಿ'ಮೆಲ್ಲೊ ರಸ್ತೆಗೆ ಉತ್ತಮ ಸಂಪರ್ಕ ಕಲ್ಪಿಸುವ ನಿರೀಕ್ಷೆ ಇದೆ.

## ಗಣೇಶೋತ್ಸವಕ್ಕೆ ರಾಜ್ಯೋತ್ಸವದ ಗೌರವ: ಮಹಾರಾಷ್ಟ್ರ ಸರ್ಕಾರದ ಮಹತ್ವದ ನಿರ್ಧಾರ



* ಮಹಾರಾಷ್ಟ್ರ ಸರ್ಕಾರವು ಶತಮಾನದಷ್ಟು ಹಳೆಯದಾದ 'ಸಾರ್ವಜನಿಕ ಗಣೇಶೋತ್ಸವ' ವನ್ನು 'ಮಹಾರಾಷ್ಟ್ರ ರಾಜ್ಯದ ಉತ್ಸವ' ವೆಂದು ಗುರುವಾರ(ಜುಲೈ 10) ಅಧಿಕೃತವಾಗಿ ಘೋಷಿಸಿದೆ.
* ರಾಜ್ಯದ ಸಂಸ್ಕೃತಿ ಸಚಿವ ಆಶಿಷ್ ಶೆಲಾರ್ ಅವರು ವಿಧಾನಸಭೆಯಲ್ಲಿ ಈ ಬಗ್ಗೆ ಘೋಷಣೆ ಮಾಡಿದರು. ಅವರು ಈ ಸಂದರ್ಭ, ಗಣೇಶೋತ್ಸವವು ಕೇವಲ ಹಬ್ಬವಲ್ಲ, ಮಹಾರಾಷ್ಟ್ರದ ಸಂಸ್ಕೃತಿಯ ಹೆಮ್ಮೆ ಮತ್ತು ಗುರುತಿನ ಸಂಕೇತವಾಗಿದೆ ಎಂದು ಅಭಿಪ್ರಾಯಪಟ್ಟರು.
* 1893ರಲ್ಲಿ ಲೋಕಮಾನ್ಯ ತಿಲಕ್ ಅವರು ಮಹಾರಾಷ್ಟ್ರದಲ್ಲಿ ಸಾರ್ವಜನಿಕ ಗಣೇಶೋತ್ಸವಕ್ಕೆ ಆರಂಭ ಹಾಕಿದ್ದರು. ಇದು ಸಾಮಾಜಿಕ ಏಕತೆ, ರಾಷ್ಟ್ರೀಯತೆ, ಸ್ವಾತಂತ್ರ್ಯ ಹೋರಾಟ, ಆತ್ಮಗೌರವ ಮತ್ತು ಸ್ಥಳೀಯ ಭಾಷೆಯ ಬಗ್ಗೆ ಹೆಮ್ಮೆ ಇವೆಲ್ಲವನ್ನು ಪ್ರತಿಬಿಂಬಿಸುತ್ತದೆ ಎಂದು ಶೆಲಾರ್ ಹೇಳಿದರು.
* ಗಣೇಶೋತ್ಸವದ ಆಚರಣೆಗಾಗಿ ಪೊಲೀಸ್ ಭದ್ರತೆ, ಮೂಲಸೌಕರ್ಯ ಹಾಗೂ ಆರ್ಥಿಕ ನೆರವನ್ನೂ ಸರ್ಕಾರ ಒದಗಿಸಲಿದೆ. ವಿಶೇಷವಾಗಿ ಪುಣೆ ಮತ್ತು ಮುಂಬೈನಲ್ಲಿ ಈ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲು ನೆರವು ನೀಡಲಾಗುವುದು ಎಂದು ಸಚಿವರು ಸ್ಪಷ್ಟಪಡಿಸಿದರು.

## ತಂತ್ರಜ್ಞಾನ ಬೆಳವಣಿಗೆಯಲ್ಲಿ ಭಾರತಕ್ಕೆ ಅಗ್ರಸ್ಥಾನ



* ಭಾರತವು 2025ರಲ್ಲಿ ಜಾಗತಿಕ ತಂತ್ರಜ್ಞಾನ ಮಾರುಕಟ್ಟೆಯಲ್ಲಿ ಟಾಪ್ 10 ರಾಷ್ಟ್ರಗಳಲ್ಲಿ ಭಾರತದ 6 ನಗರಗಳು ಸ್ಥಾನ ಪಡೆದಿವೆ.
* ಏಷ್ಯಾ-ಪೆಸಿಫಿಕ್ ಪ್ರದೇಶದ ತಾಂತ್ರಿಕ ಪ್ರತಿಭೆಗಳ ಸ್ಪರ್ಧೆಯಲ್ಲಿ ಭಾರತ ಪ್ರಮುಖ ಭೂಮಿಕೆ ವಹಿಸುತ್ತಿದೆ.
* ಈ ಪಟ್ಟಿಯಲ್ಲಿ ಭಾರತೀಯ ನಗರಗಳಾದ ಬೆಂಗಳೂರು, ಹೈದರಾಬಾದ್, ಮುಂಬೈ, ಚೆನ್ನೈ, ಪುಣೆ ಮತ್ತು ದೆಹಲಿ ಟಾಪ್ 10 ಪಟ್ಟಿಗೆ ಪ್ರವೇಶಿಸಿರುವವು. ಜಪಾನ್ನ ಟೋಕಿಯೋ ಮತ್ತು ಚೀನಾದ ಬೀಜಿಂಗ್ ಕೂಡ ಈ ಪಟ್ಟಿಯಲ್ಲಿವೆ ಎಂದು ಕೊಲಿಯರ್ಸ್ ವರದಿ ತಿಳಿಸಿದೆ.
* ಭಾರತದ ಟೈರ್-1 ನಗರಗಳಲ್ಲಿ ತಂತ್ರಜ್ಞಾನ ಕ್ಷೇತ್ರಕ್ಕೆ ಅಗತ್ಯವಿರುವ ಕೌಶಲ್ಯಯುತ ಮಾನವ ಸಂಪತ್ತು ದೊರೆಯುತ್ತಿದೆ. ಇದರೊಂದಿಗೆ ಉತ್ತಮ ಕಚೇರಿ ಸ್ಥಳ, ಐಟಿ ಮೂಲಸೌಕರ್ಯ ಮತ್ತು ವೆಚ್ಚ ಸ್ಪರ್ಧಾತ್ಮಕತೆಯಿಂದ ಭಾರತ ಜಾಗತಿಕ ತಂತ್ರಜ್ಞಾನ ವಿಸ್ತರಣೆಯ ಕೇಂದ್ರವಾಗಿ ಪರಿಣಮಿಸುತ್ತಿದೆ.
* ಭಾರತವು ತಂತ್ರಜ್ಞಾನ ಆಧರಿತ ಜಾಗತಿಕ ಆರ್ಥಿಕ ವಿಸ್ತರಣೆಯ ಪ್ರಮುಖ ಗುರಿಯಾಗಿ ಹೊರಹೊಮ್ಮುತ್ತಿದೆ ಎಂದು ಮೆಹೋತ್ರಾ ಹೇಳಿದ್ದಾರೆ. ಇದರಲ್ಲಿಗೆ ಅತ್ಯುತ್ತಮ ಗುಣಮಟ್ಟದ ಕಚೇರಿ ಸ್ಥಳಗಳು, ಉತ್ತಮ ಐಟಿ ಮೂಲಸೌಕರ್ಯ ಹಾಗೂ ಕಡಿಮೆ ವೆಚ್ಚದ ಸ್ಪರ್ಧಾತ್ಮಕತೆ ಕಾರಣವಾಗಿದೆ.
* ಈ ವಿಶ್ಲೇಷಣೆಯು 200ಕ್ಕೂ ಹೆಚ್ಚು ಜಾಗತಿಕ ಮಾರುಕಟ್ಟೆಗಳಲ್ಲಿನ ಪ್ರತಿಭಾ ಕೌಶಲ, ಕಾರ್ಮಿಕ ಸೂಚ್ಯಂಕ, ಹೂಡಿಕೆ ಪ್ರಮಾಣ ಮತ್ತು ಉದ್ಯಮ ಕ್ಷೇತ್ರಗಳ ಸಂಯೋಜನೆಯಂತಹ ಅಂಶಗಳನ್ನು ಆಧರಿಸಿ ಸಿದ್ಧಪಡಿಸಲಾಗಿದೆ.

## ಐರ್ಲೆಂಡ್ ಬೌಲರ್ ಕರ್ಟಿಸ್ ಕ್ಯಾಂಪರ್ 5 ಎಸೆತದಲ್ಲಿ 5 ವಿಕೆಟ್ಗಳ ಅಪರೂಪದ ಸಾಧನೆ




* ಐರ್ಲೆಂಡ್ ಬೌಲರ್ ಕರ್ಟಿಸ್ ಕ್ಯಾಂಪರ್ ಐರ್ಲೆಂಡ್ನ ದೇಶೀಯ ಟಿ20 ಟೂರ್ನಿ ಇಂಟರ್-ಪ್ರಾಂತೀಯ ಟಿ20 ಪಂದ್ಯಾವಳಿಯಲ್ಲಿ ಸತತ 5 ಎಸೆತಗಳಲ್ಲಿ 5 ವಿಕೆಟ್ಗಳನ್ನು ಕಬಳಿಸಿ, ವಿಶ್ವ ಕ್ರಿಕೆಟ್ ಇತಿಹಾಸದಲ್ಲಿ ಅಪರೂಪದ ದಾಖಲೆ ಮಾಡಿದ್ದಾರೆ.
* ಮನ್ಸ್ಟರ್ ರೆಡ್ಸ್ ಪರ ಆಡಿದ ಕ್ಯಾಂಪರ್, ರೆಡ್ಸ್ ವಿರುದ್ಧ ನಾರ್ತ್-ವೆಸ್ಟ್ ವಾರಿಯರ್ಸ್ ವಿರುದ್ಧದ ಪಂದ್ಯದಲ್ಲಿ ಅತ್ಯುತ್ತಮ ಆಲ್ರೌಂಡ್ ಪ್ರದರ್ಶನ ನೀಡಿದರು.
* ಮೊದಲು ಬ್ಯಾಟಿಂಗ್ನಲ್ಲಿ ಕೇವಲ 24 ಎಸೆತಗಳಲ್ಲಿ 44 ರನ್ ಗಳಿಸಿ, ನಂತರ ಬೌಲಿಂಗ್ನಲ್ಲಿ ತಮ್ಮ ಎರಡನೇ ಓವರ್ನಲ್ಲಿ ಡಬಲ್ ಹ್ಯಾಟ್ರಿಕ್ ಸೇರಿದಂತೆ 5 ಎಸೆತಗಳಲ್ಲಿ 5 ವಿಕೆಟ್ ಪಡೆದರು.
* ಕ್ಯಾಂಪರ್ ಈ ಹಿಂದೆ 2021ರ ಟಿ20 ವಿಶ್ವಕಪ್ನಲ್ಲಿ ನೆದರ್ಲ್ಯಾಂಡ್ಸ್ ವಿರುದ್ಧ ಡಬಲ್ ಹ್ಯಾಟ್ರಿಕ್ ಸಾಧನೆ ಮಾಡಿದ್ದರೂ, ಈ ಬಾರಿ ಇನ್ನೂ ವಿಶಿಷ್ಟವಾದ ಸಾಧನೆ ಮಾಡಿದ್ದಾರೆ. ಇದುವರೆಗೆ ಈ ರೀತಿಯ ದಾಖಲೆ ಕ್ರಿಕೆಟ್ ಇತಿಹಾಸದಲ್ಲಿ ಯಾರೂ ಸಾಧಿಸಿಲ್ಲ.
* ಅವರ ಈ ದಾಖಲೆಬದ್ಧ ಪ್ರದರ್ಶನದ ಫಲವಾಗಿ, ನಾರ್ತ್-ವೆಸ್ಟ್ ತಂಡ ಕೇವಲ 88 ರನ್ನಳಿಗೆ ಆಲೌಟ್ ಆಗಿ 100 ರನ್ನಳಿಂದ ಸೋತಿತು.

## ಡಿಜಿಟಲ್ ಪೇಮೆಂಟ್ನಲ್ಲಿ ಭಾರತವೇ ನಂ.1



* ಅಂತಾರಾಷ್ಟ್ರೀಯ ಹಣಕಾಸು ನಿಧಿಯ (IMF) ನವೀನ ವರದಿಯ ಪ್ರಕಾರ, ಯುನಿಫೈಡ್ ಪೇಮೆಂಟ್ಸ್ ಇಂಟರ್ಫೇಸ್ (UPI) ವ್ಯವಸ್ಥೆಯ ತ್ವರಿತ ಬೆಳವಣಿಗೆಯಿಂದ ಭಾರತವು ಇತರೆ ದೇಶಗಳಿಗಿಂತ ಡಿಜಿಟಲ್ ಹಣಪಾವತಿಯಲ್ಲಿ ಅಗ್ರಸ್ಥಾನದಲ್ಲಿದೆ. ಈ ಸಾಧನೆಯು ದೇಶದ ಆರ್ಥಿಕ ಪರಿಸರವನ್ನು ಕ್ರಾಂತಿಕಾರಿಯಾಗಿ ಬದಲಾಯಿಸಿದೆ.

* UPI ಬಳಕೆಯಿಂದಾಗಿ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳಂತಹ ಪರಂಪರಾ ಪಾವತಿ ಸಾಧನಗಳ ಬಳಕೆ ಗಣನೀಯವಾಗಿ ಕುಸಿದಿದೆ.
* ಹೆಚ್ಚುವರಿ ಸೌಲಭ್ಯಗಳೊಂದಿಗೆ, ಮೊಬೈಲ್ ಫೋನ್‌ಗಳ ಮೂಲಕ ನೇರವಾಗಿ ಪಾವತಿಗಳನ್ನು ಮಾಡಲು ಸಾಮಾನ್ಯ ನಾಗರಿಕರು ತೀವ್ರವಾಗಿ ಮುಂದಾಗುತ್ತಿದ್ದಾರೆ.
* 2016ರಲ್ಲಿ ಆರಂಭವಾದ UPI ಕಡಿಮೆ ಅವಧಿಯಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪಾವತಿ ವ್ಯವಸ್ಥೆಯಾಗಿದೆ. ಈಗ ಇದು ತಿಂಗಳಿಗೆ 18 ಶತಕೋಟಿಗಿಂತ ಹೆಚ್ಚು ವಹಿವಾಟುಗಳನ್ನು ನಡೆಸುತ್ತಿದೆ.
* ನಗದು ಬಳಕೆ ಕಡಿಮೆಯಾಗುತ್ತಿದ್ದು, ಡಿಜಿಟಲ್ ಪಾವತಿಗಳು ಪ್ರಧಾನ ಸ್ಥಾನ ಪಡೆದುಕೊಂಡಿವೆ ಎಂದು IMF ವರದಿ ವಿಶ್ಲೇಷಿಸುತ್ತಿದೆ.

## ಅಸ್ಸಾಂನಲ್ಲಿ 'ಗಜ ಮಿತ್ರ' ಯೋಜನೆ: ಮಾನವ-ಆನೆ ಸಂಘರ್ಷ ತಡೆಗೆ ಹೊಸ ಕ್ರಮ




* ಅಸ್ಸಾಂ ಸರ್ಕಾರ 'ಗಜ ಮಿತ್ರ' ಎಂಬ ಹೆಸರಿನ ಹೊಸ ಯೋಜನೆಗೆ ಅನುಮೋದನೆ ನೀಡಿದ್ದು, ಇದರಿಂದ ಮಾನವ-ಆನೆ ಸಂಘರ್ಷ ತಡೆಯುವುದು ಉದ್ದೇಶವಾಗಿದೆ. ದಿನೇದಿನೆ ಈ ಸಂಘರ್ಷದಲ್ಲಿ ಜನರು ಮತ್ತು ಆನೆಗಳು ಪ್ರಾಣ ಕಳೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.
* ಈ ಯೋಜನೆ ರಾಜ್ಯದ 80ಕ್ಕೂ ಹೆಚ್ಚು ಅಪಾಯದ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಲಿದೆ. ಆನೆಗಳು ಹಳ್ಳಿಗಳತ್ತ ಬರದಂತೆ ತಡೆಯಲು ಬಿದಿರು ಮತ್ತು ನಾಪಿಯರ್ ಹುಲ್ಲುಗಳನ್ನು ಬೆಳೆಸಲಾಗುವುದು. ಜೊತೆಗೆ, ತ್ವರಿತ ಪ್ರತಿಕ್ರಿಯೆ ತಂಡಗಳನ್ನು ರಚಿಸಿ ಹಿಂಸಾತ್ಮಕವಲ್ಲದ ವಿಧಾನಗಳಲ್ಲಿ ಆನೆಗಳನ್ನು ದಾರಿ ತಪ್ಪಿಸಲಾಗುವುದು.
* 2000 ರಿಂದ 2023 ರವರೆಗೆ 1,400 ಜನರು ಮತ್ತು 1,209 ಆನೆಗಳು ಈ ಸಂಘರ್ಷದಲ್ಲಿ ಸಾವಿಗೀಡಾಗಿವೆ. ಹೆಚ್ಚಿನ ಆನೆಗಳು ಅಕ್ರಮ ವಿದ್ಯುತ್ ಕಂಬಿಗಳಿಂದ ಅಥವಾ ಆಹಾರದ ಕೊರತೆಯಿಂದ ಹಳ್ಳಿಗಳತ್ತ ಹಿಗ್ಗುವ ಸಂದರ್ಭದಲ್ಲಿ ಸಾವನ್ನಪ್ಪಿವೆ.
* ಗೋಲ್ಪಾರಾ, ನಾಗಾಂ, ಸೋನಿತ್ಪುರ್, ಕಾರ್ಬಿ ಅಂಗಳೋಂಗ್ ಮುಂತಾದ ಜಿಲ್ಲೆಗಳು ಹೆಚ್ಚು ಬಾಧಿತವಾಗಿವೆ. 527 ಹಳ್ಳಿಗಳಲ್ಲಿ ಈ ಸಂಘರ್ಷಗಳು ಸಂಭವಿಸುತ್ತಿವೆ.
* ಸರ್ಕಾರ ಆನೆಗಳಿಗೆ ಉತ್ತಮ ವಾಸಸ್ಥಳ, ಆಹಾರ, ಹಾಗೂ ಸ್ಥಳೀಯ ಜನರ ಸಹಕಾರದೊಂದಿಗೆ ಶಾಂತಿಯುತ ಸಹವಾಸವನ್ನು ಸಾಧಿಸಲು ಮುಂದಾಗಿದೆ. ‘ಗಜ ಮಿತ್ರ’ ಯೋಜನೆ ಅಸ್ಸಾಂ ರಾಜ್ಯದ ಮಾದರಿಯಾದ ನಿರೀಕ್ಷೆ ವ್ಯಕ್ತವಾಗಿದೆ.

# 12 July 2025

## ಜುಲೈ 12 : ನಬಾರ್ಡ್ ಸಂಸ್ಥಾಪನಾ ದಿನ

* ಜುಲೈ 12, 2025 ರಂದು ನಬಾರ್ಡ್ ಸಂಸ್ಥಾಪನಾ ದಿನವನ್ನು ಆಚರಿಸಲಾಗುತ್ತದೆ. ಈ ದಿನವು 1982 ರಲ್ಲಿ ನಬಾರ್ಡ್ ಸ್ಥಾಪನೆಯಾದ ದಿನವನ್ನು ಸ್ಮರಿಸುತ್ತದೆ.
* ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರ್ ಆ್ಯಂಡ್ ರೂರಲ್ ಡೆವಲಪ್ಮೆಂಟ್ (ನಬಾರ್ಡ್) ತನ್ನ 44 ನೇ ಸಂಸ್ಥಾಪನಾ ದಿನವನ್ನು ಜುಲೈ 12, 2025 ರಂದು ಆಚರಿಸಿಕೊಳ್ಳುತ್ತಿದೆ.
* ನಬಾರ್ಡ್ ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಕೃಷಿ ಸಾಲದ ಮೇಲೆ ಕೇಂದ್ರೀಕರಿಸುವ ಒಂದು ಉನ್ನತ ಅಭಿವೃದ್ಧಿ ಬ್ಯಾಂಕ್ ಆಗಿದೆ. ಗ್ರಾಮೀಣ ಭಾರತವನ್ನು ಪರಿವರ್ತಿಸುವಲ್ಲಿ ನಬಾರ್ಡ್‌ನ ಪಾತ್ರ ಮತ್ತು ಸಾಧನೆಗಳನ್ನು ಎತ್ತಿ ತೋರಿಸುವ ವಿವಿಧ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳೊಂದಿಗೆ ಈ ದಿನವನ್ನು ಆಚರಿಸಲಾಗುತ್ತದೆ.
* ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರ್ ಆ್ಯಂಡ್ ರೂರಲ್ ಡೆವಲಪ್ಮೆಂಟ್ (ನಬಾರ್ಡ್) ಅನ್ನು ಜುಲೈ 12 1982ರಲ್ಲಿ ಸ್ಥಾಪಿಸಲಾಯಿತು. ಇದರ ಪ್ರಧಾನ ಕಚೇರಿಯು ಮಹಾರಾಷ್ಟ್ರದ ಮುಂಬೈ ನಲ್ಲಿದೆ.
* ಈ ವಿಶೇಷ ದಿನವನ್ನು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್) ಗ್ರಾಮೀಣ ಸಮುದಾಯಗಳ ಸ್ಥಿತಿಯನ್ನು ಸುಧಾರಿಸುವಲ್ಲಿ ಮತ್ತು ರಾಷ್ಟ್ರದಾದ್ಯಂತ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ಗಮನಾರ್ಹ ಕೊಡುಗೆಗಳನ್ನು ಗುರುತಿಸಲು ಸಮರ್ಪಿಸಲಾಗಿದೆ.
* ಸುಸ್ಥಿರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯನ್ನು ಉತ್ತೇಜಿಸಲು ನಬಾರ್ಡ್ ಅನ್ನು ಸ್ಥಾಪಿಸಲಾಗಿದೆ, ನಬಾರ್ಡ್ ಗ್ರಾಮೀಣ ಜನತೆಗೆ ಅನುಕೂಲವಾಗುವ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಮುಂಚೂಣಿಯಲ್ಲಿದೆ.
* ನಬಾರ್ಡ್ ಪ್ರಮುಖ ಕಾರ್ಯಗಳು :
- ಕ್ರೆಡಿಟ್ ನಿಬಂಧನೆ
- ಮೂಲಸೌಕರ್ಯ ಅಭಿವೃದ್ಧಿ
- ಸುಸ್ಥಿರ ಅಭ್ಯಾಸಗಳ ಪ್ರಚಾರ
- ಆರ್ಥಿಕ ಸೇರ್ಪಡೆ
* ನಬಾರ್ಡ್ ಸಾಧನೆಗಳು :
- ಗ್ರಾಮೀಣ ಮೂಲಸೌಕರ್ಯಗಳನ್ನು ಹೆಚ್ಚಿಸುವುದು
- ಸುಸ್ಥಿರ ಕೃಷಿಯನ್ನು ಬೆಂಬಲಿಸುವುದು
- ಹಣಕಾಸಿನ ಒಳಗೊಳ್ಳುವಿಕೆಯನ್ನು ಉತ್ತೇಜಿಸುವುದು
- ಗ್ರಾಮೀಣ ಉದ್ಯಮಶೀಲತೆಯನ್ನು ಉತ್ತೇಜಿಸುವುದು

## ಜುಲೈ.14 ರಂದು ಶುಕ್ಲಾ ಭೂಮಿಗೆ ವಾಪಾಸ್



* ಆಕ್ಸಿಯಮ್-4 ಕಾರ್ಯಾಚರಣೆಯ ಗಗನಯಾತ್ರಿ ಶುಭಾಂಶು ಶುಕ್ಲಾ ಮತ್ತು ಅವರ ತಂಡ ಜುಲೈ 14ರಂದು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ (ISS) ಭೂಮಿಗೆ ಮರಳಲಿದ್ದಾರೆ ಎಂದು ನಾಸಾ ತಿಳಿಸಿದೆ.

* ಮಿಷನ್ ಅನ್ನು ಜೂನ್ 25 ರಂದು ಫ್ಲೋರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆ ಮಾಡಲಾಗಿದ್ದು, ಜೂನ್ 26 ರಂದು ISS ಗೆ ಡಾಕ್ ಮಾಡಿತು.

* ಜುಲೈ 14 ರ ತನಕ ಉಡಾವಣಾ ಸಮಯ ವಿಳಂಬವಾಗಿದೆ, ಏಕೆಂದರೆ ISS ಹೆಚ್ಚು ಸೂರ್ಯನ ಬೆಳಕಿನ ಅವಧಿಯಲ್ಲಿ ಇರಲಿದೆ. ಈ ಸ್ಥಿತಿಯಲ್ಲಿ ನೌಕೆಯ ಉಷ್ಣ ನಿಯಂತ್ರಣ ಸೂಕ್ಷ್ಮವಾಗಿದ್ದು, ನಾಸಾ ಈ ಸಂದರ್ಭದಲ್ಲಿ ಅನ್ಡಾಕ್ ಮಾಡುವುದನ್ನು ಎಚ್ಚರಿಕೆಯಿಂದ ನಿರ್ಧರಿಸುತ್ತದೆ.

* ಮಿಷನ್ ಸಮಯದಲ್ಲಿ ಶುಕ್ಲಾ ಮತ್ತು ತಂಡ 230 ಸೂರ್ಯೋದಯಗಳನ್ನು ವೀಕ್ಷಿಸಿದ್ದು, ಸುಮಾರು 96.5 ಲಕ್ಷ ಕಿ.ಮೀ. ಪ್ರಯಾಣಿಸಿದ್ದಾರೆ. ಅವರು ಸುಮಾರು 230 ಕಕ್ಷೆಗಳನ್ನು ಭೂಮಿಗೆ ಸುತ್ತಿ, ISS ನಲ್ಲಿ ಎರಡು ವಾರಗಳ ಕಾಲ ವಾಸ್ತವ್ಯವಿದ್ದರು.

* ಈ ಅವಧಿಯಲ್ಲಿ ಶುಕ್ಲಾ ಪ್ರಧಾನಿ ಮೋದಿ, ಇಸ್ರೋ ವಿಜ್ಞಾನಿಗಳು ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಅವರು HAM ರೇಡಿಯೊ ಮೂಲಕ ಇಸ್ರೋ ಕೇಂದ್ರಗಳೊಂದಿಗೆ ಸಂಪರ್ಕ ಸಾಧಿಸಿದರು.

* ಆಕ್ಸಿಯಮ್-4 ನಲ್ಲಿ ಬಯೋಮೆಡಿಕಲ್, ನರವಿಜ್ಞಾನ, ಕೃಷಿ, ವಸ್ತುಶಾಸ್ತ್ರ, ಬಾಹ್ಯಾಕಾಶ ತಂತ್ರಜ್ಞಾನದಲ್ಲಿ 60 ಕ್ಕೂ ಹೆಚ್ಚು ಪ್ರಯೋಗಗಳನ್ನು ನಡೆಸಲಾಯಿತು.

* ಈ ಪ್ರಯೋಗಗಳು ಮಧುಮೇಹ, ಕ್ಯಾನ್ಸರ್ ಚಿಕಿತ್ಸೆ ಮತ್ತು ಮಾನವ ಆರೋಗ್ಯ ಕ್ಷೇತ್ರಗಳಲ್ಲಿ ಮುಂದಿನ ತಂತ್ರಜ್ಞಾನಗಳಿಗೆ ದಾರಿ ಹಾಕಬಹುದಾಗಿದೆ.

* ಮಿಷನ್ ಖಾಸಗಿ ವಾಣಿಜ್ಯ ಬಾಹ್ಯಾಕಾಶ ಸಂಶೋಧನೆಗೆ ಅರ್ಥಪೂರ್ಣ ಕೊಡುಗೆ ನೀಡಿದ ಮಹತ್ವದ ಹೆಜ್ಜೆಯಾಗಿದೆ.

## 44ನೇ ವಿಶ್ವ ಪಾರಂಪರಿಕ ತಾಣವಾಗಿ ಯುನೆಸ್ಕೋ ಪಟ್ಟಿಗೆ 12 ಮರಾಠಾ ಕೋಟೆ ಸೇರ್ಪಡೆ




* ಮರಾಠಾ ಮಿಲಿಟರಿ ಭೂದೃಶ್ಯಗಳು ಯುನೆಸ್ಕೋ ವಿಶ್ವ ಪರಂಪರೆಯ ಪಟ್ಟಿಯಲ್ಲಿ ಭಾರತದ 44ನೇ ತಾಣವಾಗಿ ಸೇರ್ಪಡೆಯಾಗಿದೆ.

* ಮರಾಠಾ ಸಾಮ್ರಾಜ್ಯದ ಶಕ್ತಿಶಾಲಿ ಕೋಟೆ ನಿರ್ಮಾಣ ಶೈಲಿ ಮತ್ತು ಮಿಲಿಟರಿ ತಂತ್ರಗಳನ್ನು ಪ್ರತಿನಿಧಿಸುವ ಈ ಭೂದೃಶ್ಯಗಳನ್ನು 17ನೇ ಶತಮಾನದಿಂದ 19ನೇ ಶತಮಾನವರೆಗೆ ಅಭಿವೃದ್ಧಿಪಡಿಸಲಾಯಿತು.

* ಈ ಪಟ್ಟಿಯಲ್ಲಿ ಸೇರಿರುವ 12 ಕೋಟೆಗಳಲ್ಲಿ 11 ಮಹಾರಾಷ್ಟ್ರದಲ್ಲಿ ಮತ್ತು 1 ತಮಿಳುನಾಡಿನಲ್ಲಿ ಇದೆ. ಈ ಕೋಟೆಗಳು ಪರ್ವತ, ಸಮುದ್ರ ತೀರ ಮತ್ತು ಕಠಿಣ ಭೂಭಾಗಗಳಲ್ಲಿ ಸ್ಥಾಪನೆಯಾಗಿದ್ದು, ಮರಾಠಾ ಆಳ್ವಿಕೆಯ ತಂತ್ರಜ್ಞಾನದ ಪ್ರಾವೀಣ್ಯತೆಯನ್ನು ತೋರಿಸುತ್ತವೆ.

* ಪ್ಯಾರಿಸ್ನಲ್ಲಿ ನಡೆಯುತ್ತಿರುವ ಯುನೆಸ್ಕೋ ವಿಶ್ವ ಪರಂಪರೆ ಸಮಿತಿಯ 47ನೇ ಅಧಿವೇಶನದಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಯಿತು.

* ಪ್ರಧಾನಿ ನರೇಂದ್ರ ಮೋದಿ, ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಈ ಸಾಧನೆಗೆ ಅಭಿನಂದನೆ ಸಲ್ಲಿಸಿದ್ದಾರೆ.

* ಈ ಯೋಜನೆಗೆ ಕೇಂದ್ರ ಸರ್ಕಾರದ, ಭಾರತೀಯ ಪುರಾತತ್ವ ಸಮೀಕ್ಷೆ (ASI), ಮತ್ತು ಮಹಾರಾಷ್ಟ್ರ ಸರ್ಕಾರದ ಹಲವಾರು ಅಧಿಕಾರಿಗಳ ಸಹಕಾರ ಇದ್ದದ್ದರಿಂದ ಯಶಸ್ಸು ಸಾಧ್ಯವಾಯಿತು. ಜನವರಿ 2024ರಲ್ಲಿ ಸಲ್ಲಿಸಲಾದ ಪ್ರಸ್ತಾವನೆಯ ನಂತರ 18 ತಿಂಗಳ ಪರಿಶೀಲನೆ ಪ್ರಕ್ರಿಯೆಯ ಬಳಿಕ ಇದನ್ನು ಮಾನ್ಯತೆ ನೀಡಲಾಗಿದೆ.

* ಈ ಸೇರ್ಪಡೆ ಬಳಿಕ ಭಾರತ ವಿಶ್ವ ಪರಂಪರೆ ತಾಣಗಳ ಸಂಖ್ಯೆಯಲ್ಲಿ ಜಾಗತಿಕವಾಗಿ 6ನೇ ಸ್ಥಾನದಲ್ಲಿದೆ. ಯುನೆಸ್ಕೋ ತಾತ್ಕಾಲಿಕ ಪಟ್ಟಿಯಲ್ಲಿ ಇನ್ನೂ 62 ಭಾರತೀಯ ತಾಣಗಳಿವೆ.

## ಭಾರತಕ್ಕೆ 2027 ಶೂಟಿಂಗ್ ವಿಶ್ವಕಪ್ ಮತ್ತು 2028 ಜೂನಿಯರ್ ಚಾಂಪಿಯನ್ಶಿಪ್ ಆತಿಥ್ಯ



* ಅಂತರರಾಷ್ಟ್ರೀಯ ಶೂಟಿಂಗ್ ಸ್ಪೋರ್ಟ್ ಫೆಡರೇಶನ್ (ISSF) 2027ರಲ್ಲಿ ನವದೆಹಲಿಯಲ್ಲಿ ಶೂಟಿಂಗ್ ವಿಶ್ವಕಪ್ ಮತ್ತು 2028ರಲ್ಲಿ ಜೂನಿಯರ್ ವಿಶ್ವ ಚಾಂಪಿಯನ್ಶಿಪ್ ಆಯೋಜನೆಗೆ ಭಾರತವನ್ನು ಆಯ್ಕೆ ಮಾಡಿದೆ.

* ಈ ನಿರ್ಧಾರ ISSF ಕಾರ್ಯಕಾರಿ ಸಮಿತಿಯಲ್ಲಿ ತೆಗೆದುಕೊಳ್ಳಲಾಗಿದೆ. ಜೊತೆಗೆ 2026-27ರ ಕ್ಯಾಲೆಂಡರ್ ಅನಾವರಣಗೊಂಡಿದ್ದು, 2026ರ ಸೆಪ್ಟೆಂಬರ್- ಅಕ್ಟೋಬರ್ನಲ್ಲಿ ನವದೆಹಲಿಯಲ್ಲಿ ಜೂನಿಯರ್ ವಿಶ್ವಕಪ್ ನಡೆಯಲಿದೆ. 2026ರ ಫೆಬ್ರವರಿಯಲ್ಲಿ ಭಾರತ ಏಷ್ಯನ್ ಕಪ್ನ ಸಹ ಆತಿಥ್ಯ ನೀಡಲಿದೆ.

* ಭಾರತೀಯ ರಾಷ್ಟ್ರೀಯ ರೈಫಲ್ ಸಂಸ್ಥೆ (NRAI) ಅಧ್ಯಕ್ಷ ಕಲಿಕೇಶ್ ನಾರಾಯಣ್ ಸಿಂಗ್ ದೇವ್ ಅವರು ಈ ಆಯೋಜನೆ ಭಾರತ ಶೂಟಿಂಗ್ ಕ್ರೀಡಾಪಟುಗಳಿಗೆ ಅಂತರರಾಷ್ಟ್ರೀಯ ಮಟ್ಟದ ಸಿದ್ಧತೆಗಾಗಿ ಅವಕಾಶವನ್ನಿರುತ್ತದೆ ಎಂದು ಹೇಳಿದರು. ಭಾರತೀಯ ಶೂಟಿಂಗ್ ಲೀಗ್ ಆರಂಭವು ಈ ಯತ್ನಕ್ಕೆ ಹೊಸ ಆಯಾಮ ನೀಡಲಿದೆ ಎಂದು ಅವರು ಶ್ಲಾಘಿಸಿದರು.

* NRAI ಪ್ರಧಾನ ಕಾರ್ಯದರ್ಶಿ ಕೆ. ಸುಲ್ತಾನ್ ಸಿಂಗ್ ಈ ಆಯೋಜನೆ ISSF ನ ವಿಶ್ವಾಸದ ಸಂಕೇತವಾಗಿದೆ ಎಂದರು. ಸರ್ಕಾರ, ಕ್ರೀಡಾ ಸಚಿವಾಲಯ ಹಾಗೂ SAIಗೆ ಧನ್ಯವಾದ ಸಲ್ಲಿಸಿದರು.

* 2027ರ ಶೂಟಿಂಗ್ ವಿಶ್ವ ಚಾಂಪಿಯನ್ಶಿಪ್ಗಳು ದಕ್ಷಿಣ ಕೊರಿಯಾದ ಡೇಗು (ರೈಫಲ್/ಪಿಸ್ತೂಲ್) ಮತ್ತು ಈಜಿಪ್ಟ್ನ ಕೈರೋ (ಶಾಟ್ಗನ್)ನಲ್ಲಿ ನಡೆಯಲಿವೆ. ಡೇಗು ಇದನ್ನು ಮೂರನೇ ಬಾರಿಗೆ ಆಯೋಜಿಸುತ್ತಿದ್ದು, 2028 ಲಾಸ್ ಏಂಜಲೀಸ್ ಒಲಿಂಪಿಕ್ಸ್ನ ಅರ್ಹತಾ ಸುತ್ತುಗಳಾಗಿವೆ.

## ಕ್ಯಾಂಬೋಡಿಯಾದ ಮೂರು ಭೀಕರ ಸ್ಮಾರಕಗಳು ಉನೆಸ್ಕೋ ಪಟ್ಟಿ ಸೇರಿವೆ



* ಜುಲೈ 11, 2025ರಂದು ಪ್ಯಾರಿಸ್‌ನಲ್ಲಿ ನಡೆದ 47ನೇ ವಿಶ್ವ ಪಾರಂಪರಿಕ ಸಮಿತಿಯಲ್ಲಿ ಕ್ಯಾಂಬೋಡಿಯಾದ ಖ್ಮೇರ್ ರೂಜ್ ಆಡಳಿತದ ಅವಧಿಗೆ ಸಂಬಂಧಿಸಿದ ಮೂರು ಸ್ಥಳಗಳನ್ನು ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಸಲಾಯಿತು.

* ಈ ನಿರ್ಧಾರವು ಆ ಆಡಳಿತಕ್ಕೆ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕೈಗೊಂಡು, ಶಾಂತಿ ಮತ್ತು ಶಿಕ್ಷಣಕ್ಕೆ ಉತ್ತೇಜನ ನೀಡುವ ಉದ್ದೇಶ ಹೊಂದಿದೆ.

ವಿಶ್ವ ಪಟ್ಟಿ ಸೇರಿಸಲಾದ ಸ್ಥಳಗಳು :

· ಟುಲ್ ಸ್ಲೆಂಗ್ ನರಹತ್ಯೆ ಮ್ಯೂಸಿಯಂ (ಎಸ್-21) – ಪೂರ್ವದಲ್ಲಿ ಹೈಸ್ಕೂಲ್, ನಂತರ 15,000 ಮಂದಿಗೆ ಯಾತನೆ ನೀಡಲಾದ ಕಾರಾಗೃಹ.

· ಎಂ-13 ಜೈಲು – ಕಾಂಪೊಂಗ್ ಛ್ನಾಂಗ್ ಪ್ರಾಂತ್ಯದ ಗುಪ್ತ ಖ್ಮೇರ್ ರೂಜ್ ಕಾರಾಗೃಹ.

· ಚೋಯಿಯುಂಗ್ ಏಕ್ ಕಿಲ್ಲಿಂಗ್ ಫೀಲ್ಡ್ಸ್ – ಸಾಮೂಹಿಕ ಹತ್ಯೆಗಳ ಸ್ಥಳ; 'ದಿ ಕಿಲ್ಲಿಂಗ್ ಫೀಲ್ಡ್ಸ್' ಚಲನಚಿತ್ರದಿಂದ ಪ್ರಸಿದ್ಧ.


* ಪ್ರಧಾನಿ ಹನ್ ಮಾನೆಟ್ ಈ ಘೋಷಣೆಯನ್ನು ಶ್ಲಾಘಿಸಿದರು ಮತ್ತು ಶಾಂತಿಯ ಸಂಕೇತವಾಗಿ ಡಪ್ಪೆ ಬಾರಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು. ತಜ್ಞ ಯುಕ್ ಛಾಂಗ್ ಈ ಸ್ಥಳಗಳು ಯುವಪೀಳಿಗೆಗೆ ಪಾಠ ಕಲಿಸುವ ಪ್ರಮುಖ ನೆಲೆಗಳಾಗುತ್ತವೆ ಎಂದರು.

* ಹಿಂದಿನ ಮಾನ್ಯತೆಗಳ ಪೈಕಿ ಮೊದಲ ಇತ್ತೀಚಿನ ಸ್ಮಾರಕಗಳು
ಈ ಪಟ್ಟಿ ಸೇರ್ಪಡೆ ಪುರಾತನ ಸ್ಮಾರಕಗಳ ಪಕ್ಕದಲ್ಲಿ ಇತ್ತೀಚಿನ ಇತಿಹಾಸವನ್ನು ಗುರುತಿಸುವ ಹೊಸ ಹೆಜ್ಜೆಯಾಗಿದೆ.

* ಈ ಮೊದಲು ಅಂಗ್ಕೋರ್, ಪ್ರಿಯಾ ವಿಹಾರ್, ಸಾಂಬೋ ಪ್ರೈ ಕುಕ್, ಕೊಹ್ ಕೇರ್ ಎಂಬ ಹಳೆಯ ಸ್ಮಾರಕಗಳು ಮಾತ್ರ ಪಟ್ಟಿಯಲ್ಲಿದ್ದವು.

* 1975–79ರಲ್ಲಿ ಖ್ಮೇರ್ ರೂಜ್ ಆಡಳಿತದಲ್ಲಿ ಸುಮಾರು 17 ಲಕ್ಷ ಜನರು ಬಲಿಯಾದರು. ವಿಯೆಟ್ನಾಂ 1979ರಲ್ಲಿ ಆ ಆಡಳಿತವನ್ನು ಕೆಡವಿತು. ಕ್ರೂರತೆಯ ಈ ನೆಲೆಗಳು ಇನ್ನುಮುಂದೆ ಜಗತ್ತಿಗೆ ನೆನಪಿನ ಬೋಧನೆಯಾಗಲಿವೆ.

## T20 World Cup 2026: ಟಿ20 ವಿಶ್ವಕಪ್ ಕ್ರಿಕೆಟ್ಗೆ ಅರ್ಹತೆ ಪಡೆದ ಇಟಲಿ



* ಇಟಲಿ ಕ್ರಿಕೆಟ್ ತಂಡವು ಮೊದಲ ಬಾರಿಗೆ 2026ರ ಟಿ20 ವಿಶ್ವಕಪ್ಗೆ ಅರ್ಹತೆ ಪಡೆದು ಇತಿಹಾಸ ನಿರ್ಮಿಸಿದೆ. ಯುರೋಪ್ ವಲಯ ಕ್ವಾಲಿಫೈಯಿಂಗ್ ಟೂರ್ನಿಯಲ್ಲಿ ಇಟಲಿ ತಂಡವು ಕೊನೆಯ ಪಂದ್ಯದಲ್ಲಿ ನೆದರ್ಲೆಂಡ್ಸ್ ವಿರುದ್ಧ 9 ವಿಕೆಟ್ಗಳಿಂದ ಸೋತರೂ, ಉತ್ತಮ ರನ್ ರೇಟ್ನಿಂದಾಗಿ ಅಂಕಪಟ್ಟಿಯಲ್ಲಿ ದ್ವಿತೀಯ ಸ್ಥಾನ ಪಡೆದು ಅರ್ಹತೆ ಗಿಟ್ಟಿಸಿತು.

* ಶುಕ್ರವಾರ(ಜುಲೈ 11) ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ಇಟಲಿ 20 ಓವರ್ಗಳಲ್ಲಿ 134 ರನ್ ಗಳಿಸಿತು. ನೆದರ್ಲೆಂಡ್ಸ್ 16.2 ಓವರ್ಗಳಲ್ಲಿ 1 ವಿಕೆಟ್ ಕಳೆದು ಗೆಲುವು ಸಾಧಿಸಿ ಅಗ್ರಸ್ಥಾನ ಗಳಿಸಿತು. ಜೆರ್ಸಿ ಕೂಡ 5 ಅಂಕ ಗಳಿಸಿದ್ದರೂ ರನ್ ರೇಟ್ನಲ್ಲಿ ಹಿಂದಾದುದರಿಂದ ಇಟಲಿಗೆ ಅವಕಾಶ ದೊರಕಿತು.

* 2026 ರ ಟಿ20 ವಿಶ್ವಕಪ್ಗೆ ಈಗಾಗಲೇ 15 ತಂಡಗಳು ಅರ್ಹತೆ ಪಡೆದು ಮುನ್ನಡೆಯಿವೆ. ಅವುಗಳೆಂದರೆ: ಭಾರತ, ಇಂಗ್ಲೆಂಡ್, ಆಸ್ಟ್ರೇಲಿಯಾ, ಪಾಕಿಸ್ತಾನ, ಬಾಂಗ್ಲಾದೇಶ, ನ್ಯೂಜಿಲೆಂಡ್, ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಅಫ್ಘಾನಿಸ್ತಾನ, ಐರ್ಲೆಂಡ್, ಯುಎಸ್ಎ, ಕೆನಡಾ, ನೆದರ್ಲೆಂಡ್ಸ್ ಮತ್ತು ಇಟಲಿ.

* ಇನ್ನೂ ಮೂರು ತಂಡಗಳು ಏಷ್ಯಾ ಹಾಗೂ ಈಸ್ಟ್ ಏಷಿಯಾ ಪೆಸಿಫಿಕ್ (EAP) ಅರ್ಹತಾ ಪಂದ್ಯದಿಂದ ಹಾಗೂ ಎರಡು ತಂಡಗಳು ಆಫ್ರಿಕಾ ಅರ್ಹತಾ ಪಂದ್ಯದಿಂದ ಆಯ್ಕೆಯಾಗಲಿವೆ.

## ಭಾರತದಲ್ಲಿ ಟೆಸ್ಲಾದ ಪಾದಾರ್ಪಣೆ: ಮೊದಲ ಶೋರೂಂ ಮುಂಬೈನಲ್ಲಿ ಆರಂಭ




* ಅಮೆರಿಕದ ಇಲೆಕ್ಟ್ರಿಕ್ ಕಾರು ತಯಾರಿಕಾ ಸಂಸ್ಥೆ ಟೆಸ್ಲಾ, ಮುಂದಿನ ವಾರ ಭಾರತದ ಮುಂಬೈನಲ್ಲಿ ತನ್ನ ಮೊದಲ ಮಳಿಗೆಯನ್ನು ತೆರೆಯಲು ಸಜ್ಜಾಗಿದೆ. ಜುಲೈ 15ರಂದು ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್ನಲ್ಲಿ ಈ ಮಳಿಗೆ ಉದ್ಘಾಟನೆ ಆಗಲಿದೆ.

* ಈ ಮೂಲಕ ಟೆಸ್ಲಾ ಭಾರತದಲ್ಲಿ ಅಧಿಕೃತವಾಗಿ ಮಾರುಕಟ್ಟೆ ಪ್ರವೇಶಿಸಲಿದೆ. ಕಂಪನಿಯ ಪ್ರಕಾರ, ಇದು ಭಾರತದಲ್ಲಿ ಆರಂಭವಾಗುವ ಮೊದಲ ಮಳಿಗೆ.

* ಟೆಸ್ಲಾ ₹8.58 ಕೋಟಿ ಮೌಲ್ಯದ ಕಾರು ಮತ್ತು ಪರಿಕರಗಳನ್ನು ಈಗಾಗಲೇ ಆಮದು ಮಾಡಿಸಿದೆ. ಭಾರತದಲ್ಲಿ ಕಾರು ಆಮದಿಗೆ ಶೇ.70ರಷ್ಟು ಸುಂಕ ಪಾವತಿಸಬೇಕಾಗುತ್ತದೆ. ಇದರೊಂದಿಗೆ, ಟೆಸ್ಲಾ ಜಗತ್ತಿನ ಮೂರನೇ ಅತಿದೊಡ್ಡ ಕಾರು ಮಾರುಕಟ್ಟೆಯಾಗಿರುವ ಭಾರತವನ್ನು ಟಾರ್ಗೆಟ್ ಮಾಡುತ್ತಿದೆ.

* ಈ ಹಿಂದೆ, ಟೆಸ್ಲಾ ಮುಂಬೈನ ಲೋಧಾ ಲಾಜಿಸ್ಟಿಕ್ಸ್ ಪಾರ್ಕ್ನಲ್ಲಿ 24,565 ಚದರ ಅಡಿ ಸ್ಥಳವನ್ನು ಐದು ವರ್ಷಗಳ ಗುತ್ತಿಗೆ ಮೇಲೆ ಪಡೆದುಕೊಂಡಿತ್ತು.

## ಯುಪಿಐ ಬಳಕೆಯಲ್ಲಿ ಕರ್ನಾಟಕಕ್ಕೆ ದ್ವಿತೀಯ ಸ್ಥಾನ




* ಈ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ (ಏಪ್ರಿಲ್-ಜೂನ್ ಅವಧಿಯಲ್ಲಿ) ಯುಪಿಐ ವಹಿವಾಟಿನಲ್ಲಿ ಮಹಾರಾಷ್ಟ್ರ ಮುಂಚೂಣಿಯಲ್ಲಿದ್ದು, ಕರ್ನಾಟಕ ದ್ವಿತೀಯ ಸ್ಥಾನ ಪಡೆದಿದೆ. ತದನಂತರ ಉತ್ತರ ಪ್ರದೇಶ, ತೆಲಂಗಾಣ ಮತ್ತು ತಮಿಳುನಾಡು ಕ್ರಮವಾಗಿ ಮುಂದಿನ ಸ್ಥಾನಗಳಲ್ಲಿ ಸಾಗಿದೆ.

KPSCVaani

* ಮೇ ತಿಂಗಳಲ್ಲಿ ಮೊದಲ ನಾಲ್ಕು ರಾಜ್ಯಗಳು 10 ಲಕ್ಷಕ್ಕಿಂತ ಅಧಿಕ ವಹಿವಾಟುಗಳನ್ನು ದಾಖಲಿಸಿದ್ದರೆ, ಜೂನ್‌ನಲ್ಲಿ ಈ ಸಂಖ್ಯೆ ಸ್ವಲ್ಪ ಇಳಿಕೆ ಕಂಡಿದೆ.
* ದೇಶದಾದ್ಯಂತ ತಿಂಗಳಿಗೆ ಸರಾಸರಿ 24 ಲಕ್ಷ ಕೋಟಿ ರೂಪಾಯಿಗಳ ಮೌಲ್ಯದ ಯುಪಿಐ ವಹಿವಾಟುಗಳು ನಡೆಯುತ್ತವೆ.
* ಮೇ ತಿಂಗಳಲ್ಲಿ ಮಹಾರಾಷ್ಟ್ರದಲ್ಲಿ 3 ಲಕ್ಷ ಕೋಟಿ ರೂ. ಮೌಲ್ಯದ ವಹಿವಾಟುಗಳು ನಡೆದಿದ್ದರೆ, ಕರ್ನಾಟಕದಲ್ಲಿ ಸುಮಾರು 2 ಲಕ್ಷ ಕೋಟಿ ರೂ. ವಹಿವಾಟು ನಡೆದಿದೆ.
* ಉತ್ತರ ಪ್ರದೇಶದಲ್ಲಿ 1.8 ಲಕ್ಷ ಕೋಟಿ ರೂ. ಮತ್ತು ತೆಲಂಗಾಣದಲ್ಲಿ 1.75 ಲಕ್ಷ ಕೋಟಿ ರೂ. ಯುಪಿಐ ವಹಿವಾಟುಗಳು ದಾಖಲೆಯಾಗಿವೆ.

## ಬುಡಕಟ್ಟು ವಿದ್ಯಾರ್ಥಿಗಳ ಅಭಿವೃದ್ಧಿಗೆ 'ತಲಾಶ್' ಯೋಜನೆ




* ರಾಷ್ಟ್ರೀಯ ಬುಡಕಟ್ಟು ವಿದ್ಯಾರ್ಥಿಗಳ ಶಿಕ್ಷಣ ಸಂಘ (NESTS) ಮತ್ತು ಯುನಿಸೆಫ್ ಸಹಯೋಗದಲ್ಲಿ "ತಲಾಶ್" ಉಪಕ್ರಮವನ್ನು ಆರಂಭಿಸಲಾಗಿದೆ.
* ಇದು ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ (EMRS) ಅಧ್ಯಯನ ಮಾಡುವ ಬುಡಕಟ್ಟು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ವೈಯಕ್ತಿಕ ಬೆಳವಣಿಗೆಗೆ ಸಮರ್ಪಿತ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮವಾಗಿದೆ.
* ತಲಾಶ್ ಒಂದು ಡಿಜಿಟಲ್ ವೇದಿಕೆ ಆಗಿದ್ದು, ಇದು ವಿದ್ಯಾರ್ಥಿಗಳ ಸ್ವಯಂ ಜಾಗೃತಿ, ವೃತ್ತಿ ಯೋಜನೆ ಹಾಗೂ ಜೀವನ ಕೌಶಲ್ಯಗಳ ಅಭಿವೃದ್ಧಿಗೆ ನೆರವಾಗುತ್ತದೆ.
* ವಿದ್ಯಾರ್ಥಿಗಳಲ್ಲಿ ಆತ್ಮನಂಬಿಕೆ, ಉದ್ದೇಶಪೂರ್ಣ ವೃತ್ತಿ ಆಯ್ಕೆ ಹಾಗೂ ಜೀವನ ನಿರ್ವಹಣಾ ಕೌಶಲ್ಯಗಳ ಅಭಿವೃದ್ಧಿಗೆ ಈ ವೇದಿಕೆಯಿಂದ ಸಹಾಯ ಮಾಡಲಾಗುತ್ತದೆ.
* ಈ ಉಪಕ್ರಮವು ತಂತ್ರಜ್ಞಾನವನ್ನು ಬಳಸಿ ದೂರದ ಬುಡಕಟ್ಟು ಪ್ರದೇಶಗಳ ಯುವಕರಿಗೆ ತಲುಪುತ್ತದೆ. ವಿದ್ಯಾರ್ಥಿಗಳ ಶಿಕ್ಷಣ, ಭಾವನಾತ್ಮಕ ಒಳಗೊಳ್ಳುವಿಕೆ ಹಾಗೂ ಉದ್ದೇಶದ ಅಂತರವನ್ನು ಕಡಿಮೆ ಮಾಡುವುದು ಇದರ ಉದ್ದೇಶವಾಗಿದೆ.
* ಇದು ರಾಷ್ಟ್ರೀಯ ಶಿಕ್ಷಣ ನೀತಿ 2020 ನ ಉದ್ದೇಶಗಳೊಂದಿಗೆ ಕೂಡ ಹೊಂದಾಣಿಕೆಯಾಗುತ್ತದೆ.
* ಈ ಯೋಜನೆಯ ಭಾಗವಾಗಿ, ಋತುಚಕ್ರ ಸಂಬಂಧಿತ ನೈರ್ಮಲ್ಯ ಉತ್ಪನ್ನಗಳ ವಿತರಣೆಗಾಗಿ ವಿಶೇಷ ಅಭಿಯಾನಗಳನ್ನು ಕೂಡ ಕೈಗೊಳ್ಳಲಾಗಿದೆ, ಇದರಿಂದ ಬಾಲಕಿಯರ ಆರೋಗ್ಯ ಮತ್ತು ಗೌರವಪೂರ್ಣ ಶಿಕ್ಷಣಕ್ಕೆ ಸಹಕಾರಿಯಾಗುತ್ತದೆ.

# 14 July 2025

## ರೇಲ್ವೆ ಭದ್ರತಾ ಪಡೆ ಮೊದಲ ಮಹಿಳಾ ಡಿಜಿ ಸೋನಾಲಿ



* ರೈಲ್ವೆ ಭದ್ರತಾ ಪಡೆಯ (ಆರ್‌ಪಿಎಫ್) ಮಹಾನಿರ್ದೇಶಕರನ್ನಾಗಿ ಹಿರಿಯ ಐಪಿಎಸ್ ಅಧಿಕಾರಿ ಸೋನಾಲಿ ಮಿಶ್ರಾ ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ. ಸೋನಾಲಿ ಅವರು ಈ ಹುದ್ದೆಗೆ ಏರುತ್ತಿರುವ ಮೊದಲ ಮಹಿಳಾ ಐಪಿಎಸ್ ಅಧಿಕಾರಿಯಾಗಿದ್ದಾರೆ.
* ಇದೇ ಮೊದಲ ಬಾರಿಗೆ ಆರ್‌ಪಿಎಫ್‌ನ ಉನ್ನತ ಹುದ್ದೆಯ ಜವಾಬ್ದಾರಿಯನ್ನು ಮಹಿಳಾ ಅಧಿಕಾರಿಗೆ ವಹಿಸಲಾಗಿದೆ.
* ಮಧ್ಯಪ್ರದೇಶ ಕೇಡರ್‌ನ 1993 ರ ಬ್ಯಾಚ್‌ನ ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಅಧಿಕಾರಿ ಸೋನಾಲಿ ಮಿಶ್ರಾ ಅವರು ಅಕ್ಟೋಬರ್ 31, 2026 ರಂದು ನಿವೃತ್ತರಾಗುವವರೆಗೆ ಆರ್‌ಪಿಎಫ್‌ನ ಮಹಾನಿರ್ದೇಶಕರ ಹುದ್ದೆಯನ್ನು ಅಲಂಕರಿಸಲಿದ್ದಾರೆ.
* ಸಿಬ್ಬಂದಿ ಸಚಿವಾಲಯ ಹೊರಡಿಸಿದ ಆದೇಶದ ಪ್ರಕಾರ ಸಂಪುಟದ ನೇಮಕಾತಿ ಸಮಿತಿಯು ಸೋನಾಲಿ ಮಿಶ್ರಾ ಅವರನ್ನು ಈ ಹುದ್ದೆಗೆ ನೇಮಕ ಮಾಡಲು ಅನುಮೋದನೆ ನೀಡಿದೆ.
* ಜುಲೈ 31 ರಂದು ನಿವೃತ್ತರಾಗಲಿರುವ ಮಹಾನಿರ್ದೇಶಕ ಮನೋಜ್ ಯಾದವ್ ಅವರ ಸ್ಥಾನವನ್ನು ಅವರು ವಹಿಸಿಕೊಳ್ಳಲಿದ್ದಾರೆ. ಸೋನಾಲಿ ಮಿಶ್ರಾ ಆರ್‌ಪಿಎಫ್‌ನ ಮುಖ್ಯಸ್ಥರಾಗಲಿರುವ ಮೊದಲ ಮಹಿಳಾ ಅಧಿಕಾರಿಯಾಗಲಿದ್ದಾರೆ. ರೈಲ್ವೆ ಆಸ್ತಿ ಮತ್ತು ಪ್ರಯಾಣಿಕರ ಭದ್ರತೆ ಸೇರಿದಂತೆ ಕರ್ತವ್ಯಗಳನ್ನು ಆರ್‌ಪಿಎಫ್ ನಿರ್ವಹಿಸುತ್ತದೆ.
* ಪ್ರಸ್ತುತ ಸೋನಾಲಿ ಮಿಶ್ರಾ ಅವರನ್ನು ಮಧ್ಯಪ್ರದೇಶ ಪೊಲೀಸರಲ್ಲಿ ಹೆಚ್ಚುವರಿ ಮಹಾನಿರ್ದೇಶಕ (ಆಯ್ಕೆ) ಆಗಿ ನೇಮಿಸಲಾಗಿದೆ.
* 1957 ರಲ್ಲಿ ಸಂಸತ್ತಿನ ಕಾಯಿದೆಯ ಮೂಲಕ ಆರ್‌ಪಿಎಫ್ ಅನ್ನು ರಚಿಸಲಾಯಿತು. 1966 ರಲ್ಲಿ ರೈಲ್ವೆ ಆಸ್ತಿಯನ್ನು ಅಕ್ರಮವಾಗಿ ಹೊಂದಿದ್ದ ಅಪರಾಧಿಗಳನ್ನು ವಿಚಾರಣೆ ಮಾಡಲು, ಬಂಧಿಸಲು ಮತ್ತು ವಿಚಾರಣೆಗೆ ಒಳಪಡಿಸಲು ಈ ಪಡೆಗೆ ಅವಕಾಶವಿತ್ತು. ಇದಕ್ಕೆ ಸೆಪ್ಟೆಂಬರ್ 20, 1985 ರಂದು "ಯೂನಿಯನ್ ಸಶಸ್ತ್ರ ಪಡೆ" ಎಂಬ ಸ್ಥಾನಮಾನವನ್ನು ನೀಡಲಾಯಿತು.

## ಕೈವಲ್ಯ ಕುಮಾರ್ ಗುರವಗೆ 'ಕೊಹಿನೂರ್ ಗಂಧರ್ವ' ಪ್ರಶಸ್ತಿ



* ಪುಣೆಯ ಬಾಲಗಂಧರ್ವ ಸಂಗೀತ ರಸಿಕ ಮಂಡಳಿ ಕೊಡಮಾಡುವ ಪ್ರತಿಷ್ಠಿತ 'ಕೊಹಿನೂರ್ ಗಂಧರ್ವ' ಪ್ರಶಸ್ತಿಗೆ ಧಾರವಾಡದ ಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕ ಪಂಡಿತ್ ಕೈವಲ್ಯ ಕುಮಾರ್ ಗುರವ ಆಯ್ಕೆಯಾಗಿದ್ದಾರೆ.

KPSCVaani


* ಸಂಗೀತ ಮತ್ತು ನಾಟಕ ಕಲೆಯಲ್ಲಿ ಅಪೂರ್ವ ಸಾಧನೆ ಮಾಡಿದ ಕಲಾವಿದರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.
* ಈ ಪುಣೆಯ ಮರಾಠಿ ಗಾಯಕ, ರಂಗ ನಟ, ಬಾಲ ಗಂಧರ್ವರ ಸ್ಮರಣೆಯಲ್ಲಿ 50 ವರ್ಷಗಳಿಂದ ಪ್ರಶಸ್ತಿ ನೀಡಲಾಗುತ್ತಿದೆ. ಇದೇ ಮೊದಲ ಬಾರಿಗೆ ಮಹಾರಾಷ್ಟ್ರದ ಹೊರಗಿನ ಕಲಾವಿದರಿಗೆ ಪ್ರಶಸ್ತಿ ಘೋಷಿಸಲಾಗಿದೆ.
* ಈ ಪ್ರಶಸ್ತಿಯು ₹ 1,11,111 ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ.
* ಮಂಡಳಿಯು ವಿದುಷಿ ಮಂಜೂಷಾ ಕುಲಕರ್ಣಿ ಪಾಟೀಲ ಅವರಿಗೆ 'ಬಾಲಗಂಧರ್ವ ಗುಣಗೌರವ' ಪುರಸ್ಕಾರವನ್ನೂ ಪ್ರಕಟಿಸಿದೆ. ಜುಲೈ 15ರಂದು ಪುಣೆಯ ಬಾಲಗಂಧರ್ವ ರಂಗಮಂದಿರದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

## ಚೊಚ್ಚಲ ವಿಂಬಲ್ಡನ್ ಚಾಂಪಿಯನ್ ಶಿಪ್ ಗೆದ್ದ ಯಾನ್ನಿಕ್ ಸಿನ್ನರ್




* ವಿಶ್ವ ನಂ.1 ಆಟಗಾರ ಇಟಲಿಯ ಯಾನ್ನಿಕ್ ಸಿನ್ನರ್ 2025ರ ವಿಂಬಲ್ಡನ್ ಪುರುಷರ ಸಿಂಗಲ್ಸ್‌ನಲ್ಲಿ ತನ್ನ ಮೊದಲ ಪ್ರಶಸ್ತಿ ಜಯಿಸಿದರು.
* ಫೈನಲ್ನಲ್ಲಿ ಸ್ಪೇನ್ನ ಕಾರ್ಲೋಸ್ ಆಲ್ಕರಜ್ ವಿರುದ್ಧ 4-6, 6-4, 6-4, 6-4 ಸೆಟ್ಗಳಲ್ಲಿ ಗೆದ್ದರು.
* 2023, 2024ರಲ್ಲಿ ವಿಂಬಲ್ಡನ್ ಜಯಿಸಿದ್ದ ಆಲ್ಕರಜ್ ಈ ಬಾರಿಗೆ ಹ್ಯಾಟ್ರಿಕ್ ಸಾಧನೆಯ ಕನಸು ಕಂಡಿದ್ದರು. ಆದರೆ ಸಿನ್ನರ್ ವಿರುದ್ಧ ಸೋತು, ಅವರ 20 ಜಯಗಳ ಸರಣಿಗೂ ತೆರೆ ಬಿತ್ತು.
* ಇದು ಸಿನ್ನರ್ಗೆ ಈ ವರ್ಷದ 2ನೇ ಮತ್ತು ಒಟ್ಟಾರೆ 4ನೇ ಗ್ರ್ಯಾಂಡ್ ಸ್ಲಾಂ. ಫ್ರೆಂಚ್ ಓಪನ್ನಲ್ಲಿ ಆಲ್ಕರಜ್ಗೆ ಸೋತಿದ್ದ ಸಿನ್ನರ್, ಲಂಡನ್ನಲ್ಲಿ ಅದಕ್ಕೆ ಸೇಡು ತೀರಿಸಿದರು.
* ಸಿನ್ನರ್ ಗೆದ್ದ ಹಣದ ಬಹುಮಾನ ರೂ. 34.75 ಕೋಟಿ, ಆಲ್ಕರಜ್ಗೆ ರೂ. 17.61 ಕೋಟಿ ದೊರೆಯಿತು.
* ವೆರೋನಿಕಾ ಕುಡೆರ್ಮೆಟೋವಾ (ರಷ್ಯಾ) ಮತ್ತು ಎಲಿಸ್ ಮೆರ್ಟೆನ್ಸ್ (ಬೆಲ್ಜಿಯಂ) ಜೋಡಿ ಮಹಿಳಾ ಡಬಲ್ಸ್ ಪ್ರಶಸ್ತಿ ಗೆದ್ದರು. ಅವರು ಹ್ಸೀವ್ ಸು-ವೀ ಮತ್ತು ಜೆಲೆನಾ ಒಸ್ತಾಪೆಂಕೊ ವಿರುದ್ಧ 3-6, 6-2, 6-4 ಸೆಟ್ಗಳಲ್ಲಿ ಜಯ ಸಾಧಿಸಿದರು.
* ತಮಿಳುನಾಡಿನ 24 ವರ್ಷದ ಹರಿಕೃಷ್ಣನ್ ಭಾರತದಿಂದ 87ನೇ ಗ್ರ್ಯಾಂಡ್ ಮಾಸ್ಟರ್ ಆಗಿ ಹೊರಹೊಮ್ಮಿದ್ದಾರೆ.

## Wimbledon 2025: ಇಗಾ ಶ್ವಾಂಟೆಕ್ಗೆ ಮೊದಲ ವಿಂಬಲ್ಡನ್ ಕಿರೀಟ



* 2025ರ ವಿಂಬಲ್ಡನ್ ಮಹಿಳಾ ಏಕಲವ್ಯ ವಿಭಾಗದಲ್ಲಿ, ಪೋಲೆಂಡ್ನ ಟೆನಿಸ್ ತಾರೆ ಇಗಾ ಶ್ವಾಂಟೆಕ್ ತಮ್ಮ ಮೊದಲ ವಿಂಬಲ್ಡನ್ ಕಿರೀಟವನ್ನು ಗೆದ್ದು ಟೂರ್ನಿಯಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ. ಜುಲೈ 13 ರಂದು ನಡೆದ ಫೈನಲ್ ಪಂದ್ಯದಲ್ಲಿ ಅವರು ಅಮೆರಿಕದ ಅಮಂಡಾ ಅನಿಸಿಮೋವಾ ಅವರ ವಿರುದ್ಧ ನಿಭಾಯಿಸಿದ ಸೆಟ್ಗಳಲ್ಲಿ 6–3, 3–6, 6–4 ಅಂಶಗಳಿಂದ ಜಯ ಸಾಧಿಸಿದರು.
* ಅನುಭವಿ ಶ್ವಾಂಟೆಕ್ ಕೇವಲ 57 ನಿಮಿಷಗಳಲ್ಲಿ ಪಂದ್ಯ ಮುಗಿಸಿ, ಪ್ರತಿಸ್ಪರ್ಧಿಗೆ ಹೋರಾಟಕ್ಕೆ ಅವಕಾಶವೇ ನೀಡಲಿಲ್ಲ. ಸೆಂಟರ್ ಕೋರ್ಟ್ ಪ್ರೇಕ್ಷಕರಿಗೆ ಇದು ಆಘಾತದ ಅನುಭವವಾಯಿತು.
* ಅನಿಸಿಮೋವಾ 1911ರಿಂದ ವಿಂಬಲ್ಡನ್ ಫೈನಲ್ನಲ್ಲಿ 6–0, 6–0 ರಿಂದ ಸೋತ ಮೊದಲ ಆಟಗಾರ್ತಿ ಎನ್ನುವ ಅನವಶ್ಯಕ ದಾಖಲೆ ಹೊಂದಿದರು. ಇದೇ ರೀತಿಯ ಸ್ಕೋರ್ಲೈನ್ ಕೊನೆಯದಾಗಿ 1988ರ ಫ್ರೆಂಚ್ ಓಪನ್ನಲ್ಲಿ ಕಂಡಿತ್ತು.

ವಿಶೇಷ ಅಂಶಗಳು:
* ಶ್ವಾಂಟೆಕ್ ಅವರ ಮೊದಲ ಗ್ರಾಸ್ ಕೋರ್ಟ್ ಗ್ರ್ಯಾಂಡ್ ಸ್ಲ್ಯಾಮ್ ಗೆಲುವು ಇದಾಗಿದೆ.
* ವಿಶ್ವ ನಂ.1 ಸ್ಥಾನವನ್ನು ಮತ್ತೊಮ್ಮೆ ಖಚಿತಪಡಿಸಿಕೊಂಡಿದ್ದಾರೆ.
* ಈ ವಿಜಯದಿಂದ ಅವರು 'ಕ್ಲೇ ಕ್ವೀನ್' ಅಷ್ಟೇ ಅಲ್ಲ, ಈಗ ಆಲ್-ಸರ್ಫೇಸ್ ಚಾಂಪಿಯನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.
* ಈಗ ಅವರು 5 ಗ್ರಾಂಡ್ ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿದ್ದಾರೆ – (4 ಫ್ರೆಂಚ್ ಓಪನ್ + 1 ವಿಂಬಲ್ಡನ್)
* ಈ ಜಯದಿಂದ ಇಗಾ ಶ್ವಾಂಟೆಕ್ ಅವರು ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿಗಳ ಸಂಖ್ಯೆ 6ಕ್ಕೆ ಏರಿಸಿಕೊಂಡಿದ್ದಾರೆ. ಈ ಹಿಂದೆ ಅವರು ಫ್ರೆಂಚ್ ಓಪನ್ನಲ್ಲಿ ನಾಲ್ಕು ಬಾರಿ ಮತ್ತು ಯುಎಸ್ ಓಪನ್ನಲ್ಲಿ ಒಂದು ಬಾರಿ ವಿಜೇತರಾಗಿದ್ದರು.



## 125 ಬಸ್ಸಳಲ್ಲಿ ಆನ್ಬೋರ್ಡ್ ತಂತ್ರಜ್ಞಾನ ಅಳವಡಿಕೆ: ರಾಮಲಿಂಗಾರೆಡ್ಡಿ



* ಬಿಎಂಟಿಸಿ ತನ್ನ 125 ಬಸ್ಸಳಲ್ಲಿ ದೃಷ್ಟಿದೋಷದವರ ಅನುಕೂಲಕ್ಕಾಗಿ ಆನ್ಬೋರ್ಡ್ ತಂತ್ರಜ್ಞಾನವನ್ನು ಅಳವಡಿಸಿದೆ. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಇದರ ಉದ್ಘಾಟನೆ ನಡೆಸಿದರು.
* ಮುಂದಿನ ಹಂತದಲ್ಲಿ 500 ಬಸ್ಸಳಿಗೆ ಮತ್ತು ನಂತರ ಎಲ್ಲಾ ಬಸ್ಸಳಿಗೆ ಈ ತಂತ್ರಜ್ಞಾನ ವಿಸ್ತರಿಸಲಾಗುವುದು.
* ಈ ತಂತ್ರಜ್ಞಾನವನ್ನು ಕಾಂಟಿನೆಂಟಲ್ ಆಟೋಮೋಟಿವ್, ಐಐಟಿ ದೆಹಲಿ, ರೈಸ್ಟ ಲೈನ್ಸ್ ಫೌಂಡೇಷನ್ ಮತ್ತು ಎನೇಬಲ್ ಇಂಡಿಯಾ ಸೇರಿ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿದೆ.
* 401 ಹಾಗೂ 242ಬಿ ಮಾರ್ಗದ 25 ಬಸ್ಸಳಲ್ಲಿ ತಂತ್ರಜ್ಞಾನವನ್ನು ಪೈಲಟ್ ಆಧಾರದಲ್ಲಿ ಬಳಸಲಾಗಿದೆ. 500 ಪ್ರಯಾಣಿಕರಿಗೆ ತರಬೇತಿ ನೀಡಲಾಗಿದ್ದು, 25 ಪ್ರಯಾಣಿಕರು ಉಪಕರಣವನ್ನು ಯಶಸ್ವಿಯಾಗಿ ಉಪಯೋಗಿಸಿದ್ದಾರೆ.
* ಬಿಎಂಟಿಸಿ ಎಂ.ಡಿ ರಾಮಚಂದ್ರನ್ ಆರ್. ಅವರು ಎಲ್ಲರಿಗೂ ಸಮಾನ ಸಂಚಾರ ಅನುಭವ ಒದಗಿಸುವುದು ಉದ್ದೇಶವನ್ನಾಗಿ ಹೇಳಿದ್ದಾರೆ. ಬಸ್ಸಳಲ್ಲಿ ಯಾವುದೇ ದೈಹಿಕ ನ್ಯೂನತೆಗಳೇ ತೊಡಕಾಗಬಾರದು ಎಂದು ತಿಳಿಸಿದ್ದಾರೆ.
* ಆನ್ಬೋರ್ಡ್ ಸಾಧನವು ದೃಷ್ಟಿದೋಷ ಹೊಂದಿರುವವರು ಬಸ್ ಸಂಖ್ಯೆಯನ್ನು ಗುರುತಿಸಲು, ಬಸ್ ಹತ್ತಲು ಹಾಗೂ ಇಳಿಯುವ ಸ್ಥಳದಲ್ಲಿ ಸಹಾಯ ಮಾಡಲು ಧ್ವನಿವರ್ಧಿತ ಸೂಚನೆ ನೀಡುತ್ತದೆ. ಇದರ ಮೂಲಕ ಚಾಲಕರಿಗೂ ನಿರ್ವಾಹಕರಿಗೂ ಸಹಜ ಸಂವಹನ ಸಾಧ್ಯವಾಗುತ್ತದೆ.

## ಬಿಎಂಟಿಸಿಗೆ 148 ಹೊಸ ಎಲೆಕ್ಟ್ರಿಕ್ ಬಸ್ಸಳ ಸೇರ್ಪಡೆ



* ಬಿಎಂಟಿಸಿಗೆ ಹೊಸದಾಗಿ ಟಾಟಾ ಕಂಪನಿಯಿಂದ 148 ಎಲೆಕ್ಟ್ರಿಕ್ ಬಸ್ಸಳು ಸೇರಿವೆ. ಜುಲೈ 12 ರಂದು ಶಾಂತಿನಗರದಲ್ಲಿ ಸಾರಿಗೆ ಸಚಿವ ರಾಮಲಿಂಗರೆಡ್ಡಿ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು. ಈ ಬಸ್ಸಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಅವಕಾಶವಿದೆ.
* ಈ ಬಸ್ಸಳು 41.1 ಪೈಸೆ/ಕಿ.ಮೀ. ಗುತ್ತಿಗೆ ಆಧಾರದಲ್ಲಿ ಸಂಚರಿಸಲಿದೆ. 30 ಬಿಎಂಟಿಸಿ ಮಾರ್ಗಗಳಲ್ಲಿ ಕಾರ್ಯನಿರ್ವಹಿಸಲಿರುವ ಈ ಬಸ್ಸಳು 12 ವರ್ಷಗಳ ಸೇವಾ ಅವಧಿ ಹೊಂದಿವೆ.
* ಡ್ರೈವರ್ಗಳು ಖಾಸಗಿ ಕಂಪನಿಯಿಂದ ನಿಯೋಜನೆ ಆಗಲಿದ್ದು, ಕಂಡಕ್ಟರ್ಗಳನ್ನು ಬಿಎಂಟಿಸಿ ನೇಮಿಸಲಿದೆ.
* 12 ಮೀ ಉದ್ದದ ಬಸ್ಸಳು ಎಸಿ ಇಲ್ಲದ ಎಲೆಕ್ಟ್ರಿಕ್ ಬಸ್ಸಳಾಗಿದ್ದು, 200 ಕಿ.ಮೀ ಚಾರ್ಜ್ ಬೆನ್ನು ಹತ್ತಿ ಸಂಚರಿಸಬಲ್ಲವು. ಬಸ್ಸಲ್ಲಿ 35 ಆಸನಗಳು ಮತ್ತು 1 ಗಾಲಿ ಕುರ್ಚಿಗೆ ಅವಕಾಶವಿದೆ. ಮಹಿಳಾ ಭದ್ರತೆಗಾಗಿ 10 ಪ್ಯಾನಿಕ್ ಬಟನ್ಗಳು ಹಾಗೂ 4 ಕ್ಯಾಮೆರಾಗಳು ಅಳವಡಿಸಲಾಗಿದೆ.
* ಬಸ್ಸಲ್ಲಿ 4 ಎಲ್.ಇ.ಡಿ ಬೋರ್ಡ್ಗಳು, ಧ್ವನಿ ಪ್ರಕಟಣಾ ವ್ಯವಸ್ಥೆ, ಅಗ್ನಿ ಪತ್ತೆ ವ್ಯವಸ್ಥೆ (FDAS), ಜಿಪಿಎಸ್ ನಿಗಾವ್ಯವಸ್ಥೆ ಇದೆ. ಹಿರಿಯ ನಾಗರಿಕರು, ವಿಕಲಾಂಗರು ಸುಲಭವಾಗಿ ಹೋಗಲು ಬಸ್ ಬಾಗುವ ವ್ಯವಸ್ಥೆ ಮತ್ತು ನಿಲುಗಡೆ ಬಟನ್ನಳೂ ಅಳವಡಿಸಲಾಗಿದೆ.
* ಈ ಸೇರ್ಪಡೆ ಜೊತೆಗೆ ಬಿಎಂಟಿಸಿಯ ಒಟ್ಟು ಬಸ್ ಸಂಖ್ಯೆ 7,048ಕ್ಕೆ ಏರಿದೆ. ಎಲ್ಲ 148 ಬಸ್ಸಳು ಘಟಕ-04 (ಜಯನಗರ) ಡಿಪೋ ಮೂಲಕ ಸಂಚರಿಸಲಿವೆ.

## ಹರಿಕೃಷ್ಣ.A ಭಾರತದ 87 ನೇ ಗ್ರಾಂಡ್ ಮಾಸ್ಟರ್



* ಹರಿಕೃಷ್ಣನ್ ಎ. ರಾ. ಅವರು ಎಂಟು ವರ್ಷಗಳ ಅಂತರರಾಷ್ಟ್ರೀಯ ಮಾಸ್ಟರ್ ಅನುಭವದ ನಂತರ, ಕೊನೆಗೂ ಗ್ರ್ಯಾಂಡ್ ಮಾಸ್ಟರ್ (GM) ಪದವಿಯನ್ನು ಗಳಿಸಿದ್ದಾರೆ.
* ಕಳೆದ ಹಲವು ವರ್ಷಗಳಲ್ಲಿ ಅನೇಕ ಪ್ರಯತ್ನಗಳ ನಂತರ, ಫ್ರಾನ್ಸಲ್ಲಿ ನಡೆದ ಲಾ ಪ್ಲಾಗ್ನೆ ಅಂತರರಾಷ್ಟ್ರೀಯ ಚೆಸ್ ಉತ್ಸವದಲ್ಲಿ ಅವರು ತಮ್ಮ ಮೂರನೇ GM-ನಾರ್ಮ್ ಪಡೆದರು.
* ಜುಲೈ 11, ಭಾರತ ಆಟಗಾರ ಪಿ. ಇನಿಯನ್ ಅವರೊಂದಿಗೆ ಡ್ರಾ ಮಾಡಿಕೊಂಡು ನಾಲ್ಕನೇ ಸ್ಥಾನ ಪಡೆದ ಹರಿಕೃಷ್ಣನ್, ಭಾರತದ 87ನೇ ಗ್ರ್ಯಾಂಡ್ ಮಾಸ್ಟರ್ ಆದರು. ಈ ಸಾಧನೆಯೊಂದಿಗೆ ಅವರು ಬಹುಕಾಲದ ಹೋರಾಟವನ್ನು ಜಯಿಸಿದರು.
* 2023ರಲ್ಲಿ ಸ್ವಿಟ್ಜರ್ಲ್ಯಾಂಡ್ನಲ್ಲಿ ಮೊದಲ GM-ನಾರ್ಮ್ ಮತ್ತು 2024ರ ಜೂನ್ನಲ್ಲಿ ಸ್ಪೇನ್ನಲ್ಲಿ ಎರಡನೇ ನಾರ್ಮ್ ಗಳಿಸಿದ್ದರು. ಅಂತಿಮ ಎರಡು ಸುತ್ತುಗಳಲ್ಲಿ 1.5 ಅಂಕಗಳ ಅಗತ್ಯವಿತ್ತು, ಆದರೆ ಅವರು ಒತ್ತಡದ ನಡುವೆ ಅದನ್ನು ಪೂರೈಸುವಲ್ಲಿ ಯಶಸ್ವಿಯಾಗಿದರು.
* ಎಂ.ಕಾಂ ಪದವಿಯನ್ನು ಪಡೆದ ಅವರು ಈಗಾಗಲೇ ಸ್ಪೇನ್ ಮತ್ತು ಪೋರ್ಚುಗಲ್ನಲ್ಲಿ ಮುಂದಿನ ಪಂದ್ಯಾವಳಿಗಳ ಬಗ್ಗೆ ಯೋಚಿಸುತ್ತಿದ್ದಾರೆ. ಅವರು 2600 ಎಲೋ ರೇಟಿಂಗ್ ಗುರಿಯಾಗಿಟ್ಟುಕೊಂಡಿದ್ದು, ಮುಂದಿನ ವರ್ಷ ಅಮೆರಿಕಾದಲ್ಲಿ ಎಂ.ಬಿ.ಎ ಪದವಿಗೆ ಪ್ರವೇಶ ಪಡೆಯಲು ಉತ್ಸುಕರಾಗಿದ್ದಾರೆ.

## ಪ್ರವಾಸೋದ್ಯಮ ಭಾರತಕ್ಕೆ 8 ನೇ ಸ್ಥಾನ



* ಕೋವಿಡ್ ನಂತರದ ಅವಧಿಯಲ್ಲಿ ಜಾಗತಿಕ ಪ್ರವಾಸೋದ್ಯಮ ವಲಯವು ಚೇತರಿಸಿಕೊಂಡಿದ್ದು, ಭಾರತ 2023ರ ವೇಳೆಗೆ ಎಂಟನೇ

ಸ್ಥಾನದಲ್ಲಿದೆ ಎಂದು ವಿಶ್ವ ಪ್ರಯಾಣ ಮತ್ತು ಪ್ರವಾಸೋದ್ಯಮ ಮಂಡಳಿ (WTTC) ತಿಳಿಸಿದೆ.
* 2023ರಲ್ಲಿ ಪ್ರವಾಸೋದ್ಯಮ ವಲಯವು ಜಾಗತಿಕ ಆರ್ಥಿಕತೆಗೆ 10.9 ಟ್ರಿಲಿಯನ್ ಡಾಲರ್‌ಗಳಷ್ಟು ಕೊಡುಗೆ ನೀಡಿದ್ದು, 2034ರ ವೇಳೆಗೆ ಇದು 16 ಟ್ರಿಲಿಯನ್ ಡಾಲರ್‌ಗಳಿಗೆ ಏರಲಿದೆ.
* ಈ ಸಮಯದಲ್ಲಿ ಜಾಗತಿಕ ಜಿಡಿಪಿಯಲ್ಲಿ ಈ ವಲಯದ ಪಾಲು ಶೇ.11ಕ್ಕೂ ಹೆಚ್ಚು ಆಗಲಿದೆ.
* ಅಮೆರಿಕ 2.36 ಟ್ರಿಲಿಯನ್ ಡಾಲರ್‌ಗಳ ಪ್ರವಾಸೋದ್ಯಮ ಆರ್ಥಿಕತೆಯಿಂದ ಮೊದಲ ಸ್ಥಾನದಲ್ಲಿದ್ದು, ನಂತರ ಚೀನಾ, ಜರ್ಮನಿ, ಜಪಾನ್, ಇಂಗ್ಲೆಂಡ್, ಫ್ರಾನ್ಸ್, ಮೆಕ್ಸಿಕೋ ಮತ್ತು ಭಾರತ ಇದೆ.
* WTTC ವರದಿ ಪ್ರಕಾರ, ಮುಂದಿನ ದಶಕದಲ್ಲಿ ಭಾರತ ಜಾಗತಿಕ ಪ್ರವಾಸೋದ್ಯಮ ಆರ್ಥಿಕತೆಯಲ್ಲಿ ನಾಲ್ಕನೇ ಸ್ಥಾನವನ್ನು ಪಡೆದುಕೊಳ್ಳಲಿದೆ.

## ರಾಜ್ಯಸಭೆಗೆ ಉಜ್ವಲ್ ನಿಕ್ಕಂ ಸೇರಿದಂತೆ ನಾಲ್ಕು ಗಣ್ಯರ ನಾಮ ನಿರ್ದೇಶನ



* ಪಬ್ಲಿಕ್ ಪ್ರಾಸಿಕ್ಯೂಟರ್ ಉಜ್ವಲ್ ನಿಕ್ಕಂ, ಮಾಜಿ ರಾಜತಾಂತ್ರಿಕ ಅಧಿಕಾರಿ ಹರ್ಷವರ್ಧನ್ ಶ್ರಿಂಗ್ಲಾ ಸೇರಿದಂತೆ ನಾಲ್ಕು ಮಂದಿ ಗಣ್ಯರನ್ನು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಲಾಗಿದೆ.
* ಉಜ್ವಲ್ ನಿಕ್ಕಂ, ಹರ್ಷವರ್ದನ್ ಶ್ರಿಂಗ್ಲಾ, ಸಿ ಸದಾನಂದನ್ ಮಾಸ್ತೆ ಹಾಗು ಡಾ. ಮೀನಾಕ್ಷಿ ಜೈನ್ ಅವರನ್ನು ನಾಮ ನಿರ್ದೇಶನ ಮಾಡಲಾಗಿದೆ
* ಭಾರತೀಯ ಸಂವಿಧಾನದ ವಿಧಿ 80(1)(A) ರ ಅಡಿಯಲ್ಲಿ ನಾಮನಿರ್ದೇಶನ ಮಾಡಿದ್ದು, ಸಾಹಿತ್ಯ, ವಿಜ್ಞಾನ, ಕಲೆ ಅಥವಾ ಸಾಮಾಜಿಕ ಸೇವೆಯಂತಹ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಮಾಡಿದ ಮಂದಿಯನ್ನು ರಾಜ್ಯಸಭೆಗೆ ನೇಮಿಸಲು ರಾಷ್ಟ್ರಪತಿಗಳಿಗೆ ಅಧಿಕಾರ ನೀಡಲಾಗಿದೆ
* ಈ ಹಿಂದೆ ನಾಮನಿರ್ದೇಶನಗೊಂಡ ಸದಸ್ಯರ ನಿವೃತ್ತಿಯಿಂದ ತೆರವಾಗಿದ್ದ ನಾಲ್ಕು ಸ್ಥಾನಗಳಿಗೆ ಕೇಂದ್ರ ಸರ್ಕಾರ ನಾಮ ನಿರ್ದೇಶನ ಮಾಡಿದೆ
* ಉಜ್ವಲ್ ದಿಯೋರಾವ್ ನಿಕಂ ಅವರು 26/11 ಮುಂಬೈ ಭಯೋತ್ಪಾದಕ ದಾಳಿ ಸೇರಿದಂತೆ ಹಲವಾರು ಉನ್ನತ ಮಟ್ಟದ ಕ್ರಿಮಿನಲ್ ಪ್ರಕರಣಗಳನ್ನು ನಿರ್ವಹಿಸುವಲ್ಲಿ ಹೆಸರುವಾಸಿಯಾದ ಪ್ರಸಿದ್ಧ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದಾರೆ.
* ಸಿ ಸದಾನಂದನ್ ಮಾಸ್ತೆ ಅವರು ದಶಕಗಳ ತಳಮಟ್ಟದ ಅನುಭವ ಹೊಂದಿರುವ ಕೇರಳದ ಸಮಾಜ ಸೇವಕ ಮತ್ತು ಶಿಕ್ಷಣ ತಜ್ಞರಾಗಿ ತಮ್ಮದೇ ಆದ ಹೆಸರು ಮಾಡಿದ್ದಾರೆ.
* ಹರ್ಷವರ್ಧನ್ ಶ್ರಿಂಗ್ಲಾ: ಭಾರತದ ಮಾಜಿ ವಿದೇಶಾಂಗ ಕಾರ್ಯದರ್ಶಿ ಮತ್ತು ಪ್ರಮುಖ ಜಾಗತಿಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಅನುಭವಿ ರಾಜತಾಂತ್ರಿಕ ಅನುಭವ ಹೊಂದಿದ್ದಾರೆ.
* ಡಾ. ಮೀನಾಕ್ಷಿ ಜೈನ್: ಪ್ರಸಿದ್ಧ ಇತಿಹಾಸಕಾರ ಮತ್ತು ಶೈಕ್ಷಣಿಕ, ಭಾರತೀಯ ಐತಿಹಾಸಿಕ ಪಾಂಡಿತ್ಯಕ್ಕೆ ನೀಡಿದ ಕೊಡುಗೆಗಳಿಗೆ ವ್ಯಾಪಕವಾಗಿ ಹೆಸರುವಾಸಿಯಾಗಿದ್ದಾರೆ. ಈ ನಾಲ್ಕು ಮಂದಿಯನ್ನು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಲಾಗಿದೆ.

## ರಾಷ್ಟ್ರೀಯ ಹಂತಕ್ಕೆ 'ಸಂಚಾರ ಮಿತ್ರ ಯೋಜನೆ'




* ದೂರಸಂಪರ್ಕ ಇಲಾಖೆ (DoT) ತನ್ನ 'ಸಂಚಾರ ಮಿತ್ರ ಯೋಜನೆ'ಯನ್ನು ಈಗ ರಾಷ್ಟ್ರೀಯ ಮಟ್ಟದಲ್ಲಿ ಜಾರಿಗೆ ತಂದಿದೆ. ಪ್ರಾರಂಭದಲ್ಲಿ ಕೆಲ ಆಯ್ದ ಸಂಸ್ಥೆಗಳಲ್ಲಿ ಪೈಲಟ್ ಯೋಜನೆ ರೂಪದಲ್ಲಿ ಆರಂಭಗೊಂಡಿದ್ದ ಇದರ ಉದ್ದೇಶ, ಯುವಕರನ್ನು ಡಿಜಿಟಲ್ ರಾಯಭಾರಿಗಳಾಗಿ ಸಬಲೀಕರಣಗೊಳಿಸುವುದಾಗಿದೆ.
* ಈ ಯೋಜನೆಯಡಿ, ಸಂಚಾರ್ ಮಿತ್ರಸ್ ಎಂಬ ವಿದ್ಯಾರ್ಥಿ ಸ್ವಯಂಸೇವಕರು ಡಿಜಿಟಲ್ ಸುರಕ್ಷತೆ, ಸೈಬರ್ ವಂಚನೆ ತಡೆ, ಇಎಂಎಫ್ ವಿಕಿರಣ ಹಾಗೂ ಜವಾಬ್ದಾರಿಯುತ ಮೊಬೈಲ್ ಬಳಕೆಯ ಬಗ್ಗೆ ಜಾಗೃತಿ ಮೂಡಿಸಲು ತೊಡಗಿಸಿಕೊಳ್ಳುತ್ತಾರೆ.
* ಅವರಿಗೆ NCA-T ಮತ್ತು DoT ತರಬೇತಿ ನೀಡುತ್ತದೆ, 5G, 6G, AI ಮತ್ತು ಸೈಬರ್ ಭದ್ರತೆ ಕುರಿತು ಅರಿವು ನೀಡಲಾಗುತ್ತದೆ.
* ಸ್ವಯಂಸೇವಕರಾಗಿ ಟೆಲಿಕಾಂ, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ವಿಜ್ಞಾನ ಹಾಗೂ ಸೈಬರ್ ಭದ್ರತಾ ಹಿನ್ನಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳನ್ನು ಸ್ಥಳೀಯ DoT ಕಚೇರಿಗಳ ಮೂಲಕ ಆಯ್ಕೆ ಮಾಡಲಾಗುತ್ತದೆ.
* ಅವರು ಸಮುದಾಯ ಸಂಪರ್ಕ, ಎನ್ಜಿಒಗಳೊಂದಿಗೆ ಕೆಲಸ ಹಾಗೂ ಸುರಕ್ಷಿತ ಡಿಜಿಟಲ್ ಅಭ್ಯಾಸಗಳನ್ನು ಉತ್ತೇಜಿಸುತ್ತಾರೆ.
* ಅತ್ಯುತ್ತಮ ಸಂಚಾರ್ ಮಿತ್ರಸ್ಗಳಿಗೆ ಇಂಟರ್ನ್ಶಿಪ್, ಪ್ರಮುಖ ಕಾರ್ಯಕ್ರಮಗಳಲ್ಲಿ ಪ್ರಾತಿನಿಧ್ಯ ಮತ್ತು ಪ್ರೋತ್ಸಾಹ ದೊರೆಯಲಿದೆ. ಗುವಾಹಟಿಯಲ್ಲಿ ನಡೆದ ಮೊದಲ ಬೃಹತ್ ಕಾರ್ಯಕ್ರಮದಲ್ಲಿ ಐಐಟಿ, ಎನ್ಐಟಿ, ಐಐಐಟಿ ಸೇರಿ 18 ಸಂಸ್ಥೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.
* ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಈ ಕಾರ್ಯಕ್ರಮಕ್ಕೆ ರಾಷ್ಟ್ರವ್ಯಾಪಿ ಚಾಲನೆ ನೀಡಿದರು. ಅವರು ಇದನ್ನು ಭಾರತವನ್ನು ಡಿಜಿಟಲ್ ಪ್ರಜಾಪ್ರಭುತ್ವದತ್ತ ಮುನ್ನಡೆಸುವ ಹೆಜ್ಜೆ ಎಂದು ವರ್ಣಿಸಿದರು.

# 15 July 2025

## ಜುಲೈ 15 : ವಿಶ್ವ ಯುವ ಕೌಶಲ್ಯ ದಿನ



* ವಿಶ್ವಸಂಸ್ಥೆಯು ಘೋಷಿಸಿದಂತೆ 2014 ರಿಂದ ವಾರ್ಷಿಕವಾಗಿ ಜುಲೈ 15 ರಂದು ವಿಶ್ವ ಯುವ ಕೌಶಲ್ಯ ದಿನವನ್ನು ಆಚರಿಸಲಾಗುತ್ತದೆ, ಉದ್ಯೋಗ, ಯೋಗ್ಯ ಕೆಲಸ ಮತ್ತು ಉದ್ಯಮಶೀಲತೆಗೆ ಅಗತ್ಯವಾದ ಕೌಶಲ್ಯಗಳನ್ನು ಯುವ ವ್ಯಕ್ತಿಗಳಿಗೆ ನೀಡುವ ಮಹತ್ವವನ್ನು ಗುರುತಿಸುವ ಉದ್ದೇಶವನ್ನು ಹೊಂದಿದೆ.

* **ವಿಶ್ವ ಕೌಶಲ್ಯ ದಿನದ 2025 ರ ಥೀಮ್ "ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲ್ ಕೌಶಲ್ಯಗಳ ಮೂಲಕ ಯುವ ಸಬಲೀಕರಣ" ಎಂಬುದು ಈ ವರ್ಷದ ಥೀಮ್ ಆಗಿದೆ.**


* ಶ್ರೀಲಂಕಾದ ಉಪಕ್ರಮದ ಮೇರೆಗೆ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯು ಡಿಸೆಂಬರ್ 2014 ರಂದು ವಿಶ್ವ ಯುವ ಕೌಶಲ್ಯ ದಿನದ ಆಚರಣೆಯನ್ನು ಅಂಗೀಕರಿಸಿತು. ಇದರನ್ವಯ ಮೊದಲ ಬಾರಿಗೆ 2015 ರ ಜುಲೈ 15 ರಂದು ವಿಶ್ವ ಕೌಶಲ್ಯ ದಿನವನ್ನು ಆಚರಿಸಲಾಯಿತು. ವಿಶ್ವಸಂಸ್ಥೆಯು ಸ್ಥಾಪಿಸಿದ ಜಾಗತಿಕ ಉಪಕ್ರಮದ 10 ನೇ ವಾರ್ಷಿಕೋತ್ಸವವನ್ನು ಸೂಚಿಸುತ್ತದೆ.

* ತಂತ್ರಜ್ಞಾನದ ನಿರಂತರ ಪ್ರಗತಿ ಮತ್ತು ಕಾರ್ಮಿಕ ಮಾರುಕಟ್ಟೆಯಲ್ಲಿ ಬದಲಾವಣೆಗಳೊಂದಿಗೆ ಹೊಂದಿಕೊಳ್ಳುವ, ಮತ್ತು ಕೌಶಲ್ಯ ಸೆಟ್ಗಳೊಂದಿಗೆ ಯುವಜನರನ್ನು ಸಜ್ಜುಗೊಳಿಸುವುದು ಅತ್ಯಗತ್ಯ.

* ವಿಶ್ವದ ಯುವಕರಿಗೆ ಉದ್ಯೋಗ, ಕೆಲಸ ಮತ್ತು ಉದ್ಯಮಶೀಲತೆಗಾಗಿ ಅಗತ್ಯವಾದ ಕೌಶಲ್ಯಗಳನ್ನು ಒದಗಿಸುವುದು ಈ ದಿನದ ಮೂಲ ಉದ್ದೇಶವಾಗಿದೆ.

* "ಪ್ರಧಾನಮಂತ್ರಿ ಕೌಶಲ್ ವಿಕಾಸ್" ಯೋಜನೆಯನ್ನು ಭಾರತದಲ್ಲಿ ಜುಲೈ 15, 2015 ರಲ್ಲಿ ವಿಶ್ವ ಕೌಶಲ್ಯ ದಿನದ ಸಂದರ್ಭದಲ್ಲಿ ಪ್ರಾರಂಭಿಸಲಾಯಿತು.

## ಸಿಕ್ಕಿಂನಲ್ಲಿ ಭಾರತದ ಮೊದಲ ಡಿಜಿಟಲ್ ಅಲೆಮಾರಿ ಗ್ರಾಮ ಉದ್ಘಾಟನೆ



* ಸಿಕ್ಕಿಂನ ಪಕ್ಯೋಂಗ್ ಜಿಲ್ಲೆಯ ಯಾಕ್ಟೆನ್ ಗ್ರಾಮವನ್ನು ಜುಲೈ 15, 2025 ರಂದು ಭಾರತದ ಮೊದಲ ಡಿಜಿಟಲ್ ಅಲೆಮಾರಿ ಗ್ರಾಮವಾಗಿ ಪ್ರಾರಂಭಿಸಲಾಗಿದೆ.

* 'ನೋಮಾಡ್ ಸಿಕ್ಕಿಂ' ಉಪಕ್ರಮದ ಅಡಿಯಲ್ಲಿ ಈ ಯೋಜನೆಯು ಹಿಮಾಲಯ ರಾಜ್ಯದ ಕಾರ್ಯತಂತ್ರದ ಸ್ಥಳಗಳನ್ನು ಡಿಜಿಟಲ್ ವೃತ್ತಿಪರರಿಗೆ ವರ್ಷಪೂರ್ತಿ ಕೇಂದ್ರಗಳಾಗಿ ಪರಿವರ್ತಿಸುವ ಗುರಿಯನ್ನು ಹೊಂದಿದೆ.

* ಏಪ್ರಿಲ್-ಮೇ ನಿಂದ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಆಫ್-ಸೀಸನ್ನಲ್ಲಿ ಹೋಂಸ್ಟೇ ನಿರ್ವಾಹಕರಿಗೆ ಸ್ಥಿರ ಆದಾಯದ ಕೊರತೆಯ ಬಗ್ಗೆ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್ ಅವರ ಕಳವಳದಿಂದ ಈ ಉಪಕ್ರಮವು ಉತ್ತೇಜನಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

* ಯಕ್ಟೆನ್ ಗ್ರಾಮ ಪ್ರವಾಸೋದ್ಯಮ ಸಹಕಾರಿ ಸಂಘದ ಅಧ್ಯಕ್ಷ ಗ್ಯಾನ್ ಬಹದ್ದೂರ್ ಸುಬ್ಬಾ, ಈ ಉಪಕ್ರಮವು ಹೋಂಸ್ಟೇ ನಿರ್ವಾಹಕರು ಮತ್ತು ಇತರ ಸೇವಾ ಪೂರೈಕೆದಾರರು ತಮ್ಮ ಜೀವನವನ್ನು ಉಳಿಸಿಕೊಳ್ಳುವ ಹೋರಾಟವನ್ನು ಕೊನೆಗೊಳಿಸುತ್ತದೆ ಎಂದು ಆಶಿಸಿದರು. "ಈ ಉಪಕ್ರಮವನ್ನು ಉತ್ತೇಜಿಸುವುದರ ಜೊತೆಗೆ, ಸರ್ಕಾರವು ಕುಡಿಯುವ ನೀರು ಮತ್ತು ಇತರ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ" ಎಂದು ಅವರು ಪತ್ರಕರ್ತರಿಗೆ ತಿಳಿಸಿದರು.

* ವಿಶೇಷವಾಗಿ ಏಪ್ರಿಲ್ ನಿಂದ ಅಕ್ಟೋಬರ್ ವರೆಗೆ, ಕಡಿಮೆ ಪ್ರವಾಸಿಗರು ಭೇಟಿ ನೀಡಿದಾಗ, ಕಾಲೋಚಿತ ಆದಾಯದ ಅಂತರದ ಸಮಸ್ಯೆಯನ್ನು ಪರಿಹರಿಸಲು ಇದನ್ನು ರಚಿಸಲಾಗಿದೆ. ಗ್ರಾಮವು ಈಗ ಬ್ರಾಡ್ಬ್ಯಾಂಡ್-ಸಿದ್ಧ ಹೋಂಸ್ಟೇಗಳನ್ನು ನೀಡುತ್ತದೆ, ಅಲ್ಲಿ ಡಿಜಿಟಲ್ ವೃತ್ತಿಪರರು ವಾಸಿಸಬಹುದು ಮತ್ತು ಆರಾಮವಾಗಿ ಕೆಲಸ ಮಾಡಬಹುದು.

## ಡಾ. ಅಭಿಜಿತ್ ಶೇಠ್ಗೆ ಎನ್ಎಂಸಿ ಅಧಿಕಾರ: ಕೇಂದ್ರದಿಂದ ಅಧಿಕೃತ ಪ್ರಕಟಣೆ




* ಕೇಂದ್ರವು ಇತ್ತೀಚೆಗೆ ಡಾ. ಅಭಿಜಿತ್ ಶೇಠ್ ಅವರನ್ನು ದೇಶದ ಅತ್ಯುನ್ನತ ವೈದ್ಯಕೀಯ ಶಿಕ್ಷಣ ನಿಯಂತ್ರಕ ಸಂಸ್ಥೆಯಾದ ರಾಷ್ಟ್ರೀಯ ವೈದ್ಯಕೀಯ ಆಯೋಗದ (NMC) ಅಧ್ಯಕ್ಷರನ್ನಾಗಿ ನೇಮಿಸಿದೆ.

* ಪ್ರಸ್ತುತ, ಡಾ. ಶೇಠ್ ಅವರು ಸ್ನಾತಕೋತ್ತರ ಮತ್ತು ಸೂಪರ್-ಸ್ಪೆಷಾಲಿಸೇಶನ್ ವೈದ್ಯಕೀಯ ಕೋರ್ಸ್ಗಳಿಗೆ ಪ್ರವೇಶ ಪರೀಕ್ಷೆಗಳನ್ನು ನಡೆಸುವ ರಾಷ್ಟ್ರೀಯ ವೈದ್ಯಕೀಯ ವಿಜ್ಞಾನ ಪರೀಕ್ಷಾ ಮಂಡಳಿಯ (NBEMS) ಮುಖ್ಯಸ್ಥರಾಗಿದ್ದಾರೆ.

* ಹಲವಾರು ಅಧಿಕಾರಿಗಳು ಭಾಗಿಯಾಗಿರುವ ಭ್ರಷ್ಟಾಚಾರ ತನಿಖೆಯ ನಂತರ ವೈದ್ಯಕೀಯ ನಿಯಂತ್ರಕ ಪರಿಶೀಲನೆಯಲ್ಲಿರುವ ಸಮಯದಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

* ಸೂಕ್ತ ಬದಲಿ ಅಧಿಕಾರಿಗಳ ಕೊರತೆಯಿಂದಾಗಿ ಹುದ್ದೆಯಲ್ಲಿ ಉಳಿದುಕೊಂಡಿದ್ದ ಡಾ. ಬಿ. ಎನ್. ಗಂಗಾಧರ್ ಅವರ ಸ್ಥಾನವನ್ನು ಡಾ. ಶೇಠ್ ಅವರು ವಹಿಸಿಕೊಳ್ಳಲಿದ್ದಾರೆ.

* ವೈದ್ಯಕೀಯ ಕಾಲೇಜುಗಳನ್ನು ನಿಯಂತ್ರಿಸುವ ನಿಯಂತ್ರಕ ಚೌಕಟ್ಟನ್ನು ಕುಶಲತೆಯಿಂದ ನಿರ್ವಹಿಸಿದ ಆರೋಪದ ಭ್ರಷ್ಟಾಚಾರ ಹಗರಣಕ್ಕೆ ಸಂಬಂಧಿಸಿದಂತೆ ಕೇಂದ್ರ ತನಿಖಾ ದಳ (ಸಿಬಿಐ) ಇತ್ತೀಚೆಗೆ ಪ್ರಥಮ ಮಾಹಿತಿ ವರದಿ (ಎಫ್ಐಆರ್) ದಾಖಲಿಸಿದೆ.

* ಮುಂಬರುವ ತಪಾಸಣೆಗಳಂತಹ ವರ್ಗೀಕೃತ ಮಾಹಿತಿಯ ಅನಧಿಕೃತ ಹಂಚಿಕೆ, ಕಾಲೇಜುಗಳು ನಕಲಿ ಅಧ್ಯಾಪಕರನ್ನು ಪಡೆಯುವುದು ಮತ್ತು ಕಾಲ್ಪನಿಕ ರೋಗಿಗಳನ್ನು ಸೇರಿಸಿಕೊಳ್ಳುವಂತಹ ಮೋಸದ ವ್ಯವಸ್ಥೆಗಳನ್ನು ಮಾಡಲು ಅವಕಾಶ ನೀಡುವುದು ಮತ್ತು ಖಾಸಗಿ ಸಂಸ್ಥೆಗಳಿಗೆ ಅನುಕೂಲಕರ ಚಿಕಿತ್ಸೆಯನ್ನು ಪಡೆಯಲು ವ್ಯಾಪಕ ಲಂಚವನ್ನು ಒಳಗೊಂಡಿತ್ತು.

KPSCVaani

## ಟ್ಯಾಲಿಸ್ಮನ್ ಸೇಬರ್ 2025: ಆಸ್ಟ್ರೇಲಿಯಾ-ಅಮೆರಿಕದ ಅತಿದೊಡ್ಡ ದ್ವಿಪಕ್ಷೀಯ ಸೈನಿಕ ವ್ಯಾಯಾಮ




* ಟ್ಯಾಲಿಸ್ಮನ್ ಸೇಬರ್ 2025 ಎಂಬುದು ಆಸ್ಟ್ರೇಲಿಯಾ ಮತ್ತು ಯುನೈಟೆಡ್ ಸ್ಟೇಟ್ಸ್ ನಡುವಿನ ಅತಿದೊಡ್ಡ ದ್ವಿಪಕ್ಷೀಯ ಸೈನಿಕ ವ್ಯಾಯಾಮವಾಗಿದೆ. ಇದನ್ನು 2005ರಿಂದ ದ್ವೈವಾರ್ಷಿಕವಾಗಿ ನಡೆಸಲಾಗುತ್ತಿದೆ ಮತ್ತು ಬಹುರಾಷ್ಟ್ರೀಯ ಭಾಗವಹಿಸುವಿಕೆಯನ್ನು ಹೊಂದಿದೆ.
* ಈ ಅಭ್ಯಾಸವು ಮಿತ್ರ ರಾಷ್ಟ್ರಗಳ ನಡುವೆ ಸಹಕಾರ ಹಾಗೂ ಪರಸ್ಪರ ಕಾರ್ಯಸಾಧ್ಯತೆಯನ್ನು ಬಲಪಡಿಸುವ ಮೂಲಕ, ಮುಕ್ತ ಮತ್ತು ಮುಕ್ತ ಇಂಡೋ-ಪೆಸಿಫಿಕ್ ಪ್ರದೇಶದ ಭದ್ರತೆಗೆ ಸಹಾಯ ಮಾಡುವುದು.
* ಇದು 11ನೇ ಆವೃತ್ತಿಯಾಗಿದ್ದು, ಇದುವರೆಗೆ ಆಸ್ಟ್ರೇಲಿಯಾದಲ್ಲಿ ನಡೆಸಲಾಗಿರುವ ಅತ್ಯಂತ ದೊಡ್ಡ ಹಾಗೂ ಅತ್ಯಾಧುನಿಕ ಯುದ್ಧ ತರಬೇತಿ ವ್ಯಾಯಾಮವಾಗಿದೆ. ಇದರಲ್ಲಿ 35,000ಕ್ಕೂ ಹೆಚ್ಚು ಸೈನಿಕರು ಭಾಗವಹಿಸುತ್ತಿದ್ದಾರೆ.
* ಭಾರತ ಸೇರಿ ಒಟ್ಟು 19 ರಾಷ್ಟ್ರಗಳು ಭಾಗವಹಿಸುತ್ತಿವೆ. ಯುಎಸ್, ಆಸ್ಟ್ರೇಲಿಯಾ, ಜಪಾನ್, ಫ್ರಾನ್ಸ್, ಜರ್ಮನಿ, ನ್ಯೂಜಿಲೆಂಡ್, ಯುಕೆ, ಕನಡಾ, ದಕ್ಷಿಣ ಕೊರಿಯಾ ಮೊದಲಾದವು ಮುಖ್ಯಭಾಗಿಗಳಾಗಿವೆ. ಮಲೇಷ್ಯಾ ಮತ್ತು ವಿಯೆಟ್ನಾಂ ವೀಕ್ಷಕರಾಗಿ ಭಾಗವಹಿಸುತ್ತವೆ.
* ವ್ಯಾಯಾಮವು ಲೈವ್-ಫೈರ್ ಅಭ್ಯಾಸಗಳು, ಭೂಮಿ ಮತ್ತು ಸಮುದ್ರದ ಬಲೋಪಯೋಗ, ಉಭಯಚರ ಇಳಿಯುವಿಕೆ, ವಾಯು ಯುದ್ಧ ಮತ್ತು ರಕ್ಷಣಾತೀರ ಕಾರ್ಯಾಚರಣೆಗಳನ್ನು ಒಳಗೊಂಡಿರುತ್ತದೆ.

## ಹರಿಯಾಣ, ಲಡಾಕ್, ಮತ್ತು ಗೋವಾಗೆ ಹೊಸ ರಾಜ್ಯಪಾಲರ ನೇಮಕ




* ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜುಲೈ 13, 2025 ರಂದು ಮೂರು ಪ್ರಮುಖ ಪ್ರದೇಶಗಳಿಗೆ ಹೊಸ ರಾಜ್ಯಪಾಲರ ನೇಮಕಾತಿ ಪ್ರಕಟಿಸಿದ್ದಾರೆ. ಈ ಹೊಸ ನೇಮಕಾತಿಗಳು ಆಡಳಿತಾತ್ಮಕ ಸುಧಾರಣೆ ಹಾಗೂ ರಾಜ್ಯದ ಅಭಿವೃದ್ಧಿಯ ಗುರಿಯನ್ನು ಮುಂದಿಟ್ಟುಕೊಂಡೇ ಕೈಗೊಳ್ಳಲಾಗಿದೆ.
* ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಲಡಾಖ್, ಹರಿಯಾಣ ಮತ್ತು ಗೋವಾ ರಾಜ್ಯಗಳಿಗೆ ಹೊಸ ರಾಜ್ಯಪಾಲರನ್ನು ನೇಮಕಗೊಳಿಸಿದ್ದಾರೆ.
* ಲಡಾಖ್: ಲೆಫ್ಟಿನೆಂಟ್ ಗವರ್ನರ್ ಹುದ್ದೆಯಿಂದ ನಿವೃತ್ತ ಬ್ರಿಗೇಡಿಯರ್ ಬಿ.ಡಿ. ಮಿಶ್ರಾ ಅವರು ರಾಜೀನಾಮೆ ನೀಡಿದ್ದು, ಅದನ್ನು ರಾಷ್ಟ್ರಪತಿ ಅಂಗೀಕರಿಸಿದ್ದಾರೆ. ಅವರ ಸ್ಥಾನಕ್ಕೆ ಕವಿಂದರ್ ಗುಪ್ತಾ ಅವರನ್ನು ಹೊಸ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕ ಮಾಡಲಾಗಿದೆ.
* ಹರಿಯಾಣ: ಹರಿಯಾಣದ ರಾಜ್ಯಪಾಲರಾಗಿ ಪ್ರೊ. ಅಶೀಮ್ ಕುಮಾರ್ ಘೋಷ್ ಅವರನ್ನು ನೇಮಕ ಮಾಡಲಾಗಿದೆ.
* ಗೋವಾ: ಗೋವಾ ರಾಜ್ಯಪಾಲರಾಗಿ ಪುಸಪತಿ ಅಶೋಕ್ ಗಜಪತಿ ರಾಜು ಅವರು ನೇಮಕಗೊಂಡಿದ್ದಾರೆ.
* ಈ ಎಲ್ಲಾ ಅಧಿಕಾರಿಗಳು ತಮ್ಮ ಕಾರ್ಯಭಾರ ವಹಿಸಿಕೊಳ್ಳುವ ದಿನಾಂಕದಿಂದ ಅಧಿಕಾರ ಅವಧಿ ಆರಂಭವಾಗುತ್ತದೆ.

## ವರ್ಷಾ ದೇಶಪಾಂಡೆಗೆ 2025ರ ವಿಶ್ವಸಂಸ್ಥೆಯ ಜನಸಂಖ್ಯಾ ಪ್ರಶಸ್ತಿ



* ಮಹಾರಾಷ್ಟ್ರದ ಸತಾರಾದ ವಕೀಲೆ ವರ್ಷಾ ದೇಶಪಾಂಡೆ ಅವರು 2025ರ ವಿಶ್ವಸಂಸ್ಥೆಯ ಜನಸಂಖ್ಯಾ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಹೆಣ್ಣು ಮಕ್ಕಳ ರಕ್ಷಣೆ ಮತ್ತು ಲಿಂಗ ಆಯ್ಕೆಯ ಗರ್ಭಪಾತ ತಡೆಯುವ ಕ್ಷೇತ್ರದಲ್ಲಿ ಅವರು ಮಾಡಿದ ಜೀವಮಾನ ಸೇವೆಯನ್ನು ಗುರುತಿಸಿ ಈ ಗೌರವ ನೀಡಲಾಗಿದೆ.
* 1990ರಲ್ಲಿ ಅವರು ಸ್ಥಾಪಿಸಿದ ದಲಿತ ಮಹಿಳಾ ವಿಕಾಸ ಮಂಡಲದ ಮೂಲಕ ವರ್ಷಾ ದೇಶಪಾಂಡೆ ಮೂರು ದಶಕಗಳಿಂದ ಅಂಚಿನಲ್ಲಿರುವ ಮಹಿಳೆಯರ ಉನ್ನತಿಗೆ ಕೆಲಸ ಮಾಡುತ್ತಿದ್ದಾರೆ.
* ಲಿಂಗ ಆಯ್ಕೆಯ ವಿರುದ್ಧದ ಜಾಗೃತಿ, ಬಾಲ್ಯವಿವಾಹದ ವಿರುದ್ಧದ ಅಭಿಯಾನ, ಕಾನೂನು ಸುಧಾರಣೆ, ಹಾಗೂ ಮಹಿಳಾ ಆರ್ಥಿಕ ಸ್ವಾತಂತ್ರ್ಯಕ್ಕೆ ಅವರು ಆದರ್ಶವೆನಿಸಿದ್ದಾರೆ.
* ಜುಲೈ 11, 2025ರಂದು ನ್ಯೂಯಾರ್ಕ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ದೇಶಪಾಂಡೆ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು. ಈ ಪ್ರಶಸ್ತಿ ಲಿಂಗ, ಜಾತಿ ಮತ್ತು ಧರ್ಮ ಆಧಾರಿತ ತಾರತಮ್ಯ ವಿರುದ್ಧದ ಅವರ ಹೋರಾಟವನ್ನು ಗುರುತಿಸುತ್ತದೆ ಎಂದು ಯುಎನ್‌ಎಫ್‌ಪಿಎ ತಿಳಿಸಿದೆ.
* 1981ರಲ್ಲಿ ಸ್ಥಾಪಿತವಾದ ಈ ಪ್ರಶಸ್ತಿಯನ್ನು ಪ್ರತಿವರ್ಷ ಜನಸಂಖ್ಯೆ ಮತ್ತು ಸಂತಾನೋತ್ಪತ್ತಿ ಆರೋಗ್ಯದಲ್ಲಿ ಪ್ರಮುಖ ಕೊಡುಗೆ ನೀಡಿದವರಿಗೆ ನೀಡಲಾಗುತ್ತದೆ. ಈ ಬಾರಿ ವೈಯಕ್ತಿಕ ವಿಭಾಗದಲ್ಲಿ ದೇಶಪಾಂಡೆ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

## ಆಪರೇಷನ್ ಸಿಂಧೂರ ಬಳಿಕ 'ಬ್ರಹ್ಮೋಸ್'ಗೆ ಹೆಚ್ಚಿನ ಬೇಡಿಕೆ



* ಸಿಂಧೂರ ಕಾರ್ಯಚರಣೆಯ ನಂತರ ಸುಮಾರು 15 ದೇಶಗಳು ಬ್ರಹ್ಮೋಸ್ ಕ್ಷಿಪಣಿಗೆ ಬೇಡಿಕೆ ಇಟ್ಟಿವೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.
* ಬ್ರಹ್ಮೋಸ್ ಕ್ಷಿಪಣಿಯು ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿಯಾಗಿದ್ದು,ಇದನ್ನು ಭಾರತ ಮತ್ತು ರಷ್ಯಾ ಜಂಟಿಯಾಗಿ ಅಭಿವೃದ್ಧಿ ಪಡಿಸಿವೆ.
* ಇದನ್ನು ಜಲಾಂತರ್ಗಾಮಿಗಳು, ಹಡಗುಗಳು, ವಿಮಾನಗಳು ಅಥವಾ ನೆಲದಿಂದ ಕೂಡ ಉಡಾವಣೆ ಮಾಡಬಹುದಾಗಿದ್ದು, ಆಪರೇಷನ್ ಸಿಂಧೂರದಲ್ಲಿ ಬಹುಮುಖ್ಯ ಕಾರ್ಯವಹಿಸಿತ್ತು.
* ಬ್ರಹ್ಮೋಸ್ ಕ್ಷಿಪಣಿಗಳನ್ನು ಇನ್ನು ಮುಂದೆ ಲಕ್ನೋದಿಂದ ರಫ್ತು ಮಾಡುವುದಾಗಿ ಘೋಷಿಸಿರುವ ಸಿಂಗ್, ಇದು ರಕ್ಷಣಾ ಕ್ಷೇತ್ರದಲ್ಲಿ ದೇಶದ ಆತ್ಮನಿರ್ಭರತೆಯನ್ನು ಬಲಪಡಿಸುವುದರ ಜೊತೆಗೆ ಉದ್ಯೋಗ ಸೃಷ್ಟಿಗೆ ದಾರಿಯಾಗುತ್ತದೆ ಎಂದು ಹೇಳಿದರು.
* ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಲಕ್ನೋದಲ್ಲಿ ಬ್ರಹ್ಮೋಸ್ ವಾಯುಪ್ರದೇಶ ಏಕೀಕರಣ ಮತ್ತು ಪರೀಕ್ಷಾ ಸೌಲಭ್ಯವನ್ನು ಉದ್ಘಾಟಿಸಿ, ಮಾತನಾಡಿದ ಅವರು ಉತ್ತರ ಪ್ರದೇಶದಲ್ಲಿ ಕೈಗಾರಿಕೆಗಳು ವೇಗವಾಗಿ ಸ್ಥಾಪನೆಯಾಗುತ್ತಿವೆ. ಸುಧಾರಿತ ಕಾನೂನು ಸುವ್ಯವಸ್ಥೆ ಮತ್ತು ಬಲಿಷ್ಠ ಮೂಲಸೌಕರ್ಯಗಳೊಂದಿಗೆ ಹೂಡಿಕೆದಾರರು ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯಾದ್ಯಂತ ಆಕರ್ಷಿತರಾಗುತ್ತಿದ್ದಾರೆ ಎಂದು ಹೇಳಿದ್ದಾರೆ.
* ಸಿಂಗ್ ಅವರು ರಾಷ್ಟ್ರೀಯ ಪಿಜಿ ಕಾಲೇಜಿನಲ್ಲಿ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಚಂದ್ರ ಭಾನು ಗುಪ್ತಾ ಅವರ ಪ್ರತಿಮೆಯನ್ನು ಅನಾವರಣಗೊಳಿಸಿದರು ಮತ್ತು ಸ್ಮರಣಾರ್ಥ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದರು. ಗುಪ್ತಾ ಅವರ ಸರಳತೆ, ತ್ಯಾಗ ಮತ್ತು ರಾಷ್ಟ್ರಭಕ್ತಿಯನ್ನು ಸಿಂಗ್ ಪ್ರಶಂಸೆ ಮಾಡಿದರು.

## ಅಭಿನಯ ಸರಸ್ವತಿ ಬಿ. ಸರೋಜಾದೇವಿ ನಿಧನ



* ಕನ್ನಡದ ಹಿರಿಯ ನಟಿ ಹಾಗೂ 'ಅಭಿನಯ ಸರಸ್ವತಿ' ಎಂದೇ ಪ್ರಸಿದ್ಧರಾದ ಬಿ. ಸರೋಜಾದೇವಿ ಅವರು 87ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಅವರು ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು ಮತ್ತು ಯಶವಂತಪುರದ ಮಣಿಪಾಲ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.
* ಸರೋಜಾದೇವಿ ಅವರು ಕನ್ನಡದ ಜೊತೆಗೆ ತೆಲುಗು, ತಮಿಳು ಮತ್ತು ಹಿಂದಿ ಭಾಷೆಗಳಲ್ಲಿಯೂ 1955ರಿಂದ 1984ರವರೆಗೆ ಸತತ 161 ಚಿತ್ರಗಳಲ್ಲಿ ನಾಯಕಿಯಾಗಿ ಅಭಿನಯಿಸಿದ್ದಾರೆ.
* ಕನ್ನಡದಲ್ಲಿ ಕಿತ್ತೂರು ಚೆನ್ನಮ್ಮ, ಭಕ್ತ ಕನಕದಾಸ, ಮಹಾಕವಿ ಕಾಳಿದಾಸ ಮುಂತಾದ ಅನೇಕ ಪ್ರಮುಖ ಸಿನಿಮಾಗಳಲ್ಲಿ ನಟಿಸಿದ್ದಾರೆ.
* ಅವರಿಗೆ ಭಾರತ ಸರ್ಕಾರದಿಂದ ಪದ್ಮಶ್ರೀ (1969) ಮತ್ತು ಪದ್ಮಭೂಷಣ (1992) ಪ್ರಶಸ್ತಿಗಳು ಲಭಿಸಿವೆ. ಜೊತೆಗೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಹಾಗೂ ತಮಿಳುನಾಡು ಸರ್ಕಾರದಿಂದ ಕಲೈಮಾಮಣಿ ಪ್ರಶಸ್ತಿಯೂ ಸಿಕ್ಕಿವೆ.
* ಅವರು ತಮಿಳಿನಲ್ಲಿ ನಾಡೋಡಿ ಮನ್ನನ್, ತೆಲುಗಿನಲ್ಲಿ ಪಾಂಡುರಂಗ ಮಹಾತ್ಮ್ಯಂ ಸೇರಿದಂತೆ ಹಲವು ಹಿಟ್ ಸಿನಿಮಾಗಳಲ್ಲಿ ನಟಿಸಿದ್ದಾರೆ. ದಕ್ಷಿಣ ಭಾರತದ ಬಹುಭಾಷಾ ಚಿತ್ರರಂಗದಲ್ಲಿ ತಮ್ಮದೇ ಆದ ಸ್ಮರಣೀಯ ಛಾಪು ಬಿಟ್ಟಿದ್ದಾರೆ.

## ಕರ್ನಾಟಕದ ಹೈಕೋರ್ಟ್ ಗೆ ಮುಖ್ಯ ನ್ಯಾ.ಮೂರ್ತಿಯಾಗಿ ವಿಭು ಬಖ್ರು



* ನ್ಯಾಯಮೂರ್ತಿ ವಿಭು ಬಖ್ರು ಅವರನ್ನು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಕೇಂದ್ರ ಸರ್ಕಾರ ನೇಮಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಆದೇಶದಂತೆ ಅವರು ಶೀಘ್ರದಲ್ಲೇ ಅಧಿಕಾರ ಸ್ವೀಕರಿಸಲಿದ್ದಾರೆ.
* 1966ರಲ್ಲಿ ನಾಗಪುರದಲ್ಲಿ ಜನಿಸಿದ ಬಖ್ರು ಅವರು ದೆಹಲಿ ಪಬ್ಲಿಕ್ ಶಾಲೆಯಲ್ಲಿ ಶಿಕ್ಷಣ ಪಡೆದರು. ದೆಹಲಿ ವಿಶ್ವವಿದ್ಯಾಲಯದಿಂದ ವಾಣಿಜ್ಯ ಪದವಿ (1987), ಚಾರ್ಟರ್ಡ್ ಅಕೌಂಟೆಂಟ್ ಅರ್ಹತೆ (1989), ಮತ್ತು ಎಲ್‌ಎಲ್‌ಬಿ ಪದವಿ (1990) ಪಡೆದಿದ್ದಾರೆ.
* ವಿಭು ಬಖ್ರು ಅವರು ಸುಪ್ರೀಂ ಕೋರ್ಟ್, ದೆಹಲಿ ಹೈಕೋರ್ಟ್ ಮತ್ತು ಇತರೆ ನ್ಯಾಯಮಂಡಳಿಗಳಲ್ಲಿ ವಕೀಲಿಕೆ ನಡೆಸಿದ್ದಾರೆ. 2011ರಲ್ಲಿ ಹಿರಿಯ ವಕೀಲರಾಗಿ ಪ್ರಮೋಶನ್ ಪಡೆದ ಅವರು 2013ರಲ್ಲಿ ದೆಹಲಿ ಹೈಕೋರ್ಟ್ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 2015ರಲ್ಲಿ ಅವರು ಕಾಯಂಗೊಂಡ ನ್ಯಾಯಮೂರ್ತಿಯಾಗಿ ಪರಿಗಣಿಸಲ್ಪಟ್ಟರು.
* ಭಾರತದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ ಆರ್ ಗವಾಯಿ ನೇತೃತ್ವದ ಕಾಲೇಜಿಯಂ, ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ವಿಭು ಬಖ್ರು ಅವರನ್ನು ಶಿಫಾರಸು ಮಾಡಿತ್ತು.

## ಕರ್ನಾಟಕ ಬ್ಯಾಂಕ್ ನ ಸಿಇಒ ಆಗಿ ರಾಘವೇಂದ್ರ ಭಟ್




* ಕರ್ಣಾಟಕ ಬ್ಯಾಂಕ್ ತನ್ನ ಮಧ್ಯಂತರ ವ್ಯವಸ್ಥಾಪಕ ನಿರ್ದೇಶಕ (MD) ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ (CEO) ಸ್ಥಾನಕ್ಕೆ ರಾಘವೇಂದ್ರ ಶ್ರೀನಿವಾಸ ಭಟ್ ಅವರನ್ನು ನೇಮಿಸಿದೆ. ಅವರು ಜುಲೈ 16ರಿಂದ ಅಧಿಕಾರ ವಹಿಸಲಿದ್ದಾರೆ.
* ಹಾಲಿ ಎಂಡಿ ಹಾಗೂ ಸಿಇಒ ಶ್ರೀಕೃಷ್ಣ ಹರಿಹರ ಶರ್ಮಾ ರಾಜೀನಾಮೆ ನೀಡಿದ್ದರಿಂದ ಈ ಹುದ್ದೆ ಖಾಲಿಯಾಗಿತ್ತು.

* ವೈಯಕ್ತಿಕ ಕಾರಣಗಳಿಂದ ಶರ್ಮಾ ಅವರು ರಾಜೀನಾಮೆ ಸಲ್ಲಿಸಿದ್ದು, ಕಾರ್ಯನಿರ್ವಾಹಕ ನಿರ್ದೇಶಕ ಶೇಖರ್ ರಾವ್ ಅವರೂ ಮಂಗಳೂರಿಗೆ ಹೋಗಲು ನಿರಾಕರಿಸಿ ರಾಜೀನಾಮೆ ನೀಡಿದ್ದರು.
* ರಾಘವೇಂದ್ರ ಭಟ್ ಅವರು 1981ರಲ್ಲಿ ಸಹಾಯಕರಾಗಿ ತಮ್ಮ ಬ್ಯಾಂಕಿಂಗ್ ವೃತ್ತಿ ಆರಂಭಿಸಿದ್ದರು. ಜುಲೈ 2ರಂದು ಸಿಒಒ ಆಗಿ ಅಧಿಕಾರ ವಹಿಸಿಕೊಂಡಿದ್ದು, ಈಗ ಮಧ್ಯಂತರ ಎಂಡಿಯಾಗಿ ಮುಂದಿನ ಮೂರು ತಿಂಗಳು ಸೇವೆ ನೀಡಲಿದ್ದಾರೆ.
* ಈ ನೇಮಕ ಕುರಿತು ಭಟ್ ಪ್ರತಿಕ್ರಿಯಿಸಿ, "ಬ್ಯಾಂಕ್ನ ಶತಮಾನಗಳ ಹೆಸರನ್ನು ಇನ್ನಷ್ಟು ಬಲಪಡಿಸಲು ನಂಬಿಕೆ ಮತ್ತು ಭಾಗಿತ್ವದೊಂದಿಗೆ ಕೆಲಸ ಮಾಡುವೆ" ಎಂದು ಹೇಳಿದ್ದಾರೆ.

## ಸಿಗಂದೂರು ಸೇತುವೆಗೆ 'ಚೌಡೇಶ್ವರಿ ದೇವಿ ಸೇತುವೆ' ಎಂದು ನಾಮಕರಣ



* ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಅಂಬಾರಗೋಡ್ಲು-ಕಳಸವಳ್ಳಿ ನಡುವೆ ಶರಾವತಿ ಹಿನ್ನೀರಿನಲ್ಲಿ ನಿರ್ಮಿಸಲಾಗಿರುವ ಭಾರತದ ಎರಡನೇ ಅತೀ ಉದ್ದದ ಕೇಬಲ್-ಸ್ಟೇಡ್ ಸೇತುವೆ ಇಂದು ಲೋಕಾರ್ಪಣೆಗೊಂಡಿತು. ಈ ಸೇತುವೆಗೆ 'ಸಿಗಂದೂರು ಚೌಡೇಶ್ವರಿ ದೇವಿ ಸೇತುವೆ' ಎಂದು ಹೆಸರಿಡಲಾಗಿದೆ.
* ಸೇತುವೆಯನ್ನು ಲೋಕಾರ್ಪಣೆಗೊಳಿಸಿದ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು, "ಭೂಮಿಪೂಜೆಯಿಂದ ಉದ್ಘಾಟನೆಯವರೆಗೆ ನಾನು ಭಾಗವಹಿಸಿದ್ದೇ ನನಗೆ ಸೌಭಾಗ್ಯ" ಎಂದು ಹೇಳಿದರು.
* ಈ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ, ಸಂಸದ ಬಿವೈ ರಾಘವೇಂದ್ರ, ಶಾಸಕ ಆರಗ ಜ್ಞಾನೇಂದ್ರ ಸೇರಿದಂತೆ ಹಲವಾರು ಗಣ್ಯರು ಭಾಗವಹಿಸಿದ್ದರು.
* ಹೆಸರಿನ ಕುರಿತು ವಿವಾದ ಇದ್ದರೂ, ಸಂಸದ ರಾಘವೇಂದ್ರ ಅವರು 'ಸಿಗಂದೂರು ಚೌಡೇಶ್ವರಿ' ಎಂಬ ಹೆಸರನ್ನು ಶಿಫಾರಸು ಮಾಡಿದ್ದು, ಬಹುಜನರ ಭಾವನೆ ಹಾಗೂ ದೇವಿಯ ಕೃಪೆಯ ಆಧಾರವಾಗಿ ಈ ನಾಮಕರಣ ಮಾಡಲಾಗಿದೆ.

## ವೀಸಾ ಹಿಂದಿಕ್ಕಿದ ಈಗ ವಿಶ್ವದಲ್ಲೇ ನಂ. 01 ಸ್ಥಾನದಲ್ಲಿ ಯುಪಿಐ




* ಭಾರತದ ಯುಪಿಐ (UPI) ಇದೀಗ ವಿಶ್ವದ ಅತಿದೊಡ್ಡ ನೈಜ-ಸಮಯದ ಡಿಜಿಟಲ್ ಪಾವತಿ ವ್ಯವಸ್ಥೆಯಾಗಿದ್ದು, ವಿಶ್ವದಾದ್ಯಂತ ವಹಿವಾಟಿನಲ್ಲಿ ವೀಸಾ ಅನ್ನು ಹಿಂದಿಕ್ಕಿದೆ.
* ಮೇ-ಜೂನ್ 2025ರ ಅವಧಿಯಲ್ಲಿ ಯುಪಿಐ ಪ್ರತಿದಿನ ಸರಾಸರಿ 65 ಕೋಟಿ ವಹಿವಾಟುಗಳನ್ನು ನಡೆಸಿದೆ.
* ವೀಸಾ 200 ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ, ಯುಪಿಐ ಕೇವಲ 7 ದೇಶಗಳಲ್ಲಿ ಸಕ್ರಿಯವಾಗಿದ್ದು ಈ ಸಾಧನೆಯು ವಿಶೇಷವಾಗಿದೆ. ಈ ಕುರಿತು ನೀತಿ ಆಯೋಗದ ಮಾಜಿ ಸಿಇಒ ಅಮಿತಾಭ್ ಕಾಂತ್ ಟ್ವೀಟ್ ಮಾಡಿದ್ದಾರೆ.
* ಭಾರತದಲ್ಲಿ ಗೂಗಲ್ ಪೇ, ಫೋನ್ ಪೇ, ಭೀಮ್ ಯುಪಿಐ, ಅಮೇಜಾನ್ ಪೇ, ವಾಟ್ಸಾಪ್ ಪೇ ಮುಂತಾದ ಆ್ಯಪ್ ಗಳ ಮೂಲಕ ಯುಪಿಐ ಸೇವೆ ಲಭ್ಯವಿದ್ದು, ಗ್ರಾಮೀಣ ಪ್ರದೇಶಗಳಲ್ಲೂ ಜನರು ಇದರ ಬಳಕೆಯಲ್ಲಿ ಮುಂದಿದ್ದಾರೆ.
* ಆಗಸ್ಟ್ 1, 2025ರಿಂದ ಯುಪಿಐ ನಿಯಮಗಳಲ್ಲಿ ಬದಲಾವಣೆ ಜಾರಿಯಲ್ಲಿವೆ. ಭಾರತೀಯ ರಾಷ್ಟ್ರೀಯ ಪಾವತಿ ನಿಗಮ (NPCI) ಹೊಸ ನಿಯಮಗಳನ್ನು ಪ್ರಕಟಿಸಿದ್ದು, ತಾಂತ್ರಿಕ ಸುಧಾರಣೆಗೆ ಉದ್ದೇಶಿಸಲಾಗಿದೆ. ಇದರಿಂದ ಬ್ಯಾಲೆನ್ಸ್ ಚೆಕ್ ಮತ್ತು ಆಟೋಪೇ ಸೇವೆಗಳ ಮೇಲೆ ಪರಿಣಾಮ ಬೀರಲಿದೆ.

## ಡ್ರ್ಯಾಗನ್ 'ಗ್ರೇಸ್' ಯಶಸ್ವಿ ವಾಪಸ್ : ಶುಭಾಂಶು ಶುಕ್ಲಾ ತಂಡದ ಗಗನಯಾನ ಅಂತ್ಯ



* ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರು 18 ದಿನಗಳ ಬಾಹ್ಯಾಕಾಶ ಯಾನ ಬಳಿಕ ಭೂಮಿಗೆ ಸುರಕ್ಷಿತವಾಗಿ ಮರಳಿದ್ದಾರೆ. ಅವರು ಜುಲೈ 14ರಂದು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಹೊರಟು, ಪೆಸಿಫಿಕ್ ಮಹಾಸಾಗರದ ಸ್ಯಾನ್ ಡಿಯಾಗೋ ಕರಾವಳಿಯಲ್ಲಿ ಸ್ಪ್ಲಾಶ್ಡೌನ್ ಮಾಡಿದರು.
* ಶುಭಾಂಶು ಶುಕ್ಲಾ ಅವರ ಪೋಷಕರು ಲಕ್ನೋದಲ್ಲಿನ ಸಿಟಿ ಮಾಂಟೆಸರಿ ಶಾಲೆಯಲ್ಲಿ ಈ ಕ್ಷಣವನ್ನು ಲೈವ್ನಲ್ಲಿ ವೀಕ್ಷಿಸಿದರು. ಇಡೀ ದೇಶದಲ್ಲಿ ಈ ಯಶಸ್ವಿ ವಾಪಸಾತಿಗೆ ಸಂಭ್ರಮ ಮನೆ ಮಾಡಿದೆ.
* ಡ್ರ್ಯಾಗನ್ ಬಾಹ್ಯಾಕಾಶ ನೌಕೆಯ ವಾಪಸಾತಿ ಪ್ರಕ್ರಿಯೆಯಲ್ಲಿ ಡಿಯೋರ್ಬಿಟ್ ಬರ್ನ್, ಟ್ರಂಕ್ ಜೆಟ್ಟಿಸನ್, ನೊಸೆಕೋನ್ ಮುಚ್ಚುವಿಕೆ, ಡ್ರೋಗ್ ಹಾಗೂ ಮುಖ್ಯ ಪ್ಯಾರಾಚೂಟ್ ನಿಯೋಜನೆ ಮೊದಲಾದ ಹಂತಗಳಿವೆ. ಇವುಗಳ ಮೂಲಕ ಬಾಹ್ಯಾಕಾಶ ನೌಕೆ ಸುರಕ್ಷಿತ ಇಳಿಕೆಗೆ ತಲುಪಿತು.
* ಗಗನಯಾತ್ರಿಗಳ ದೇಹ ಭೂಮಿಯ ವಾತಾವರಣಕ್ಕೆ ಹೊಂದಿಕೊಳ್ಳಲು 7 ದಿನಗಳ ಪುನಶ್ಚೇತನ ಕಾರ್ಯಕ್ರಮವಿದೆ. ನಂತರ ಅವರು ಸಾರ್ವಜನಿಕರಿಗೆ ಲಭ್ಯರಾಗಲಿದ್ದಾರೆ.
* ಜೂನ್ 25ರಂದು ಶುಭಾಂಶು ಶುಕ್ಲಾ, ಅಮೆರಿಕದ ಪೆಗ್ಗಿ ವಿಟ್ಸನ್, ಹಂಗೇರಿಯ ಟಿಬೋರ್ ಕಾಪು ಹಾಗೂ ಪೋಲೆಂಡಿನ ಸ್ಲಾವೋಸ್ಜ್ ಉಜ್ನಾನ್ಸ್ಕಿ ಆಕ್ಸಿಯಂ-4 ಮಿಷನ್ ಮೂಲಕ ಬಾಹ್ಯಾಕಾಶಕ್ಕೆ ತೆರಳಿದ್ದರು.
* ಅವರು ಜೂನ್ 26ರಂದು ಬಾಹ್ಯಾಕಾಶ ನಿಲ್ದಾಣದಲ್ಲಿ ಡಾಕ್ ಮಾಡಿದ್ದು, ಮಿಷನ್ 14 ದಿನಗಳವಷ್ಟೇ ಇರುವುದು. ಆದರೆ ಹವಾಮಾನ ಕಾರಣದಿಂದ ನಾಲ್ಕು ದಿನಗಳ ವಿಳಂಬವಾಯಿತು.
* ಇಸ್ರೋ ಮತ್ತು ನಾಸಾ ನಡುವೆ ಸಹಕಾರದಡಿ, ಭಾರತೀಯ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಆಯ್ಕೆಯಾಗಿದ್ದರು. 1984ರಲ್ಲಿ ಬಾಹ್ಯಾಕಾಶ ಪ್ರವೇಶಿಸಿದ ರಾಕೇಶ್

KPSCVaani

ಶರ್ಮಾ ಬಳಿಕ ಬಾಹ್ಯಾಕಾಶ ಪ್ರವೇಶಿಸಿದ ಅವರು ಎರಡನೇ ಭಾರತೀಯರಾಗಿದ್ದಾರೆ.

## 16 July 2025

### ಹಿಂದೂಸ್ತಾನ್ ಕೋಕಾ-ಕೋಲಾ ಪಾನೀಯಗಳ ಹೊಸ ಸಿಇಒ ಆಗಿ ಹೇಮಂತ್ ರೂಪಾನಿ ನೇಮಕ




* ಕೋಕಾ-ಕೋಲಾ ಕಂಪನಿಯು ಹೇಮಂತ್ ರೂಪಾನಿ ಅವರನ್ನು ಹಿಂದೂಸ್ತಾನ್ ಕೋಕಾ-ಕೋಲಾ ಬೆವರೇಜಸ್ ಪ್ರೈವೇಟ್ ಲಿಮಿಟೆಡ್ (HCCB) ನ ಹೊಸ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (CEO) ಆಗಿ ನೇಮಕ ಮಾಡಿದೆ. ಇದು ಸೆಪ್ಟೆಂಬರ್ 8, 2025 ರಿಂದ ಜಾರಿಗೆ ಬರುತ್ತದೆ.
* ಮಾಂಡೆಲೆಜ್ ಇಂಟರ್ನ್ಯಾಷನಲ್ ಇಂಕ್‌ನಲ್ಲಿ ಒಂಬತ್ತು ವರ್ಷಗಳ ಅವಧಿಯ ನಂತರ ರೂಪಾನಿ ಎಚ್‌ಸಿಸಿಬಿಗೆ ಸೇರುತ್ತಾರೆ, ಅಲ್ಲಿ ಅವರು ಪ್ರಸ್ತುತ ಆಗ್ನೇಯ ಏಷ್ಯಾದ ವ್ಯವಹಾರ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ, ಇಂಡೋನೇಷ್ಯಾ, ಫಿಲಿಪೈನ್ಸ್, ವಿಯೆಟ್ನಾಂ, ಮಲೇಷ್ಯಾ, ಸಿಂಗಾಪುರ್ ಮತ್ತು ಥೈಲ್ಯಾಂಡ್‌ನಲ್ಲಿ ಕಾರ್ಯಾಚರಣೆಗಳನ್ನು ನೋಡಿಕೊಳ್ಳುತ್ತಿದ್ದಾರೆ.
* ಕೋಕಾ-ಕೋಲಾದ ಭಾರತದ ಕಾರ್ಯಾಚರಣೆಗಳಲ್ಲಿ ಪ್ರಮುಖ ಪಾತ್ರ ವಹಿಸುವ HCCB, 13 ಕಾರ್ಖಾನೆಗಳನ್ನು ನಿರ್ವಹಿಸುತ್ತದೆ ಮತ್ತು ದೇಶದ ದಕ್ಷಿಣ ಮತ್ತು ಪಶ್ಚಿಮದ 12 ರಾಜ್ಯಗಳಲ್ಲಿ 236 ಜಿಲ್ಲೆಗಳಿಗೆ ಸೇವೆ ಸಲ್ಲಿಸುತ್ತದೆ.
* ಕೋಕಾ-ಕೋಲಾ ಕಂಪನಿಯು ಡಿಸೆಂಬರ್ 2024 ರಲ್ಲಿ ಜುಬಿಲೆಂಟ್ ಭಾರ್ತಿಯಾ ಗ್ರೂಪ್ HCCB ಯ ಮಾತೃ ಸಂಸ್ಥೆಯಾದ ಹಿಂದೂಸ್ತಾನ್ ಕೋಕಾ-ಕೋಲಾ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ 40% ಪಾಲನ್ನು ಸ್ವಾಧೀನಪಡಿಸಿಕೊಳ್ಳಲಿದೆ ಎಂದು ಘೋಷಿಸಿತು.
* ರೂಪಾನಿ ಅವರು 2016 ರಲ್ಲಿ ಭಾರತದ ಮಾರಾಟ ನಿರ್ದೇಶಕರಾಗಿ ಮೊಂಡೆಲೆಜ್‌ಗೆ ಸೇರಿದರು, ನಂತರ ವಿಯೆಟ್ನಾಂಗೆ ಉಪಾಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾದರು. 2022 ರಲ್ಲಿ, ಅವರು ಮಾಂಡೆಲೆಜ್ ನ ಆಗ್ನೇಯ ಏಷ್ಯಾ ವ್ಯವಹಾರವನ್ನು ಮುನ್ನಡೆಸಲು ಬಡ್ತಿ ಪಡೆದರು.
* HCCB ಜೊತೆಗೆ, ಕೋಕಾ-ಕೋಲಾ ಭಾರತದಾದ್ಯಂತ 11 ದೊಡ್ಡ ಬಾಟಲ್ ತಯಾರಕರೊಂದಿಗೆ ಕೆಲಸ ಮಾಡುತ್ತದೆ. ದೇಶದಲ್ಲಿ ಇದರ ಬ್ರಾಂಡ್ ಪೋರ್ಟ್ಫೋಲಿಯೊದಲ್ಲಿ ಕೋಕಾ-ಕೋಲಾ, ಥಮ್ಸ್ ಅಪ್, ಸ್ಪ್ರೈಟ್, ಫ್ಯಾಂಟಾ ಮತ್ತು ಮಿನಿಟ್ ಮೇಡ್ ಸೇರಿವೆ.

### ವ್ಯಂಗ್ಯಚಿತ್ರಕಾರ ಸುರೇಂದ್ರ ಅವರಿಗೆ 'ಬಾರ್ಟನ್ಸ್ ಜೀವಮಾನ ಸಾಧನೆ' ಪ್ರಶಸ್ತಿ



* ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯ 18ನೇ ವಾರ್ಷಿಕೋತ್ಸವದ ಅಂಗವಾಗಿ, 今年 ದ 'ಬಾರ್ಟನ್ಸ್ ಜೀವಮಾನ ಸಾಧನೆ' ಪ್ರಶಸ್ತಿಗೆ ಪ್ರಸಿದ್ಧ ವ್ಯಂಗ್ಯಚಿತ್ರಕಾರ ಸುರೇಂದ್ರ ಅವರು ಆಯ್ಕೆಯಾಗಿದ್ದಾರೆ.
* 1861ರಲ್ಲಿ ಸ್ಥಾಪನೆಯಾದ 'ಬಾರ್ಟನ್ಸ್' ಸಂಸ್ಥೆಯು ಈ ಪ್ರಶಸ್ತಿಯನ್ನು ನೀಡುತ್ತಿದೆ. ಸುರೇಂದ್ರ ಅವರು ಹಲವು ಪ್ರಮುಖ ಪತ್ರಿಕೆಗಳಿಗೆ ವ್ಯಂಗ್ಯಚಿತ್ರಗಳನ್ನು ರಚಿಸಿದ್ದಾರೆ.
* ಆಗಸ್ಟ್ 2ರಂದು ಬೆಳಿಗ್ಗೆ 11ಕ್ಕೆ ಬೆಂಗಳೂರು ಟ್ರಿನಿಟಿ ವೃತ್ತದಲ್ಲಿರುವ ಗ್ಯಾಲರಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಇದೇ ವೇಳೆ ಅವರ ವ್ಯಂಗ್ಯಚಿತ್ರಗಳ ಪ್ರದರ್ಶನ ಉದ್ಘಾಟನೆಯಾಗಲಿದೆ.
* ಪ್ರದರ್ಶನವು ಆಗಸ್ಟ್ 23ರವರೆಗೆ ನಡೆಯಲಿದ್ದು, ಸಾರ್ವಜನಿಕ ರಜಾದಿನಗಳನ್ನು ಹೊರತುಪಡಿಸಿ ಪ್ರತಿದಿನ ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ಸಾರ್ವಜನಿಕರಿಗೆ ಉಚಿತ ಪ್ರವೇಶ ನೀಡಲಾಗಿದೆ.


### ಲೀಲಾ ಅಬೌಲಿಲಾಗೆ 2025 ರ ಪೆನ್ ಪಿಂಟರ್ ಪ್ರಶಸ್ತಿ



* ಸುಡಾನ್-ಸ್ಕಾಟಿಷ್ ಬರಹಗಾರ್ತಿ ಲೀಲಾ ಅಬೌಲೇಲಾ ಅವರಿಗೆ 2025ರ ಪೆನ್ ಪಿಂಟರ್ ಪ್ರಶಸ್ತಿ ಲಭಿಸಿದೆ. ಇಂಗ್ಲಿಷ್ ಪೆನ್ ಈ ಘೋಷಣೆಯನ್ನು ಜುಲೈ 10ರಂದು ಲಂಡನ್‌ನಲ್ಲಿ ಮಾಡಿದ್ದು, ಅಕ್ಟೋಬರ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.
* ಅಬೌಲೇಲಾ ಅವರ ಕಥೆಗಳು ನಂಬಿಕೆ, ವಲಸೆ ಮತ್ತು ಮುಸ್ಲಿಂ ಮಹಿಳೆಯರ ಜೀವನವನ್ನು ದಿಟ್ಟವಾಗಿ ಅನ್ವೇಷಿಸುತ್ತವೆ. ಅವರು ದಿ ಟ್ರಾನ್ಸ್‌ಲೇಟರ್, ಮಿನಾರೆಟ್ ಮತ್ತು ರಿವರ್ ಸ್ಪಿರಿಟ್ ಕಾದಂಬರಿಗಳ ಮೂಲಕ ಪ್ರಖ್ಯಾತರಾಗಿದ್ದಾರೆ.
* ಘೋಷಣೆಯ ವೇಳೆ ಅಬೌಲೇಲಾ ತಮ್ಮ ಮೂಲ ಮತ್ತು ಧರ್ಮವನ್ನು ಪ್ರತಿನಿಧಿಸುತ್ತಿರುವುದಕ್ಕೆ ಹೆಮ್ಮೆ ವ್ಯಕ್ತಪಡಿಸಿದರು. ಈ ವೇಳೆ ನಟ ಖಾಲಿದ್ ಅಬ್ದಲ್ಲಾ ಮತ್ತು ಅಮೀರಾ ಗಜಲ್ಲಾ ಓದಿನ ಮೂಲಕ ಕಾರ್ಯಕ್ರಮ ಭಾಗವಹಿಸಿದರು.
* ಅಬೌಲೇಲಾ ಸುಡಾನ್‌ನಲ್ಲಿ ಬೆಳೆದರು ಮತ್ತು ಈಗ ಸ್ಕಾಟ್ಲ್ಯಾಂಡ್ ನಲ್ಲಿ ವಾಸವಾಗಿದ್ದಾರೆ. ಅವರು ಹಲವಾರು ಭಾಷೆಗಳಿಗೆ ಅನುವಾದಗೊಂಡಿದ್ದು, ಕೇನ್ ಪ್ರಶಸ್ತಿಯ ಮೊದಲ ಆಫ್ರಿಕನ್ ವಿಜೇತರೂ ಆಗಿದ್ದಾರೆ.
* ಅಬೌಲೇಲಾ ಅಕ್ಟೋಬರ್ 10ರಂದು ಬ್ರಿಟಿಷ್ ಲೈಬ್ರರಿಯಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾರೆ. ಅಂದು ಅವರು ಮತ್ತೊಬ್ಬ ಧೈರ್ಯಶಾಲಿ ಬರಹಗಾರನನ್ನೂ ಹೆಸರಿಸಲಿದ್ದಾರೆ, ಈ ವಿಭಾಗವು ಅಭಿವ್ಯಕ್ತಿಯ ಸ್ವಾತಂತ್ರ್ಯದ ಪರ ಹೋರಾಡಿದ ವ್ಯಕ್ತಿಗೆ ಕೊಡಲಾಗುತ್ತದೆ.

KPSCVaani

* ಹೆರಾಲ್ಡ್ ಪಿಂಟರ್ ಅವರ ಸ್ಮರಣಾರ್ಥ ಈ ಪ್ರಶಸ್ತಿಯನ್ನು 2009ರಿಂದ ನೀಡಲಾಗುತ್ತಿದೆ. ಈ ಹಿಂದಿನ ವಿಜೇತರಲ್ಲಿ ಅರುಂಧತಿ ರಾಯ್, ಸಲ್ಮಾನ್ ರಶ್ದಿ ಮತ್ತು ಚಿಮಮಂಡಾ ಅಡಿಚಿ ಇದ್ದಾರೆ.




## ವಿಶ್ವದ ಹಿರಿಯ ಕ್ರೀಡಾಪಟು 114 ವರ್ಷದ ಫೌಜಾ ಸಿಂಗ್ ಸಾವು



* 114 ವರ್ಷ ವಯಸ್ಸಿನ ಫೌಜಾ ಸಿಂಗ್ ಅವರು ಪಂಜಾಬ್‌ನ ಬಿಯಾಸ್ ಗ್ರಾಮದ ರಸ್ತೆಯಲ್ಲಿ ನಡೆಯುತ್ತಿದ್ದಾಗ ಅಪರಿಚಿತ ಕಾರು ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ.
* ಘಟನೆ ಸೋಮವಾರ(ಜುಲೈ 14) ಮಧ್ಯಾಹ್ನ 3.30ರ ಸುಮಾರಿಗೆ ನಡೆದಿದೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾದರೂ ಬದುಕುಳಿಯಲಿಲ್ಲ. ಕಾರು ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ.
* 1911ರಲ್ಲಿ ಜನಿಸಿದ ಫೌಜಾ ಸಿಂಗ್ ಮ್ಯಾರಥಾನ್‌ಗಳಲ್ಲಿ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಿ ಅನೇಕ ದಾಖಲೆಗಳನ್ನು ಗಳಿಸಿದ್ದರು.
* ಅವರು ಶತಾಯುಷಿಯಾಗಿಯೇ ಮ್ಯಾರಥಾನ್ ಓಡಿದ ಪ್ರಥಮ ವ್ಯಕ್ತಿಯಾಗಿದ್ದರು. ಅವರ ಜೀವನಚರಿತ್ರೆಯನ್ನು ಖುಷ್ವಂತ್ ಸಿಂಗ್ 'ದಿ ಟರ್ಬನ್ಡ್ ಟೊರ್ನಾಡೊ' ಎಂಬ ಹೆಸರಿನಲ್ಲಿ ಬರೆದಿದ್ದಾರೆ.
* ಪ್ರಧಾನಿ ನರೇಂದ್ರ ಮೋದಿ ಅವರು ಫೌಜಾ ಸಿಂಗ್ ನಿಧನದ ಸುದ್ದಿ ಕುರಿತು ಸಂತಾಪ ವ್ಯಕ್ತಪಡಿಸಿದ್ದಾರೆ. ಅವರು, "ಫೌಜಾ ಸಿಂಗ್ ಯುವಕರಿಗೆ ಫಿಟ್ನೆಸ್ ಬಗ್ಗೆ ಸ್ಫೂರ್ತಿ ನೀಡಿದ ಅಪರೂಪದ ವ್ಯಕ್ತಿ. ಅವರ ದುರ್ಘಟನೆ ನೋವಿನ ಸಂಗತಿ. ಕುಟುಂಬ ಮತ್ತು ಅಭಿಮಾನಿಗಳಿಗೆ ಶಕ್ತಿ ಸಿಗಲಿ" ಎಂದು ಎಕ್ಸ್‌ನಲ್ಲಿ ಬರೆದಿದ್ದಾರೆ.

## ಅಭಿಮನ್ಯುವಿಗೆ ಮತ್ತೊಮ್ಮೆ ಅಂಬಾರಿ ಹೊರುವ ಹೊಣೆ



* 2025ರ ದಸರಾ ಮಹೋತ್ಸವಕ್ಕಾಗಿ ಅರಣ್ಯ ಇಲಾಖೆ ಮತ್ತೊಮ್ಮೆ 59 ವರ್ಷ ವಯಸ್ಸಿನ ಅಭಿಮನ್ಯು ಆನೆಯನ್ನು ಅಂಬಾರಿ ಹೊರುವ ಮುಖ್ಯ ಆನೆ (ಗಜಪಡೆಯ ನಾಯಕ) ಆಗಿ ಆಯ್ಕೆ ಮಾಡಿದೆ.
* ಅಭಿಮನ್ಯು ಈಗಲೂ ಆರೋಗ್ಯವಾಗಿದ್ದು, ಫಿಟ್ ಅಂಡ್ ಫೈನ್ ಆಗಿರುವುದರಿಂದ ಈ ಬಾರಿಯೂ ಅವನೇ ಅಂಬಾರಿ ಹೊರುತ್ತಾನೆ ಎಂದು ಡಿಸಿಎಫ್ ಪ್ರಭುಗೌಡ ತಿಳಿಸಿದ್ದಾರೆ.
* ಅಭಿಮನ್ಯುವಿನೊಂದಿಗೆ ಮಹೇಂದ್ರ, ಧನಂಜಯ, ಏಕಲವ್ಯ ಸೇರಿ ಹಲವು ಆನೆಗಳು ಲೈನ್‌ನಲ್ಲಿವೆ. ವಿಶೇಷವಾಗಿ ಏಕಲವ್ಯನು ಈ ಬಾರಿ ಹೆಚ್ಚು ಧೈರ್ಯ ತೋರಿಸಿದ್ದು, ಭವಿಷ್ಯದಲ್ಲಿ ಉತ್ತಮ ಅಂಬಾರಿ ಆನೆ ಆಗುವ ಸಾಧ್ಯತೆಯಿದೆ.
* ಅಭಿಮನ್ಯು ಈಗ 59 ವರ್ಷದ್ದು. ಕೇಂದ್ರ ಅರಣ್ಯ ಸಚಿವಾಲಯದ ಮಾರ್ಗಸೂಚಿಯ ಪ್ರಕಾರ, 60 ವರ್ಷದ ಮೇಲೆ ಆನೆಗಳಿಗೆ ಭಾರ ಹೊರುವುದನ್ನು ನಿಷೇಧಿಸಲಾಗಿದೆ. ಹೀಗಾಗಿ ಈ ಬಾರಿ ಅಂಬಾರಿ ಹೊರುವ ಅವಕಾಶವು ಅಭಿಮನ್ಯುವಿಗೆ ಕೊನೆಯದಾಗಬಹುದೆಂಬ ಅನಿಶ್ಚಿತತೆಯೂ ಇದೆ.
* ಆಗಸ್ಟ್ 4ರಂದು ಮೈಸೂರಿಗೆ ಗಜಪಡೆ ಆಗಮಿಸಲಿದೆ. 6 ಕ್ಯಾಂಪುಗಳಿಂದ ಆನೆಗಳನ್ನು ಆಯ್ಕೆ ಮಾಡಲಾಗುತ್ತಿದ್ದು, ಹೆಣ್ಣು ಆನೆಗಳಿಗೆ ಗರ್ಭಪರೀಕ್ಷೆಯನ್ನೂ ಮಾಡಲಾಗಿದೆ. ಅಂತಿಮವಾಗಿ ದಸರಾ ಹೈಪವರ್ ಕಮಿಟಿ ಆನೆಗಳ ಹೆಲ್ತ್ ಕಾರ್ಡ್ ಪರಿಶೀಲಿಸಿ ಪಟ್ಟಿಯನ್ನು ಬಿಡುಗಡೆ ಮಾಡಲಿದೆ.

## ವಿದ್ಯಾರ್ಥಿಗಳಿಗೆ ಅತ್ಯಂತ ಸೂಕ್ತ ನಗರ ಪಟ್ಟಿಯಲ್ಲಿ ಬೆಂಗಳೂರು




* ಅಂತರರಾಷ್ಟ್ರೀಯ "QS Best Student Cities" ಸಮೀಕ್ಷೆಯಲ್ಲಿ ಬೆಂಗಳೂರು ವಿದ್ಯಾರ್ಥಿಗಳಿಗೆ ಅತ್ಯಂತ ಸೂಕ್ತ ನಗರಗಳ ಪಟ್ಟಿಯಲ್ಲಿ 22 ಸ್ಥಾನ ಜಿಗಿದು 108ನೇ ಸ್ಥಾನ ಪಡೆದಿದೆ. ಈ ಸಮೀಕ್ಷೆಯಲ್ಲಿ 130 ನಗರಗಳನ್ನು ಅಳೆಯಲಾಗಿದೆ.

* ಬೆಂಗಳೂರು ಜೊತೆಗೆ ದೆಹಲಿ, ಮುಂಬೈ ಮತ್ತು ಚೆನ್ನೈ ಕೂಡ ಈ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಮುಂಬೈ 15 ಸ್ಥಾನಗಳ ಜಿಗಿತದಿಂದ 98ನೇ ಸ್ಥಾನ, ದೆಹಲಿ ಏಳು ಸ್ಥಾನ ಜಿಗಿದು 104ನೇ ಸ್ಥಾನ, ಮತ್ತು ಚೆನ್ನೈ 12 ಸ್ಥಾನ ಗಳಿಸಿ 128ನೇ ಸ್ಥಾನದಲ್ಲಿದೆ.
* ವಿದ್ಯಾರ್ಥಿಗಳಿಗೂ ಎಟುಕಬಲ್ಲ ನಗರಗಳ ಪಟ್ಟಿಯಲ್ಲಿ ಮುಂಬೈ ಮತ್ತು ಬೆಂಗಳೂರು ಮೊದಲ 15 ನಗರಗಳಲ್ಲಿವೆ. ಈ ವಿಭಾಗದಲ್ಲಿ ಭಾರತವು ಉತ್ತಮ ಸಾಧನೆ ಪ್ರದರ್ಶಿಸಿದೆ.
* ಉದ್ಯೋಗ ಅವಕಾಶಗಳ ಅಂಶದಲ್ಲಿ ದೆಹಲಿ ಮತ್ತು ಮುಂಬೈ ಟಾಪ್ 50 ಪಟ್ಟಿಯಲ್ಲಿ ಸೇರಿವೆ. ಬೆಂಗಳೂರು 41 ಸ್ಥಾನ ಜಿಗಿದು 59ನೇ ಸ್ಥಾನ ಪಡೆದುಕೊಂಡಿದೆ.
* ದಕ್ಷಿಣ ಕೊರಿಯಾದ ಸಿಯೋಲ್ ಈ ವರ್ಷದ ವಿದ್ಯಾರ್ಥಿಗಳಿಗೆ ಅತ್ಯಂತ ಸೂಕ್ತ ನಗರವಾಗಿ ಪ್ರಥಮ ಸ್ಥಾನಕ್ಕೆ ಏರಿದೆ. ಲಂಡನ್ ಮೂರು ಸ್ಥಾನ ಕುಸಿದು ಮೂರನೇ ಸ್ಥಾನದಲ್ಲಿದೆ.

## ಎಲ್ಐಸಿಯ ಹೊಸ MD ಮತ್ತು CEO ಆಗಿ ಆರ್ ದೊರೈಸ್ವಾಮಿ ನೇಮಕ



* ಭಾರತ ಸರ್ಕಾರದ ಹಣಕಾಸು ಸೇವೆಗಳ ಇಲಾಖೆ ಜುಲೈ 14, 2025 ರಂದು ಪ್ರಕಟಿಸಿದ ಅಧಿಸೂಚನೆಯಂತೆ, ಆರ್. ದೊರೈಸ್ವಾಮಿಯನ್ನು ಭಾರತೀಯ ಜೀವನ ವಿಮಾ ನಿಗಮದ (ಎಲ್ ಐಸಿ) ಮುಖ್ಯ ಕಾರ್ಯನಿರ್ವಹಣಾಧಿಕಾರಿ (CEO) ಮತ್ತು ವ್ಯವಸ್ಥಾಪನಾ ನಿರ್ದೇಶಕರಾಗಿ (MD) ನೇಮಕ ಮಾಡಲಾಗಿದೆ.
* ಅವರ ನೇಮಕವು ಆರ್ಥಿಕ ಸೇವೆಗಳ ಇಲಾಖೆಯ ಅಧೀನದಲ್ಲಿ ಆಗಿದ್ದು, ಅವರು ಆಗಸ್ಟ್ 28, 2028 ರವರೆಗೆ ಮೂರು ವರ್ಷಗಳ ಅವಧಿಗೆ ಈ ಹುದ್ದೆ ಕೈಗೊಳ್ಳಲಿದ್ದಾರೆ.
* ದೊರೈಸ್ವಾಮಿಯವರು ಈಗಾಗಲೇ ಮುಂಬೈನ ಎಲ್ಐಸಿ ಕೇಂದ್ರ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದ್ದಾರೆ.
* ಈ ನೇಮಕವು ಎಲ್ಐಸಿಯಲ್ಲಿ ಪ್ರಮುಖ ನಾಯಕತ್ವ ಬದಲಾವಣೆಯಾಗಿದೆ. ಕಂಪನಿಯ ಕಾರ್ಯಕ್ಷಮತೆ ಮತ್ತು ಗ್ರಾಹಕ ಸೇವೆಯಲ್ಲಿ ಮತ್ತಷ್ಟು ಬೆಳವಣಿಗೆಗೆ ಇದು ಸಹಕಾರಿ ಆಗಲಿದೆ.

## ಆಂಧ್ರಪ್ರದೇಶದಲ್ಲಿ ಭಾರತದ ಮೊದಲ AI ಕ್ಯಾಂಪಸ್ ಆರಂಭ



* ಬಿಟ್ಸ್ ಪಿಲಾನಿಯು ದೇಶದ ಮೊದಲ ಕೃತಕ ಬುದ್ಧಿಮತ್ತೆ (AI) ಪ್ಲಸ್ ಕ್ಯಾಂಪಸ್ ಅನ್ನು ಆಂಧ್ರಪ್ರದೇಶದ ಅಮರಾವತಿಯಲ್ಲಿ ಸ್ಥಾಪಿಸಲು ಸಜ್ಜಾಗಿದೆ.
* ಈ ಮಹತ್ವಾಕಾಂಕ್ಷೆಯ ಯೋಜನೆಯು ₹1,000 ಕೋಟಿ ಹೂಡಿಕೆಯಿಂದ 70 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗಲಿದೆ. ಪ್ರವೇಶವು 2027ರಲ್ಲಿ ಪ್ರಾರಂಭವಾಗಲಿದ್ದು, ಎರಡು ಹಂತಗಳಲ್ಲಿ 7,000 ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಿದೆ.
* ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಈ ಯೋಜನೆಯನ್ನು ಭವಿಷ್ಯ ಆಧಾರಿತ ಶಿಕ್ಷಣದ ದೃಷ್ಟಿಕೋನದ ಭಾಗವೆಂದು ವಿಂಗಡಿಸಿದ್ದಾರೆ. ಕ್ಯಾಂಪಸ್‌ನಲ್ಲಿ ಹಸಿರು ಕಟ್ಟಡಗಳು, ನವೀಕರಿಸಬಹುದಾದ ಇಂಧನ, ಐಒಟಿ ಮೂಲಸೌಕರ್ಯ ಮತ್ತು ಎಐ ಆಧಾರಿತ ಸೇವೆಗಳು ಇರಲಿವೆ.
* AI, ಡೇಟಾ ಸೈನ್ಸ್, ರೊಬೊಟಿಕ್ಸ್, ಸೈಬರ್-ಫಿಸಿಕಲ್ ಸಿಸ್ಟಮ್ಸ್ ಮತ್ತು ಕಂಪ್ಯೂಟೇಶನಲ್ ಲಿಂಗ್ವಿಸ್ಟಿಕ್ಸ್‌ನಲ್ಲಿ ಆಧುನಿಕ ಕೋರ್ಸ್‌ಗಳೊಂದಿಗೆ ಕ್ಯಾಂಪಸ್ ಜಾಗತಿಕ ಮಾನ್ಯತೆ ಪಡೆದ ಶಿಕ್ಷಣ ನೀಡಲಿದೆ. ವಿದ್ಯಾರ್ಥಿಗಳಿಗೆ ಉದ್ಯಮ ಇಂಟರ್ನ್‌ಶಿಪ್‌ಗಳಿಗೂ ಅವಕಾಶ ಕಲ್ಪಿಸಲಾಗುತ್ತದೆ.
* ಬಿಟ್ಸ್ ಉಪಕುಲಪತಿ ವಿ. ರಾಮಗೋಪಾಲ ರಾವ್ ಅವರ ಪ್ರಕಾರ, ಕೃಷಿ, ಹವಾಮಾನ ಮತ್ತು ಆರೋಗ್ಯ ರಕ್ಷಣೆಯಂತಹ ವಿವಿಧ ಕ್ಷೇತ್ರಗಳಲ್ಲಿ ಎಐ ಅನ್ವಯಿಕತೆಯನ್ನು ಕಲಿಸುವುದು ಯೋಜನೆಯ ಉದ್ದೇಶವಾಗಿದೆ.
* ಕ್ಯಾಂಪಸ್ ಅನ್ನು ವೆಂಕಟೇಶ್ವರ ಸ್ವಾಮಿ ದೇವಾಲಯದ ಬಳಿ ನಿರ್ಮಿಸಲಾಗುತ್ತಿದ್ದು, ಕಟ್ಟಡಗಳು ಸಾಂಪ್ರದಾಯಿಕ ವಾಸ್ತುಶಿಲ್ಪದ ಜೊತೆಗೆ ಆಧುನಿಕ ವಿನ್ಯಾಸ ಹೊಂದಿರಲಿವೆ. ರಸ್ತೆ ಸಂಪರ್ಕ ಸುಧಾರಣೆಗೆ ಸೀಡ್ ಆಕ್ಸೆಸ್ ರಸ್ತೆಯನ್ನೂ ಯೋಜಿಸಲಾಗಿದೆ.
* ಬಿಟ್ಸ್ ತನ್ನ ಪಿಲಾನಿ, ಹೈದರಾಬಾದ್ ಮತ್ತು ಗೋವಾ ಕ್ಯಾಂಪಸ್‌ಗಳನ್ನು 2030–31ರ ವೇಳೆಗೆ 26,000 ವಿದ್ಯಾರ್ಥಿಗಳ ಸಾಮರ್ಥ್ಯವರೆಗೆ ವಿಸ್ತರಿಸಲು ₹1,200 ಕೋಟಿ ಹೆಚ್ಚುವರಿ ಹೂಡಿಕೆಗೆ ಸಿದ್ಧವಾಗಿದೆ.

## ಐಸಿಸಿ ಜೂನ್ ತಿಂಗಳ ಆಟಗಾರಾಗಿ ಏಡೆನ್ ಮಾರ್ಕ್ರಾಮ್ ಮತ್ತು ಹೇಲಿ ಮ್ಯಾಥ್ಯೂಸ್ ಆಯ್ಕೆ



* ಐಸಿಸಿ ಜೂನ್ 2025ರ ಪುರುಷ ಮತ್ತು ಮಹಿಳಾ ತಿಂಗಳ ಆಟಗಾರ ಪ್ರಶಸ್ತಿಗೆ ದಕ್ಷಿಣ ಆಫ್ರಿಕಾದ ಏಡೆನ್ ಮಾರ್ಕ್ರಾಮ್ ಮತ್ತು ವೆಸ್ಟ್ ಇಂಡೀಸ್‌ನ ಹೇಲಿ ಮ್ಯಾಥ್ಯೂಸ್ ಆಯ್ಕೆಗೊಂಡಿದ್ದಾರೆ.

ಏಡೆನ್ ಮಾರ್ಕ್ರಾಮ್ ಸಾಧನೆ:

* ಲಾರ್ಡ್ಸ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ 136 ರನ್ ಸಿಡಿಸಿದ ಮಾರ್ಕ್ರಾಮ್, ಕಗಿಸೊ ರಬಾಡಾ ಮತ್ತು ಪಾತುಮ್ ನಿಸ್ಸಾಂಕಾ ಅವರನ್ನು ಹಿಂದಿಕ್ಕಿ ಪ್ರಶಸ್ತಿ ಗೆದ್ದರು.
* ಟೆಂಬಾ ಬವುಮಾ ಅವರೊಂದಿಗೆ 147 ರನ್‌ನ ಮೌಲ್ಯವಂತಾದ ಪಾಲುದಾರಿಕೆ ನೀಡಿದರು. ಐದು ವಿಕೆಟ್‌ಗಳ ಜಯದಿಂದ ದಕ್ಷಿಣ ಆಫ್ರಿಕಾ ಐಸಿಸಿ ಪ್ರಶಸ್ತಿ ಗೆದ್ದಿತು.

ಹೇಲಿ ಮ್ಯಾಥ್ಯೂಸ್ ಸಾಧನೆ:

KPSCVaani

* ಈ ಹಿಂದೆ ಮೂರು ಬಾರಿ ಪ್ರಶಸ್ತಿ ಗೆದ್ದಿರುವ ಮ್ಯಾಥ್ಯೂಸ್, ಈ ಬಾರಿ ಸಹ ಆಟಗಾರ್ತಿ ಅಫಿ ಫ್ಲೆಚರ್ ಮತ್ತು ಟಾಜ್ಮಿನ್ ಬ್ರಿಟ್ಸ್ ಅವರನ್ನು ಮೀರಿ ಪ್ರಶಸ್ತಿಗೆ ಪಾತ್ರರಾದರು.
* ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಮತ್ತು ಟಿ20 ಸರಣಿಯಲ್ಲಿ ಒಟ್ಟು 147 ರನ್ ಮತ್ತು 6 ವಿಕೆಟ್‌ಗಳನ್ನು ಪಡೆದು ಗಮನ ಸೆಳೆದರು. ಎರಡು ಅರ್ಧಶತಕಗಳೊಂದಿಗೆ ಸರಣಿಯ ಆಟಗಾರ್ತಿಯಾಗಿ ಹೆಸರಾಗಿದ್ದಾರೆ.
* ಮಾರ್ಕ್ರಾಮ್ ಈ ಪ್ರಶಸ್ತಿಯು ದಕ್ಷಿಣ ಆಫ್ರಿಕಾದ ಕ್ರಿಕೆಟ್‌ಗಾಗಿ ಐತಿಹಾಸಿಕ ಎಂದು ವಿವರಿಸಿ, ತಂಡದ ಸಂಯೋಜಿತ ಪ್ರಯತ್ನವನ್ನು ಶ್ಲಾಘಿಸಿದರು. ಮ್ಯಾಥ್ಯೂಸ್ ತಮ್ಮ ಫಾರ್ಮ್ ಮತ್ತು ತಂಡದ ಗೆಲುವಿನಲ್ಲಿನ ಪಾತ್ರದಿಂದ ಸಂತೋಷ ವ್ಯಕ್ತಪಡಿಸಿದರು.
* ಪ್ರಶಸ್ತಿ ಆಯ್ಕೆ ಜಾಗತಿಕ ಅಭಿಮಾನಿಗಳು, ಮಾಜಿ ಆಟಗಾರರು ಹಾಗೂ ಮಾಧ್ಯಮ ಪ್ರತಿನಿಧಿಗಳಿಂದ ಕೂಡಿದ ಸಮಿತಿಯ ಮತದಾನದ ಆಧಾರದ ಮೇಲೆ ನಡೆಯಿತು.

## ಭಾರತ-ಗ್ರೀಸ್ ನೌಕಾಪಡೆಗಳ ಪ್ಯಾಸೆಕ್ಸ್(PASSEX) ಜಂಟಿ ಸಮುದ್ರ ವ್ಯಾಯಾಮ



* ಭಾರತೀಯ ನೌಕಾಪಡೆ ಮತ್ತು ಗ್ರೀಸ್ ನೌಕಾಪಡೆ (ಹೆಲೆನಿಕ್ ನೌಕಾಪಡೆ) ಮುಂಬೈ ಬಳಿ ಅರೇಬಿಯನ್ ಸಮುದ್ರದಲ್ಲಿ ಪ್ಯಾಸೆಕ್ಸ್ (PASSEX) ಎಂಬ ಜಂಟಿ ಸಮುದ್ರ ವ್ಯಾಯಾಮ ನಡೆಸಿದವು.
* ಈ ಕವಾಯತಿನಿಂದ ಎರಡು ದೇಶಗಳ ನಡುವಿನ ಸಮುದ್ರ ಸಹಕಾರ ಮತ್ತು ನೌಕಾ ಸಮನ್ವಯ ಬಲಪಟ್ಟಿದೆ.
* ಪ್ಯಾಸೆಕ್ಸ್ ವ್ಯಾಯಾಮವು ಭಾರತ-ಗ್ರೀಸ್ ರಕ್ಷಣಾ ಸಂಬಂಧ ಬಲಪಡಿಸುವ ಪ್ರಯತ್ನದ ಭಾಗವಾಗಿದೆ. 2023ರಲ್ಲಿ ಪ್ರಧಾನಿ ಮೋದಿಯವರು ಗ್ರೀಸ್‌ಗೆ ಭೇಟಿನೀಡಿದ ನಂತರ, ಈ ದೇಶಗಳು ತಮ್ಮ ಸಂಬಂಧವನ್ನು ಕಾರ್ಯತಂತ್ರದ ಪಾಲುದಾರಿಕೆಗೆ ಉತ್ತೇಜಿಸಿವೆ.
* ಭಾರತೀಯ ನೌಕಾಪಡೆಯ ತಲ್ವಾರ್-ಕ್ಲಾಸ್ ಸ್ಟೆಲ್ತ್ ಫ್ರಿಗೇಟ್ ಐಎನ್‌ಎಸ್ ತರ್ಕಶ್ ಮತ್ತು ಗ್ರೀಕ್ ನೌಕೆಯ ಎಚ್‌ಎಸ್ ಪ್ಸಾರಾ ಈ ಸಮುದ್ರ ವ್ಯಾಯಾಮದಲ್ಲಿ ಭಾಗವಹಿಸಿದವು.
* ವ್ಯಾಯಾಮದಲ್ಲಿ ಯುದ್ಧ ತಂತ್ರದ ಚಲನೆಗಳು, ಸರ್ಫೇಸ್ ಫೈರಿಂಗ್, ಹೆಲಿಕಾಪ್ಟರ್ ಲ್ಯಾಂಡಿಂಗ್, ಮರುಪೂರಣ ಮತ್ತು ಅಗ್ನಿಶಾಮಕ ತರಬೇತಿಗಳಂತಹ ಚಟುವಟಿಕೆಗಳು ನಡೆದವು.
* 2012ರಲ್ಲಿ ಸೇರ್ಪಡೆಯಾದ ಐಎನ್‌ಎಸ್ ತರ್ಕಶ್, ಬ್ರಹ್ಮೋಸ್ ಕ್ಷಿಪಣಿಗಳು ಮತ್ತು ಬಹುಪಯೋಗಿ ಹೆಲಿಕಾಪ್ಟರ್‌ಗಳಿಂದ ಲಸಗಿತವಾಗಿದ್ದು, ಇದು ಯುದ್ಧ ಮತ್ತು ವಿಪತ್ತು ನಿರ್ವಹಣಾ ಕಾರ್ಯಾಚರಣೆಗಳಿಗೆ ಬಳಸಲಾಗುತ್ತದೆ.

# 17 July 2025

## ಜುಲೈ 17 ಅಂತರಾಷ್ಟ್ರೀಯ ನ್ಯಾಯ ದಿನ



* ಅಂತರಾಷ್ಟ್ರೀಯ ಅಪರಾಧ ಕೃತ್ಯಗಳ ವಿರುದ್ಧ ಉದಯೋನ್ಮುಖ ಆಧುನಿಕ ನ್ಯಾಯ ವ್ಯವಸ್ಥೆಯನ್ನು ಗುರುತಿಸಲು ಪ್ರತಿ ವರ್ಷ ಜುಲೈ 17 ರಂದು ವಿಶ್ವ ಅಂತರರಾಷ್ಟ್ರೀಯ ನ್ಯಾಯಕ್ಕಾಗಿ ವಿಶ್ವ ದಿನವನ್ನು ಆಚರಿಸಲಾಗುತ್ತದೆ.
* ಅಂತರರಾಷ್ಟ್ರೀಯ ನ್ಯಾಯಕ್ಕಾಗಿ ವಿಶ್ವ ದಿನವನ್ನು ಜುಲೈ 17 ರಂದು ಆಚರಿಸಲಾಗುತ್ತದೆ ಏಕೆಂದರೆ ಈ ದಿನವು 1998 ರಲ್ಲಿ ರೋಮ್ ಶಾಸನವನ್ನು ಅಂಗೀಕರಿಸಿದ ವಾರ್ಷಿಕೋತ್ಸವವಾಗಿದೆ.
* ಈ ಒಪ್ಪಂದದ ಸಹಾಯದಿಂದ ಅಂತರರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯವನ್ನು (ಐಸಿಸಿ) ಸ್ಥಾಪಿಸಲಾಯಿತು.
* ಈ ದಿನವನ್ನು ಅಂತರಾಷ್ಟ್ರೀಯ ಕ್ರಿಮಿನಲ್ ಜಸ್ಟಿಸ್ ದಿನ ಅಥವಾ ಅಂತರಾಷ್ಟ್ರೀಯ ನ್ಯಾಯ ದಿನ ಎಂದೂ ಕರೆಯಲಾಗುತ್ತದೆ.
* 1998ರ ಜುಲೈ 17ರಲ್ಲಿ 139 ದೇಶಗಳು ಒಗ್ಗೂಡಿ ಅಂತಾರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯದ ರೋಮ್ ಶಾಸನದ ಶೀರ್ಷಿಕೆಯ ಒಪ್ಪಂದಕ್ಕೆ ಸಹಿ ಹಾಕಿತು. ಆದರೆ 2022ರ ಜುಲೈ 1ರಂದು ಜಾರಿಗೆ ಬಂದು ಅಂತಾರಾಷ್ಟ್ರೀಯ ಅಪರಾಧ ನ್ಯಾಯಾಲಯ ಎಂದು ಕರೆಯಲಾಯಿತು.
* ನ್ಯಾಯದ ಬಗ್ಗೆ ಹಾಗೂ ಮಾನವೀಯತೆಗೆ ವಿರುದ್ಧವೆನಿಸುವ ಅಪರಾಧ ಕೃತ್ಯಗಳು, ದೌರ್ಜನ್ಯ, ಚಿತ್ರಹಿಂಸೆ, ಯುದ್ಧ ಅಪರಾಧಗಳು, ಮಿಲಿಟರಿ ಆಕ್ರಮಣ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶವನ್ನು ಹೊಂದಿದೆ.
* ರೋಮ್ ಶಾಸನವನ್ನು ಅಳವಡಿಸಿಕೊಂಡ ದಿನವನ್ನು ನೆನಪಿಸುವ ಉದ್ದೇಶದಿಂದ ಜುಲೈ 17 ರನ್ನು ಅಂತಾರಾಷ್ಟ್ರೀಯ ನ್ಯಾಯಕ್ಕಾಗಿ ವಿಶ್ವ ದಿನ ಎಂದು ಘೋಷಿಸಲಾಯಿತು.
* ಮಾನವೀಯತೆಗೆ ವಿರುದ್ಧ ವೆನಿಸುವ ಅಪರಾಧ ಕೃತ್ಯಗಳು, ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಚಿತ್ರಹಿಂಸೆ, ಯುದ್ಧ ಅಪರಾಧಗಳು ಮತ್ತು ಮಿಲಿಟರಿ ಆಕ್ರಮಣ ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಗುರಿಯನ್ನು ಈ ದಿನವು ಹೊಂದಿದೆ.

## ಧರ್ಮೇಂದ್ರ ಪ್ರಧಾನ್ ಅವರಿಗೆ 2024ರ ಕಳಿಂಗ ರತ್ನ ಪ್ರಶಸ್ತಿ



* ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 15ನೇ ಶತಮಾನದ ಒಡಿಯಾ ಕವಿ ಆದಿಕಾಬಿ ಸರಳಾ ದಾಸ್ ಅವರ 600ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ, 2024ರ ಕಳಿಂಗ ರತ್ನ ಪ್ರಶಸ್ತಿಯನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಪ್ರದಾನ ಮಾಡಿದರು.

* ಕಾರ್ಯಕ್ರಮವು ಕಟಕ್‌ನ ಜವಾಹರಲಾಲ್ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಿತು. ಮುರ್ಮು ಅವರು ಭಾರತೀಯ ಭಾಷೆಗಳ ಮಹತ್ವವನ್ನು ಮತ್ತು ಮಾತೃಭಾಷೆಯಲ್ಲಿನ ಶಿಕ್ಷಣದ ಪ್ರಾಮುಖ್ಯತೆಯನ್ನು ಹೈಲೈಟ್ ಮಾಡಿದರು.
* ಅವರು ರಾಷ್ಟ್ರೀಯ ಶಿಕ್ಷಣ ನೀತಿ-2020ಯನ್ನು ಪ್ರಸಂಶಿಸಿ, ಭಾಷೆಯ ವೈವಿಧ್ಯತೆಯ ನಡುವಿನ ಭಾರತೀಯ ಏಕತೆ ಬಗ್ಗೆ ಮಾತನಾಡಿದರು.
* ಪ್ರಶಸ್ತಿ ಸ್ವೀಕರಿಸಿದ ಪ್ರಧಾನ್, ಈ ಗೌರವವನ್ನು ಒಡಿಯಾ ಜನತೆಗೆ ಅರ್ಪಿಸಿ, ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲ್ ತಂತ್ರಜ್ಞಾನಗಳ ಮೂಲಕ ಭಾಷಾ ಅಭಿವೃದ್ಧಿಗೆ ಶ್ರಮಿಸುವ ಅಗತ್ಯವಿದೆ ಎಂದು ತಿಳಿಸಿದರು.
* ಅಲ್ಲದೇ, ಸರಳ ಸಮ್ಮಾನ್ ಪ್ರಶಸ್ತಿಗೆ ಭಾಜನರಾದ ಬಿಜಯ ನಾಯಕ್ ಅವರನ್ನು ರಾಷ್ಟ್ರಪತಿ ಅಭಿನಂದಿಸಿದರು.

## 'ಪ್ರಧಾನ ಮಂತ್ರಿ ಧನ್ ಧಾನ್ಯ ಕೃಷಿ' ಯೋಜನೆಗೆ ಕೇಂದ್ರ ಸಂಪುಟ ಅನುಮೋದನೆ




* ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ 2025-26ರಿಂದ ಆರು ವರ್ಷಗಳ ಅವಧಿಗೆ 100 ಜಿಲ್ಲೆಗಳನ್ನು ಒಳಗೊಳ್ಳುವ "ಪ್ರಧಾನ ಮಂತ್ರಿ ಧನ-ಧಾನ್ಯ ಕೃಷಿ ಯೋಜನೆ"ಗೆ ಅನುಮೋದನೆ ನೀಡಿದೆ.
* ಜುಲೈ 16, 2025 ರಂದು, ಕೇಂದ್ರ ಸಚಿವ ಸಂಪುಟವು ಪ್ರಧಾನ ಮಂತ್ರಿ ಧನ್-ಧಾನ್ಯ ಕೃಷಿ ಯೋಜನೆ ಎಂಬ ಪ್ರಮುಖ ಹೊಸ ಯೋಜನೆಯನ್ನು ಅನುಮೋದಿಸಿತು.
* ಈ ಯೋಜನೆಯು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು, ಬೆಳೆ ವೈವಿಧ್ಯೀಕರಣ ಮತ್ತು ಸುಸ್ಥಿರ ಕೃಷಿ ಪದ್ಧತಿಗಳ ಅಳವಡಿಕೆಯನ್ನು ಹೆಚ್ಚಿಸುವುದು, ಪಂಚಾಯತ್ ಮತ್ತು ಹೋಬಳಿ ಮಟ್ಟದಲ್ಲಿ ಕೊಯ್ಲಿನ ನಂತರದ ಸಂಗ್ರಹಣೆಯನ್ನು ಹೆಚ್ಚಿಸುವುದು, ನೀರಾವರಿ ಸೌಲಭ್ಯಗಳನ್ನು ಸುಧಾರಿಸುವುದು ಮತ್ತು ದೀರ್ಘಾವಧಿ ಮತ್ತು ಅಲ್ಪಾವಧಿ ಸಾಲದ ಲಭ್ಯತೆಯನ್ನು ಸುಗಮಗೊಳಿಸುವ ಗುರಿಯನ್ನು ಹೊಂದಿದೆ.
* ಈ ಯೋಜನೆಯು 2025-26 ರಿಂದ ಆರು ವರ್ಷಗಳ ಕಾಲ ನಡೆಯಲಿದ್ದು, ವಾರ್ಷಿಕ ₹24,000 ಕೋಟಿ ವೆಚ್ಚವಾಗಲಿದೆ.
* ಜಿಲ್ಲಾ ಕಾರ್ಯಕ್ರಮಗಳ ಆಕಾಂಕ್ಷಿಗಳ ಯಶಸ್ಸಿನಿಂದಾಗಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆ 1ರಂದು ಮಂಡಿಸಿದ್ದ ಬಜೆಟ್‌ನಲ್ಲಿ ರಾಜ್ಯಗಳ ಸಹಭಾಗಿತ್ವದೊಂದಿಗೆ ಪ್ರಧಾನಮಂತ್ರಿ ಧನ್- ಧಾನ್ಯ ಕೃಷಿ ಯೋಜನೆಯನ್ನು ಘೋಷಿಸಿದ್ದರು.
* ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು, ಬೆಳೆ ವೈವಿಧ್ಯೀಕರಣವನ್ನು ಉತ್ತೇಜಿಸುವುದು, ನೀರಾವರಿ ಸೌಲಭ್ಯಗಳನ್ನು ವಿಸ್ತರಿಸುವುದು, ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಕೃಷಿ ಸಾಲಕ್ಕೆ ಹೆಚ್ಚಿನ ಪ್ರವೇಶವನ್ನು ಖಚಿತಪಡಿಸುವುದು ಪ್ರಮುಖ ಉದ್ದೇಶಗಳಾಗಿವೆ.
* ಈ ಪ್ರಯತ್ನಗಳು ಸ್ಥಳೀಯ ರೈತರನ್ನು ಸಬಲೀಕರಣಗೊಳಿಸುವುದು, ಆಹಾರ ಉತ್ಪಾದನೆಯನ್ನು ಸುಧಾರಿಸುವುದು ಮತ್ತು ಗ್ರಾಮೀಣ ಉದ್ಯೋಗಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿವೆ.

ಈ ಯೋಜನೆಯ ಪ್ರಮುಖ ಅಂಶಗಳು :

- ಈ ಯೋಜನೆಯನ್ನು 11 ಇಲಾಖೆಗಳಲ್ಲಿ ಅಸ್ತಿತ್ವದಲ್ಲಿರುವ 36 ಯೋಜನೆಗಳು, ಇತರ ರಾಜ್ಯ ಯೋಜನೆಗಳು ಮತ್ತು ಖಾಸಗಿ ವಲಯದೊಂದಿಗಿನ ಸ್ಥಳೀಯ ಸಹಭಾಗಿತ್ವದ ಮೂಲಕ ಜಾರಿಗೆ ತರಲಾಗುವುದು.
- ಕಡಿಮೆ ಉತ್ಪಾದಕತೆ, ಕಡಿಮೆ ಬೆಳೆ ತೀವ್ರತೆ ಮತ್ತು ಕಡಿಮೆ ಸಾಲ ವಿತರಣೆಯ ಮೂರು ಪ್ರಮುಖ ಸೂಚಕಗಳ ಆಧಾರದ ಮೇಲೆ 100 ಜಿಲ್ಲೆಗಳನ್ನು ಗುರುತಿಸಲಾಗುವುದು.
- ಪ್ರತಿ ರಾಜ್ಯ / ಕೇಂದ್ರಾಡಳಿತ ಪ್ರದೇಶದಲ್ಲಿನ ಜಿಲ್ಲೆಗಳ ಸಂಖ್ಯೆಯು ನಿವ್ವಳ ಬೆಳೆ ಪ್ರದೇಶ ಮತ್ತು ಕಾರ್ಯಾಚರಣೆಯ ಹಿಡುವಳಿಗಳ ಪಾಲನ್ನು ಆಧರಿಸಿರುತ್ತದೆ. ಆದಾಗ್ಯೂ, ಪ್ರತಿ ರಾಜ್ಯದಿಂದ ಕನಿಷ್ಠ 1 ಜಿಲ್ಲೆಯನ್ನು ಆಯ್ಕೆ ಮಾಡಲಾಗುತ್ತದೆ.

## ಹಾಕಿ ತಾರೆ ದೀಪಿಕಾ ಅವರಿಗೆ 'ಪಾಲಿಗ್ರಾಸ್ ಮ್ಯಾಜಿಕ್ ಸ್ಕಿಲ್' ಪ್ರಶಸ್ತಿ



* ಭಾರತ ಹಾಕಿ ತಂಡದ ಮುಂಚೂಣಿ ಆಟಗಾರ್ತಿ ದೀಪಿಕಾ ಅವರು 'ಪಾಲಿಗ್ರಾಸ್ ಮ್ಯಾಜಿಕ್ ಸ್ಕಿಲ್' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಭುವನೇಶ್ವರದಲ್ಲಿ 2024–25ನೇ ಸಾಲಿನ ಪಂದ್ಯದಲ್ಲಿ ನೆದರ್ಲೆಂಡ್ಸ್ ವಿರುದ್ಧ ದೀಪಿಕಾ ಬಲೆಸಿದ ಚಮತ್ಕಾರದ ಗೋಲಿಗೆ ಈ ಗೌರವ ಲಭಿಸಿದೆ.
* ಭಾರತ 0–2 ಹಿನ್ನಡೆಯಲ್ಲಿದ್ದಾಗ, ದೀಪಿಕಾ 35ನೇ ನಿಮಿಷ ಎಡಗಡೆಯಿಂದ ಚಿತ್ತಾಕರ್ಷಕ ಡ್ರಿಬ್ಲಿಂಗ್ ಮೂಲಕ ಡಿಫೆಂಡರ್‌ಗಳನ್ನು ಮೀರಿಸಿ ಗೋಲು ಗಳಿಸಿದರು. ಈ ಗೋಲಿನಿಂದ ಭಾರತ ಮತ್ತೆ ಸ್ಪರ್ಧೆಗೆ ಹಿಂದಿರುಗಿ 2–2 ಸಮನಾಗಿ ಶೂಟೌಟ್‌ವರೆಗೆ ಹೋರಾಡಿತು.
* 21 ವರ್ಷದ ದೀಪಿಕಾ, ಈ ಪ್ರಶಸ್ತಿ ತಮ್ಮೊಬ್ಬರದ್ದಲ್ಲದೆ ಭಾರತದ ಹಾಕಿಗೆ ಸೇರಿದದ್ದು ಎಂದಿದ್ದಾರೆ. ತಂಡ, ಕೋಚ್‌ಗಳು, ಕುಟುಂಬ ಮತ್ತು ಸ್ನೇಹಿತರಿಗೆ ಧನ್ಯವಾದ ತಿಳಿಸಿದ್ದಾರೆ.
* ಈ ಪ್ರಶಸ್ತಿಗೆ ಸ್ಪೇನ್‌ನ ಪೆಟ್ರೀಷಿಯಾ ಆಲ್ವಾರೆಝ್ ಮತ್ತು ಆಸ್ಟ್ರೇಲಿಯಾ ತಂಡದ ಗೋಲುಗಳು ಕೂಡ ಸ್ಪರ್ಧೆಯಲ್ಲಿದ್ದವು. ಪುರುಷರ ವಿಭಾಗದಲ್ಲಿ ಈ ಪ್ರಶಸ್ತಿಗೆ ಬೆಲ್ಜಿಯಂನ ವಿಕ್ಟರ್ ವೆಗ್ನೆಝ್ ಆಯ್ಕೆಯಾಗಿದ್ದಾರೆ.

## 2028ರ ಒಲಿಂಪಿಕ್ಸ್ ಕ್ರಿಕೆಟ್ ವೇಳಾಪಟ್ಟಿ ಬಿಡುಗಡೆ

KPSCVaani



* 128 ವರ್ಷಗಳ ನಂತರ ಕ್ರಿಕೆಟ್ ಕ್ರೀಡೆ 2028ರ ಒಲಿಂಪಿಕ್ಸ್‌ನಲ್ಲಿ ಮತ್ತೆ ಸೇರ್ಪಡೆಯಾಗುತ್ತಿದೆ. ಜುಲೈ 12ರಿಂದ 29ರ ತನಕ ಪುರುಷರು ಮತ್ತು ಮಹಿಳೆಯರ ವಿಭಾಗದಲ್ಲಿ ಪಂದ್ಯಗಳು ನಡೆಯಲಿವೆ.
* ಪಂದ್ಯಗಳು ಲಾಸ್ ಏಂಜಲೀಸ್‌ನಿಂದ 50 ಕಿಮೀ ದೂರದಲ್ಲಿರುವ ಪೊಮೆನಾ ಫೇರ್‌ಗ್ರೌಂಡ್ಸ್ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಮಹಿಳೆಯರ ಫೈನಲ್ ಜುಲೈ 20ರಂದು ಮತ್ತು ಪುರುಷರ ಫೈನಲ್ ಜುಲೈ 29ರಂದು ನಡೆಯಲಿದೆ.
* ಪ್ರತಿ ವಿಭಾಗದಲ್ಲಿ ಆರು ತಂಡಗಳು ಭಾಗವಹಿಸಲಿದ್ದು, ಪ್ರತೀ ತಂಡದಲ್ಲಿ 15 ಆಟಗಾರರಿರುತ್ತಾರೆ. ಪಂದ್ಯಗಳು ಟಿ20 ಮಾದರಿಯಲ್ಲಿದ್ದು, ಹೊಸ ಪ್ರೇಕ್ಷಕರನ್ನು ಸೆಳೆಯುವುದು ಉದ್ದೇಶವಾಗಿದೆ. ಜುಲೈ 14 ಮತ್ತು 21ರಂದು ಮಾತ್ರ ಪಂದ್ಯಗಳಿಲ್ಲ.
*1900ರಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ನಡುವೆ ನಡೆದ ಕ್ರಿಕೆಟ್ ಪಂದ್ಯವೇ ಇದುವರೆಗೆ ನಡೆದ ಏಕೈಕ ಪಂದ್ಯವಾಗಿತ್ತು.
* ಅಮೆರಿಕದಲ್ಲಿ ಕ್ರಿಕೆಟ್ ನಿಧಾನವಾಗಿ ಜನಪ್ರಿಯವಾಗುತ್ತಿದೆ. ಕಳೆದ ಟಿ20 ವಿಶ್ವಕಪ್‌ನಲ್ಲಿ ಅಮೆರಿಕದ ಟೆಕ್ಸಾಸ್, ನ್ಯೂಯಾರ್ಕ್, ಫ್ಲೋರಿಡಾದಲ್ಲಿ ಪಂದ್ಯಗಳು ನಡೆದಿದ್ದವು.
* ಕ್ರಿಕೆಟ್ ಜೊತೆಗೆ ಬೇಸ್‌ಬಾಲ್/ಸಾಫ್ಟ್‌ಬಾಲ್, ಫ್ಲ್ಯಾಗ್ ಫುಟ್‌ಬಾಲ್, ಲ್ಯಾಕ್ರೋಸ್ (ಸಿಕ್ಸ್), ಸ್ಕ್ವ್ಯಾಶ್ ಈ ಬಾರಿ ಒಲಿಂಪಿಕ್ಸ್‌ಗೆ ಹೊಸದಾಗಿ ಸೇರಿಸಲಾದ ಕ್ರೀಡೆಗಳಾಗಿವೆ.

## ಕ್ಷೀರ ವಲಯದಲ್ಲಿ ಹೊಸ ದಾಖಲೆ ಬರೆದ KMF :ನಿತ್ಯ 1.05 ಕೋಟಿ ಲೀಟರ್ ಹಾಲು ಸಂಗ್ರಹ



* ಕರ್ನಾಟಕದಲ್ಲಿ ಕಳೆದ ಒಂದು ತಿಂಗಳಿಂದ ಹಾಲು ಉತ್ಪಾದನೆಯು ಗಣನೀಯವಾಗಿ ಹೆಚ್ಚಾಗಿದೆ. ಮೇ ತಿಂಗಳ ಅಂತ್ಯದಿಂದ ಪ್ರತಿ ದಿನ 1.05 ಕೋಟಿ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಇದು ಕೆಎಂಎಫ್ (KMF) ಇತಿಹಾಸದಲ್ಲೇ ಅತ್ಯಧಿಕ ಪ್ರಮಾಣವಾಗಿದೆ.
* ರಾಜ್ಯದಲ್ಲಿ ಉತ್ತಮ ಮಳೆ ಮತ್ತು ತಂಪಾದ ವಾತಾವರಣದ ಕಾರಣ ಹಸಿರು ಮೇವು ಸಾಕಷ್ಟು ದೊರೆಯುತ್ತಿದೆ. ಇದರಿಂದ ಹಾಲು ಉತ್ಪಾದನೆ ಹೆಚ್ಚಳವಾಗಿದ್ದು, ರೈತರು ಹೆಚ್ಚಿನ ಪ್ರಮಾಣದಲ್ಲಿ ಹಾಲು ಪೂರೈಕೆ ಮಾಡುತ್ತಿದ್ದಾರೆ.
* ಪ್ರತಿ ದಿನ ಸಂಗ್ರಹವಾಗುವ 1.05 ಕೋಟಿ ಲೀಟರ್ ಹಾಲಿನಲ್ಲಿ ಸುಮಾರು 80 ಲಕ್ಷ ಲೀಟರ್ ಗ್ರಾಹಕರಿಗೆ ಮಾರಾಟವಾಗುತ್ತಿದೆ. ಉಳಿದ ಹಾಲಿನಿಂದ ಪುಡಿ, ಮೊಸರು ಮತ್ತು ಇತರ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ.
* ಕೆಎಂಎಫ್ ಈಗ 1.25 ಕೋಟಿ ಲೀಟರ್ ದಿನನಿತ್ಯ ಹಾಲು ಸಂಗ್ರಹದ ಗುರಿಯನ್ನು ಹೊಂದಿದೆ.

## ಗಾಂಧೀಜಿಯ ತೈಲವರ್ಣಚಿತ್ರ ₹1.75 ಕೋಟಿಗೆ ಹರಾಜು!



* ಮಹಾತ್ಮ ಗಾಂಧಿ ಅವರ ಅಪರೂಪದ ತೈಲವರ್ಣಚಿತ್ರವು ಬಾನ್ ಹಮ್ಸ್ ಹರಾಜಿನಲ್ಲಿ ₹1.75 ಕೋಟಿಗೆ (152,800 ಪೌಂಡ್) ಮಾರಾಟವಾಗಿದೆ. ಇದು ನಿಗದಿಪಡಿಸಿದ್ದ ₹57.55 ಲಕ್ಷದಿಂದ ₹80.59 ಲಕ್ಷದ ಅಂದಾಜಿಗಿಂತ ಮೂರು ಪಟ್ಟು ಹೆಚ್ಚು ಬೆಲೆಯಾಗಿದೆ.
* ಈ ತೈಲವರ್ಣಚಿತ್ರವು ಹಿಂದೆ ಯಾವ ಹರಾಜಿಗೂ ಹೋಗಿರಲಿಲ್ಲ. ಆನ್‌ಲೈನ್ ಹರಾಜಿನಲ್ಲಿ ಮೊದಲಬಾರಿಗೆ ಇದನ್ನು ಪ್ರದರ್ಶಿಸಲಾಗಿತ್ತು. ಮಂಗಳವಾರ(ಜುಲೈ 15) ಮುಕ್ತಾಯಗೊಂಡ ಹರಾಜಿನಲ್ಲಿ ಅಗ್ರಸ್ಥಾನ ಪಡೆದಿತು.
* ಈ ಚಿತ್ರವನ್ನು 1931ರಲ್ಲಿ ಲಂಡನ್‌ನಲ್ಲಿ ನಡೆದ ಎರಡನೇ ದುಂಡು ಮೇಜಿನ ಸಮ್ಮೇಳನದ ವೇಳೆ ಕಲಾವಿದ ಕ್ಲೇರ್ ಲೈಟನ್ ಗಾಂಧಿಜಿಯವರನ್ನು ಭೇಟಿಯಾದಾಗ ರಚಿಸಿದ್ದರು.
* ಬಾನ್‌ಹಮ್ಸ್ ಮಾರಾಟ ವಿಭಾಗದ ಮುಖ್ಯಸ್ಥ ರಿಯಾನಾನ್ ಡೆಮೆರಿ ಅವರ ಪ್ರಕಾರ, ಇದು ಗಾಂಧೀಜಿಯವರ ಏಕೈಕ ತೈಲವರ್ಣಚಿತ್ರವಾಗಿರಬಹುದು ಎಂದು ಭಾವಿಸಲಾಗಿದೆ.

## NCERT ಪಠ್ಯದಲ್ಲಿ ಮೊಘಲ್ ಇತಿಹಾಸ ಪರಿಷ್ಕರಣೆ



* NCERT 8ನೇ ತರಗತಿಯ 'ಎಕ್ಸ್‌ಪ್ಲೋರಿಂಗ್ ಸೊಸೈಟಿ: ಇಂಡಿಯಾ ಅಂಡ್ ಬಿಯಾಂಡ್' ಪಠ್ಯಪುಸ್ತಕವು ಮೊಘಲ್ ಕಾಲದ ಇತಿಹಾಸವನ್ನು ಹೊಸ ದೃಷ್ಟಿಕೋನದಿಂದ ಪರಿಚಯಿಸುತ್ತದೆ. * ಇದರಲ್ಲಿ ಅಕ್ಬರ್ ಆಡಳಿತವನ್ನು 'ಕ್ರೂರತೆ ಮತ್ತು ಸಹಿಷ್ಣುತೆ ಮಿಶ್ರಣ'ವೆಂದು, ಬಾಬರ್ ಅನ್ನು 'ನಿರ್ದಯಿ ರಾಜ' ಎಂದು ಹಾಗೂ ಔರಂಗಜೇಬ್ ಅನ್ನು 'ಮಿಲಿಟರಿ ಆಡಳಿತಗಾರ' ಎಂದು ವಿವರಿಸಲಾಗಿದೆ.
* ಪಠ್ಯಪುಸ್ತಕವನ್ನು ರಾಷ್ಟ್ರೀಯ ಶಾಲಾ ಶಿಕ್ಷಣ ಪಠ್ಯಕ್ರಮ ಚೌಕಟ್ಟು 2023ರ ಶಿಫಾರಸುಗಳಿಗೆ ಅನುಗುಣವಾಗಿ ಪರಿಷ್ಕರಿಸಲಾಗಿದೆ. ಮೊಘಲ್, ಮರಾಠರು ಮತ್ತು ವಸಾಹತುಶಾಹಿ ಯುಗದ


ವಿಷಯಗಳನ್ನು ಈಗ 8ನೇ ತರಗತಿಯಲ್ಲೇ ಸಂಪೂರ್ಣವಾಗಿ ಸೇರಿಸಲಾಗಿದೆ.

* ಇತಿಹಾಸವನ್ನು ನಿರಪೇಕ್ಷವಾಗಿ ಮತ್ತು ಪುರಾವೆ ಆಧಾರಿತವಾಗಿ ವಿವರಿಸಲಾಗಿದೆ ಎಂದು NCERT ಸ್ಪಷ್ಟಪಡಿಸಿದೆ. ಹಿಂದಿನ ಕ್ರೂರ ಆಡಳಿತ ಅಥವಾ ದೌರ್ಜನ್ಯಗಳಿಗೆ ಇಂದಿನ ಯಾರೂ ಜವಾಬ್ದಾರರಾಗಿಲ್ಲ ಎಂದು ವಿದ್ಯಾರ್ಥಿಗಳಿಗೆ ತಿಳಿಸಲಾಗಿದೆ.

* ಬಾಬರ್ ಆಡಳಿತದಲ್ಲಿ ನಾಗರಿಕರ ಹತ್ಯೆ, ಔರಂಗಜೇಬನ ಕಾಲದಲ್ಲಿ ದೇವಾಲಯಗಳ ನಾಶ, ಜಿಜಿಯಾ ತೆರಿಗೆಗಳಂತ ಇತಿಹಾಸದಲ್ಲಿ ನಡೆದ ಘಟನೆಗಳನ್ನು ಉದಾಹರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇಸ್ಲಾಂಗೆ ಮತಾಂತರಕ್ಕೆ ಪ್ರೋತ್ಸಾಹವೂ ನೀಡಲ್ಪಟ್ಟಿತ್ತು ಎಂಬ ವ್ಯಾಖ್ಯಾನವಿದೆ.

* 13ರಿಂದ 17ನೇ ಶತಮಾನವರೆಗಿನ ಇತಿಹಾಸದಲ್ಲಿ ದೆಹಲಿ ಸುಲ್ತಾನರು, ವಿಜಯನಗರ ಸಾಮ್ರಾಜ್ಯ, ಮೊಘಲ್ ಆಡಳಿತ ಮತ್ತು ಪ್ರತಿರೋಧ ಶಕ್ತಿಗಳ ಪ್ರಭಾವವನ್ನೂ ವಿವರಿಸಲಾಗಿದೆ. ಈ ಬದಲಾವಣೆಗಳು ಇತಿಹಾಸದ ಕುರಿತು ಹೊಸ ಚರ್ಚೆಗೆ ವೇದಿಕೆಯಾಗಿವೆ.

## ಸತತ ಎಂಟನೇ ಬಾರಿ ಭಾರತದ ಅತ್ಯಂತ ಸ್ವಚ್ಛ ನಗರ ಮಧ್ಯಪ್ರದೇಶದ 'ಇಂದೋರ್'



* ಮಧ್ಯಪ್ರದೇಶದ ಇಂದೋರ್ ನಗರವು 2024–25ನೇ ಸಾಲಿನಲ್ಲಿ ಸತತ ಎಂಟನೇ ಬಾರಿ ಭಾರತದ ಅತ್ಯಂತ ಸ್ವಚ್ಛ ನಗರ ಎಂದು ಘೋಷಿಸಲ್ಪಟ್ಟಿದೆ. ಛತ್ತೀಸಗಢದ ಅಂಬಿಕಾಪುರ ಹಾಗೂ ಕರ್ನಾಟಕದ ಮೈಸೂರು ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನಗಳಲ್ಲಿವೆ.

* ವಸತಿ ಮತ್ತು ನಗರ ವ್ಯವಹಾರಗಳ ಕೇಂದ್ರ ಸಚಿವಾಲಯ ಈ ವರ್ಷದ ಸ್ವಚ್ಛ ಸರ್ವೇಕ್ಷಣಾ ಪ್ರಶಸ್ತಿಯನ್ನು ಗುರುವಾರ ಪ್ರಕಟಿಸಿತು.

* ಕಾರ್ಯಕ್ರಮ ನವದೆಹಲಿಯಲ್ಲಿ ನಡೆದಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

* ರಾಜ್ಯ ಮಟ್ಟದಲ್ಲಿ ಮಧ್ಯಪ್ರದೇಶ ಮೊದಲ ಸ್ಥಾನ ಪಡೆದು ಗಮನ ಸೆಳೆದಿದೆ. ಛತ್ತೀಸಗಢ ಮತ್ತು ಕರ್ನಾಟಕ ನಂತರ ಸ್ಥಾನಗಳಲ್ಲಿ ಗುರುತಿಸಿಕೊಂಡಿವೆ.

* 3 ರಿಂದ 10 ಲಕ್ಷ ಜನಸಂಖ್ಯೆಯ ಗಾತ್ರದ ನಗರಗಳಲ್ಲಿ ಗುಜರಾತ್‌ನ ಅಹಮದಾಬಾದ್, ಛತ್ತೀಸಗಢದ ರಾಯಪುರ, ಮಹಾರಾಷ್ಟ್ರದ ನವಿ ಮುಂಬೈ ಮತ್ತು ಗುಜರಾತ್‌ನ ಸೂರತ್ ಪ್ರಮುಖ ಸ್ಥಾನಗಳನ್ನು ಪಡೆದಿವೆ.

## ಗಾಂಧಿನಗರದ ಗಿಫ್ಟ್ ಸಿಟಿಯ ಸಿಇಒ ಆಗಿ ಸಂಜಯ್ ಕೌಲ್ ನೇಮಕ



* 2001ರ ಬ್ಯಾಚ್‌ನ ಕೇರಳ ಕೇಡರ್‌ನ ಐಎಎಸ್ ಅಧಿಕಾರಿ ಸಂಜಯ್ ಕೌಲ್ ಅವರನ್ನು ಗುಜರಾತ್‌ನ ಗಿಫ್ಟ್ ಸಿಟಿ ಕಂಪನಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆಗಿ ನೇಮಿಸಲಾಗಿದೆ.

* ಜುಲೈ 15, 2025ರಂದು ಈ ನೇಮಕಾತಿ ಸರ್ಕಾರಿ ಆದೇಶದ ಮೂಲಕ ಪ್ರಕಟವಾಯಿತು. ಅವರು ಮೂರು ವರ್ಷಗಳ ಕಾಲ ಅಥವಾ ಮುಂದಿನ ಸೂಚನೆ ಬರುವವರೆಗೆ ಡೆಪ್ಯುಟೇಶನ್ ಮೇಲೆ ಸೇವೆ ಸಲ್ಲಿಸಲಿದ್ದಾರೆ.

* ಸಂಜಯ್ ಕೌಲ್ ಪ್ರಸ್ತುತ ಕೇಂದ್ರ ಸಂಸ್ಕೃತಿ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

* ಅವರು ಯುನೆಸ್ಕೋ ವ್ಯವಹಾರಗಳು, ಅಮೂರ್ತ ಸಾಂಸ್ಕೃತಿಕ ಪರಂಪರೆ, ಮತ್ತು ಅಂತರರಾಷ್ಟ್ರೀಯ ಸಾಂಸ್ಕೃತಿಕ ಸಂಬಂಧಗಳಂತಹ ಕ್ಷೇತ್ರಗಳನ್ನು ನೋಡಿಕೊಳ್ಳುತ್ತಾರೆ.

* ಹಿಂದಿನ ಕಾಲದಲ್ಲಿ ಅವರು ಗುಜರಾತ್ ಪ್ರವಾಸೋದ್ಯಮ ನಿಗಮ ಮತ್ತು ಗುಜರಾತ್ ಇನ್ಫರ್ಮ್ಯಾಟಿಕ್ಸ್ ಲಿಮಿಟೆಡ್‌ನ ಎಂಡಿಯಾಗಿ ಸೇವೆ ಸಲ್ಲಿಸಿದ್ದಾರೆ.

* GIFT ಸಿಟಿ ಭಾರತದ ಮೊದಲ ಅಂತರರಾಷ್ಟ್ರೀಯ ಹಣಕಾಸು ಕೇಂದ್ರವಿರುವ ಸ್ಮಾರ್ಟ್ ಸಿಟಿಯಾಗಿದ್ದು, ಇದರ ಅಭಿವೃದ್ಧಿ ಮತ್ತು ನಿರ್ವಹಣೆಯ ಹೊಣೆಗಾರಿಕೆಯನ್ನು ಕೌಲ್ ಅವರು ಎಂಡಿ ಹಾಗೂ ಸಿಇಒ ಆಗಿ ವಹಿಸಲಿದ್ದಾರೆ.

* ಈ ಭೂಮಿಕೆಯಲ್ಲಿ ಅವರು ದೇಶದ ಹಣಕಾಸು ಸೇವಾ ವಲಯದ ವೃದ್ಧಿಗೆ ಮಾರ್ಗದರ್ಶಕರಾಗಲಿದ್ದಾರೆ.

* ಗುಜರಾತ್ ಸರ್ಕಾರದ ಜಿಎಡಿ ಇಲಾಖೆ ಅಧಿಕೃತ ಅಧಿಸೂಚನೆ ಬಿಡುಗಡೆ ಮಾಡಿದ್ದು, ನಿವೃತ್ತ ಐಎಎಸ್ ಅಧಿಕಾರಿ ತಪನ್ ರೇ ಅವರು ಕೌಲ್ ಅಧಿಕಾರ ವಹಿಸಿಕೊಳ್ಳುವವರೆಗೆ ಸಿಇಒ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ.

# 18 July 2025

## ಅಂತರಾಷ್ಟ್ರೀಯ ನೆಲ್ಸನ್ ಮಂಡೇಲಾ ದಿನ 2025




* ದಕ್ಷಿಣ ಆಫ್ರಿಕಾದ ಮೊದಲ ಕಪ್ಪು ವರ್ಣೀಯ ಅಧ್ಯಕ್ಷ ಮತ್ತು ಶಾಂತಿ, ನ್ಯಾಯ ಮತ್ತು ಸಾಮರಸ್ಯದ ಜಾಗತಿಕ ಪ್ರತಿಮೆ ನೆಲ್ಸನ್ ಮಂಡೇಲಾ ಅವರ ಜನ್ಮ ದಿನವನ್ನು ವಾರ್ಷಿಕವಾಗಿ ಜುಲೈ 18 ರಂದು ಆಚರಿಸಲಾಗುತ್ತದೆ.

KPSCVaani

* 2025 ರ ನೆಲ್ಸನ್ ಮಂಡೇಲಾ ಅಂತರರಾಷ್ಟ್ರೀಯ ದಿನದ ಥೀಮ್ "ಬಡತನ ಮತ್ತು ಅಸಮಾನತೆಯನ್ನು ಎದುರಿಸುವುದು ಇನ್ನೂ ನಮ್ಮ ಕೈಯಲ್ಲಿದೆ", ಶ್ರೀಮಂತರು ಮತ್ತು ಬಡವರ ನಡುವಿನ ಅಸಮಾನತೆಯು ವಿಸ್ತರಿಸುತ್ತಲೇ ಇದೆ, ಮತ್ತು ಅಸಂಖ್ಯಾತ ವ್ಯಕ್ತಿಗಳು ಇನ್ನೂ ಮೂಲಭೂತ ಅವಶ್ಯಕತೆಗಳನ್ನು ಹೊಂದಿರುವುದಿಲ್ಲ.

* ನೆಲ್ಸನ್ ಮಂಡೇಲಾ ಅಂತರಾಷ್ಟ್ರೀಯ ದಿನ 2025 ವಿಶ್ವಾದ್ಯಂತ ಧನಾತ್ಮಕ ಪ್ರಭಾವ ಬೀರಲು ಮಂಡೇಲಾ ಅವರ ಮೌಲ್ಯಗಳು ಮತ್ತು ತತ್ವಗಳನ್ನು ಪ್ರತಿಬಿಂಬಿಸುವ ವಾರ್ಷಿಕ ಜಾಗತಿಕ ಆಚರಣೆಯಾಗಿದೆ.

* ವಿಶ್ವಸಂಸ್ಥೆಯು ನವೆಂಬರ್ 2009 ರಲ್ಲಿ ಮಂಡೇಲಾ ದಿನವನ್ನು ಅಧಿಕೃತವಾಗಿ ಘೋಷಿಸಿತು. ಮಂಡೇಲಾ ದಿನವನ್ನು ಮೊದಲು ಜುಲೈ 18, 2010 ರಂದು ಆಚರಿಸಲಾಯಿತು. ಮಾನವ ಹಕ್ಕುಗಳ ಪ್ರಮುಖ ಸದಸ್ಯ ಮತ್ತು ಅಚಲ ಭರವಸೆಯ ಸಂಕೇತವಾದ ನೆಲ್ಸನ್ ಮಂಡೇಲಾ ಅವರನ್ನು ಗೌರವಿಸಲು ಮತ್ತು ಅವರ ಜನ್ಮದಿನದ ನೆನಪಿಗಾಗಿ ವಾರ್ಷಿಕವಾಗಿ ಜುಲೈ 18 ರಂದು ಆಚರಿಸಲಾಗುತ್ತದೆ.

* ನೆಲ್ಸನ್ ಮಂಡೇಲಾ ಅವರು ಸಾಮಾಜಿಕ ನ್ಯಾಯಕ್ಕಾಗಿ ಕೆಲಸ ಮಾಡಿದ 67 ವರ್ಷಗಳು ಗೌರವಾರ್ಥವಾಗಿ, ಪ್ರತಿಯೊಬ್ಬರೂ ತಮ್ಮ ಸಮುದಾಯಗಳಲ್ಲಿ ಬದಲಾವಣೆಯನ್ನು ಮಾಡಲು 67 ನಿಮಿಷಗಳನ್ನು ಮೀಸಲಿಡಲು ಕರೆ ನೀಡಿದರು.

* ಮಂಡೇಲಾ ಅವರ ಜೀವನ ಕಥೆಯು ಸ್ಥೈರ್ಯ, ಕ್ಷಮೆ ಮತ್ತು ಸಮನ್ವಯದ ಸದ್ಗುಣಗಳನ್ನು ಉದಾಹರಿಸುತ್ತದೆ. ಇದು ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಅವರ ಆರಂಭಿಕ ಅಭಿಯಾನದೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಅವರ 27 ವರ್ಷಗಳ ಸೆರೆವಾಸ ಮತ್ತು ಅಂತಿಮವಾಗಿ ದೇಶದ ಮೊದಲ ಕಪ್ಪು ಅಧ್ಯಕ್ಷರಾಗಿ ಪಾತ್ರವನ್ನು ಮುಂದುವರಿಸುತ್ತದೆ.

* 1991 ರಲ್ಲಿ ANC ಯ ಅಧ್ಯಕ್ಷರಾಗಿ ಚುನಾಯಿತರಾದ ಮಂಡೇಲಾ, FWD ಕ್ಲರ್ಕ್ ಜೊತೆಗೆ 1993 ರಲ್ಲಿ ವರ್ಣಭೇದ ನೀತಿಯನ್ನು ಶಾಂತಿಯುತವಾಗಿ ಕಿತ್ತುಹಾಕುವಲ್ಲಿ ಅವರ ಪ್ರಯತ್ನಗಳಿಗಾಗಿ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪಡೆದರು. 1994 ರಲ್ಲಿ ದಕ್ಷಿಣ ಆಫ್ರಿಕಾದ ಮೊದಲ ಕಪ್ಪು ಅಧ್ಯಕ್ಷರಾಗಿ ಮಂಡೇಲಾ ಅವರ ಆಯ್ಕೆಯಾಗಿದ್ದರು.ಡಿಸೆಂಬರ್ 5, 2013 ರಂದು ನೆಲ್ಸನ್ ಮಂಡೇಲಾ ಅವರು 95 ನೇ ವಯಸ್ಸಿನಲ್ಲಿ ನಿಧನರಾದರು.

## ಗುಜರಾತ್ ರಾಜ್ಯದ 17 ಜಿಲ್ಲೆಗಳಲ್ಲಿ ಬುಡಕಟ್ಟು ಜೀನೋಮ್ ಅನುಕ್ರಮ ಯೋಜನೆ ಆರಂಭ




* ಬುಡಕಟ್ಟು ಜೀನೋಮ್ ಅನುಕ್ರಮ ಯೋಜನೆಯು ರಾಜ್ಯದ 17 ಜಿಲ್ಲೆಗಳಾದ್ಯಂತ ಬುಡಕಟ್ಟು ಸಮುದಾಯಗಳಿಗೆ ಸೇರಿದ 2,000 ಜನರ ಜೀನೋಮ್‌ಗಳನ್ನು ಅನುಕ್ರಮಗೊಳಿಸಲು ಸರ್ಕಾರದ ಉಪಕ್ರಮವಾಗಿದೆ.

* ಬುಡಕಟ್ಟು ಸಮುದಾಯಗಳ ಮೇಲೆ ಪ್ರತ್ಯೇಕವಾಗಿ ಕೇಂದ್ರೀಕರಿಸಿದ ಜೀನೋಮ್ ಅನುಕ್ರಮ ಉಪಕ್ರಮವನ್ನು ಪ್ರಾರಂಭಿಸಿದ ಮೊದಲ ಭಾರತೀಯ ರಾಜ್ಯ ಗುಜರಾತ್ ಆಗಿದೆ.

* 2025-26ರ ಹಣಕಾಸು ವರ್ಷದ ಬಜೆಟ್‌ನಲ್ಲಿ, 'ಗುಜರಾತ್‌ನಲ್ಲಿ ಬುಡಕಟ್ಟು ಜನಸಂಖ್ಯೆಗಾಗಿ ಉಲ್ಲೇಖ ಜೀನೋಮ್ ಡೇಟಾಬೇಸ್ ರಚನೆ' ಎಂಬ ಹೆಸರಿನ ಯೋಜನೆಯನ್ನು ಅನುಮೋದಿಸಲಾಯಿತು, ಇದರ ಅಡಿಯಲ್ಲಿ ಗುಜರಾತ್‌ನ ಬುಡಕಟ್ಟು ಸಮುದಾಯಕ್ಕಾಗಿ ಉಲ್ಲೇಖ ಡೇಟಾಬೇಸ್ ಅನ್ನು ರಚಿಸುವುದು ಗುರಿಯಾಗಿತ್ತು.

* ಈ ಉಪಕ್ರಮವು ಆನುವಂಶಿಕ ಕಾಯಿಲೆಗಳ ಆರಂಭಿಕ ಪತ್ತೆ ಮತ್ತು ಜೀನೋಮ್ ಡೇಟಾವನ್ನು ಬಳಸಿಕೊಂಡು ವೈಯಕ್ತಿಕಗೊಳಿಸಿದ ವೈದ್ಯಕೀಯ ಪರಿಹಾರಗಳ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುತ್ತದೆ.

* ಈ ಯೋಜನೆಯ ಮೂಲಕ, ಸಹಜ ರೋಗನಿರೋಧಕ ಶಕ್ತಿ, ಕ್ಯಾನ್ಸರ್ ಮತ್ತು ಕುಡಗೋಲು ಕಣ ರಕ್ತಹೀನತೆ, ಥಲಸ್ಸೆಮಿಯಾ ಮುಂತಾದ ಇತರ ಆನುವಂಶಿಕ ಕಾಯಿಲೆಗಳ ಆನುವಂಶಿಕ ಗುರುತುಗಳನ್ನು ಗುರುತಿಸಲು ಸಾಧ್ಯವಾಗುತ್ತದೆ . ಜೊತೆಗೆ, ಅವರ ಆರೋಗ್ಯ ಪ್ರೊಫೈಲ್ ಅನ್ನು ಮೂಲಭೂತ ಆರೋಗ್ಯ ಸೇವೆಗಳೊಂದಿಗೆ ಲಿಂಕ್ ಮಾಡಲಾಗುತ್ತದೆ.

## ಅದಿತಿ ಚೌಹಾಣ್ ಅಂತಾರಾಷ್ಟ್ರೀಯ ಫುಟ್ ಬಾಲ್‌ಗೆ ವಿದಾಯ



* ಅದಿತಿ ಚೌಹಾಣ್ ಅವರು 17 ವರ್ಷಗಳ ಅಂತರರಾಷ್ಟ್ರೀಯ ವೃತ್ತಿಯಿಂದ ನಿವೃತ್ತಿ ಘೋಷಿಸಿದ್ದಾರೆ.

* ಭಾರತದ ಅನುಭವಿ ಗೋಲ್‌ಕೀಪರ್ ಆಗಿ ಗುರುತಿಸಿಕೊಂಡಿದ್ದ ಅವರು, ಈಗ ತಂಡದಲ್ಲಿ ಮುಂದಿನ ಪೀಳಿಗೆಗೆ ಅವಕಾಶ ನೀಡಲು ಮತ್ತು ಮೈದಾನದ ಹೊರಗಿನಿಂದ ಕೆಲಸ ಮಾಡಲು ನಿರ್ಧಾರ ಮಾಡಿದ್ದಾರೆ.

* ಅದಿತಿ 2011ರಿಂದ 2023ರವರೆಗೆ ಭಾರತದ ಮಹಿಳಾ ತಂಡವನ್ನು 57 ಪಂದ್ಯಗಳಲ್ಲಿ ಪ್ರತಿನಿಧಿಸಿದ್ದಾರೆ. 2008-2012ರ ನಡುವೆ 19 ವರ್ಷದೊಳಗಿನ ತಂಡದಲ್ಲಿಯೂ ನಾಲ್ಕು ಪಂದ್ಯಗಳನ್ನು ಆಡಿದ್ದರು.

* ಅವರು ಮೂರು ಬಾರಿ ಸ್ಯಾಫ್ ಮಹಿಳಾ ಚಾಂಪಿಯನ್‌ಷಿಪ್ ಗೆದ್ದ ತಂಡದ ಭಾಗವಾಗಿದ್ದರು. ಇಂಗ್ಲೆಂಡ್‌ನ ವೆಸ್ಟ್ ಹ್ಯಾಮ್ ಯುನೈಟೆಡ್‌ಗಾಗಿ ಇಬ್ಬರು ಋತುವಿನಲ್ಲಿ ಆಡಿದ್ದು, ಯುರೋಪ್‌ನಲ್ಲಿ ವೃತ್ತಿಪರ ಫುಟ್‌ಬಾಲ್ ಆಡಿದ ಭಾರತದ ಮೊದಲ ಮಹಿಳೆ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ.

* ಅದಿತಿ ತನ್ನ ನಿವೃತ್ತಿಯನ್ನು ಸಾಮಾಜಿಕ ಜಾಲತಾಣದಲ್ಲಿ ಘೋಷಿಸಿ, ಫುಟ್‌ಬಾಲ್ ತನ್ನ ಜೀವನ ರೂಪಿಸಿದ ಭಾಗವಲ್ಲದಿಲ್ಲ ಎಂದು ಕೃತಜ್ಞತೆಯಿಂದ ಬರೆದುಕೊಂಡಿದ್ದಾರೆ.

## ಉಕ್ರೇನ್ ನ ಹೊಸ ಪ್ರಧಾನಿಯಾಗಿ ಯೂಲಿಯಾ ಸ್ವರಿಡೆನ್‌ಕೋ ನೇಮಕ




* ಯೂಲಿಯಾ ಸ್ವರಿಡೆನ್‌ಕೋ ಅವರನ್ನು ಉಕ್ರೇನ್‌ನ ಹೊಸ ಪ್ರಧಾನಮಂತ್ರಿಯಾಗಿ ನೇಮಕ ಮಾಡಲಾಗಿದೆ. ಅವರು ಅಮೆರಿಕದೊಂದಿಗೆ ಖನಿಜ ಒಪ್ಪಂದದ ಮಾತುಕತೆಯಲ್ಲಿ ಪ್ರಮುಖ ಪಾತ್ರವಹಿಸಿದ್ದವರು.
* ಅವರು 2022ರಿಂದ ಅಧಿಕಾರದಲ್ಲಿದ್ದ ಡೆನಿಸ್ ಶ್ಮಿಹಾಲ್ ಅವರನ್ನು ಬದಲಾಯಿಸುತ್ತಿದ್ದು, ಶ್ಮಿಹಾಲ್ ಇದೀಗ ರಕ್ಷಣಾ ಸಚಿವರಾಗಿದ್ದಾರೆ.
* ಈ ನೇಮಕಾತಿ 2022ರಲ್ಲಿ ಯುದ್ಧ ಆರಂಭವಾದ ಬಳಿಕ ನಡೆದ ಪ್ರಮುಖ ನಾಯಕತ್ವ ಬದಲಾವಣೆಯಾಗಿದೆ. ಅಧ್ಯಕ್ಷ ಝೆಲೆನ್ಸ್ಕಿಯವರು ಯುದ್ಧಕಾಲದ ಆಡಳಿತಕ್ಕೆ ಹೊಸ ಶಕ್ತಿ ನೀಡುವ ಉದ್ದೇಶದಿಂದ ಈ ಬದಲಾವಣೆಗೆ ಮುಂದಾಗಿದ್ದಾರೆ.
* ಯೂಲಿಯಾ ಸ್ವರಿಡೆನ್‌ಕೋ ಅವರು ಆರ್ಥಿಕ ಸಚಿವೆ ಆಗಿದ್ದಾಗ, ಅರ್ಥವ್ಯವಸ್ಥೆಯನ್ನು ಸ್ಥಿರಗೊಳಿಸುವಲ್ಲಿ ಹಾಗೂ ಅಂತಾರಾಷ್ಟ್ರೀಯ ಬೆಂಬಲವನ್ನು ಪಡೆದು ಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಖನಿಜ ಒಪ್ಪಂದಗಳು ದೇಶದ ಆರ್ಥಿಕ ಪುನಶ್ಚೇತನಕ್ಕೆ ದಿಕ್ಕು ನೀಡಿದವು.
* ಈ ನೇಮಕಾತಿ ಮೂಲಕ ಝೆಲೆನ್ಸ್ಕಿಯವರು ನಿಷ್ಠೆ ಹಾಗೂ ನಿರಂತರತೆಗೆ ಒತ್ತು ನೀಡುತ್ತಿದ್ದಾರೆ. ಉಕ್ರೇನ್ ಪಾಶ್ಚಾತ್ಯ ಬೆಂಬಲದ ಮೇಲೆ ಬಹುತೇಕ ಅವಲಂಬಿತವಾಗಿರುವ ಸಂದರ್ಭದಲ್ಲಿ, ಈ ನಿರ್ಧಾರವು ರಾಜತಾಂತ್ರಿಕ ಸಮತೋಲನಕ್ಕೆ ಸಹಕಾರಿಯಾಗಿದೆ.
* ಅವರು ಪಾಶ್ಚಾತ್ಯ ರಾಷ್ಟ್ರಗಳೊಂದಿಗೆ ಸಮನ್ವಯದಲ್ಲಿ ತಂತ್ರಜ್ಞತೆಯಿಂದ ಕಾರ್ಯನಿರ್ವಹಿಸುತ್ತಿದ್ದು, ಆರ್ಥಿಕ ಚಿಂತನೆ ಹಾಗೂ ಯುದ್ಧಕಾಲದ ಸ್ಥಿರತೆಯ ಬಗ್ಗೆಯೂ ಸ್ಪಷ್ಟ ದೃಷ್ಟಿಕೋನ ಹೊಂದಿದ್ದಾರೆ. ಈ ಮೂಲಕ ಉಕ್ರೇನ್ ರಾಜಕೀಯದಲ್ಲಿ ಮಹಿಳಾ ನಾಯಕತ್ವವೂ ಹೆಚ್ಚಿನ ಮಹತ್ವ ಪಡೆಯುತ್ತಿದೆ.

## ಬ್ರಿಟನ್: ಮತದಾನದ ವಯಸ್ಸು 18ರಿಂದ 16ಕ್ಕೆ ಇಳಿಕೆಗೆ ನಿರ್ಧಾರ



* ಬ್ರಿಟನ್ ಸರ್ಕಾರವು 2029ರಲ್ಲಾಗುವ ಮುಂದಿನ ರಾಷ್ಟ್ರೀಯ ಚುನಾವಣೆಗೂ ಮುನ್ನ ಮತದಾನದ ವಯಸ್ಸನ್ನು 18ರಿಂದ 16ಕ್ಕೆ ಇಳಿಸಲು ನಿರ್ಧರಿಸಿದೆ.
* ಇದು ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು ತೆಗೆದುಕೊಳ್ಳಲಾದ ಕ್ರಮವಾಗಿದೆ.
* ಲೇಬರ್ ಪಕ್ಷವು 2024ರ ಚುನಾವಣೆಗೆ ಮುನ್ನವೇ ಈ ಬದಲಾವಣೆಗಾಗಿ ಪ್ರತಿಜ್ಞೆ ಮಾಡಿತ್ತು. ಈಗಾಗಲೇ ಸ್ಕಾಟ್ಲೆಂಡ್ ಮತ್ತು ವೇಲ್ಸ್‌ನಲ್ಲಿ 16-17 ವರ್ಷದವರು ಸ್ಥಳೀಯ ಮತ್ತು ಪ್ರಾದೇಶಿಕ ಚುನಾವಣೆಯಲ್ಲಿ ಮತ ಹಾಕುವ ಅವಕಾಶ ಹೊಂದಿದ್ದಾರೆ.
* ಈ ಹಿಂದೆ ಈಕ್ವೆಡಾರ್, ಆಸ್ಟ್ರಿಯಾ ಮತ್ತು ಬ್ರೆಜಿಲ್ ದೇಶಗಳು 16ನೇ ವಯಸ್ಸಿಗೆ ಮತದಾನದ ಹಕ್ಕು ನೀಡಿದ್ದವು. ಇದೀಗ ಬ್ರಿಟನ್ ಕೂಡ ಆ ಸಾಲಿಗೆ ಸೇರುವ ಸಾಧ್ಯತೆ ಇದೆ.
* ಈ ಬದಲಾವಣೆ ಅಳವಡಿಸಲು ಬ್ರಿಟನ್ ಸಂಸತ್ತಿನ ಅಂಗೀಕಾರ ಅಗತ್ಯವಿದೆ.

## ಮನೆ ಮನೆಗೆ ಪೊಲೀಸ್ ಅಭಿಯಾನಕ್ಕೆ ಇಂದು ಚಾಲನೆ




* ರಾಜ್ಯ ಪೊಲೀಸ್ ಇಲಾಖೆ ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು "ಮನೆ-ಮನೆಗೆ ಪೊಲೀಸ್" ಎಂಬ ಹೊಸ ಅಭಿಯಾನವನ್ನು ಆರಂಭಿಸಿದೆ.
* ಗೋವಿಂದರಾಜನಗರದ ಎಂ.ಸಿ.ಲೇಔಟ್‌ನಲ್ಲಿ ಇಂದು(ಜುಲೈ 18) ಗೃಹ ಸಚಿವ ಜಿ. ಪರಮೇಶ್ವರ್ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.
* ಈ ಅಭಿಯಾನದ ಮೂಲಕ ಅಪರಾಧ ನಿಯಂತ್ರಣದ ಜೊತೆಗೆ ಸಾರ್ವಜನಿಕರಲ್ಲಿ ಭದ್ರತೆ ಮತ್ತು ವಿಶ್ವಾಸವನ್ನು ಹೆಚ್ಚಿಸುವುದು ಉದ್ದೇಶವಾಗಿದೆ. ಮನೆಯವರೊಂದಿಗೆ ನೇರ ಸಂಪರ್ಕ ಸಾಧಿಸುವ ಮೂಲಕ ಸಾರ್ವಜನಿಕರ ಅಹವಾಲುಗಳನ್ನು ಕೇಳಿ ತಕ್ಷಣವೇ ಕ್ರಮ ಕೈಗೊಳ್ಳಲಾಗುತ್ತದೆ.
* ಪೊಲೀಸ್ ಠಾಣೆ ವ್ಯಾಪ್ತಿಯನ್ನು ಬೀಟ್‌ಗಳಾಗಿ ಮತ್ತು ಸಬ್‌ಬೀಟ್ ಗಳಾಗಿ ವಿಂಗಡಿಸಿ, ಪ್ರತಿ 40-50 ಮನೆಗಳ ಗುಚ್ಛಕ್ಕೆ ಒಬ್ಬ ಪೊಲೀಸ್ ಸಿಬ್ಬಂದಿಯನ್ನು ನೇಮಿಸಲಾಗುತ್ತದೆ. ಮೇಲ್ವಿಚಾರಣೆಗೆ ಎಎಸ್‌ಐ ಮತ್ತು ಪಿಎಸ್‌ಐ ಅಧಿಕಾರಿಗಳು ಹೊಣೆವಹಿಸಲಿದ್ದಾರೆ.
* ಮಹಿಳಾ ಪೊಲೀಸ್ ಸಿಬ್ಬಂದಿ ಮಹಿಳೆಯರ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಆಲಿಸಲಿದ್ದಾರೆ. ಜಾಗೃತಿ ಕಾರ್ಯಕ್ರಮಗಳ ಮೂಲಕ ಕೌಟುಂಬಿಕ ದೌರ್ಜನ್ಯ, ತುರ್ತು ಸಂಪರ್ಕ ಸಂಖ್ಯೆಗಳು ಮತ್ತು ಡ್ರಗ್ಸ್ ನ ದುಷ್ಪರಿಣಾಮಗಳ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತದೆ.

## ಬಿಹಾರದ ಮನೆಗಳಿಗೆ ಬೆಳಕು ನೀಡಲಿರುವ ಹೊಸ ಯೋಜನೆ: ಉಚಿತ 125 ಯೂನಿಟ್ ವಿದ್ಯುತ್



KpscVaani


* ಬಿಹಾರದಲ್ಲಿ ಈ ವರ್ಷ ನಡೆಯಲಿರುವ ವಿಧಾನಸಭೆ ಚುನಾವಣೆಗೆ ಮುಂಚಿತವಾಗಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಮಹತ್ವದ ಜನಪರ ಘೋಷಣೆ ಮಾಡಿದ್ದಾರೆ.
* ಆಗಸ್ಟ್ 1ರಿಂದ ರಾಜ್ಯದ ಎಲ್ಲ ಗೃಹ ವಿದ್ಯುತ್ ಬಳಕೆದಾರರಿಗೆ ತಿಂಗಳಿಗೆ 125 ಯೂನಿಟ್‌ಗಳವರೆಗಿನ ವಿದ್ಯುತ್ ಉಚಿತವಾಗಿರಲಿದೆ. ಈ ಯೋಜನೆಯಿಂದ ಸುಮಾರು 1.67 ಕೋಟಿ ಕುಟುಂಬಗಳು ಲಾಭ ಪಡೆಯಲಿವೆ.
* ನಿತೀಶ್ ಕುಮಾರ್ ಎಕ್ಸ್‌ನಲ್ಲಿ ಪ್ರಕಟಣೆ ಮಾಡಿದ್ದು, ಅವರು ಆರಂಭದಿಂದಲೂ ಜನತೆಗೆ ಕೈಗೆಟುಕುವ ದರದಲ್ಲಿ ವಿದ್ಯುತ್ ಒದಗಿಸುತ್ತಿದ್ದಾರೆ ಎಂದು ನೆನಪಿಸಿದ್ದಾರೆ. ಈಗ ಉಚಿತ ವಿದ್ಯುತ್ ನೀಡುವ ಮೂಲಕ ಜನರಿಗೆ ಮತ್ತಷ್ಟು ಸೌಲಭ್ಯ ಕಲ್ಪಿಸಲಾಗುತ್ತಿದೆ.
* ಅಲ್ಲದೆ, ಮುಂದಿನ ಮೂರು ವರ್ಷಗಳಲ್ಲಿ ಗೃಹ ಬಳಕೆದಾರರ ಒಪ್ಪಿಗೆ ಮೇರೆಗೆ ಅವರ ಮನೆಗಳ ಛಾವಣಿಗಳಲ್ಲಿ ಅಥವಾ ಸಮೀಪದ ಸಾರ್ವಜನಿಕ ಸ್ಥಳಗಳಲ್ಲಿ ಸೌರಶಕ್ತಿ ಸ್ಥಾವರಗಳನ್ನು ಸ್ಥಾಪಿಸಲಾಗುವುದು ಎಂಬ ಭರವಸೆ ಕೂಡಾ ಅವರು ನೀಡಿದ್ದಾರೆ.
* ಈ ಘೋಷಣೆಗೆ ಮುನ್ನ ನಿತೀಶ್ ನೇತೃತ್ವದ ಸರ್ಕಾರ 30 ಪ್ರಮುಖ ಪ್ರಸ್ತಾಪಗಳಿಗೆ ಅನುಮೋದನೆ ನೀಡಿತ್ತು. ಇದರಲ್ಲೊಂದು ಕೋಟಿ ಯುವಕರಿಗೆ ಉದ್ಯೋಗ ನೀಡುವ ಯೋಜನೆಯೂ ಸೇರಿದೆ. ರಾಜಕೀಯ ವೀಕ್ಷಕರ ಪ್ರಕಾರ, ಈ ತ್ವರಿತ ನಿರ್ಧಾರಗಳು ವಿಪಕ್ಷದ ಟೀಕೆಗೆ ತಂತ್ರಬದ್ಧ ಪ್ರತಿಕ್ರಿಯೆಯಾಗಿದೆ.

## ರಾಜ್ಯದಲ್ಲಿ 2ನೇ ಅಣು ವಿದ್ಯುತ್ ಸ್ಥಾವರಕ್ಕೆ ಹಸಿರು ನಿಶಾನೆ



* ಉತ್ತರ ಕನ್ನಡದ ಕೈಗಾ ಸ್ಥಾವರದ ಬಳಿಕ, ರಾಜ್ಯದಲ್ಲಿ ಎರಡನೇ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.
* ಈ ಬಗ್ಗೆ ಎನ್‌ಟಿಪಿಸಿ ಸಂಸ್ಥೆಗೆ ಪ್ರಾಥಮಿಕ ಕಾರ್ಯಸಾಧ್ಯತಾ ವರದಿ ನೀಡುವಂತೆ ರಾಜ್ಯ ಸರ್ಕಾರ ಸೂಚನೆ ನೀಡಿದೆ.
* ಎನ್‌ಟಿಪಿಸಿ ಈಗಾಗಲೇ ವಿಜಯಪುರ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕೆಲ ಸ್ಥಳಗಳನ್ನು ಗುರುತಿಸಿದ್ದು, ಸ್ಥಳೀಯ ವಿರೋಧದ ನಡುವೆಯೂ ಇಡೀ ರಾಜ್ಯವನ್ನು ಪರಿಗಣಿಸಿ ಹೊಸ ಅಧ್ಯಯನ ನಡೆಸಲು ಸೂಚನೆ ನೀಡಲಾಗಿದೆ.
* ಸರ್ಕಾರ ಯಾವುದೇ ನಿರ್ದಿಷ್ಟ ಸ್ಥಳಗಳನ್ನು ಶಿಫಾರಸು ಮಾಡದೆ, ಯೋಗ್ಯ ಸ್ಥಳ ಗುರುತಿಸುವ ಹೊಣೆ ಎನ್‌ಟಿಪಿಸಿಗೆ ನೀಡಿದ್ದಾರೆ.
* 2024ರ ನವೆಂಬರ್ 4ರಂದು ಎನ್‌ಟಿಪಿಸಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯು 2 ಸಾವಿರ ಮೆಗಾವ್ಯಾಟ್ ಸಾಮರ್ಥ್ಯದ ಸ್ಥಾವರ ನಿರ್ಮಾಣದ ಬಗ್ಗೆ ಇದೆ. ಇದಕ್ಕೆ 1,200 ಎಕರೆ ಭೂಮಿ ಅಗತ್ಯವಿದ್ದು, ಹೆಚ್ಚಿನ ಸಾಮರ್ಥ್ಯಕ್ಕೆ ಅನುಗುಣವಾಗಿ ಹೆಚ್ಚಿನ ಜಮೀನು ಮತ್ತು ನೀರಿನ ಅವಶ್ಯಕತೆ ಇದೆ. ಹೆಚ್ಚುವರಿಯಾಗಿ, ವಸತಿ ವಸಾಹತು ಅಭಿವೃದ್ಧಿಗೆ ಸುಮಾರು 150 ಎಕರೆಗಳ ಅಗತ್ಯವಿದೆ.

## ಕಾಡಾನೆಗಳ ಉಪಟಳ ನಿಯಂತ್ರಣಕ್ಕೆ ಎಐ ಸೈರನ್ ವ್ಯವಸ್ಥೆ



* ಕೊಡಗು ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಆನೆ–ಮಾನವ ಸಂಘರ್ಷ ಹೆಚ್ಚುತ್ತಿದ್ದು, ಇದನ್ನು ತಡೆಯಲು ಎಐ ಆಧಾರಿತ ಸೈರನ್ ವ್ಯವಸ್ಥೆ ಆರಂಭಿಸಲಾಗಿದೆ. ವಿರಾಜಪೇಟೆ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಅನುಷ್ಠಾನಗೊಳ್ಳುತ್ತಿದೆ.
* ಸ್ನೇಹ ಎಂಬ ಎನ್‌ಜಿಒ 12 ಸೈರನ್‌ಗಳನ್ನು ಮಾಲ್ದಾರೆ, ಬಡಗ, ಬನಂಗಾಲ ಸೇರಿದಂತೆ ಸುತ್ತಲಿನ ಸಂಘರ್ಷ ಪ್ರದೇಶಗಳಲ್ಲಿ ಅಳವಡಿಸಿದೆ. ಈ ಯೋಜನೆಯಲ್ಲಿ ಖಾಸಗಿ ಕಂಪನಿಯಿಂದ ಹಣಕಾಸು ನೆರವು ದೊರೆತಿದೆ.
* ಎಐ ತಂತ್ರಜ್ಞಾನದಿಂದ ಆನೆಗಳ ಚಲನೆಯನ್ನು ಪತ್ತೆಹಚ್ಚಿ, ಒಂದು ಕಿಲೋಮೀಟರ್ ವ್ಯಾಪ್ತಿಯೊಳಗಿನ ನಿವಾಸಿಗಳಿಗೆ ಸೈರನ್ ಮೂಲಕ ಎಚ್ಚರಿಕೆ ನೀಡಲಾಗುತ್ತದೆ.
* ಇದರಿಂದ ಗ್ರಾಮೀಣ ಜನರಿಗೆ ಮತ್ತು ವಿದ್ಯಾರ್ಥಿಗಳಿಗೆ ಭಯವಿಲ್ಲದೆ ದಿನಚರ್ಯೆ ಮುಂದುವರಿಸಲು ನೆರವಾಗಿದೆ.
* ಹೊಸ ಕ್ರಮದ ಮೊದಲು ಅಳವಡಿಸಲಾದ ಕಂದಕ ಹಾಗೂ ಸೋಲಾರ್ ತಂತಿಬೇಲಿ ಅಪರ್ಯಾಯವಾಗಿರಲಿಲ್ಲ. ಆದರೆ ಎಐ ಸೈರನ್‌ನಿಂದ ಜನರಲ್ಲಿ ಭದ್ರತೆ ಮೂಡಿದ್ದು, ಶಾಲಾ ಮಕ್ಕಳು ಸಹ ಧೈರ್ಯವಾಗಿ ಶಾಲೆಗಳಿಗೆ ಹೆಜ್ಜೆ ಹಾಕುತ್ತಿದ್ದಾರೆ.

## ಭಾರತದಿಂದ ಮೊದಲ ಸಾಂಪ್ರದಾಯಿಕ ಜ್ಞಾನ ಡಿಜಿಟಲ್ ಗ್ರಂಥಾಲಯ: WHO ಶ್ಲಾಘನೆ




* ಭಾರತವು ಸಾಂಪ್ರದಾಯಿಕ ಜ್ಞಾನ ಡಿಜಿಟಲ್ ಗ್ರಂಥಾಲಯ(Traditional Knowledge Digital Library -TKDL)ವನ್ನು ಪ್ರಾರಂಭಿಸಿದ ಮೊದಲ ದೇಶವಾಗಿದೆ. ಇದು ಆಯುರ್ವೇದ, ಯುನಾನಿ, ಸಿದ್ದ, ಹೋಮಿಯೋಪತಿ ಸೇರಿದಂತೆ ವಿವಿಧ ಸಾಂಪ್ರದಾಯಿಕ ಔಷಧ ವ್ಯವಸ್ಥೆಗಳ ಜ್ಞಾನವನ್ನು ಸಂಗ್ರಹಿಸಿ, AI ಉಪಕರಣಗಳಿಂದ ಸಂರಕ್ಷಿಸಲು ಉದ್ದೇಶಿತವಾಗಿದೆ.
* TKDL ಪ್ಲಾಟ್‌ಫಾರ್ಮ್ ಹಳೆಯ ಪಠ್ಯಗಳು ಮತ್ತು ಪದ್ಧತಿಗಳನ್ನು ಡಿಜಿಟಲ್ ರೂಪದಲ್ಲಿ ಒದುತ್ತದೆ.
* AI ಉಪಕರಣಗಳ ನೆರವಿನಿಂದ ಈ ಜ್ಞಾನವನ್ನು ವಿಶ್ಲೇಷಿಸಿ, ಇಂದಿನ ಆರೋಗ್ಯ ಸೇವೆಗಳಿಗಾಗಿ ಉಪಯೋಗಿಸಲು ಸುಲಭಗೊಳಿಸಲಾಗಿದೆ. ಇದು ಹೊಸ ಔಷಧ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಹಕಾರಿಯಾಗುತ್ತದೆ.
* ವಿಶ್ವ ಆರೋಗ್ಯ ಸಂಸ್ಥೆ (WHO) "AI ಸಾಂಪ್ರದಾಯಿಕ ಔಷಧ" ವರದಿಯಲ್ಲಿ ಭಾರತದ ಆಯುಷ್ ಕ್ಷೇತ್ರದ ಡಿಜಿಟಲ್ ಅನ್ವಯಣೆಯನ್ನು ಶ್ಲಾಘಿಸಿದೆ.

* ಪ್ರಧಾನ ಮಂತ್ರಿ ಮೋದಿ AI-ಆಧಾರಿತ ಆರೋಗ್ಯ ಸೇವೆಗಳನ್ನು ಎಲ್ಲರಿಗೂ ತಲುಪಿಸಲು ಬದ್ಧತೆ ವ್ಯಕ್ತಪಡಿಸಿದ್ದಾರೆ. ಆಯುಷ್ ಸಚಿವಾಲಯದ ಪ್ರಕಾರ, ವಿಜ್ಞಾನಿಗಳು ಸಾಂಪ್ರದಾಯಿಕ ಜ್ಞಾನ ಮತ್ತು ಆಧುನಿಕ ತಂತ್ರಜ್ಞಾನವನ್ನು ಸಮನ್ವಯಗೊಳಿಸಲು ತಕ್ಷಣ ಪ್ರಯತ್ನಿಸುತ್ತಿದ್ದಾರೆ.
* TKDL ಮಾದರಿ ಜಾಗತಿಕ ಮಟ್ಟದಲ್ಲಿ ಪ್ರಾಚೀನ ಜ್ಞಾನ ಸಂರಕ್ಷಣೆಗೆ ಪರ್ಯಾಯವಾಗಲಿದೆ. ಭಾರತ, ಚೀನಾದ ಸಾಂಪ್ರದಾಯಿಕ ಚೈನೀಸ್ ಮೆಡಿಸಿನ್ (TCM) ಜೊತೆ ಆಯುರ್ವೇದವನ್ನು ಹೋಲಿಸಿ ಅಧ್ಯಯನ ಮಾಡುತ್ತಿದೆ. WHO, ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಭಾರತೀಯ ಪ್ರಯತ್ನಗಳನ್ನು ಪ್ರಶಂಸಿಸಿದೆ.




## 19 July 2025

### ಅಂತಾರಾಷ್ಟ್ರೀಯ ಕ್ರಿಕೆಟ್ ಗೆ ವಿದಾಯ ಘೋಷಿಸಿದ ವೆಸ್ಟ್ ಇಂಡೀಸ್ ಕ್ರಿಕೆಟಿಗ ಆ್ಯಂಡ್ರೆ ರಸೆಲ್



* ವೆಸ್ಟ್ ಇಂಡೀಸ್ ತಂಡದ ಸ್ಟಾರ್ ಆಲ್‌ರೌಂಡರ್ ಆ್ಯಂಡ್ರೆ ರಸೆಲ್ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ್ದಾರೆ. ಮುಂಬರುವ ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಯಲ್ಲಿ ಕಣಕ್ಕಿಳಿಯುವ ಮೂಲಕ ಇಂಟರ್‌ನ್ಯಾಷನಲ್ ಕೆರಿಯರ್‌ಗೆ ವಿದಾಯ ಹೇಳುವುದಾಗಿ 37 ವರ್ಷದ ರಸೆಲ್ ಅವರು ತಿಳಿಸಿದ್ದಾರೆ.
* ಟಿ20 ಮಾದರಿಯಲ್ಲೇ ಹೆಚ್ಚು ಯಶಸ್ಸು ಗಳಿಸಿರುವ ರಸೆಲ್ ಭಾರತ ಮತ್ತು ಶ್ರೀಲಂಕಾದ ಆತಿಥ್ಯದಲ್ಲಿ 2026ರಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಗೆ ಕೇವಲ ಏಳು ತಿಂಗಳು ಇರುವಂತೆ ಈ ನಿರ್ಧಾರ ಪ್ರಕಟಿಸಿದ್ದಾರೆ.
* 2011 ರಲ್ಲಿ ಪಾಕಿಸ್ತಾನ್ ವಿರುದ್ಧ ಕಣಕ್ಕಿಳಿಯುವ ಮೂಲಕ ವೆಸ್ಟ್ ಇಂಡೀಸ್ ಪರ ಟಿ20 ಕೆರಿಯರ್ ಆರಂಭಿಸಿದ್ದ ಆ್ಯಂಡ್ರೆ ರಸೆಲ್ ಈವರೆಗೆ 84 ಪಂದ್ಯಗಳನ್ನಾಡಿದ್ದಾರೆ. ಈ ವೇಳೆ 73 ಇನಿಂಗ್ಸ್‌ಗಳಲ್ಲಿ ಬ್ಯಾಟ್ ಬೀಸಿರುವ ಅವರು 3 ಅರ್ಧಶತಕಗೊಂದಿಗೆ 1078 ರನ್ ಕಲೆಹಾಕಿದ್ದಾರೆ. ಹಾಗೆಯೇ ಬೌಲಿಂಗ್‌ನಲ್ಲಿ 61 ವಿಕೆಟ್ ಕಬಳಿಸಿ ಮಿಂಚಿದ್ದಾರೆ.
* ವೆಸ್ಟ್ ಇಂಡೀಸ್ ತಂಡದ ಪರ 84 ಟಿ-20 ಪಂದ್ಯಗಳಲ್ಲಿ ಆಡಿರುವ ಆ್ಯಂಡ್ರೆ ರಸೆಲ್, ಈ ಪಂದ್ಯಗಳಲ್ಲಿ ಒಟ್ಟು 1078 ರನ್ ಗಳಿಸಿದ್ದು, 61 ವಿಕೆಟ್ ಗಳನ್ನೂ ಕಿತ್ತಿದ್ದಾರೆ. ಇದಲ್ಲದೆ, 2012 ಹಾಗೂ 2016ರ ಟಿ-20 ವಿಶ್ವಕಪ್ ಗೆದ್ದ ತಂಡದಲ್ಲೂ ಅವರು ಭಾಗವಾಗಿದ್ದರು.

### ಬಿಎಂಆರ್‌ಸಿಎಲ್‌ನ ಹೊಸ ಎಂಡಿ ಆಗಿ ರವಿಶಂಕರ್ ಜೆ. ನೇಮಕ



* ಕರ್ನಾಟಕ ಸರ್ಕಾರವು 2001 ರ ಬ್ಯಾಚ್‌ನ ಐಎಎಸ್ ಅಧಿಕಾರಿ ಡಾ. ಜೆ. ರವಿಶಂಕರ್ ಅವರನ್ನು ಬೆಂಗಳೂರು ಮೆಟ್ರೋ ರೈಲು ನಿಗಮ ಲಿಮಿಟೆಡ್ (ಬಿಎಂಆರ್‌ಸಿಎಲ್) ನ ಹೊಸ ವ್ಯವಸ್ಥಾಪಕ ನಿರ್ದೇಶಕ (ಎಂಡಿ) ಆಗಿ ಜುಲೈ 18 ರಂದು(ಶುಕ್ರವಾರ) ನೇಮಿಸಿದೆ.
* ಅವರು ಹೆಚ್ಚುವರಿ ಜವಾಬ್ದಾರಿಯಿಂದ ಬಿಡುಗಡೆಯಾದ ಎಂ. ಮಹೇಶ್ವರ ರಾವ್, ಐಎಎಸ್ ಅವರ ಉತ್ತರಾಧಿಕಾರಿಯಾಗಿ ನೇಮಕಗೊಂಡರು. ಶ್ರೀ ರವಿಶಂಕರ್ ಕೃಷಿ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು.
* ನಮ್ಮ ಮೆಟ್ರೋದ ನಿರ್ವಾಹಕರಾದ ಬಿಎಂಆರ್‌ಸಿಎಲ್ ಪ್ರಸ್ತುತ ಬೆಂಗಳೂರಿನಾದ್ಯಂತ 77 ಕಿ.ಮೀ ಕಾರ್ಯಾಚರಣಾ ಮೆಟ್ರೋ ಮಾರ್ಗಗಳನ್ನು ನೋಡಿಕೊಳ್ಳುತ್ತಿದೆ. ಮಹೇಶ್ವರ ರಾವ್ ಅವರ ನೇತೃತ್ವದಲ್ಲಿ ಫೆಬ್ರವರಿ 2025 ರಲ್ಲಿ ಬೆಂಬಲಿತ ದರ ನಿಗದಿ ವರದಿಯನ್ನು ಬಿಡುಗಡೆ ಮಾಡದೆ ಗರಿಷ್ಠ ದರವನ್ನು ₹60 ರಿಂದ ₹90 ಕ್ಕೆ ಹೆಚ್ಚಿಸಿದ್ದಕ್ಕಾಗಿ ಬಿಎಂಆರ್‌ಸಿಎಲ್ ಗಮನಾರ್ಹ ಟೀಕೆಗಳನ್ನು ಎದುರಿಸಿತು.
* ಡಾ. ರವಿಶಂಕರ್ ದಂತ ಶಸ್ತ್ರಚಿಕಿತ್ಸೆಯಲ್ಲಿ ಪದವಿ ಪಡೆದಿದ್ದಾರೆ ಮತ್ತು ವೈವಿಧ್ಯಮಯ ಆಡಳಿತಾತ್ಮಕ ಅನುಭವವನ್ನು ಹೊಂದಿದ್ದಾರೆ. ಅವರು ಈ ಹಿಂದೆ ಕೃಷಿ ಮತ್ತು ವಸತಿ ಇಲಾಖೆಗಳಲ್ಲಿ ಕಾರ್ಯದರ್ಶಿ, ಅಬಕಾರಿ ಆಯುಕ್ತರು, ಬಿಬಿಎಂಪಿಯಲ್ಲಿ ವಿಶೇಷ ಆಯುಕ್ತರು ಮತ್ತು ಕರ್ನಾಟಕ ವಸತಿ ಮಂಡಳಿಯ ಆಯುಕ್ತರು ಸೇರಿದಂತೆ ಪ್ರಮುಖ ರಾಜ್ಯಮಟ್ಟದ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

* ನಗರ ಮತ್ತು ಮೂಲಸೌಕರ್ಯ ಆಡಳಿತಕ್ಕೆ ಅವರ ವ್ಯಾಪಕ ಮಾನ್ಯತೆ ಬಿಎಂಆರ್‌ಸಿಎಲ್‌ನ ನಡೆಯುತ್ತಿರುವ ವಿಸ್ತರಣಾ ಪ್ರಯತ್ನಗಳಿಗೆ ನಿರ್ಣಾಯಕವಾಗಿದೆ ಎಂದು ಪರಿಗಣಿಸಲಾಗಿದೆ.

## ಅಜಯ್ ಕುಮಾರ್ ಶ್ರೀವಾಸ್ತವ ಅವರನ್ನು HAL ನ ನಿರ್ದೇಶಕ ಆಗಿ ನೇಮಕ



* ಅಜಯ್ ಕುಮಾರ್ ಶ್ರೀವಾಸ್ತವ ಅವರು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ನ ಇಂಜಿನಿಯರಿಂಗ್ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.
* HAL ನಲ್ಲಿ 1988ರಲ್ಲಿ ತಮ್ಮ ವೃತ್ತಿ ಆರಂಭಿಸಿ, ಕಳೆದ 37 ವರ್ಷಗಳಲ್ಲಿ ಹಲವಾರು ಪ್ರಮುಖ ನಾಯಕತ್ವ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.
* ಅವರು HS-748, Do-228, Sea King ಹೆಲಿಕಾಪ್ಟರ್‌ಗಳ ನವೀಕರಣ, ಹಾಗೂ ಯಶಸ್ ಟ್ರೈನರ್ ವಿಮಾನದ ಅಭಿವೃದ್ಧಿಗೆ ಪ್ರಮುಖ ಕೊಡುಗೆ ನೀಡಿದ್ದಾರೆ.
* ಅವರು ಫ್ರೆಂಚ್ FASIA ಪ್ರಶಸ್ತಿಗೆ ಪಾತ್ರರಾಗಿದ್ದು, "ಮೇಕ್ ಇನ್ ಇಂಡಿಯಾ" ಹಾಗೂ "ಆತ್ಮನಿರ್ಭರ ಭಾರತ್" ನ ಉದ್ದೇಶಗಳಿಗೆ ಪೂರಕವಾಗಿ HAL ನ ಸ್ವದೇಶಿ ವಿಮಾನ ನಿರ್ಮಾಣ ಸಾಮರ್ಥ್ಯವನ್ನು ಬಲಪಡಿಸಲು ತೊಡಗಿದ್ದಾರೆ.
* ಅವರ ದೃಷ್ಟಿಕೋನದಲ್ಲಿ ನಾವೀನ್ಯತೆ, ದೇಶೀಯ ಉತ್ಪಾದನೆ, ಹಾಗೂ ಜಾಗತಿಕ ಸಹಭಾಗಿತ್ವಗಳ ಸಂಯೋಜನೆ ಮೂಲಕ ಮುಂದಿನ ತಲೆಮಾರಿಗೆ ತಂತ್ರಜ್ಞಾನ ನಿರ್ಮಾಣವೇ ಕೇಂದ್ರವಾಗಿದೆ.

## SIMBEX 2025: ಭಾರತೀಯ ನೌಕಾಪಡೆಯು ಭಾಗವಹಿಸಲು ಸಜ್ಜು



* ಸಿಂಬೆಕ್ಸ್ (SIMBEX) ಯ 32ನೇ ಆವೃತ್ತಿಯಲ್ಲಿ ಭಾರತೀಯ ನೌಕಾಪಡೆ ಸಿಂಗಾಪುರ ನೌಕಾಪಡೆಯೊಂದಿಗೆ ಭಾಗವಹಿಸುತ್ತಿದ್ದು, ಇದು ದೀರ್ಘಕಾಲದ ದ್ವಿಪಕ್ಷೀಯ ನೌಕಾ ಸಹಕಾರದ ಸಂಕೇತವಾಗಿದೆ.
* ಈ ಅಭ್ಯಾಸವು ಭಾರತ-ಸಿಂಗಾಪುರ ರಾಜತಾಂತ್ರಿಕ ಸಂಬಂಧಗಳ 60ನೇ ವರ್ಷದ ಅಂಗವಾಗಿ ನಡೆಯುತ್ತಿದ್ದು, ಆಕ್ಟ್ ಈಸ್ಟ್ ನೀತಿ ಮತ್ತು SAGAR ದೃಷ್ಟಿಕೋಣವನ್ನು ಅನುಸರಿಸುತ್ತದೆ.
* ಈ ಬಾರಿ INS ಡೆಲ್ಲಿ, ಸತಪುರಾ, ಕಿಲ್ತಾನ್, ಮತ್ತು ಶಕ್ತಿ ಎಂಬ ಸ್ವದೇಶೀ ನೌಕೆಗಳು ಭಾಗವಹಿಸುತ್ತಿವೆ. ಅಭ್ಯಾಸದಲ್ಲಿ ಸಮುದ್ರ ತಿರುಗಾಟ, ಸಂವಹನ, ಶೋಧನೆ ಮತ್ತು ರಕ್ಷಣೆ ಅಭ್ಯಾಸಗಳು ನಡೆಯುತ್ತಿವೆ.
* SIMBEX 2025, ASEAN-ಇಂಡಿಯಾ ಮರಿಟೈಮ್ ಎಕ್ಸರ್ಸೈಜ್ 2023ರ ಪಾಠಗಳ ಆಧಾರದ ಮೇಲೆ ರೂಪುಗೊಂಡಿದೆ.
* ನೌಕಾ ಹೊಂದಾಣಿಕೆ, ಸಾಗರ ಭದ್ರತೆ, ಸಾಮಾನ್ಯ ಸಾಗರ ಮಾರ್ಗ ರಕ್ಷಣೆ, ಹಾಗೂ HADR ಕಾರ್ಯಚಟುವಟಿಕೆಗಳಲ್ಲಿ ಸಹಯೋಗ.
* ಭಾರತದ "ಭದ್ರತಾ ನೀಡುವ ರಾಷ್ಟ್ರ" (Net Security Provider) ಎಂಬ ಸ್ಥಾನಮಾನವನ್ನು ಬಲಪಡಿಸಲು ಇದು ನೆರವಾಗುತ್ತದೆ.
* ಭಾರತವು 2026ರ ಆರಂಭದಲ್ಲಿ ವಿಶಾಖಪಟ್ಟಣದಲ್ಲಿ MILAN, IONS, ಹಾಗೂ ಅಂತರರಾಷ್ಟ್ರೀಯ ನೌಕಾ ಸಮೀಕ್ಷೆಗಳಿಗೆ ಆತಿಥ್ಯ ವಹಿಸಲು ತಯಾರಾಗುತ್ತಿದೆ.
* ಒಟ್ಟಾರೆ, SIMBEX 2025 ಭಾರತೀಯ ನೌಕಾಪಡೆಯ ತಾಂತ್ರಿಕ ಸಾಮರ್ಥ್ಯ, ದ್ವಿಪಕ್ಷೀಯ ನೌಕಾ ಸಹಕಾರ ಹಾಗೂ ಪ್ರಾದೇಶಿಕ ಭದ್ರತೆಗಾಗಿ ಭಾರತದ ಬದ್ಧತೆಯನ್ನು ತೋರಿಸುತ್ತದೆ.

## ಆಗಸ್ಟ್ 11ರಿಂದ ವಿಧಾನ ಮಂಡಲ ಅಧಿವೇಶನ



* ಆಗಸ್ಟ್ 11ರಿಂದ ರಾಜ್ಯ ವಿಧಾನ ಮಂಡಲದ ಮಳೆಗಾಲದ ಅಧಿವೇಶನ ಆರಂಭವಾಗಲಿದೆ. ಈ ಅಧಿವೇಶನವು ಆಗಸ್ಟ್ 11ರಿಂದ 22ರವರೆಗೆ ನಡೆಯಲಿದ್ದು, ಒಟ್ಟು 9 ದಿನಗಳ ಕಾಲ ಕಲಾಪ ನಡೆಯಲಿದೆ.
* ರಾಜ್ಯಪಾಲ ಥಾವರ ಚಂದ್ ಗೆಹ್ಲೋಟ್ ಅವರು ಜುಲೈ 18ರಂದು ಅಧಿಸೂಚನೆ ಹೊರಡಿಸಿದ್ದು, ತಾತ್ಕಾಲಿಕ ಕಾರ್ಯಕಾಲದ ವೇಳಾಪಟ್ಟಿಯನ್ನೂ ಪ್ರಕಟಿಸಲಾಗಿದೆ.
* ಅಧಿವೇಶನದ ಮೊದಲ ಭಾಗ ಆಗಸ್ಟ್ 14ರವರೆಗೆ ನಡೆಯಲಿದೆ. ಆಗಸ್ಟ್ 15ರ ಸ್ವಾತಂತ್ರ್ಯ ದಿನ, ನಂತರದ ಶನಿವಾರ ಮತ್ತು ಭಾನುವಾರದ ರಜೆ ಹಿನ್ನೆಲೆಯಲ್ಲಿ ಮಧ್ಯಭಾಗದಲ್ಲಿ ಮೂರು ದಿನಗಳ ವಿರಾಮವಿದೆ.
* ಆಗಸ್ಟ್ 18ರಂದು ಅಧಿವೇಶನ ಪುನಾರಂಭವಾಗಲಿದ್ದು, ಆಗಸ್ಟ್ 22ರವರೆಗೆ ಕಲಾಪ ಮುಂದುವರಿಯಲಿದೆ.

## ಬಿಹಾರದಲ್ಲಿ ₹7,200 ಕೋಟಿ ಮೂಲಸೌಕರ್ಯ ಯೋಜನೆಗಳಿಗೆ ಪ್ರಧಾನಿ ಮೋದಿ ಚಾಲನೆ



KPSCVaani

* ಪ್ರಧಾನಿ ನರೇಂದ್ರ ಮೋದಿ ಅವರು ಬಿಹಾರದ ಮೊತಿಹಾರಿಯಲ್ಲಿ ₹7,200 ಕೋಟಿ ಮೊತ್ತದ ಮೂಲಸೌಕರ್ಯ ಯೋಜನೆಗಳಿಗೆ ಚಾಲನೆ ನೀಡಿದರು. ಈ ಯೋಜನೆ "ವಿಕಸಿತ ಭಾರತ್ ಮಿಷನ್" ಅಡಿಯಲ್ಲಿ ನಡೆಯುತ್ತಿದ್ದು, ಬಿಹಾರವನ್ನು ಅಭಿವೃದ್ಧಿಯ ಹಬ್ಬಾಳಿಯಾಗಿ ರೂಪಿಸುವ ಉದ್ದೇಶ ಹೊಂದಿದೆ.
* ಅಭಿವೃದ್ಧಿಯಲ್ಲಿ ಬಿಹಾರ್ ಬಹುಕಾಲದಿಂದ ಹಿಂದೆ ಬಿದ್ದ ರಾಜ್ಯವಾಗಿದ್ದು, ಯುಪಿಎ ಸರ್ಕಾರದ ಅವಧಿಯಲ್ಲಿ ₹2 ಲಕ್ಷ ಕೋಟಿ ಮಾತ್ರದ ನಿಗದಿಗೆ ಮಿತವಾಯಿತು ಎಂದು ಮೋದಿ ಹೇಳಿದರು. ಎನ್‌ಡಿಎ ಆಡಳಿತ ಈ ಹಿಂದೆಕೊಂಡು ಹೆಚ್ಚಿನ ಆರ್ಥಿಕ ನೆರವು ಒದಗಿಸುತ್ತಿದೆ.
* ಈ ಯೋಜನೆ ಭಾರತವನ್ನು 2047ರೊಳಗೆ ವಿಕಸಿತ ರಾಷ್ಟ್ರವನ್ನಾಗಿಸುವ ದಿಟ್ಟ ಗುರಿಯ ಭಾಗವಾಗಿದೆ. ಪೂರ್ವ ಭಾರತಕ್ಕೂ ಸಮತೋಲ ಶಹಾರಿ ಅಭಿವೃದ್ಧಿ ಸಾಕ್ಷಾತ್ಕಾರಗೊಳ್ಳಲಿದೆ ಎಂದು ಪ್ರಧಾನಿ ಅಭಿಪ್ರಾಯಪಟ್ಟರು.
* ಮೊತಿಹಾರಿ, ಪಟ್ನಾ, ಗಯಾ ಸೇರಿ ಪ್ರಮುಖ ನಗರಗಳಲ್ಲಿ ಶಹಾರಿ ಮೂಲಸೌಕರ್ಯ ಸುಧಾರಣೆಗೆ ₹7,200 ಕೋಟಿ ಹೂಡಿಕೆ ಆಗಿದೆ. ಮೊತಿಹಾರಿಯಲ್ಲಿ ಮಾತ್ರ 3 ಲಕ್ಷ ಪಕ್ಕಾ ಮನೆಗಳ ಹಂಚಿಕೆ ನಡೆಯಲಿದೆ. ಮುಖ್ಯಮಂತ್ರಿಗಳ ನೇತೃತ್ವದ ಎನ್‌ಡಿಎ ಸರ್ಕಾರದಿಂದ ಯೋಜನೆಗೆ ಬಲವಿದೆ.
* ಈ ಯೋಜನೆಗಳಿಂದ ಸ್ಥಳೀಯ ಉದ್ಯೋಗಾವಕಾಶಗಳು ಹೆಚ್ಚಳ, ಶಹಾರಿ ಜೀವನಮಟ್ಟ ಸುಧಾರಣೆ ಮತ್ತು ಬಿಹಾರ್‌ನಲ್ಲಿ ದೀರ್ಘಕಾಲದ ಅಭಿವೃದ್ಧಿಗೆ ಭದ್ರತೆ ಸಿಗಲಿದೆ. ಇದರಿಂದ ರಾಷ್ಟ್ರವ್ಯಾಪಿ ಸಮಾನತೆಗೂ ನಾಂದಿಯಾಗಲಿದೆ.

## 2036 ಒಲಿಂಪಿಕ್ಸ್ ಗುರಿ: ಪ್ರತಿ ತಿಂಗಳಿಗೆ 3,000 ಕ್ರೀಡಾಪಟುಗಳಿಗೆ ₹50,000 ನೆರವು



* ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಘೋಷಿಸಿದಂತೆ, ಭಾರತ ಸರ್ಕಾರ 2036ರ ಒಲಿಂಪಿಕ್ಸ್‌ಗೆ ತಯಾರಿ ಆರಂಭಿಸಿದೆ. ಈ ಹಿನ್ನೆಲೆಯಲ್ಲಿ ಪ್ರತಿ ತಿಂಗಳು ಸುಮಾರು 3,000 ಕ್ರೀಡಾಪಟುಗಳಿಗೆ ರೂ. 50,000 ಹಣಕಾಸು ಸಹಾಯ ನೀಡಲಾಗುತ್ತದೆ.
* ಅಮಿತ್ ಶಾ ಅವರ ಪ್ರಕಾರ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕಳೆದ ದಶಕದಲ್ಲಿ ಕ್ರೀಡೆಗೆ ಐದು ಪಟ್ಟು ಬಜೆಟ್ ಹೆಚ್ಚಿಸಿದೆ. ಹಳ್ಳಿಗಳಿಗೆಲ್ಲ ಕ್ರೀಡಾ ಪ್ರೋತ್ಸಾಹ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.
* ಸರ್ಕಾರ ಎಲ್ಲಾ ವಯೋಮಾನದ ಮಕ್ಕಳನ್ನು ವೈಜ್ಞಾನಿಕವಾಗಿ ಆಯ್ಕೆಮಾಡಿ ತರಬೇತಿ ನೀಡುತ್ತಿದೆ. ಜಯ ಸಾಧನೆ ಪ್ರತಿಯೊಬ್ಬರ ಸ್ವಭಾವದ ಭಾಗವಾಗಬೇಕು ಎಂಬುದು ಅಮಿತ್ ಶಾ ಅವರ ನಿಲುವು.
* ಅವರು ಪ್ರತಿಪಾದಿಸಿದಂತೆ, ಪೊಲೀಸ್ ಅಧಿಕಾರಿಗಳ ದಿನಚರಿ ಕ್ರೀಡಾ ಚಟುವಟಿಕೆಗಳೊಂದಿಗೆ ಮುಕ್ತಾಯವಾಗಬೇಕು. ಇದರಿಂದ ಒತ್ತಡ ತಗ್ಗಿ, ಕಾರ್ಯಕ್ಷಮತೆ ಹೆಚ್ಚಾಗುತ್ತದೆ.
* ಅಮಿತ್ ಶಾ ಅವರು 2029ರಲ್ಲಿ ಗಾಂಧಿನಗರ, ಅಹಮದಾಬಾದ್ ಮತ್ತು ಕೇವಾಡಿಯಾದಲ್ಲಿ ನಡೆಯಲಿರುವ ವಿಶ್ವ ಪೊಲೀಸ್ ಮತ್ತು ಅಗ್ನಿಶಾಮಕ ಕ್ರೀಡಾಕೂಟದಲ್ಲಿ ಭಾರತದ ಸಾಧನೆ ಗುರಿಯಾಗಬೇಕು ಎಂದು ಹೇಳಿದರು.
* 2036ರ ಒಲಿಂಪಿಕ್ಸ್‌ನಲ್ಲಿ ಭಾರತ ಮೊದಲ ಐದು ಪದಕ ವಿಜೇತ ರಾಷ್ಟ್ರಗಳಲ್ಲಿ ಒಂದಾಗುವುದು ಖಚಿತ ಎಂದು ಹೇಳಿದರು.

## Axis ಬ್ಯಾಂಕ್ ಹೊಸ ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೀರಜ್ ಗಂಭೀರ್ ನೇಮಕ




* ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಶಿಫಾರಸಿನ ಮೇರೆಗೆ, ಆಕ್ಸಿಸ್ ಬ್ಯಾಂಕ್ ನಿರ್ದೇಶಕರ ಮಂಡಳಿ ನೀರಜ್ ಗಂಭೀರ್ ಅವರನ್ನು ಮೂರು ವರ್ಷಗಳ ಅವಧಿಗೆ ಪೂರ್ಣಾವಧಿ ನಿರ್ದೇಶಕರಾಗಿ ಅಥವಾ ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಕ ಮಾಡಲು ಅನುಮೋದನೆ ನೀಡಿದೆ.
* ಈ ನೇಮಕಾತಿ ಆಗಸ್ಟ್ 4ರಿಂದ ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅನುಮೋದಿಸಿದ ದಿನಾಂಕದಿಂದ ಜಾರಿಗೆ ಬರಲಿದೆ. ನೇಮಕಾತಿ ಷೇರುದಾರರು ಮತ್ತು ಆರ್‌ಬಿಐನ ಅನುಮೋದನೆಗೆ ಒಳಪಡಲಿದೆ.
* ನೀರಜ್ ಗಂಭೀರ್ ಅವರಿಗೆ 30 ವರ್ಷಗಳಿಗೂ ಹೆಚ್ಚು ಹಣಕಾಸು ಕ್ಷೇತ್ರದ ಅನುಭವವಿದ್ದು, ಮೇ 2020ರಿಂದ ಆಕ್ಸಿಸ್ ಬ್ಯಾಂಕಿನಲ್ಲಿ ಖಜಾನೆ, ಮಾರುಕಟ್ಟೆ ಹಾಗೂ ಸಗಟು ಬ್ಯಾಂಕಿಂಗ್ ವಿಭಾಗಗಳ ಕಾರ್ಯನಿರ್ವಾಹಕರಾಗಿದ್ದಾರೆ.
* ಈ ಹಿಂದೆ ಅವರು ನೊಮುರಾ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕರಾಗಿದ್ದು, ಸಂಸ್ಥೆಯ ಸ್ಥಿರ ಆದಾಯದ ವ್ಯವಹಾರವನ್ನು ಮುನ್ನಡೆಸಿದ್ದರು.

## ಅಂತರರಾಷ್ಟ್ರೀಯ ಚದುರಂಗ ದಿನಾಚರಣೆ – ಜುಲೈ 20



* ಪ್ರತಿ ವರ್ಷ ಜುಲೈ 20ರಂದು ವಿಶ್ವ ಚದುರಂಗ ದಿನವನ್ನು ಆಚರಿಸಲಾಗುತ್ತದೆ. ಈ ದಿನವನ್ನು 1924ರಲ್ಲಿ ಸ್ಥಾಪಿತವಾದ ಅಂತಾರಾಷ್ಟ್ರೀಯ ಚದುರಂಗ ಫೆಡರೇಷನ್ (FIDE) ದಿನಾಂಕದ ಅಂಗವಾಗಿ ಆಚರಿಸಲಾಗುತ್ತದೆ.
* ಚದುರಂಗ ಕೇವಲ ಆಟವಲ್ಲ, ಅದು ಬುದ್ಧಿವಂತಿಕೆ, ಶಿಸ್ತು ಮತ್ತು ವೈವಿಧ್ಯ ಸಂಸ್ಕೃತಿಗಳ ಸಂಪರ್ಕದ ಸಂಕೇತವಾಗಿದೆ.

* 2025 ರ ಥೀಮ್ - "ಪ್ರತಿಯೊಂದು ನಡೆಯೂ ಎಣಿಕೆಯಾಗುತ್ತದೆ" - ಮಂಡಳಿಯಲ್ಲಿ ಮತ್ತು ಜೀವನದಲ್ಲಿ, ಪ್ರತಿಯೊಂದು ನಿರ್ಧಾರವು ನಮ್ಮ ಪ್ರಯಾಣವನ್ನು ರೂಪಿಸುತ್ತದೆ ಎಂಬುದನ್ನು ನಮಗೆ ನೆನಪಿಸುತ್ತದೆ.
* ಪ್ಯಾರಿಸ್‌ನಲ್ಲಿ 1924ರಂದು ಸ್ಥಾಪಿತವಾದ FIDE ಅನ್ನು ಸ್ಮರಿಸಿ ಈ ದಿನವನ್ನು ಆರಿಸಲಾಗಿದೆ. ಯುನೆಸ್ಕೋ 1966ರಲ್ಲಿ ಇದನ್ನು ಮಾನ್ಯತೆ ನೀಡಿತು. ಚದುರಂಗದ ಮೂಲ ರೂಪವಾದ "ಚತುರಂಗ" ಭಾರತದಲ್ಲಿ ಹುಟ್ಟಿ, ಅನೇಕ ರಾಷ್ಟ್ರಗಳಲ್ಲಿ ಹರಡಿಕೊಂಡು ವಿಶ್ವಪ್ರಮಾಣದ ಬುದ್ಧಿವಂತಿಕೆ ಆಟವಾಗಿ ಪರಿಗಣಿಸಲಾಗಿದೆ.
* ವಿಶ್ವ ಚದುರಂಗ ದಿನವು ತರ್ಕಬದ್ಧ ಚಿಂತನ, ಯೋಜಿತ ನಡೆ ಹಾಗೂ ಜಾಗತಿಕ ಸಹಭಾವವನ್ನು ಪ್ರೋತ್ಸಾಹಿಸುವ ಗುರಿಯಿದೆ. "ಮಾನಸದ ವ್ಯಾಯಾಮಾಲಯ" ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿರುವ ಈ ಆಟ ಮಾನಸಿಕ ಬೆಳವಣಿಗೆಗೆ ಸಹಾಯಕವಾಗಿದೆ.
* FIDE ಸಂಸ್ಥೆಯ ಗೌರವ, ಶಿಕ್ಷಣಾತ್ಮಕ ಪ್ರೋತ್ಸಾಹ, ಆತ್ಮವಿಕಾಸ, ಬೌದ್ಧಿಕ ಪ್ರಯೋಜನಗಳ ಅರಿವು ಮತ್ತು ಜಾಗತಿಕ ಏಕತೆಗೆ ಉತ್ತೇಜನ ನೀಡುವುದು ಈ ದಿನದ ಪ್ರಮುಖ ಉದ್ದೇಶಗಳಾಗಿವೆ.

## 20 July 2025

### ಕರ್ನಾಟಕ ಹೈಕೋರ್ಟ್ ಮು.ನ್ಯಾಯಮೂರ್ತಿಯಾಗಿ ವಿಭು ಬಖ್ರು ಪ್ರಮಾಣ ವಚನ ಸ್ವೀಕಾರ



* ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಹಿರಿಯ ನ್ಯಾಯಮೂರ್ತಿ ವಿಭು ಬಖ್ರು ಅವರು ಜುಲೈ 19, ಶನಿವಾರ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಪ್ರಮಾಣವಚನ ಬೋಧಿಸಿದರು.
* ದಿಲ್ಲಿ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿಯಾಗಿದ್ದ ಬಖ್ರು ಅವರನ್ನು, ಸಜೆ ಆಗಿದ್ದ ನ್ಯಾ. ಎನ್.ವಿ. ಅಂಜಾರಿಯಾ ಅವರನ್ನು ಸುಪ್ರೀಂ ಕೋರ್ಟ್‌ಗೆ ಬಡ್ತಿ ನೀಡಿದ ಹಿನ್ನೆಲೆಯಲ್ಲಿ, ಸುಪ್ರೀಂ ಕೋರ್ಟ್ ಕೊಲಿಜಿಯಂ ಕಾನೂನು ಮತ್ತು ನ್ಯಾಯ ಇಲಾಖೆಗೆ ಅವರ ನೇಮಕಕ್ಕೆ ಶಿಫಾರಸು ಮಾಡಿತ್ತು. ಸರ್ಕಾರ ಜುಲೈ 14ರಂದು ನೇಮಕಾತಿ ಆದೇಶ ಹೊರಡಿಸಿತು.
* ವಿಭು ಬಖ್ರು 1966ರಲ್ಲಿ ಮಹಾರಾಷ್ಟ್ರದ ನಾಗ್ಪುರದಲ್ಲಿ ಜನಿಸಿದರು. ಅವರು ದಿಲ್ಲಿಯಲ್ಲಿ ಶಿಕ್ಷಣ ಪಡೆದು, 1989ರಲ್ಲಿ ಲೆಕ್ಕ ಪರಿಶೋಧಕ (CA) ಮತ್ತು 1
90ರಲ್ಲಿ ಕಾನೂನು ಪದವಿ ಪಡೆದರು.
* 2011ರಲ್ಲಿ ಹಿರಿಯ ವಕೀಲರಾಗಿ ಮತ್ತು 2013ರಲ್ಲಿ ದಿಲ್ಲಿ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 2015ರಲ್ಲಿ ಅವರು ಕಾಯಂ ನ್ಯಾಯಮೂರ್ತಿಯಾದರು.
* 2024ರ ಡಿಸೆಂಬರ್ 5ರಿಂದ 2025ರ ಜನವರಿ 21ರವರೆಗೆ ಅವರು ದಿಲ್ಲಿ ಹೈಕೋರ್ಟ್‌ನಲ್ಲಿ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದರು. ಬಳಿಕ ಅವರನ್ನು ಕರ್ನಾಟಕ ಹೈಕೋರ್ಟ್‌ಗೆ ವರ್ಗಾಯಿಸಲಾಯಿತು.
* ಪ್ರಮಾಣವಚನ ಸಮಾರಂಭದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರು ಮತ್ತು ನ್ಯಾಯಾಂಗದ ಪ್ರಮುಖರು ಉಪಸ್ಥಿತರಿದ್ದರು.

### SBI : 2025ನೇ ಸಾಲಿನ 'ಜಗತ್ತಿನ ಅತ್ಯುತ್ತಮ ಗ್ರಾಹಕ ಬ್ಯಾಂಕ್'




* ಅಮೆರಿಕದ 'ಗ್ಲೋಬಲ್ ಫೈನಾನ್ಸ್' ನಿಯತಕಾಲಿಕ ನೀಡುವ 2025ನೇ ಸಾಲಿನ 'ಜಗತ್ತಿನ ಅತ್ಯುತ್ತಮ ಗ್ರಾಹಕ ಬ್ಯಾಂಕ್' ಪ್ರಶಸ್ತಿಗೆ, ಸರ್ಕಾರಿ ಸ್ವಾಮ್ಯದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಭಾಜನವಾಗಿದೆ.
* ಇದು ಪ್ರಕಟಣೆಯ ಸಂಶೋಧನೆ ಮತ್ತು ವಿಶ್ಲೇಷಣೆಯನ್ನು ಆಧರಿಸಿದೆ, ಪ್ರಪಂಚದಾದ್ಯಂತದ ಕಾರ್ಪೊರೇಟ್ ಹಣಕಾಸು ಕಾರ್ಯನಿರ್ವಾಹಕರು, ವಿಶ್ಲೇಷಕರು ಮತ್ತು ಬ್ಯಾಂಕರ್‌ಗಳ ಒಳನೋಟಗಳಿಂದ ಇದು ಪುಷ್ಟೀಕರಿಸಲ್ಪಟ್ಟಿದೆ.
* ಗ್ಲೋಬಲ್ ಫೈನಾನ್ಸ್ ನಿಯತಕಾಲಿಕೆಯು ಅಕ್ಟೋಬರ್ 18, 2025 ರಂದು ವಾಷಿಂಗ್ಟನ್, ಡಿಸಿಯಲ್ಲಿ ನಡೆಯಲಿರುವ ಐಎಂಎಫ್/ವಿಶ್ವಬ್ಯಾಂಕ್ ವಾರ್ಷಿಕ ಸಭೆಗಳ ಸಂದರ್ಭದಲ್ಲಿ ವಿಶ್ವದ ಅತ್ಯುತ್ತಮ ಬ್ಯಾಂಕ್ ಎಂಬ ವಾರ್ಷಿಕ ಕಾರ್ಯಕ್ರಮದಲ್ಲಿ ಎಸ್‌ಬಿಐ ಅಧ್ಯಕ್ಷ ಸಿಎಸ್ ಸೆಟ್ಟಿ ಅವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಲಿದೆ.
* ಈ ಮೌಲ್ಯಮಾಪನವು ಪ್ರಕಟಣೆಯ ಸಮಗ್ರ ಸಂಶೋಧನೆ ಮತ್ತು ವಿಶ್ಲೇಷಣೆಯನ್ನು ಆಧರಿಸಿದೆ, ಇದು ಪ್ರಪಂಚದಾದ್ಯಂತದ ಕಾರ್ಪೊರೇಟ್ ಹಣಕಾಸು ಕಾರ್ಯನಿರ್ವಾಹಕರು, ವಿಶ್ಲೇಷಕರು ಮತ್ತು ಬ್ಯಾಂಕರ್‌ಗಳ ಒಳನೋಟಗಳಿಂದ ಸಮೃದ್ಧವಾಗಿದೆ.
* 'ಗ್ರಾಹಕರ ಅನುಭವವು ಬ್ಯಾಂಕ್‌ನ ಬೆಳವಣಿಗೆಯ ಕಾರ್ಯತಂತ್ರದ ಕೇಂದ್ರ ಬಿಂದುವಾಗಿದೆ. ಈ ಜಾಗತಿಕ ಮನ್ನಣೆಯು ತನ್ನ ಸುಮಾರು 52 ಕೋಟಿ ಗ್ರಾಹಕರಿಗೆ ಸಲ್ಲುತ್ತದೆ' ಎಂದು ಬ್ಯಾಂಕ್‌ನ ಅಧ್ಯಕ್ಷ ಸಿ.ಎಸ್.ಸೆಟ್ಟಿ ಹೇಳಿದ್ದಾರೆ.
* ವಿಶ್ವದ ಅತ್ಯುತ್ತಮ ಬ್ಯಾಂಕ್ ಪ್ರಶಸ್ತಿಗಳು 150 ಕ್ಕೂ ಹೆಚ್ಚು ದೇಶಗಳು ಮತ್ತು 11 ಜಾಗತಿಕ ಪ್ರದೇಶಗಳಲ್ಲಿನ ಸಂಸ್ಥೆಗಳನ್ನು ಮೌಲ್ಯಮಾಪನ ಮಾಡುತ್ತವೆ, ಇದು ವಿಶ್ವಾದ್ಯಂತ ಹಣಕಾಸು ವೃತ್ತಿಪರರ ಸಂಪಾದಕೀಯ ವಿಶ್ಲೇಷಣೆ ಮತ್ತು ಒಳನೋಟಗಳ ಸಂಯೋಜನೆಯ ಆಧಾರದ ಮೇಲೆ ನಡೆಸಲ್ಪಡುತ್ತದೆ.

### ಭಾರತ-ಅಮೆರಿಕ ವ್ಯಾಪಾರ ಒಪ್ಪಂದ: 5ನೇ ಸುತ್ತಿನ ಮಾತುಕತೆ ಮುಕ್ತಾಯ

KPSC Vaani



* ಭಾರತ ಮತ್ತು ಅಮೆರಿಕದ ನಡುವಿನ ಪ್ರಸ್ತಾವಿತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ (BTA) ಐದನೇ ಸುತ್ತಿನ ಮಾತುಕತೆಗಳು ಜುಲೈ 17 ರಂದು ವಾಷಿಂಗ್ಟನ್‌ನಲ್ಲಿ ಮುಕ್ತಾಯಗೊಂಡಿವೆ.

* ಜುಲೈ 14 ರಿಂದ ನಡೆದ ಈ ಚರ್ಚೆಗಳಿಗೆ ಭಾರತದ ವಾಣಿಜ್ಯ ಇಲಾಖೆಯ ವಿಶೇಷ ಕಾರ್ಯದರ್ಶಿ ಅಗರ್ವಾಲ್ ನೇತೃತ್ವ ವಹಿಸಿದ್ದರು.

* ಅಗಸ್ಟ 1ರೊಳಗೆ ಮಧ್ಯಂತರ ಒಪ್ಪಂದಕ್ಕೆ ಸಮ್ಮತಿ ತಲುಪುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ, ಈ ಮಾತುಕತೆಗಳು ಮಹತ್ವ ಪಡೆದಿವೆ. ಕೃಷಿ ಮತ್ತು ಡೈರಿ ಉತ್ಪನ್ನಗಳ ಸುಂಕ ರಿಯಾಯಿತಿಗಳ ಕುರಿತು ಅಮೆರಿಕ ಒತ್ತಾಯಿಸಿದ್ದರೂ, ಭಾರತ ತನ್ನ ನಿಲುವಿನಲ್ಲಿ ಕಠಿಣವಾಗಿದೆ.

* ಕೃಷಿಗೆ ಸಂಬಂಧಿಸಿದ ವಿಷಯಗಳನ್ನು ಒಪ್ಪಂದದಲ್ಲಿ ಸೇರಿಸದಂತೆ ಕೆಲವು ರೈತ ಸಂಘಟನೆಗಳು ಒತ್ತಾಯಿಸುತ್ತಿವೆ.

* ಭಾರತವು ಉಕ್ಕು, ಅಲ್ಯೂಮಿನಿಯಂ ಮತ್ತು ಆಟೋ ವಲಯಗಳ ಮೇಲಿನ ಹೆಚ್ಚುವರಿ ಸುಂಕಗಳನ್ನು ತಗ್ಗಿಸಲು ಚಿಂತನೆ ನಡೆಸುತ್ತಿದೆ. ಜತೆಗೆ WTO ಮಾನದಂಡಗಳ ಅಡಿಯಲ್ಲಿ ಪ್ರತೀಕಾರದ ಹಕ್ಕನ್ನು ಕಾಯ್ದಿರಿಸಿದೆ.

* ಭಾರತವು ಜವಳಿ, ಆಭರಣ, ಉಡುಪು, ಕೃಷಿ ಉತ್ಪನ್ನಗಳಂತಹ ಹಲವಾರು ವಸ್ತುಗಳ ಸುಂಕದಲ್ಲಿ ರಿಯಾಯಿತಿ ಬಯಸುತ್ತಿದೆ.


ಭಾರತ-EFTA (ಯುರೋಪಿಯನ್ ಮುಕ್ತ ವ್ಯಾಪಾರ ಸಂಘ) ಒಪ್ಪಂದ

* ಭಾರತ ಮತ್ತು EFTA (ಸ್ವಿಟ್ಜರ್ಲ್ಯಾಂಡ್, ನಾರ್ವೆ, ಐಸ್ಲ್ಯಾಂಡ್, ಲಿಚ್ಟೆನ್‌ಸ್ಟೈನ್) ನಡುವೆ ವ್ಯಾಪಾರ ಮತ್ತು ಆರ್ಥಿಕ ಒಪ್ಪಂದ (TEPA) ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ. ಇದರಿಂದ ಭಾರತದಲ್ಲಿ ಸುಮಾರು 500 ಬಿಲಿಯನ್ ಡಾಲರ್ ಮೌಲ್ಯದ ಹೂಡಿಕೆ ಹೆಚ್ಚಾಗಲಿದೆ ಎಂದು ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ.

* ಈ ಒಪ್ಪಂದದಿಂದ ಮುಂದಿನ 15 ವರ್ಷಗಳಲ್ಲಿ 100 ಬಿಲಿಯನ್ ಡಾಲರ್ ಹೂಡಿಕೆ ಮತ್ತು 1 ಮಿಲಿಯನ್ ನೇರ ಉದ್ಯೋಗಗಳ ಸೃಷ್ಟಿಯ ನಿರೀಕ್ಷೆ ಇದೆ.

* ಭಾರತಕ್ಕೆ ಜಾಗತಿಕ ಮತ್ತು ಯುರೋಪಿಯನ್ ಮಾರುಕಟ್ಟೆಗೆ ಪ್ರವೇಶ ದೊರೆಯುವ ಜೊತೆಗೆ 'ಮೇಕ್ ಇನ್ ಇಂಡಿಯಾ' ಗೆ ಉತ್ತೇಜನ ದೊರೆಯಲಿದೆ.

## ಟಿಬೆಟ್‌ನಲ್ಲಿ ಬ್ರಹ್ಮಪುತ್ರ ನದಿಗೆ ಚೀನಾ ಮಹಾ ಅಣೆಕಟ್ಟು ನಿರ್ಮಾಣ ಆರಂಭ



* ಚೀನಾ ಟಿಬೆಟ್‌ನಲ್ಲಿ, ಭಾರತದ ಗಡಿ ಸಮೀಪ, ಬ್ರಹ್ಮಪುತ್ರ ನದಿಗೆ ಅತಿ ದೊಡ್ಡ ಅಣೆಕಟ್ಟು ನಿರ್ಮಾಣಕ್ಕೆ ಚಾಲನೆ ನೀಡಿದೆ. ಟಿಬೆಟ್‌ನಲ್ಲಿ ಈ ನದಿಗೆ ಯಾರ್ಲಂಗ್ ಸಂಗ್ಪೊ ಎಂದು ಕರೆಯಲಾಗುತ್ತದೆ.

* ಚೀನಾದ ಪ್ರಧಾನಿ ಲೀ ಚಿಯಾಂಗ್ ಅವರು ದಕ್ಷಿಣ ಟಿಬೆಟ್‌ನ ನಿಯಾಂಚಿಯಲ್ಲಿ ಈ ಜಲವಿದ್ಯುತ್ ಯೋಜನೆಯನ್ನು ಉದ್ಘಾಟಿಸಿದರು. ಈ ಯೋಜನೆಗೆ ಡಿಸೆಂಬರ್ 2024ರಲ್ಲಿ ಅನುಮೋದನೆ ನೀಡಲಾಗಿತ್ತು.

* ಐದು ಜಲವಿದ್ಯುತ್ ಸ್ಥಾವರಗಳನ್ನು ನಿರ್ಮಿಸಲು $167.1 ಬಿಲಿಯನ್ (₹14.39 ಲಕ್ಷ ಕೋಟಿ) ಹೂಡಿಕೆ ಮಾಡಲಾಗುತ್ತಿದೆ. ಈ ಯೋಜನೆಯು ಶೂನ್ಯ ಇಂಗಾಲ ಉತ್ಸರ್ಜನೆಯ ಗುರಿಯೊಂದಿಗೇ ಟಿಬೆಟ್‌ನ ಆರ್ಥಿಕ ಬೆಳವಣಿಗೆಯ ಭಾಗವಾಗಿದೆ.

* ಈ ಅಣೆಕಟ್ಟು ಭಾರೀ ಪ್ರಮಾಣದ ನೀರನ್ನು ನದಿಯಿಂದ ಹರಿಸಬಹುದಾದ ಕಾರಣ, ಭಾರತ ಹಾಗೂ ಬಾಂಗ್ಲಾದೇಶದಲ್ಲಿ ಪ್ರವಾಹದ ಭೀತಿಯ ಬಗ್ಗೆ ಆತಂಕ ವ್ಯಕ್ತವಾಗಿದೆ. ಆದರೆ, ಚೀನಾ ಯಾವುದೇ ಅಪಾಯವಿಲ್ಲವೆಂದು ಈ ಭೀತಿಗಳನ್ನು ತಳ್ಳಿ ಹಾಕಿದೆ.

## 100 ಮೀಟರ್ ಈಜಿನಲ್ಲೂ ದಾಖಲೆ ಬರೆದ ಕರ್ನಾಟಕದ ಶ್ರೀಹರಿ ನಟರಾಜ್



* ಜರ್ಮನಿಯಲ್ಲಿ ನಡೆಯುತ್ತಿರುವ ವಿಶ್ವ ಯೂನಿವರ್ಸಿಟಿ ಗೇಮ್ಸ್ ನಲ್ಲಿ ಎರಡು ಬಾರಿ ಒಲಿಂಪಿಯನ್ ಆಗಿರುವ ಶ್ರೀಹರಿ ನಟರಾಜ್ ಅವರು ಪುರುಷರ 200 ಮೀ. ಫ್ರೀಸ್ಟೈಲ್ ಈಜಿನಲ್ಲಿ 1ನಿಮಿಷ 48.22 ಸೆಕೆಂಡುಗಳಲ್ಲಿ ಗುರಿ ತಲುಪಿದರು.

* ಈ ಮೂಲಕ ಭಾರತದ ಶ್ರೇಷ್ಠ ಕಾಲಮಾನ ದಾಖಲಿಸಿ ಸೆಮಿಫೈನಲ್ ಗೆ ಅರ್ಹತೆ ಪಡೆದರು. ಈ ಸಮಯವು ಅವರ ಹಿಂದಿನ ದಾಖಲೆಯನ್ನೇ ಮೀರಿದೆ.

* ಕರ್ನಾಟಕದ ಇನ್ನೊಬ್ಬ ಈಜುಗಾರ ಅನೀಶ್ ಗೌಡ ತಮ್ಮ ಹೀಟ್ಸ್ ನಲ್ಲಿ 1:52.42 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಆದರೆ ಐದನೇ ಸ್ಥಾನ ಪಡೆದರೂ ಅವರು ಸೆಮಿಫೈನಲ್‌ಗೆ ಅರ್ಹರಾಗಲಿಲ್ಲ.

* ಭಾರತದ ಮಹಿಳಾ ಟೇಬಲ್ ಟೆನಿಸ್ ತಂಡವು ನೆದರ್ಲೆಂಡ್ಸ್ ವಿರುದ್ಧ 3–1ರಿಂದ ಗೆದ್ದು ಪ್ರಿ ಕ್ವಾರ್ಟರ್‌ಫೈನಲ್ ಹಂತ ಪ್ರವೇಶಿಸಿತು. ಪುರುಷರ ತಂಡವು ಕೊಲಂಬಿಯಾ ವಿರುದ್ಧ 3–2ರಿಂದ ಗೆಲುವು ಸಾಧಿಸಿ ಮುಂದಿನ ಹಂತದಲ್ಲಿ ಚೀನಾ ತಂಡವನ್ನು ಎದುರಿಸಲು ಸಿದ್ಧವಾಗಿದೆ.

* ಭಾರತದ ಬ್ಯಾಡ್ಮಿಂಟನ್ ಮಿಶ್ರ ತಂಡವು ಹಾಂಗ್‌ಕಾಂಗ್ ವಿರುದ್ಧ 2–3ರಿಂದ ಸೋತು ನಿರಾಶೆ ಮೂಡಿಸಿತು. ಮೊದಲ ಪಂದ್ಯದಲ್ಲಿ ಮಕಾವು ತಂಡದ ವಿರುದ್ಧ 5–0ರಿಂದ ಜಯ ಸಾಧಿಸಿದ್ದರು.

* ಮಹಿಳೆಯರ ಸಿಂಗಲ್ಸ್ ಟೆನಿಸ್‌ನಲ್ಲಿ ಅಂಜಲಿ ರಾಠಿ ಉಗಾಂಡಾದ ಕ್ರಿಸ್ಟಿಯಾನಾ ವಿರುದ್ಧ 6-0, 6-0ರಿಂದ ಗೆಲುವು ಗಳಿಸಿ 32ರ ಘಟ್ಟ ಪ್ರವೇಶಿಸಿದರು. ವೈಷ್ಣವಿ ಅಡ್ಕರ್ ನೆದರ್ಲೆಂಡ್ಸ್‌ನ ಜೋಲಿಯನ್ ಮಾರಿಯಾವನ್ನು 6-1, 6-0ರಿಂದ ಸೋಲಿಸಿ ಮುಂದುವರಿದರು.

KPSCVaani

## ಕಸಾಪ ದತ್ತಿನಿಧಿ ಪ್ರಶಸ್ತಿಗೆ "ಡಾ.ಸಿ.ನಾಗಣ್ಣ" ಆಯ್ಕೆ



* ಕನ್ನಡ ಸಾಹಿತ್ಯ ಪರಿಷತ್ತು ನೀಡುವ 'ಡಾ. ಮಳಲಿ ವಸಂತ ಕುಮಾರ್ ಪ್ರಶಸ್ತಿ'ಗೆ ವಿಮರ್ಶಕ ಹಾಗೂ ಮಾಜಿ ಪ್ರಾಧ್ಯಾಪಕ ಡಾ. ಸಿ. ನಾಗಣ್ಣ ಅವರನ್ನು ಆಯ್ಕೆ ಮಾಡಲಾಗಿದೆ.
* ಬರಹಗಾರ ಮಳಲಿ ವಸಂತ ಕುಮಾರ್ ಅವರ ನೆನಪಿನಲ್ಲಿ ಕುಟುಂಬಸ್ಥರು ಸ್ಥಾಪಿಸಿದ ದತ್ತಿ ನಿಧಿಯಿಂದ ಈ ಪ್ರಶಸ್ತಿ ನೀಡಲಾಗುತ್ತದೆ. ಅವರು ಕನ್ನಡ ಪರ ಹೋರಾಟಗಾರರಾಗಿದ್ದು, 46 ಕೃತಿಗಳನ್ನು ರಚಿಸಿದ್ದರು.
* ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಈ ಪ್ರಶಸ್ತಿ ಕನ್ನಡ ಸೇವೆಗೆ ಮಹತ್ವದ ಕೊಡುಗೆ ನೀಡಿದವರು ಮತ್ತು ಹೋರಾಟಗಾರರಿಗೆ ನೀಡಲಾಗುತ್ತದೆ.
* ನಾಗಣ್ಣ ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಭಾಷಾಂತರ ಕ್ಷೇತ್ರದಲ್ಲೂ ಅವರು ಅಪೂರ್ವ ಕೊಡುಗೆ ನೀಡಿದ್ದಾರೆ ಎಂದು ಕಸಾಪ ಮಾಧ್ಯಮ ವಿಭಾಗದ ಎನ್.ಎಸ್. ಶ್ರೀಧರ ಮೂರ್ತಿ ತಿಳಿಸಿದ್ದಾರೆ.

## ಜಪಾನ್ ಓಪನ್‌ದಲ್ಲಿ ಶಿ ಯುಕಿ, ಆನ್ ಸೆ-ಯಂಗ್ ಗೆ ವಿಜೇತ ಪಟ್ಟ



* ಟೋಕಿಯೊದಲ್ಲಿ ನಡೆದ 950,000 ಡಾಲರ್ ಬಹುಮಾನ ಮೊತ್ತದ ಜಪಾನ್ ಓಪನ್‌ನ್ನು ಚೀನಾದ ಶಿ ಯುಕಿ ಮತ್ತು ದಕ್ಷಿಣ ಕೊರಿಯಾದ ಆನ್ ಸೆ-ಯಂಗ್ ತಮ್ಮ ತಮ್ಮ ವಿಭಾಗಗಳಲ್ಲಿ ಗೆದ್ದಿದ್ದಾರೆ.
* ಚೀನಾದ ಶಿ ಯುಕಿ, ಫ್ರಾನ್ಸ್‌ನ ಅಲೆಕ್ಸ್ ಲ್ಯಾನಿಯರ್ ಅವರನ್ನು 21-17, 21-15 ಅಂಕಗಳಿಂದ ಸೋಲಿಸಿ ಪ್ರಶಸ್ತಿ ಗೆದ್ದರು. ಈ ವರ್ಷದ ಆರಂಭದಲ್ಲಿ ಫಾರ್ಮ್ ಸಮಸ್ಯೆ ಅನುಭವಿಸಿದ್ದ ಶಿ, ಸೆಮಿಫೈನಲ್ ನಲ್ಲಿ ಕ್ರಿಸ್ಟೊ ಪೊಪೊವ್ ವಿರುದ್ಧ 28-26 ಅಂತರದಲ್ಲಿ ಗೆಲುವು ಸಾಧಿಸಿದ್ದರು.
* ಒಲಿಂಪಿಕ್ ಚಾಂಪಿಯನ್ ಆನ್ ಸೆ-ಯಂಗ್, ಚೀನಾದ ವಾಂಗ್ ಝಿಯಿಯನ್ನು ಕೇವಲ 42 ನಿಮಿಷಗಳಲ್ಲಿ 21-12, 21-10 ಅಂಕಗಳಿಂದ ಸೋಲಿಸಿ ವರ್ಷದ ಆರನೇ ಬಿಡಬ್ಲ್ಯೂಎಫ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.
* ಚೀನಾದ ತಂಡವು ಎರಡು ಡಬಲ್ಸ್ ವಿಭಾಗಗಳಲ್ಲೂ ಗೆಲುವು ಸಾಧಿಸಿ ಒಟ್ಟಾರೆ ಅತ್ಯಂತ ಯಶಸ್ವಿ ತಂಡವಾಗಿ ಹೊರಹೊಮ್ಮಿತು. ಪುರುಷರ ಡಬಲ್ಸ್‌ನಲ್ಲಿ ದ. ಕೊರಿಯಾದ ಕಿಮ್ ವೊನ್-ಹೋ ಮತ್ತು ಸಿಯೊ ಸೆಯುಂಗ್-ಜೇ ಜೋಡಿ, ಮಲೇಷ್ಯಾದ ಜೋಡಿಯನ್ನು 21-16, 21-17 ಅಂಕಗಳಿಂದ ಸೋಲಿಸಿ ಚಿನ್ನ ಗೆದ್ದರು.
* ಚೀನಾ ಮತ್ತು ದಕ್ಷಿಣ ಕೊರಿಯಾ ಜತೆಗಿದ್ದು ಜಪಾನ್ ಓಪನ್‌ನಲ್ಲಿ ಪ್ರಾಬಲ್ಯ ತೋರಿದವು.

## ಮೊದಲ ತ್ರೈಮಾಸಿಕದಲ್ಲಿ ಭಾರತದ ಎಲೆಕ್ಟ್ರಾನಿಕ್ ರಫ್ತು ಶೇ. 47 ರಷ್ಟು ಏರಿಕೆ




* 2025-26ರ ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ (Q1 FY26) ಭಾರತದ ಎಲೆಕ್ಟ್ರಾನಿಕ್ಸ್ ರಫ್ತು ಶೇಕಡಾ 47 ರಷ್ಟು ಬಲವಾದ ಬೆಳವಣಿಗೆಯನ್ನು ಕಂಡಿದ್ದು, 1.06 ಲಕ್ಷ ಕೋಟಿ ತಲುಪಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.
* ಅಮೆರಿಕ, ಯುಎಇ ಮತ್ತು ಚೀನಾ ಭಾರತೀಯ ಎಲೆಕ್ಟ್ರಾನಿಕ್ಸ್‌ಗಾಗಿ ಪ್ರಮುಖ ರಫ್ತು ತಾಣಗಳಾಗಿವೆ. ಎಲೆಕ್ಟ್ರಾನಿಕ್ಸ್ ರಫ್ತಿನಲ್ಲಿ ಅಮೆರಿಕದ ಪಾಲು ಶೇ.60.17 ಆಗಿದ್ದು, ಯುಎಇ (ಶೇ.8.09) ಮತ್ತು ಚೀನಾ (ಶೇ.3.88) ನಂತರ ಬರುತ್ತವೆ. ನೆದರ್‌ಲ್ಯಾಂಡ್ಸ್ (ಶೇ.2.68) ಮತ್ತು ಜರ್ಮನಿ (ಶೇ.2.09) ಇತರ ಪ್ರಮುಖ ಮಾರುಕಟ್ಟೆಗಳಾಗಿವೆ.
* ಇದು ಭಾರತವು ವಿಶ್ವದ ಎಲೆಕ್ಟ್ರಾನಿಕ್ ಪೂರೈಕೆ ಸರಪಳಿಯಲ್ಲಿ ಬೆಳೆದಿರುವುದನ್ನು ತೋರಿಸುತ್ತದೆ.
* ಸಿದ್ಧ ಉಡುಪುಗಳ (RMG) ರಫ್ತು: RMG ರಫ್ತಿನಲ್ಲಿ ಅಮೆರಿಕ ಶೇ.34.11 ರೊಂದಿಗೆ ಮುಂಚೂಣಿಯಲ್ಲಿದೆ, ನಂತರ ಯುಕೆ (ಶೇ.8.81), ಯುಎಇ (ಶೇ.7.85), ಜರ್ಮನಿ (ಶೇ.5.51) ಮತ್ತು ಸ್ಪೇನ್ (ಶೇ.5.29) ರಿವೆ.
- ಏಪ್ರಿಲ್-ಜೂನ್ ಅವಧಿಯಲ್ಲಿ RMG ರಫ್ತು $4.19 ಬಿಲಿಯನ್ ಆಗಿದ್ದು, ಕಳೆದ ವರ್ಷ ಇದೇ ಅವಧಿಯ $3.85 ಬಿಲಿಯನ್‌ನಿಂದ ಏರಿಕೆಯಾಗಿದೆ. 2024-25ರಲ್ಲಿ RMG ರಫ್ತು ಶೇ.10.03 ಹೆಚ್ಚಳಗೊಂಡು $15.99 ಬಿಲಿಯನ್ ತಲುಪಿದೆ.
* ಸಮುದ್ರಾಹಾರ ರಫ್ತು: 2024-25ರ ಏಪ್ರಿಲ್-ಜೂನ್ ಅವಧಿಯಲ್ಲಿ ಸಮುದ್ರಾಹಾರ ರಫ್ತು ಶೇ.19.45 ಏರಿಕೆಯಾಗಿದ್ದು, $1.95 ಬಿಲಿಯನ್ ಆಗಿದೆ. ವಾರ್ಷಿಕವಾಗಿ $7.41 ಬಿಲಿಯನ್ ದಾಖಲಿಸಿ ಶೇ.4.5 ರಷ್ಟು ಬೆಳವಣಿಗೆ ಕಂಡಿದೆ. ಅಮೆರಿಕ (ಶೇ.37.63), ಚೀನಾ (ಶೇ.17.26), ವಿಯೆಟ್ನಾಂ, ಜಪಾನ್ ಮತ್ತು ಬೆಲ್ಜಿಯಂ ಪ್ರಮುಖ ಮಾರುಕಟ್ಟೆಗಳಾಗಿವೆ. ಉತ್ತಮ ಲಾಜಿಸ್ಟಿಕ್ಸ್ ಮತ್ತು ಗುಣಮಟ್ಟದ ಮಾನದಂಡಗಳ ಪಾಲನೆಯೇ ಈ ಬೆಳವಣಿಗೆಗೆ ಕಾರಣವಾಗಿದೆ.
* ಭಾರತವು ವಿಶ್ವದ ಪ್ರಮುಖ ಉತ್ಪಾದನಾ ಹಾಗೂ ರಫ್ತು ಕೇಂದ್ರವಾಗಿ ಸ್ಥಿರಗತಿಗೊಳ್ಳುತ್ತಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

## 'INS ನಿಸ್ತಾರ್' ಸೇವೆಗೆ ಸೇರ್ಪಡೆ: ಆತ್ಮನಿರ್ಭರ ನೌಕಾ ಶಕ್ತಿಗೆ ಹೊಸ ಬಲ



* ಭಾರತೀಯ ನೌಕಾಪಡೆಯು ಜುಲೈ 19, 2025 ರಂದು ದೇಶದಲ್ಲಿ ಸ್ವದೇಶೀಯವಾಗಿ ವಿನ್ಯಾಸಗೊಳಿಸಿ ನಿರ್ಮಿಸಲಾದ ಮೊದಲ ಡೈವಿಂಗ್ ಬೆಂಬಲ ಹಡಗಿನಾದ ಐಎನ್‌ಎಸ್ ನಿಸ್ತಾರ್ ಅನ್ನು ವಿಶಾಖಪಟ್ಟಣದ ನೌಕಾ ಅಡಕುದಾಣದಲ್ಲಿ ಕಾರ್ಯಾನುಷ್ಠಾನಕ್ಕೆ ಒಳಪಡಿಸಿದೆ. ಇದು ಆತ್ಮನಿರ್ಭರ ಭಾರತ ದೃಷ್ಟಿಕೋನದಲ್ಲಿ ಮಹತ್ವಪೂರ್ಣ ಸಾಧನೆಯಾಗಿದೆ.
* ಈ ಹಡಗನ್ನು ಹಿಂದೂಸ್ತಾನ್ ಶಿಪ್‌ಯಾರ್ಡ್ ಲಿಮಿಟೆಡ್ ನಿರ್ಮಿಸಿದ್ದು, ಜುಲೈ 8ರಂದು ನೌಕಾಪಡೆಯಿಗೆ ಹಸ್ತಾಂತರಿಸಲಾಯಿತು. ಸಮುದ್ರದ ಆಳದ ಭಾಗಗಳಲ್ಲಿ ಡೈವಿಂಗ್ ಹಾಗೂ ರಕ್ಷಣಾ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಇದಕ್ಕಿದೆ. ಇದು ಡೀಪ್ ಸಬ್‌ಮರ್ಜೆನ್ಸ್ ರೆಸ್ಕ್ಯೂ ವೆಸಲ್ (DSRV) ಗೆ ತಾಯಿ ಹಡಗು ಆಗಿ ಕಾರ್ಯನಿರ್ವಹಿಸಬಲ್ಲದು.
* ಕಾರ್ಯಾರಂಭ ಸಮಾರಂಭದಲ್ಲಿ ರಕ್ಷಣಾ ರಾಜ್ಯ ಸಚಿವ ಸಂಜಯ್ ಸೇಠ್ ಮತ್ತು ನೌಕಾ ಮುಖ್ಯಸ್ಥ ಆಡ್ಮಿರಲ್ ತ್ರಿಪಾಠಿ ಉಪಸ್ಥಿತರಿದ್ದರು.
* ಹಡಗಿನ ಐತಿಹಾಸಿಕ ಹೆಸರನ್ನು ನೆನೆಸಿದ ಆಡ್ಮಿರಲ್, 1971ರ ಯುದ್ಧದ ವೇಳೆ "ಘಾಜಿ" ಸಬ್‌ಮರೀನ್ ಪತ್ತೆಗೆ ಹಳೆಯ ನಿಸ್ತಾರ್ ನೆರವಾದುದನ್ನು ಉಲ್ಲೇಖಿಸಿದರು.
* ಇದು 10,000 ಟನ್ ತೂಕ, 118 ಮೀ ಉದ್ದ ಹೊಂದಿದ್ದು, 300 ಮೀ ಆಳದವರೆಗೂ ಸ್ಯಾಚುರೇಷನ್ ಡೈವಿಂಗ್ ನಡೆಸಲು ಸಾಧ್ಯವಿದೆ. 75 ಮೀ ಆಳಕ್ಕೆ ಸೈಡ್ ಡೈವಿಂಗ್ ವೇದಿಕೆ ಮತ್ತು 1,000 ಮೀ ಆಳದಲ್ಲಿ ಕಾರ್ಯನಿರ್ವಹಿಸಬಲ್ಲ ROV ವ್ಯವಸ್ಥೆ ಇದರಲ್ಲಿ ಇದೆ.
* ಈ ಹಡಗಿನಲ್ಲಿ ಬಳಸಿರುವ ಭಾಗಗಳಲ್ಲಿ 75% ದೇಶೀಯವಾಗಿ ತಯಾರಿಸಲ್ಪಟ್ಟಿದ್ದು, ಮೇಕ್ ಇನ್ ಇಂಡಿಯಾ ಅಭಿಯಾನಕ್ಕೆ ಉತ್ತೇಜನ ನೀಡಿದೆ.
* "ನಿಸ್ತಾರ್" ಎಂಬ ಪದವು ಸಂಸ್ಕೃತದ "ಉದ್ಧಾರ" ಅಥವಾ "ರಕ್ಷಣೆ" ಎಂಬ ಅರ್ಥ ಹೊಂದಿದೆ.

## ಜುಲೈ 20 : ಅಂತರರಾಷ್ಟ್ರೀಯ ಚಂದ್ರ ದಿನ




* ಅಂತರರಾಷ್ಟ್ರೀಯ ಚಂದ್ರ ದಿನವನ್ನು ಪ್ರತಿ ವರ್ಷ ಜುಲೈ 20ರಂದು ಆಚರಿಸಲಾಗುತ್ತದೆ. 1969ರಲ್ಲಿ ಮಾನವರು ಮೊದಲ ಬಾರಿಗೆ ಚಂದ್ರನ ಮೇಲೆ ಕಾಲಿಟ್ಟ ಐತಿಹಾಸಿಕ ಕ್ಷಣದ (ಅಪೊಲೊ 11 ಮಿಷನ್) ಸ್ಮರಣಾರ್ಥ ಈ ದಿನವನ್ನು ವಿಶ್ವಸಂಸ್ಥೆ ಆಚರಿಸುತ್ತದೆ.
* **ಈ ವರ್ಷದ ಥೀಮ್ "ಒಂದು ಚಂದ್ರ, ಒಂದು ದೃಷ್ಟಿ, ಒಂದು ಭವಿಷ್ಯ".** ಇದು ಜಾಗತಿಕ ಏಕತೆ, ಸಹಕಾರ ಮತ್ತು ಭವಿಷ್ಯದ ಚಂದ್ರ ಪರಿಶೋಧನೆಗೆ ಸಂಬಂಧಿಸಿದ ಗುರಿಗಳನ್ನು ಪ್ರತಿಬಿಂಬಿಸುತ್ತದೆ.
* ಪ್ರಾಚೀನ ಕಾಲದಿಂದಲೇ ಮಾನವರು ಚಂದ್ರನ ರಹಸ್ಯಗಳಿಂದ ಆಕರ್ಷಿತರಾಗಿದ್ದಾರೆ. ಈ ದಿನವು ಮಾನವಚರಿತ್ರೆಯ ದೊಡ್ಡ ಸಾಧನೆಯಾಗಿ ಬಾಹ್ಯಾಕಾಶ ಪರಿಶೋಧನೆಯ ಭವಿಷ್ಯವನ್ನು ರೂಪಿಸುವ ಪ್ರೇರಣೆಯಾಗಿದೆ.
* ಈ ದಿನ ಯುವಜನರಲ್ಲಿಯೂ ಕುತೂಹಲ ಮತ್ತು ಜ್ಞಾನವನ್ನು ಬೆಳೆಸಲು, ಚಂದ್ರನ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಸಾರಲು ಉದ್ದೇಶಿತವಾಗಿದೆ.
* ಅಂತರರಾಷ್ಟ್ರೀಯ ಚಂದ್ರ ದಿನವು ಮಾನವತೆಯ ಒಂದು ಮಹತ್ತರ ಸಾಧನೆಯ ಸ್ಮರಣೆಯೇ ಅಲ್ಲ, ಭವಿಷ್ಯದ ಬಾಹ್ಯಾಕಾಶ ಕನಸುಗಳಿಗೆ ಬೇಕಾದ ಏಕತೆ ಮತ್ತು ಸಹಕಾರದ ಪ್ರತೀಕವೂ ಹೌದು.

## ಜುಲೈ 23 ರಿಂದ ಪ್ರಧಾನಿ ಮೋದಿ ಯುಕೆ ಮತ್ತು ಮಾಲ್ಡೀವ್ಸ್‌ಗೆ ಪ್ರವಾಸ



* ಪ್ರಧಾನಿ ನರೇಂದ್ರ ಮೋದಿ ಅವರು ಜುಲೈ 24ರಿಂದ ನಾಲ್ಕು ದಿನಗಳ ಯುನೈಟೆಡ್ ಕಿಂಗ್‌ಡಮ್ ಮತ್ತು ಮಾಲ್ಡೀವ್ಸ್ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಭೇಟಿಯ ಉದ್ದೇಶ ವ್ಯಾಪಾರ, ಹೂಡಿಕೆ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವುದಾಗಿದೆ.
* ಮೋದಿಯವರ ಪ್ರವಾಸದ ಮೊದಲ ಹಂತದಲ್ಲಿ ಅವರು ಲಂಡನ್ ಗೆ ತೆರಳಿ, ಬ್ರಿಟಿಷ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರೊಂದಿಗೆ ವ್ಯಾಪಕ ಮಾತುಕತೆ ನಡೆಸಲಿದ್ದಾರೆ. ಭಾರತ-ಯುಕೆ ನಡುವೆ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ (CSP) ಕುರಿತು ಚರ್ಚೆ ನಡೆಯಲಿದೆ.
* ತಂತ್ರಜ್ಞಾನ, ರಕ್ಷಣೆ, ಹವಾಮಾನ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳ ಸಹಕಾರಕ್ಕೂ ಗಮನ ನೀಡಲಾಗುತ್ತದೆ. ಅವರು ರಾಜ ಚಾರ್ಲ್ಸ್ ಮೂರನೇ ಅವರನ್ನು ಭೇಟಿ ಮಾಡುವ ನಿರೀಕ್ಷೆಯಿದೆ.
* ಜುಲೈ 25-26ರಂದು ಪ್ರಧಾನಿ ಮೋದಿ ಅವರು ಮಾಲ್ಡೀವ್ಸ್‌ಗೆ ಪ್ರವಾಸ ಕೈಗೊಳ್ಳಲಿದ್ದಾರೆ. ಜುಲೈ 26ರಂದು ಮಾಲ್ಡೀವ್ಸ್‌ನ 60ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸುವರು.
* ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರೊಂದಿಗೆ ಪರಸ್ಪರ ಹಿತಾಸಕ್ತಿಯ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ.
* ಈ ಪ್ರವಾಸಕ್ಕೆ ಇಬ್ಬರೂ ದೇಶಗಳಲ್ಲಿ ನಡೆದ ಕೂಟಗಳಾದರೂ ಕೂಡ, ಮೋದಿ ಅವರ ವಿದೇಶ ಪ್ರವಾಸಗಳಿಗೆ ಕಳೆದ ಎರಡು ವರ್ಷಗಳಲ್ಲಿ 258 ಕೋಟಿ ರೂಪಾಯಿ ಖರ್ಚಾಗಿದೆ.

# 22 July 2025

## ಜುಲೈ 22 : ವಿಶ್ವ ಮೆದುಳು ದಿನ



* ಪ್ರತಿವರ್ಷ ಜುಲೈ 22 ರಂದು ವಿಶ್ವ ಮೆದುಳಿನ ದಿನವನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಮೆದುಳಿಗೆ ಸಂಬಂಧಿಸಿದ ಎಲ್ಲಾ ಕಾಯಿಲೆಗಳ ಬಗ್ಗೆ ಜನರಿಗೆ ಅರಿವು ಮೂಡಿಸುವುದು ಉದ್ದೇಶದಿಂದ ಈ ವಿಶ್ವ ಮೆದುಳು ದಿನವನ್ನು ಆಚರಿಸಲಾಗುತ್ತದೆ.

* **ವಿಶ್ವ ಮೆದುಳಿನ ದಿನದ 2025 ರ ಥೀಮ್ "ಎಲ್ಲಾ ವಯಸ್ಸಿನವರಿಗೆ ಮಿದುಳಿನ ಆರೋಗ್ಯ" ಎಂಬುದು ಥೀಮ್ ಆಗಿದೆ.**

* ವಿಶ್ವ ಮೆದುಳು ದಿನವನ್ನು ಮೊದಲ ಬಾರಿಗೆ 2014 ರಲ್ಲಿ 'ವರ್ಲ್ಡ್ ಫೆಡರೇಶನ್ ಆಫ್ ನ್ಯೂರಾಲಜಿ' ಮತ್ತು 'ಇಂಟರ್ನ್ಯಾಷನಲ್ ಹೆಡ್‌ಏಕ್' ಸೊಸೈಟಿ ಆಚರಿಸಿತು.

* ವರ್ಲ್ಡ್ ಫೆಡರೇಶನ್ ಆಫ್ ನ್ಯೂರಾಲಜಿ (WFN) ಅನ್ನು ಜುಲೈ 22, 1957 ರಂದು ಬೆಲ್ಜಿಯಂನಲ್ಲಿ ಸ್ಥಾಪಿಸಲಾಯಿತು.

* ಈ ವಿಶ್ವ ಮೆದುಳಿನ ದಿನದ ಪ್ರಸ್ತಾಪವನ್ನು ಸೆಪ್ಟೆಂಬರ್ 22, 2013 ರಂದು ವರ್ಲ್ಡ್ ಕಾಂಗ್ರೆಸ್ ಆಫ್ ನ್ಯೂರಾಲಜಿ (WCN) ಕೌನ್ಸಿಲ್ ಆಫ್ ಡೆಲಿಗೇಟ್ಸ್ ಸಭೆಯಲ್ಲಿ ಪ್ರಸ್ತುತಪಡಿಸಲಾಯಿತು.

* ನರವೈಜ್ಞಾನಿಕ ಅಸ್ವಸ್ಥತೆಗಳ ಪ್ರಾಥಮಿಕ ತಡೆಗಟ್ಟುವಿಕೆ ಸಾಮಾಜಿಕ ಮತ್ತು ಆರ್ಥಿಕ ನಿರ್ಣಾಯಕಗಳನ್ನು ಪರಿಹರಿಸುವ ಮೂಲಕ ಆರೋಗ್ಯವನ್ನು ಹೆಚ್ಚಿಸುವ ಕ್ರಮಗಳನ್ನು ಸೇರಿಸುವ ಮೂಲಕ ಈ ರೋಗಗಳನ್ನು ತಡೆಗಟ್ಟುವ ಗುರಿಯನ್ನು ಹೊಂದಿದೆ.

* ವಿಶ್ವ ಮಿದುಳಿನ ದಿನದ ಐದು ಪ್ರಮುಖ ಗುರಿಗಳು ಈ ಕೆಳಗಿನಂತಿವೆ:

1. ಜಾಗೃತಿ: ಜಾಗತಿಕ ಮಟ್ಟದಲ್ಲಿ ಮೆದುಳಿನ ಆರೋಗ್ಯದ ಅರಿವು ಮಾನಸಿಕ, ಸಾಮಾಜಿಕ ಮತ್ತು ದೈಹಿಕ ಯೋಗಕ್ಷೇಮಕ್ಕೆ ಅತ್ಯಗತ್ಯ, ಇದರಿಂದಾಗಿ ಮೆದುಳಿನ ಕಾಯಿಲೆಗಳಿಗೆ ಸಂಬಂಧಿಸಿದ ಅಂಗವೈಕಲ್ಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.
2. ತಡೆಗಟ್ಟುವಿಕೆ: ಮಿದುಳಿನ ದೌರ್ಬಲ್ಯಗಳನ್ನು ತಡೆಗಟ್ಟಬಹುದು, ಚಿಕಿತ್ಸೆ ನೀಡಬಹುದು ಮತ್ತು ಪುನರ್ವಸತಿಗೊಳಿಸಬಹುದು.
3. ಪ್ರವೇಶ: ಮಿದುಳಿನ ಆರೋಗ್ಯವು ಗುಣಮಟ್ಟದ ಆರೈಕೆ, ಚಿಕಿತ್ಸೆ, ಪುನರ್ವಸತಿ ಮತ್ತು ಸಹಾಯಕ ತಂತ್ರಜ್ಞಾನಕ್ಕೆ ಪ್ರವೇಶವನ್ನು ಹೊಂದಿರಬೇಕು.
4. ಶಿಕ್ಷಣ: ಶಿಕ್ಷಣವು ಅರಿವಿನ ದುರ್ಬಲತೆ ಹೊಂದಿರುವ ವ್ಯಕ್ತಿಗಳಿಗೆ ಸಮಾನತೆಯನ್ನು ಬೆಳೆಸುತ್ತದೆ.
5. ವಕಾಲತ್ತು: ಅತ್ಯುತ್ತಮ ಮೆದುಳಿನ ಆರೋಗ್ಯವನ್ನು ಸಾಧಿಸಲು, ಜಾಗತಿಕ ಪ್ರಯತ್ನಗಳು ಅಗತ್ಯವಿದೆ.




## ಜುಲೈ 22 : ರಾಷ್ಟ್ರಧ್ವಜ ಅಂಗೀಕಾರ ದಿನ




* ಪ್ರತಿ ವರ್ಷ ಜುಲೈ 22 ರಂದು, ಭಾರತವು ರಾಷ್ಟ್ರೀಯ ಧ್ವಜ ದಿನವನ್ನು ಆಚರಿಸುತ್ತದೆ, ಇದನ್ನು ತಿರಂಗಾ ದತ್ತು ದಿನ ಎಂದೂ ಕರೆಯುತ್ತಾರೆ. ಈ ವರ್ಷ ಇದನ್ನು ಜುಲೈ 22, 2025 ರಂದು ಆಚರಿಸಲಾಗುತ್ತದೆ.

* ಜುಲೈ 22 ನಮ್ಮ ಸಂವಿಧಾನವು ಸ್ವರಾಜ್ಯ ಧ್ವಜ ತಿರಂಗಾವನ್ನು ಭಾರತದ ರಾಷ್ಟ್ರಧ್ವಜವನ್ನಾಗಿ ಅಂಗೀಕರಿಸಿದ ದಿನ. 1947ರ ಜುಲೈ 22ರಂದು ಭಾರತದ ಸಂವಿಧಾನ ಸಭೆಯಲ್ಲಿ ಪ್ರಸ್ತುತ ನಾವು ಬಳಕೆ ಮಾಡುತ್ತಿರುವ ತ್ರಿವರ್ಣ ಧ್ವಜವನ್ನು ನಮ್ಮ ದೇಶದ ಅಧಿಕೃತ ಧ್ವಜವನ್ನಾಗಿ ಅಂಗೀಕಾರ ಮಾಡಲಾಯಿತು.

* ಈ ವರ್ಷದ "ಒಂದು ರಾಷ್ಟ್ರ, ಒಂದು ಧ್ವಜ: ತ್ಯಾಗದಲ್ಲಿ ಒಗ್ಗೂಡಿ, ಶಾಂತಿಗೆ ಬದ್ಧ" ಎಂಬ ಧ್ಯೇಯವಾಕ್ಯವು ಸಮಾರಂಭಗಳು, ಶಾಲಾ ಚಟುವಟಿಕೆಗಳು ಮತ್ತು ಧ್ವಜದ ಗೌರವ ಮತ್ತು ಅದರ ಸಂಕೇತಗಳ ಮೇಲೆ ಕೇಂದ್ರೀಕರಿಸುವ ಸಾರ್ವಜನಿಕ ಸಂಪರ್ಕ ಕಾರ್ಯಕ್ರಮಗಳ ಮೂಲಕ ರಾಷ್ಟ್ರವನ್ನು ಒಂದುಗೂಡಿಸುತ್ತದೆ.

* ಕೇಸರಿ, ಬಿಳಿ, ಹಸಿರು ಬಣ್ಣಗಳ ನಡುವೆ ಚಕ್ರವನ್ನು ಒಳಗೊಂಡ ತ್ರಿವರ್ಣ ಧ್ವಜವನ್ನು ಪಿಂಗಳಿ ವೆಂಕಯ್ಯ ಅವರು ರಚಿಸಿದ್ದಾರೆ. 1923 ಏಪ್ರಿಲ್ 13ರಂದು ಈ ಧ್ವಜವು ಜಲಿಯನ್‌ವಾಲಾ ಬಾಗ್

ಹತ್ಯಾಕಾಂಡದ ಸ್ಮರಣೆಯ ಕಾರ್ಯಕ್ರಮದಲ್ಲಿ ಮೊದಲ ಬಾರಿಗೆ ಆರೋಹಣವಾಯಿತು.

* ಈ ಧ್ವಜಕ್ಕೆ ಸ್ವರಾಜ್ ಧ್ವಜ ಎಂದು ಕರೆಯಲಾಗುತ್ತಿದ್ದು, ಸ್ವರಾಜ್ಯಕ್ಕಾಗಿ ಭಾರತದ ಬೇಡಿಕೆಯ ಪ್ರತೀಕವಾಗಿಯೂ ಭಾರತೀಯ ನ್ಯಾಷನಲ್ ಕಾಂಗ್ರೆಸ್ ಈ ಧ್ವಜವನ್ನು ಬಳಕೆ ಮಾಡಿತು.

* 1931ರಲ್ಲಿ ತಿರಂಗಾ ವನ್ನು ಭಾರತದ ರಾಷ್ಟ್ರ ಧ್ವಜ ವನ್ನಾಗಿ ಅಂಗೀಕರಿಸಲಾಯಿತು. 1947 ಜುಲೈ 22 ರಂದು ಭಾರತದ ಸಂವಿಧಾನ ಅಧಿಕೃತವಾಗಿ ಇದನ್ನು ರಾಷ್ಟ್ರಧ್ವಜ ವನ್ನಾಗಿ ಅಂಗೀಕರಿಸಿತು. ವೆಂಕಯ್ಯ ಅವರು ಮೂರು ಬಣ್ಣಗಳ ನಡುವೆ ಚಿತ್ರಿಸಿದ್ದ ಚಕ್ರಕ್ಕೆ ಬದಲಾಗಿ ಅಶೋಕ ಚಕ್ರವನ್ನು ಬಳಕೆ ಮಾಡಲಾಯಿತು.

* ವೆಂಕಯ್ಯ ಅವರು ಆಂಧ್ರಪ್ರದೇಶದ ಮಚಲಿಪಟ್ಟಣಂ ಬಳಿಯ ಗ್ರಾಮದವರು. ಪಿಂಗಳಿ ವೆಂಕಯ್ಯನವರು ತಮ್ಮ 19ನೇ ವಯಸ್ಸಿನಲ್ಲಿ ಆಂಗ್ಲೋ-ಬೋರ್ ಯುದ್ಧದಲ್ಲಿಯೂ ಪಾಲ್ಗೊಂಡಿದ್ದರು.

* ತ್ರಿವರ್ಣ ಧ್ವಜದ ಅರ್ಥ

- ಕೇಸರಿ : ಧ್ವಜದ ಮೇಲ್ಭಾಗದಲ್ಲಿ ಕೇಸರಿ ಬಣ್ಣವಿದ್ದು, ಇದು ಧೈರ್ಯ, ತ್ಯಾಗ ಮತ್ತು ದೇಶದ ಹಿತಕ್ಕಾಗಿ ನಡೆಯುವ ಬಲಿದಾನಗಳನ್ನು ಪ್ರತಿನಿಧಿಸುತ್ತದೆ.
- ಬಿಳಿ : ಮಧ್ಯ ಭಾಗದಲ್ಲಿರುವ ಬಿಳಿ ಬಣ್ಣವು ಸತ್ಯ, ಶಾಂತಿ ಮತ್ತು ಶುದ್ಧತೆಯ ಪ್ರತೀಕವಾಗಿದೆ.
- ಹಸಿರು : ಕೆಳ ಭಾಗದಲ್ಲಿರುವ ಹಸಿರು ಬಣ್ಣ ಪ್ರಗತಿ, ಸಮೃದ್ಧಿಯ ಸಂಕೇತವಾಗಿದೆ.
- ಅಶೋಕ ಚಕ್ರ : ಈ ಚಕ್ರವು ಧರ್ಮವನ್ನು ಪ್ರತಿನಿಧಿಸಿದರೆ, ಇದರಲ್ಲಿರುವ 24 ಗೆರೆಗಳು ನಮ್ಮಲ್ಲಿರುವ ವಿವಿಧ ಆಚರಣೆ, ಸಂಸ್ಕೃತಿ, ವಿವಿಧತೆಯಂತಹ ಬಹುತ್ವದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ.

## ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷರಾಗಿ ಚಂದ್ರಶೇಖರ ನುಗ್ಗಲಿ ಆಯ್ಕೆ



* ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಘಟಕದ ಅಧ್ಯಕ್ಷರಾಗಿ ಆಲಮಟ್ಟಿಯ ಚಂದ್ರಶೇಖರ ನುಗ್ಗಲಿ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ನಡೆದ ರಾಜ್ಯ ಕಾರ್ಯಕಾರಣ ಸಭೆಯಲ್ಲಿ ಚಂದ್ರಶೇಖರ ಅವರು ಅವಿರೋಧವಾಗಿ ಆಯ್ಕೆಯಾದರು.

* ಚಂದ್ರಶೇಖರ ನುಗ್ಗಲಿ ಅವರು ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗುತ್ತಿದ್ದಂತೆ ಆಲಮಟ್ಟಿ, ವಂದಾಲ, ನಿಡಗುಂದಿಯಲ್ಲಿ ಪ್ರತ್ಯೇಕವಾಗಿ ವಿಜಯೋತ್ಸವದ ಕಹಳೆ ಮೊಳಗಿತು. ನಿಡಗುಂದಿ ತಾಲ್ಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರು, ಚಂದ್ರಶೇಖರ ನುಗ್ಗಲಿ ಅಭಿಮಾನಿಗಳು ನಿಡಗುಂದಿ ಪಟ್ಟಣದ ಮುದ್ದೇಬಿಹಾಳ ಕ್ರಾಸ್ , ರೇಣುಕಾ ಮೆಡಿಕಲ್ ಶಾಪ್, ಬಸ್ ನಿಲ್ದಾಣ ಸೇರಿದಂತೆ ನಾನಾ ಕಡೆ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ ಸಂಭ್ರಮಿಸಿದರು.

* ಸಂಘದ ತಾಲೂಕು ಅಧ್ಯಕ್ಷ ಮಹಾಂತೇಶ ಮುಕಾರ್ತಿಹಾಳ ಹಾಗೂ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಸಲೀಂ ದಡೆದ, ಆರ್.ಬಿ.ಗೌಡರ ಮತ್ತಿತರರು ಮಾತನಾಡಿ 1ಲಕ್ಷ 80 ಸಾವಿರ ಸರ್ಕಾರಿ ಪ್ರಾಥಮಿಕ ಶಾಲೆಯ ಸದಸ್ಯರಿರುವ ಆರು ದಶಕಗಳ ಇತಿಹಾಸ ಹೊಂದಿರುವ ಸಂಘಟನೆಯ ಚುಕ್ಕಾಣಿ ನಮ್ಮ ಜಿಲ್ಲೆಗೆ ಪ್ರಥಮ ಬಾರಿಗೆ ಲಭಿಸಿದೆ. ಶಿಕ್ಷಕ ಸಂಘಟನೆಗೆ ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟ ಚಂದ್ರಶೇಖರ ನುಗ್ಗಲಿ ಅವರಿಗೆ ಈ ಹುದ್ದೆ ತಾನಾಗಿಯೇ ಒಲಿದು ಬಂದಿದೆ ಎಂದರು.

* ಸಂಘದ ರಾಜ್ಯ ಸಹ ಕಾರ್ಯದರ್ಶಿಯಾಗಿ, ಪ್ರಧಾನ ಕಾರ್ಯದರ್ಶಿಯಾಗಿ ಕ್ರಿಯಾಶೀಲತೆ ಭಾವ ಬದ್ಧತೆಯಿಂದ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿರುವ ಚಂದ್ರಶೇಖರ ಸದ್ಯ ರಾಜ್ಯಾಧ್ಯಕ್ಷರಾಗಿರುವುದು ನಮ್ಮ ಹೆಮ್ಮೆ ಎಂದರು. ಕ್ರಿಯಾಶೀಲತೆ, ಸತತ ಶಿಕ್ಷಕರ ಪರ ಚಿಂತನೆ, ಎಲ್ಲರನ್ನೂ ಮುಂದಿಟ್ಟುಕೊಂಡು ನಡೆಯುವ ನುಗ್ಗಲಿ ಅವರ ನೇತೃತ್ವದಲ್ಲಿ ಶಿಕ್ಷಕ ಸಂಘಟನೆ ಇನ್ನಷ್ಟು ಬಲಾಢ್ಯವಾಗಲಿದೆ, ಶಿಕ್ಷಕರ ಜಟಿಲ ಸಮಸ್ಯೆಗಳು ಬಗೆಹರಿಯಲಿವೆ ಎಂದರು.

* ಎಂ.ಎಂ. ಮುಲ್ಲಾ, ಬಸವರಾಜ ಯರವಿನತೆಲಿಮಠ, ಎಂ.ಆರ್. ಮಕಾನದಾರ, ಆರ್.ಎಸ್. ಕಮತ,ಕುಮಾರ ಬಾಗೇವಾಡಿ, ಮಹೇಶ ಗಾಳಪ್ಪಗೋಳ, ಮುತ್ತು ಯಳಮೇಲಿ,ಎನ್, ಬಿ, ದಾಸರ. ಮುತ್ತುರಾಜ ಹೆಬ್ಬಾಳ, ಕೆ.ಎಂ. ಗುಡದಿನ್ನಿ,ಶಿವಪ್ಪ, ಚಲವಾದಿ, ವೈ.ಎಸ್. ಗಂಗಶೆಟ್ಟಿ, ರಾಜು ಹಲಗಿ, ಎಮ್ ಜಿ ಚವ್ಹಾಣ, ಎಸ್, ಎಲ್, ಮಾನೆ, ಪಟ್ಟಣ ಪಂಚಾಯ್ತಿ ಸದಸ್ಯ ಕರಿಯಪ್ಪ ಸಿಂದಗಿ , ಆನಂದ ಗೌಡರ, ನಿಂಗರಾಜ ಲಮಾಣಿ, ಡಿ.ಕೆ. ಪಾಟೀಲ, ಹಣಮಂತಗೌಡ, ಪಾಟೀಲ, ಹಣಮಂತ, ಸುನಗದ, ಮತ್ತಿತರರು ಇದ್ದರು.

## ಭಾರತದ ಉಪರಾಷ್ಟ್ರಪತಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಜಗದೀಪ್ ಧನಕರ್



* ಭಾರತದ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಆರೋಗ್ಯ ಸಮಸ್ಯೆ ಕಾರಣ ನೀಡಿ ತಮ್ಮ ಸ್ಥಾನಕ್ಕೆ ಜುಲೈ 21 ರಂದು (ಸೋಮವಾರ) ರಾಜೀನಾಮೆ ನೀಡಿದ್ದಾರೆ. ಭಾರತದ ರಾಷ್ಟ್ರಪತಿ ಆಗಿರುವ ದ್ರೌಪದಿ ಮುರ್ಮು ಅವರಿಗೆ ಜಗದೀಪ್ ಧನಕರ್ ಅವರು ರಾಜೀನಾಮೆ ಪತ್ರ ಸಲ್ಲಿಕೆ ಮಾಡಿದ್ದಾರೆ.

* ಸಂವಿಧಾನದ 67(a) ವಿಧಿಯ ಪ್ರಕಾರ ರಾಜೀನಾಮೆ ನೀಡುತ್ತಿರುವುದಾಗಿ ರಾಜೀನಾಮೆ ಸಲ್ಲಿಸಿದ್ದಾರೆ. 'ಆರೋಗ್ಯ ಮತ್ತು ವೈದ್ಯಕೀಯ ಸಲಹೆಯನ್ನು ಪಾಲಿಸಲು, ನಾನು ಭಾರತದ ಉಪಾಧ್ಯಕ್ಷ ಸ್ಥಾನಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ರಾಜೀನಾಮೆ ನೀಡುತ್ತಿದ್ದೇನೆ' ಎಂದು ಅವರು ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

* 74 ವರ್ಷದ ಧನಕರ್ ಅವರು 2022ರ ಆಗಸ್ಟನಲ್ಲಿ ಭಾರತದ ಉಪರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಅವರ ಅಧಿಕಾರದ ಅವಧಿ 2027ರ ವರೆಗೂ ಇತ್ತು. ರಾಜ್ಯಸಭೆಯ ಸಭಾಪತಿಯೂ ಆಗಿರುವ ಅವರು ಜುಲೈ 21 ರಂದು (ಸೋಮವಾರ)


KPSCVaani

ಆರಂಭವಾದ ಸಂಸತ್ತಿನ ಮುಂಗಾರು ಅಧಿವೇಶನದ ಮೊದಲ ದಿನ ಕಲಾಪದಲ್ಲಿ ಪಾಲ್ಗೊಂಡಿದ್ದರು.

* ಭಾರತದ ಉಪರಾಷ್ಟ್ರಪತಿ ಆಗುವುದಕ್ಕೂ ಮೊದಲು ಜಗದೀಪ್ ಧನಕರ್ ಅವರು ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದರು. ಚಂದ್ರಶೇಖರ್ ಸಚಿವ ಸಂಪುಟದಲ್ಲಿ ಸಂಸದೀಯ ವ್ಯವಹಾರಗಳ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ ಅನುಭವ ಇದೆ. ಸದ್ಯ ಜಗದೀಪ್ ಧನಕರ್ ಅವರಿಗೆ 74 ವರ್ಷಗಳು ಆಗಿವೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ಮೋದಿ ಅವರನ್ನು ಸ್ಮರಿಸಿದ್ದಾರೆ.

* "ಎಲ್ಲಾ ಸಂಸದರಿಂದ ನಾನು ಪಡೆದ ಗೌರವ, ವಿಶ್ವಾಸವನ್ನು ಸದಾ ನೆನಪಿಸಿಕೊಳ್ಳುತ್ತೇನೆ. ನಮ್ಮ ಪ್ರಜಾಪ್ರಭುತ್ವದಲ್ಲಿ ಉಪರಾಷ್ಟ್ರಪತಿಯಾಗಿ ನಾನು ಪಡೆದ ಅನುಭವಗಳು ಮತ್ತು ಒಳನೋಟಗಳಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ" ಎಂದು ಅವರು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

## ಜುಲೈ 22 : ಪೈ ಅಂದಾಜು ದಿನ




* ಪೈ ಅಂದಾಜು ದಿನವನ್ನು ಪ್ರತಿವರ್ಷ ಜುಲೈ 22 ರಂದು ಆಚರಿಸಲಾಗುತ್ತದೆ, ಏಕೆಂದರೆ 22/7 ಭಾಗವು π ನ ಸಾಮಾನ್ಯ ಅಂದಾಜು ಆಗಿದೆ, ಇದು ಆರ್ಕಿಮಿಡೀಸ್ನಿಂದ ಎರಡು ದಶಮಾಂಶ ಸ್ಥಳಗಳು ಮತ್ತು ದಿನಾಂಕಗಳಿಗೆ ನಿಖರವಾಗಿದೆ.

* ಹಲವಾರು ಜನರು ಮಾರ್ಚ್ 14 ಅನ್ನು ಪೈ ದಿನ ಎಂದು ಆಚರಿಸುತ್ತಾರೆ ಏಕೆಂದರೆ ದಿನಾಂಕವು ಪ್ರಸಿದ್ಧ ಸ್ಥಿರವಾದ 3.14 ರ ಸಂಖ್ಯೆಯಲ್ಲಿ ಸಾಲುಗಳನ್ನು ಹೊಂದಿದೆ.

* ಪೈ ಅಂದಾಜು ದಿನವನ್ನು ವಿವಿಧ ಜ್ಯಾಮಿತೀಯ ಆಕೃತಿಗಳು ಮತ್ತು ಆಕಾರಗಳ ಮೌಲ್ಯ ಮತ್ತು ಪ್ರದೇಶವನ್ನು ನಿರ್ಧರಿಸಲು ಬಳಸುವ ಗಣಿತದ ಸ್ಥಿರಾಂಕವಾದೆ. ಪೈ ಬಗ್ಗೆ ಅರಿವು ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

* ಪೈ ಅಂದಾಜು ದಿನವು ಪೈ ಮತ್ತು ಅದರ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ಒಂದು ಅವಕಾಶವಾಗಿದೆ. ಗಣಿತಜ್ಞರು, ಶಿಕ್ಷಣತಜ್ಞರು ಮತ್ತು ವಿದ್ಯಾರ್ಥಿಗಳು ಈ ದಿನವನ್ನು ಆಚರಿಸುತ್ತಾರೆ ಮತ್ತು ಪೈ ಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗುತ್ತಾರೆ.

* ಅಂದಾಜು 2,000 ವರ್ಷಗಳ ಹಿಂದೆ ಗ್ರೀಕ್ ಗಣಿತಜ್ಞ ಆರ್ಕಿಮಿಡಿಸ್ ಪೈ ಅನ್ನು ಲೆಕ್ಕಹಾಕಲು ಜ್ಯಾಮಿತೀಯ ಆಕಾರಗಳನ್ನು ಬಳಸಿದಾಗಿನಿಂದ ಬಂದಿದೆ. ಹಿಂದಿನ ಅಂದಾಜುಗಳು ಬ್ಯಾಬಿಲೋನ್ ಮತ್ತು ಈಜಿಪ್ಟನಿಂದ ಬಂದವು , ಆದರೆ 5 ನೇ ಶತಮಾನದ ಚೀನಾದಲ್ಲಿ ಜು ಚೊಂಗ್ಜಿ ಸ್ವತಂತ್ರವಾಗಿ ಇದೇ ರೀತಿಯ ಮೌಲ್ಯವನ್ನು ಕಂಡುಕೊಂಡರು.

* ಚಿಹ್ನೆ (π) ಅನ್ನು ಮೊದಲು 1706 ರಲ್ಲಿ ವಿಲಿಯಂ ಜೋನ್ಸ್ ಪರಿಚಯಿಸಿದರು ಮತ್ತು ನಂತರ ಲಿಯೊನ್ಹಾರ್ಡ್ ಯೂಲರ್ ಜನಪ್ರಿಯಗೊಳಿಸಿದರು.

* ಆಧುನಿಕ ಕಾಲದಲ್ಲಿ ಪೈ ಅನ್ನು ಟ್ರಿಲಿಯನ್ನಷ್ಟು ಅಂಕೆಗಳಿಗೆ ಲೆಕ್ಕಹಾಕಲಾಗಿದೆ - ಮುಖ್ಯವಾಗಿ 2019 ರಲ್ಲಿ ಗೂಗಲ್ ಎಂಜಿನಿಯರ್ ಎಮ್ಮಾ ಹರುಕಾ ಇವಾವೊ ಕ್ಲೌಡ್ ಕಂಪ್ಯೂಟಿಂಗ್ ಅನ್ನು ಬಳಸಿಕೊಂಡು 31 ಟ್ರಿಲಿಯನ್ ಅಂಕೆಗಳನ್ನು ತಲುಪಿದಾಗ ಗಣಿತದ ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲು ಎಂದು ಗುರುತಿಸಲಾಗಿದೆ.

## ಮೇರಿ ಪಂಚಾಯತ್ ಅಪ್ಲಿಕೇಶನ್ ಡಿಜಿಟಲ್ ಆಡಳಿತಕ್ಕಾಗಿ 2025 ರ WSIS ಚಾಂಪಿಯನ್ ಪ್ರಶಸ್ತಿ



* ಪಂಚಾಯತಿ ರಾಜ್ ಸಚಿವಾಲಯ ಮತ್ತು ರಾಷ್ಟ್ರೀಯ ಮಾಹಿತಿ ಕೇಂದ್ರ (NIC) ದ ಪರಿವರ್ತಕ ಡಿಜಿಟಲ್ ಆಡಳಿತ ಉಪಕ್ರಮವಾದ "ಮೇರಿ ಪಂಚಾಯತ್" ಮೊಬೈಲ್ ಅಪ್ಲಿಕೇಶನ್, ಪ್ರತಿಷ್ಠಿತ ವಿಶ್ವ ಮಾಹಿತಿ ಸಮಾಜ ಶೃಂಗಸಭೆ (WSIS) ಬಹುಮಾನಗಳು 2025 ಚಾಂಪಿಯನ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

* ಪಂಚಾಯತಿ ರಾಜ್ ಸಚಿವಾಲಯವು ರಾಷ್ಟ್ರೀಯ ಮಾಹಿತಿ ಕೇಂದ್ರ (NIC) ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದ ಈ ಅಪ್ಲಿಕೇಶನ್ ಗ್ರಾಮೀಣ ಭಾರತದಲ್ಲಿ ತಳಮಟ್ಟದ ಆಡಳಿತ ಮತ್ತು ಡಿಜಿಟಲ್ ಭಾಗವಹಿಸುವಿಕೆಯನ್ನು ಬಲಪಡಿಸುವಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ.

* ಸಾಂಸ್ಕೃತಿಕ ವೈವಿಧ್ಯತೆ ಮತ್ತು ಗುರುತು, ಭಾಷಾ ವೈವಿಧ್ಯತೆ ಮತ್ತು ಸ್ಥಳೀಯ ವಿಷಯಕ್ಕಾಗಿ ಆಕ್ಷನ್ ಲೈನ್ ವಿಭಾಗದ ಅಡಿಯಲ್ಲಿ ನೀಡಲಾದ ಈ ಪ್ರಶಸ್ತಿಯನ್ನು ಅಂತರರಾಷ್ಟ್ರೀಯ ದೂರಸಂಪರ್ಕ ಒಕ್ಕೂಟ (ITU) ಸ್ವಿಟ್ಜರ್ಲ್ಯಾಂಡ್‌ನ ಜಿನೀವಾದಲ್ಲಿ ಆಯೋಜಿಸಲಾದ WSIS+20 ಉನ್ನತ ಮಟ್ಟದ ಕಾರ್ಯಕ್ರಮ 2025 ರಲ್ಲಿ ನೀಡಲಾಯಿತು.

* ಡಿಜಿಟಲ್ ನಾವೀನ್ಯತೆಯ ಮೂಲಕ ನಾಗರಿಕ-ಕೇಂದ್ರಿತ ಆಡಳಿತವನ್ನು ಮುನ್ನಡೆಸಿದ್ದಕ್ಕಾಗಿ ರಾಜೀವ್ ರಂಜನ್ ಸಿಂಗ್ ಮೇರಿ ಪಂಚಾಯತ್ ಉಪಕ್ರಮವನ್ನು ಶ್ಲಾಘಿಸಿದರು.

* ಮಾಹಿತಿ ಸಮಾಜದ ವಿಶ್ವ ಶೃಂಗಸಭೆ (WSIS) ಅಂತರ್ಗತ ಮತ್ತು ಜನ-ಕೇಂದ್ರಿತ ಮಾಹಿತಿ ಸಮಾಜಗಳನ್ನು ಉತ್ತೇಜಿಸಲು ಪ್ರಾರಂಭಿಸಲಾದ ಜಾಗತಿಕ ವೇದಿಕೆಯಾಗಿದೆ.

* 2025 ರ ಈವೆಂಟ್ WSIS ಪ್ರಾರಂಭವಾದಾಗಿನಿಂದ 20 ವರ್ಷಗಳನ್ನು ಗುರುತಿಸಿದೆ ಮತ್ತು ಡಿಜಿಟಲ್ ಪ್ರಗತಿಯನ್ನು ಪರಿಶೀಲಿಸುವ ಗುರಿಯನ್ನು ಹೊಂದಿದೆ.

* ಜುಲೈ 7 ರಿಂದ 11 ರವರೆಗೆ ಜಿನೀವಾದಲ್ಲಿ ನಡೆದ WSIS+20 ಉನ್ನತ ಮಟ್ಟದ ಕಾರ್ಯಕ್ರಮವು ಮೂಲ WSIS ನಿಂದ ಎರಡು ದಶಕಗಳನ್ನು ಗುರುತಿಸಿತು.

* ITU ಮತ್ತು ಸ್ವಿಸ್ ಒಕ್ಕೂಟವು ಜಂಟಿಯಾಗಿ ಆಯೋಜಿಸಿದ್ದು, ITU, UNESCO, UNDP ಮತ್ತು UNCTAD ಸಹಯೋಗದೊಂದಿಗೆ ಆಯೋಜಿಸಲಾದ ಈ ವೇದಿಕೆಯು ಸಮಗ್ರ ಮಾಹಿತಿ ಸಮಾಜಗಳನ್ನು ನಿರ್ಮಿಸುವಲ್ಲಿ ಪ್ರಗತಿಯನ್ನು ಮೌಲ್ಯಮಾಪನ ಮಾಡಲು ಮತ್ತು ಸವಾಲುಗಳನ್ನು ಎದುರಿಸಲು ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸಿತು.

## ಅಟಲ್ ಇನ್ನೋವೇಶನ್ ಮಿಷನ್‌ನ ಮಿಷನ್ ನಿರ್ದೇಶಕರಾಗಿ ದೀಪಕ್ ಬಾಗ್ಲಾ ನೇಮಕ



* ನೀತಿ ಆಯೋಗದ ಅಡಿಯಲ್ಲಿ ಅಟಲ್ ಇನ್ನೋವೇಶನ್ ಮಿಷನ್ (AIM) ನ ಮಿಷನ್ ನಿರ್ದೇಶಕರಾಗಿ ಡಾ. ದೀಪಕ್ ಬಾಗ್ಲಾ ಅವರನ್ನು ನೇಮಕ ಮಾಡಲಾಗಿದೆ. ಎರಡು ವರ್ಷಗಳ ಅವಧಿಗೆ ಒಪ್ಪಂದದ ಆಧಾರದ ಮೇಲೆ ಈ ನೇಮಕಾತಿ ಮಾಡಲಾಗಿದೆ.
* ಸಿಬ್ಬಂದಿ ಮತ್ತು ತರಬೇತಿ ಇಲಾಖೆ (DoPT) ಸೋಮವಾರ (ಜೂನ್ 23, 2025) ಹೊರಡಿಸಿದ ಆದೇಶದ ಪ್ರಕಾರ ಕ್ಯಾಬಿನೆಟ್‌ನ ನೇಮಕಾತಿ ಸಮಿತಿಯು ಡಾ. ಬಾಗ್ಲಾ ಅವರ ನೇಮಕಾತಿಯನ್ನು ಅನುಮೋದಿಸಿದೆ.
* ಅವರು ಹುದ್ದೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವ ದಿನಾಂಕದಿಂದ ಅಥವಾ ಮುಂದಿನ ಆದೇಶದವರೆಗೆ, ಯಾವುದು ಮೊದಲೋ ಅದು ಜಾರಿಗೆ ಬರಲಿದೆ.
* ಈ ಹಿಂದೆ ಇನ್ವೆಸ್ಟ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಮತ್ತು CEO ಆಗಿ ಸೇವೆ ಸಲ್ಲಿಸಿದ್ದ ದೀಪಕ್ ಬಾಗ್ಲಾ ಈಗ AIM ನ ಮುಖ್ಯಸ್ಥರಾಗಿದ್ದಾರೆ. ಅವರು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಭಾರತವನ್ನು ಪ್ರತಿನಿಧಿಸುವಲ್ಲಿ ಗಮನಾರ್ಹ ಅನುಭವವನ್ನು ಹೊಂದಿದ್ದಾರೆ ಮತ್ತು ವಿಶ್ವ ಹೂಡಿಕೆ ಪ್ರಚಾರ ಸಂಸ್ಥೆಗಳ ಸಂಘ (WAIPA) ದ ಅಧ್ಯಕ್ಷರೂ ಆಗಿದ್ದರು.
* ದೀಪಕ್ ಬಾಗ್ಲಾ ಅವರ ನಾಯಕತ್ವದಲ್ಲಿ, ಇನ್ವೆಸ್ಟ್ ಇಂಡಿಯಾ ಜಾಗತಿಕ ಮನ್ನಣೆಯನ್ನು ಗಳಿಸಿತು ಮತ್ತು ಹೂಡಿಕೆಗೆ ಆದ್ಯತೆಯ ತಾಣವಾಗಿ ಭಾರತದ ಸ್ಥಾನವನ್ನು ಬಲಪಡಿಸುವಲ್ಲಿ, ರಾಷ್ಟ್ರವ್ಯಾಪಿ ಉದ್ಯಮಶೀಲತೆ ಮತ್ತು ನಾವೀನ್ಯತೆಯನ್ನು ಬೆಂಬಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು.

## ಭಾರತ-ಇಂಡೋನೇಷ್ಯಾ : 44ನೇ IND-INDO CORPAT ನೌಕಾಪಡೆ ಸಮರಾಭ್ಯಾಸ



* ಭಾರತ ಮತ್ತು ಇಂಡೋನೇಷ್ಯಾ ನೌಕಾಪಡೆಯ ನಡುವೆ ಕಡಲ ಸಹಕಾರ ಬಲಪಡಿಸಿ, ಪರಸ್ಪರ ಸ್ನೇಹ ಬಾಂಧವ್ಯಗಳನ್ನು ಗಟ್ಟಿಗೊಳಿಸುವ ಉದ್ದೇಶದಿಂದ IND-INDO CORPAT ಸಮರಾಭ್ಯಾಸದ 44ನೇ ಆವೃತ್ತಿಯನ್ನು ಇಂಡೋನೇಷ್ಯಾದ ಬೆಲಾವನ್‌ನಲ್ಲಿ ಆಯೋಜಿಸಲಾಯಿತು.
* ಈ ಸಮರಾಭ್ಯಾಸವು ಭಾರತ ಸರ್ಕಾರದ 'ಮಹಾಸಾಗರ್' ಉಪಕ್ರಮಕ್ಕೆ ಸಹಕಾರಿಯಾಗಿದ್ದು, ಒಟ್ಟಾರೆ ಅಭಿವೃದ್ಧಿಯ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ.
* ಅಕ್ರಮ ಹಾಗೂ ನಿಯಂತ್ರಣರಹಿತ ಮೀನುಗಾರಿಕೆ, ಮಾದಕವಸ್ತುಗಳ ಕಳ್ಳಸಾಗಣೆ, ಕಡಲ ಭಯೋತ್ಪಾದನೆ, ಸಶಸ್ತ್ರ ದರೋಡೆ ಮತ್ತು ಕಡಲ್ಗಳ್ಳತನವನ್ನು ತಡೆಗಟ್ಟಲು ಈ ಅಭ್ಯಾಸ ಪ್ರಮುಖವಾಗಿದೆ.
* ಕಳ್ಳಸಾಗಣೆ ಮತ್ತು ಅಕ್ರಮ ವಲಸೆಯ ನಿಯಂತ್ರಣದೊಂದಿಗೆ ರಕ್ಷಣಾ ಕಾರ್ಯಾಚರಣೆಗಳಿಗಾಗಿ ಮಾಹಿತಿ ಹಂಚಿಕೆಯಿಂದ ಸಂಯುಕ್ತ ಕಾರ್ಯಪಟುತ್ವವನ್ನು ಹೆಚ್ಚಿಸಲು ಸಹಾಯವಾಗಲಿದೆ.
* "ಕಡಲ ನೆರೆಯ ರಾಷ್ಟ್ರಗಳಾಗಿ ನಾವಿಬ್ಬರೂ ರಕ್ಷಣಾತ್ಮಕ ಸಹಕಾರವನ್ನು ಇನ್ನಷ್ಟು ಗಟ್ಟಿಗೊಳಿಸಲು ನಿರಂತರವಾಗಿ ಶ್ರಮಿಸಬೇಕು" ಎಂದು ಪ್ರಧಾನಿ ನರೇಂದ್ರ ಮೋದಿ ಹಾಗೂ ಇಂಡೋನೇಷ್ಯಾ ಅಧ್ಯಕ್ಷ ಸುಬಿಯಾಂಟೊ ಮತ್ತೊಮ್ಮೆ ಹೂಡುಕಿದರು.

## ಕೇರಳದ ಮಾಜಿ ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್ ನಿಧನ



* ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಕಮ್ಯುನಿಸ್ಟ್ ಪಕ್ಷದ ಖ್ಯಾತ ನಾಯಕ ವಿ.ಎಸ್. ಅಚ್ಯುತಾನಂದನ್ (101) ಸೋಮವಾರ ನಿಧನರಾದರು. ಕಳೆದ ಜೂನ್ 23ರಂದು ಹೃದಯಾಘಾತಕ್ಕೀಡಾದ ಬಳಿಕ ಆಸ್ಪತ್ರೆಗೆ ದಾಖಲಿಸಲಾದ ಅವರ ಚಿಕಿತ್ಸೆ ಫಲಕಾರಿಯಾಗಲಿಲ್ಲ.
* ಅಚ್ಯುತಾನಂದನ್ 1964ರಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅವರು ಏಳು ಬಾರಿ ಶಾಸಕನಾಗಿ ಆಯ್ಕೆಯಾಗಿ, 2006ರಿಂದ 2011ರವರೆಗೆ ಕೇರಳದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು.
* ಅಕ್ಟೋಬರ್ 20, 1923ರಲ್ಲಿ ಜನಿಸಿದ ವಿಎಸ್, ತಮ್ಮ ಬಾಲ್ಯವನ್ನು ಬಡತನದಲ್ಲಿ ಕಳೆದರೂ, ಟೈಲರ್ ಅಂಗಡಿ ಹಾಗೂ ತೆಂಗಿನಕಾಯಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾ ರಾಜಕೀಯ ಚಳುವಳಿಗೆ ತೊಡಗಿದರು.
* 1938ರಲ್ಲಿ ಕೃಷಿ ಕಾರ್ಮಿಕರ ಸಂಘಟನೆಯಿಂದ ತಮ್ಮ ರಾಜಕೀಯ ಪ್ರಾರಂಭ ಮಾಡಿದ ಅವರು, ರಾಜ್ಯ ರಾಜಕಾರಣದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದರು.

## 2025 ತಂತ್ರಜ್ಞಾನ ಶೃಂಗಸಭೆ: 60 ದೇಶಗಳಿಗೆ ಆಹ್ವಾನ



* 2025ರಲ್ಲಿ ನಡೆಯಲಿರುವ ತಂತ್ರಜ್ಞಾನ ಶೃಂಗಸಭೆಗೆ 60 ದೇಶಗಳ ಪ್ರತಿನಿಧಿಗಳಿಗೆ ಆಹ್ವಾನ ನೀಡಲಾಗಿದೆ ಎಂದು ಐಟಿ ಇಲಾಖೆಯ

ಪ್ರಧಾನ ಕಾರ್ಯದರ್ಶಿ ಏಕರೂಪ್ ಕೌರ್ ತಿಳಿಸಿದ್ದಾರೆ. 2024ರಲ್ಲಿ 45 ದೇಶಗಳು ಭಾಗವಹಿಸಿದ್ದರೆ, ಈ ಬಾರಿ ಆ ಸಂಖ್ಯೆ ಹೆಚ್ಚಳಗೊಂಡಿದೆ.
* ಬೆಂಗಳೂರು ಹೊರವಲಯದಲ್ಲಿ ಉದಯೋನ್ಮುಖ ತಂತ್ರಜ್ಞಾನ ಸಮುಚ್ಚಯಗಳ ಸ್ಥಾಪನೆಗೆ ನೆರವಾಗುವಂತೆ ಮೂಲಸೌಕರ್ಯ, ಪ್ರತಿಭೆ ಹಾಗೂ ಮಾರುಕಟ್ಟೆ ಲಭ್ಯತೆಗೆ ಉತ್ತೇಜನ ನೀಡಲಾಗುತ್ತಿದೆ. ಕ್ರಿಯಾತ್ಮಕ ಪರಿಸರ ವ್ಯವಸ್ಥೆ ರೂಪಿಸಲಾಗುತ್ತಿದೆ.
* ಯುಎಸ್-ಇಂಡಿಯಾ ಬಿಸಿನೆಸ್ ಕೌನ್ಸಿಲ್ ಜತೆ ಕರ್ನಾಟಕ ತನ್ನ ಪಾಲುದಾರಿಕೆಯನ್ನು ಗಟ್ಟಿಮಾಡಿದೆ. ಇದರಿಂದ ರಾಜ್ಯದ ಉದ್ಯಮಗಳಿಗೆ ಅಂತಾರಾಷ್ಟ್ರೀಯ ಸಂಪರ್ಕ ಸುಗಮವಾಗಲಿದೆ.
* ಈ ಶೃಂಗಸಭೆ ವಿಶ್ವಮಟ್ಟದ ಮೂಲಸೌಕರ್ಯ, ವಿಶಾಲ ಸಭಾಂಗಣಗಳು ಮತ್ತು ಆಧುನಿಕ ಸೌಲಭ್ಯಗಳೊಂದಿಗೆ ಜರುಗಲಿದೆ. 20 ಸಾವಿರ ಸ್ಟಾರ್ಟಪ್ ಸಂಸ್ಥಾಪಕರು, 1000 ಹೂಡಿಕೆದಾರರು, 15 ಸಾವಿರ ಉದ್ಯಮ ಪ್ರತಿನಿಧಿಗಳು ಮತ್ತು ಸುಮಾರು 1 ಲಕ್ಷ ಜನರು ಭಾಗವಹಿಸಲಿದ್ದಾರೆ.
* ಈ ಸಭೆಯಲ್ಲಿ ಕೆಐಟಿಎಸ್ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಶರಣಪ್ಪ, ಉಪ ಕಾರ್ಯದರ್ಶಿ ದಲ್ಜೀತ್ ಕುಮಾರ್ ಹಾಗೂ 20ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

## 23 July 2025

## ಜುಲೈ 23 ರಾಷ್ಟ್ರೀಯ ಪ್ರಸಾರ ದಿನ




* 1927 ರಲ್ಲಿ ಜುಲೈ 23 ರಂದು ದೇಶದಲ್ಲಿ ನಡೆದ ಮೊದಲ ರೇಡಿಯೊ ಪ್ರಸಾರದ ನೆನಪಿಗಾಗಿ ಪ್ರತಿ ವರ್ಷ ಜುಲೈ 23 ರಂದು ಭಾರತದಲ್ಲಿ ರಾಷ್ಟ್ರೀಯ ಪ್ರಸಾರ ದಿನವನ್ನು ಆಚರಿಸಲಾಗುತ್ತದೆ. ಈ ರಾಷ್ಟ್ರೀಯ ಪ್ರಸಾರ ದಿನವು ಮೊದಲ ರೇಡಿಯೊ ಪ್ರಸಾರ "ಆಲ್ ಇಂಡಿಯಾ ರೇಡಿಯೋ" ಸ್ಥಾಪನೆಯನ್ನು ಸೂಚಿಸುತ್ತದೆ.
* ಭಾರತದಲ್ಲಿ ಪ್ರಸಾರ ಉದ್ಯಮದ ಪ್ರಮುಖ ಕೊಡುಗೆಗಳನ್ನು ಗುರುತಿಸಲು ಮತ್ತು ಮಾಧ್ಯಮ ಮತ್ತು ಸಂವಹನ ಕ್ಷೇತ್ರದಲ್ಲಿ ಭಾರತವು ನಾಯಕನಾಗಲು ಸಾಧ್ಯವಾಗಿಸಿದ ಪ್ರವರ್ತಕರನ್ನು ಗೌರವಿಸಲು ಈ ರಾಷ್ಟ್ರೀಯ ಪ್ರಸಾರ ದಿನವನ್ನು ಆಚರಿಸಲಾಗುತ್ತದೆ.
* 1927 ರಲ್ಲಿ ಜುಲೈ 23 ರಂದು ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಕಂಪನಿ (IBC) ಬಾಂಬೆಯಿಂದ ತನ್ನ ಮೊದಲ ಪ್ರಸಾರವನ್ನು ಮಾಡಿತು. IBC ಒಂದು ಖಾಸಗಿ ಕಂಪನಿಯಾಗಿತ್ತು, ಆದರೆ ಇದನ್ನು 1930 ರಲ್ಲಿ ಸರ್ಕಾರವು ಸ್ವಾಧೀನಪಡಿಸಿಕೊಂಡಿತು ಮತ್ತು ಆಲ್ ಇಂಡಿಯಾ ರೇಡಿಯೋ (AIR) ಎಂದು ಮರುನಾಮಕರಣ ಮಾಡಲಾಯಿತು.
* ರಾಷ್ಟ್ರೀಯ ಪ್ರಸಾರ ದಿನ 2025 ಉಲ್ಲೇಖಗಳು :
- "ಪ್ರಸಾರದ ಕೊಡುಗೆ, ನಿಸ್ಸಂದೇಹವಾಗಿ, ಯಾವುದೇ ಮನುಷ್ಯನು ಸಾಧಿಸಬಹುದಾದ ಅತ್ಯಂತ - ಕಡಿಮೆ ಮಾನವ ಸಾಮರ್ಥ್ಯವಾಗಿದೆ. ಹೆರಾಲ್ಡ್ ನಿಕೋಲ್ಸನ್"
- "ರೇಡಿಯೋ ಮತ್ತು ದೂರದರ್ಶನವು ನಮ್ಮ ಆಲೋಚನೆಗಳು ಮತ್ತು ಅಭಿಪ್ರಾಯಗಳನ್ನು ರೂಪಿಸುವ ಶಕ್ತಿಯನ್ನು ಹೊಂದಿವೆ. ರಾಷ್ಟ್ರೀಯ ಪ್ರಸಾರ ದಿನದಂದು, ನಮ್ಮ ಜಗತ್ತನ್ನು ರೂಪಿಸುವಲ್ಲಿ ಪ್ರಸಾರಕರ ಪಾತ್ರವನ್ನು ಆಚರಿಸೋಣ." - ಅಮಿತ್ ಶಾ
- "ರೇಡಿಯೋ ಅತ್ಯಂತ ವ್ಯಾಪಕವಾಗಿ ಲಭ್ಯವಿರುವ, ಪ್ರವೇಶಿಸಬಹುದಾದ, ಅಗ್ಗದ ಮತ್ತು ಹೊಂದಿಕೊಳ್ಳುವ ಸಮೂಹ ಮಾಧ್ಯಮವಾಗಿದೆ. ರಾಷ್ಟ್ರೀಯ ಪ್ರಸಾರ ದಿನವು ಈ ಸಾಧನವನ್ನು ಪ್ರಶಂಸಿಸಲು ನಿಮಗೆ ಅವಕಾಶವನ್ನು ನೀಡುತ್ತದೆ."
- ರೇಡಿಯೋ ನಮಗೆ ಸಂಗೀತ ಮತ್ತು ಮನೋರಂಜನೆಯ ಚಿಕಿತ್ಸೆಯನ್ನು ಒದಗಿಸಿದ ಸಾಧನವಾಗಿದೆ. ರಾಷ್ಟ್ರೀಯ ಪ್ರಸಾರ ದಿನವು ರೇಡಿಯೋ ಮತ್ತು ಸಂಗೀತವನ್ನು ಆಚರಿಸುವ ದಿನವಾಗಿದೆ.

## ನಾಸಾ-ಇಸ್ರೋ ಜಂಟಿ ಮಿಷನ್ 'NISAR' ಜುಲೈ 30 ರಂದು ಶ್ರೀಹರಿಕೋಟಾದಿಂದ ಉಡಾವಣೆ



* ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಜುಲೈ 21 ರಂದು (ಸೋಮವಾರ) ನಾಸಾದ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾದ ಉಪಗ್ರಹವನ್ನು ಶ್ರೀಹರಿಕೋಟಾದಿಂದ ಸಂಜೆ 5.40 ಕ್ಕೆ ಉಡಾವಣೆ ಮಾಡಲು ನಿರ್ಧರಿಸಲಾಗಿದೆ ಎಂದು ಘೋಷಿಸಿತು.
* ಇಸ್ರೋದ GSLV-F16 NISAR ಉಪಗ್ರಹವನ್ನು 98.4 ಡಿಗ್ರಿಗಳ ಇಳಿಜಾರಿನಲ್ಲಿ 743kms ಸನ್-ಸಿಂಕ್ರೊನಸ್ ಕಕ್ಷೆಗೆ ಉಡಾವಣೆ ಮಾಡುತ್ತದೆ.
* 2,392 ಕೆಜಿ ತೂಕವಿರುವ NISAR, ಡ್ಯುಯಲ್-ಫ್ರೀಕ್ವೆನ್ಸಿ ಸಿಂಥೆಟಿಕ್ ಅಪರ್ಚರ್ ರಾಡಾರ್ (ನಾಸಾದಿಂದ ಎಲ್-ಬ್ಯಾಂಡ್ ಮತ್ತು ಇಸ್ರೋದಿಂದ ಎಸ್-ಬ್ಯಾಂಡ್) ಹೊಂದಿದ್ದು, ಇಸ್ರೋದ ಮಾರ್ಪಡಿಸಿದ I3K ಉಪಗ್ರಹ ಬಸ್‌ಗೆ ಸಂಯೋಜಿಸಲ್ಪಟ್ಟಿದೆ ಮತ್ತು ನಾಸಾದ 12-ಮೀಟರ್ ಅನ್ಫರ್ಲಬಲ್ ಮೆಶ್ ರಿಫ್ಲೆಕ್ಟರ್‌ನಿಂದ ಬೆಂಬಲಿತವಾಗಿದೆ.
* NISAR ಮೊದಲ ಬಾರಿಗೆ ಸ್ವೀಪ್‌ಸಾರ್ ತಂತ್ರಜ್ಞಾನವನ್ನು ಬಳಸಿಕೊಂಡು 242 ಕಿ.ಮೀ ಉದ್ದ ಮತ್ತು ಹೆಚ್ಚಿನ ಪ್ರಾದೇಶಿಕ ರೆಸಲ್ಯೂಶನ್‌ನೊಂದಿಗೆ ಭೂಮಿಯನ್ನು ವೀಕ್ಷಿಸಲಿದೆ ಎಂದು ಇಸ್ರೋ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.
* ಇಸ್ರೋ ಒದಗಿಸಿದ ಎಸ್-ಬ್ಯಾಂಡ್ ವ್ಯವಸ್ಥೆ ಮತ್ತು ನಾಸಾ ಒದಗಿಸಿದ ಎಲ್-ಬ್ಯಾಂಡ್ ವ್ಯವಸ್ಥೆ - ಎರಡು ರಾಡಾರ್ ಉಪಕರಣಗಳೊಂದಿಗೆ - NISAR ಸಿಂಥೆಟಿಕ್ ಅಪರ್ಚರ್ ರಾಡಾರ್ (SAR) ಎಂದು ಕರೆಯಲ್ಪಡುವ ತಂತ್ರವನ್ನು ಬಳಸಿಕೊಂಡು ಗ್ರಹದ ಬಹುತೇಕ ಎಲ್ಲಾ ಭೂಮಿ ಮತ್ತು ಮಂಜುಗಡ್ಡೆಯ ಮೇಲ್ಮೈಗಳನ್ನು ಪ್ರತಿ 12 ದಿನಗಳಿಗೊಮ್ಮೆ ಎರಡು ಬಾರಿ ಸ್ಕ್ಯಾನ್ ಮಾಡುತ್ತದೆ.
- NISAR ಮಿಷನ್ :
* ಭೂಕಂಪಗಳು, ಜ್ವಾಲಾಮುಖಿ ಸ್ಫೋಟಗಳು, ಭೂ ಕುಸಿತ ಮತ್ತು ಭೂಕುಸಿತಗಳಂತಹ ನೈಸರ್ಗಿಕ ಅಪಾಯಗಳು ಮತ್ತು ವಿಪತ್ತು ಘಟನೆಗಳಲ್ಲಿ ಒಳಗೊಂಡಿರುವ ಪ್ರಕ್ರಿಯೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಈ ಸಾಮರ್ಥ್ಯಗಳು ವಿಜ್ಞಾನಿಗಳಿಗೆ ಸಹಾಯ ಮಾಡುತ್ತವೆ.

* ಹೆಚ್ಚುವರಿಯಾಗಿ, NISAR ನ ಮೋಡ ಭೇದಿಸುವ ಸಾಮರ್ಥ್ಯವು ಚಂಡಮಾರುತಗಳು, ಚಂಡಮಾರುತದ ಉಲ್ಬಣ ಮತ್ತು ಪ್ರವಾಹದಂತಹ ಹವಾಮಾನ ವಿಪತ್ತುಗಳ ಸಮಯದಲ್ಲಿ ಸಮುದಾಯಗಳಿಗೆ ತುರ್ತು ಪ್ರತಿಕ್ರಿಯೆ ನೀಡಲು ಸಹಾಯ ಮಾಡುತ್ತದೆ.
* ಮಿಷನ್ ರಚಿಸುವ ವಿವರವಾದ ನಕ್ಷೆಗಳು ಭೂಮಿಯ ಭೂಮಿ ಮತ್ತು ಮಂಜುಗಡ್ಡೆಯ ಮೇಲ್ಮೈಗಳಲ್ಲಿ ಸಂಭವಿಸುವ ಕ್ರಮೇಣ ಮತ್ತು ಹಠಾತ್ ಬದಲಾವಣೆಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.

## ಐಸಿಸಿ : 2027, 2029, 2031 ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗಳಿಗೆ ಆತಿಥ್ಯ ವಹಿಸಲಿರುವ ಇಂಗ್ಲೆಂಡ್




* ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ), 2027, 2029 ಮತ್ತು 2031 ರಲ್ಲಿ ನಡೆಯಲಿರುವ ಮುಂದಿನ ಮೂರು ಆವೃತ್ತಿಗಳ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ (ಡಬ್ಲ್ಯೂಟಿಸಿ) ಫೈನಲ್‌ಗಳ ಆತಿಥ್ಯದ ಹಕ್ಕುಗಳನ್ನು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಗೆ ನೀಡಿದೆ.
* ಐಸಿಸಿ ಅಧ್ಯಕ್ಷ ಜಯ್ ಶಾ ಅವರ ಅಧ್ಯಕ್ಷತೆಯಲ್ಲಿ ಜುಲೈ 20, 2025 ರಂದು ಸಿಂಗಾಪುರದಲ್ಲಿ ನಡೆದ ಐಸಿಸಿ ವಾರ್ಷಿಕ ಸಮ್ಮೇಳನದಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಯಿತು.
* ಜೂನ್‌ನಲ್ಲಿ ನಡೆಯುವ ನಿರೀಕ್ಷೆಯಿರುವ ಪಂದ್ಯಗಳು ಇಂಗ್ಲಿಷ್ ಕ್ರಿಕೆಟ್ ಋತು ಮತ್ತು ಅನುಕೂಲಕರ ಹವಾಮಾನಕ್ಕೆ ಅನುಗುಣವಾಗಿರುತ್ತವೆ. ಇಂಗ್ಲೆಂಡ್ ಈ ಹಿಂದೆ 2021 ರ ಫೈನಲ್ ಅನ್ನು ಸೌತಾಂಪ್ಟನ್‌ನಲ್ಲಿ, 2023 ರ ಫೈನಲ್ ಅನ್ನು ದಿ ಓವಲ್‌ನಲ್ಲಿ ಮತ್ತು 2025 ರ ಆವೃತ್ತಿಯನ್ನು ಲಾರ್ಡ್ಸ್‌ನಲ್ಲಿ ಆಯೋಜಿಸಿತ್ತು.
* ಟಿಮೋರ್-ಲೆಸ್ಟೆ ಕ್ರಿಕೆಟ್ ಫೆಡರೇಶನ್ ಮತ್ತು ಜಾಂಬಿಯಾ ಕ್ರಿಕೆಟ್ ಯೂನಿಯನ್ ಎಂಬ ಎರಡು ಹೊಸ ಸದಸ್ಯರು ಐಸಿಸಿಗೆ ಸೇರಿಕೊಂಡು ಅಸೋಸಿಯೇಟ್ ಸದಸ್ಯರಾದರು. ಐಸಿಸಿಯ ಒಟ್ಟು ಸದಸ್ಯತ್ವ ಈಗ 110.
* ಭಾರತ ಮತ್ತು ನ್ಯೂಜಿಲೆಂಡ್ ನಡುವಿನ COVID-19 ಸಾಂಕ್ರಾಮಿಕ ರೋಗದ ಸಮಯದಲ್ಲಿ 2021 ರಲ್ಲಿ ಮೊದಲ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಅನ್ನು ಜೈವಿಕ ಸುರಕ್ಷಿತ ವಾತಾವರಣದಲ್ಲಿ ನಡೆಸಲಾಯಿತು. ಈ ಪಂದ್ಯವನ್ನು ಸೌತಾಂಪ್ಟನ್ ನಲ್ಲಿ ನಡೆಸಲಾಯಿತು ಮತ್ತು ನ್ಯೂಜಿಲೆಂಡ್ ಗೆದ್ದಿತು.
* ಎರಡನೇ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಅನ್ನು 2023 ರಲ್ಲಿ ಇಂಗ್ಲೆಂಡ್‌ನ ಓವಲ್‌ನಲ್ಲಿ ನಡೆಸಲಾಯಿತು. ಆಸ್ಟ್ರೇಲಿಯಾ ತಂಡವು ಭಾರತವನ್ನು ಸೋಲಿಸಿ ಫೈನಲ್ ಅನ್ನು ಗೆದ್ದುಕೊಂಡಿತು.
* ಜೂನ್ 2025 ರಲ್ಲಿ ಇಂಗ್ಲೆಂಡ್‌ನ ಲಾರ್ಡ್ಸ್‌ನಲ್ಲಿ ಮೂರನೇ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ನಡೆಯಿತು, ಇದರಲ್ಲಿ ದಕ್ಷಿಣ ಆಫ್ರಿಕಾ ಆಸ್ಟ್ರೇಲಿಯಾವನ್ನು ಸೋಲಿಸಿತು.

## ಅಮೆರಿಕ ಯುನೆಸ್ಕೋದಿಂದ ಮತ್ತೆ ಹೊರಹೋಗಲು ನಿರ್ಧಾರ




* ಅಮೆರಿಕ ಯುನೆಸ್ಕೊದಿಂದ (ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ) ಮರುಬಾರಿಗೆ ಹೊರಬರುವ ನಿರ್ಧಾರ ತೆಗೆದುಕೊಂಡಿದೆ.
* ಈ ನಿರ್ಧಾರಕ್ಕೆ ಕಾರಣವಾಗಿ ಯುನೆಸ್ಕೊ ಇಸ್ರೇಲಿ ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ ಎಂಬ ಆರೋಪವನ್ನು ಅಮೆರಿಕ ಮುಂದಿಟ್ಟಿದೆ.
* ಈ ಹಿಂದೆ ಕೂಡಾ ಅಮೆರಿಕ ಯುನೆಸ್ಕೊದಿಂದ ಹೊರಬಂದಿತ್ತು. ನಂತರ, ಐದು ವರ್ಷಗಳ ನಂತರ ಜೋ ಬೈಡನ್ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಅಮೆರಿಕ ಮತ್ತೆ ಸಂಸ್ಥೆಯಲ್ಲಿ ಸೇರ್ಪಡೆಯಾಗಿತ್ತು. ಆದರೆ ಈಗ, ಟ್ರಂಪ್ ಅವರ ಆಡಳಿತದಲ್ಲಿ ಮರುಬಾರಿಗೆ ಹೊರಬರುವ ನಿರ್ಧಾರ ತೆಗೆದುಕೊಳ್ಳಲಾಗಿದೆ.
* ಶ್ವೇತಭವನದ ಉಪ ವಕ್ತಾರೆ ಅನ್ನಾ ಕೆಲ್ಲಿ ಈ ನಿರ್ಧಾರವನ್ನು ದೃಢಪಡಿಸಿದ್ದು, ಇದು ಯುನೆಸ್ಕೋದಿಂದ ಅಮೆರಿಕ ಹೊರಬರುವ ಮೂರನೇ ಸಂದರ್ಭವಾಗಿದೆ. ಈ ಹೊಸ ನಿರ್ಧಾರವು 2026ರ ಡಿಸೆಂಬರ್‌ನ ಅಂತ್ಯಕ್ಕೆ ಜಾರಿಗೆ ಬರಲಿದೆ.

## ಗೀತಾ ಗೋಪಿನಾಥ್ ಐಎಂಎಫ್ ತೊರೆದು ಹಾರ್ವರ್ಡ್‌ಗೆ ವಾಪಸ್



* ಭಾರತ ಮೂಲದ ಅಮೆರಿಕನ್ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಅವರು ಅಂತರಾಷ್ಟ್ರೀಯ ಹಣಕಾಸು ನಿಧಿಯಲ್ಲಿ (IMF) ಸುಮಾರು ಏಳು ವರ್ಷಗಳ ಕಾಲ ಸೇವೆ ಸಲ್ಲಿಸಿದ ನಂತರ, ತಮ್ಮ ಹುದ್ದೆ ತೊರೆದು ಶೈಕ್ಷಣಿಕ ಕ್ಷೇತ್ರಕ್ಕೆ ಮರಳುವುದಾಗಿ ಘೋಷಿಸಿದ್ದಾರೆ.
* ಐಎಂಎಫ್‌ನ ಮೊದಲ ಉಪ ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ನೀಡುತ್ತಿದ್ದ ಗೋಪಿನಾಥ್, ಈ ನಿರ್ಧಾರವನ್ನು ಜುಲೈ 21ರಂದು ಎಕ್ಸ್ ಪ್ಲಾಟ್‌ಫಾರ್ಮ್‌ನಲ್ಲಿ ಪ್ರಕಟಿಸಿದರು.
* ಅವರು 2024ರ ಸೆಪ್ಟೆಂಬರ್ 1ರಂದು ಹಾರ್ವರ್ಡ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದಲ್ಲಿ 'Gregory and Ania Coffey Professor of Economics' ಎಂಬ ಗೌರವಾನ್ವಿತ ಹುದ್ದೆಯನ್ನು ಸ್ವೀಕರಿಸಲಿದ್ದಾರೆ.
* ತಮ್ಮ ಶೈಕ್ಷಣಿಕ ಮೂಲಗಳಿಗೆ ಮರಳುತ್ತಿರುವುದನ್ನು ಗೋಪಿನಾಥ್ ಅವರು ಉತ್ಸಾಹದಿಂದ ಸ್ವೀಕರಿಸಿದ್ದಾರೆ ಮತ್ತು ಹೊಸ ಪೀಳಿಗೆಯ ಅರ್ಥಶಾಸ್ತ್ರಜ್ಞರನ್ನು ತರಬೇತಿಗೆ ಸಜ್ಜಾಗಿದ್ದಾರೆ.
* ಐಎಂಎಫ್‌ನಲ್ಲಿ ಸೇವೆ ಸಲ್ಲಿಸಿದ ಸಂದರ್ಭದಲ್ಲಿ ಗೋಪಿನಾಥ್ ಅವರು ಮಹತ್ವದ ಕೊಡುಗೆ ನೀಡಿದ್ದು, ಕೋವಿಡ್-19

KPSCVaani

ಸಂದರ್ಭದಲ್ಲಿ ಜಾಗತಿಕ ಲಸಿಕೆ ಯೋಜನೆ ರೂಪಿಸಿದ 'ಸಾಂಕ್ರಾಮಿಕ ಯೋಜನೆ'ಯಲ್ಲಿ ಸಹ-ಲೇಖಕಿಯಾಗಿದ್ದರು.

* 2019ರಲ್ಲಿ ಅವರು ಐಎಂಎಫ್‌ನ ಮುಖ್ಯ ಅರ್ಥಶಾಸ್ತ್ರಜ್ಞರಾಗಿದ್ದು, 2022ರಲ್ಲಿ ಉಪ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ಬಡ್ತಿ ಪಡೆದರು. ತಮ್ಮ ಸೇವೆಯನ್ನು "ಜೀವನದಲ್ಲಿ ಒಮ್ಮೆ ಸಿಗುವ ಅವಕಾಶ" ಎಂದು ಅವರು ವಿವರಿಸಿದ್ದಾರೆ.

## REBR : ಟಾಟಾ ಸಮೂಹ ಭಾರತದ ಆಕರ್ಷಕ ಉದ್ಯೋಗದಾತ ಬ್ರ್ಯಾಂಡ್

* ರಾಂಡ್‌ಸ್ಟಾಡ್ ಎಂಪ್ಲಾಯರ್ ಬ್ರಾಂಡ್ ರಿಸರ್ಚ್ (REBR) 2025 ಪ್ರಕಾರ, ಟಾಟಾ ಗ್ರೂಪ್, ಗೂಗಲ್ ಇಂಡಿಯಾ ಮತ್ತು ಇನ್ಫೋಸಿಸ್ ಭಾರತದ ಅತ್ಯಂತ ಆಕರ್ಷಕ ಉದ್ಯೋಗದಾತ ಬ್ರ್ಯಾಂಡ್‌ಗಳಾಗಿ ಹೊರಹೊಮ್ಮಿವೆ. ಗೂಗಲ್ ಇಂಡಿಯಾ ಎರಡನೇ ಸ್ಥಾನಕ್ಕೇರಿದರೆ, ಇನ್ಫೋಸಿಸ್ ಮೂರನೇ ಸ್ಥಾನ ಪಡೆದಿದೆ.

* ಭಾರತದ ಉದ್ಯೋಗಾರ್ಹರು ಉದ್ದೇಶ-ಚಾಲಿತ ಉದ್ಯೋಗ, ಕೆಲಸ-ಜೀವನ ಸಮತೋಲನ, ಇಕ್ವಿಟಿ, ಉತ್ತಮ ಸಂಬಳ ಮತ್ತು ಪ್ರಯೋಜನಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ.

* ಈ ಅಂಶಗಳು ಉದ್ಯೋಗಿ ಮೌಲ್ಯ ಪ್ರತಿಪಾದನೆ (EVP)ಯ ಮುಖ್ಯ ಚಾಲಕರಾಗಿ ಪರಿಣಮಿಸುತ್ತಿವೆ.

* 2025 ರ ಟಾಪ್ 10 ಉದ್ಯೋಗದಾತ ಬ್ರ್ಯಾಂಡ್‌ಗಳಲ್ಲಿ ಸ್ಯಾಮ್‌ಸಂಗ್ ಇಂಡಿಯಾ (4), ಜೆಪಿ ಮೋರ್ಗನ್‌ಚೇಸ್ (5), ಐಬಿಎಂ (6), ವಿಪ್ರೋ (7), ರಿಲಯನ್ಸ್ ಇಂಡಸ್ಟ್ರೀಸ್ (8), ಡೆಲ್ ಟೆಕ್ನಾಲಜೀಸ್ (9), ಮತ್ತು ಎಸ್‌ಬಿಐ (10) ಕೂಡ ಸೇರಿವೆ.

## ಭಾರತೀಯ ಸೇನೆಗೆ 3 ಅಪಾಚೆ ಹೆಲಿಕಾಪ್ಟರ್‌ಗಳ ಆಗಮನ



* ಅಮೆರಿಕದ ವಿಮಾನ ತಯಾರಿಕಾ ಸಂಸ್ಥೆ ಬೋಯಿಂಗ್, ಭಾರತದ ಭೂಸೇನೆಗೆ ಮೂರು AH-64E ಅಪಾಚೆ ಯುದ್ಧ ಹೆಲಿಕಾಪ್ಟರ್‌ಗಳನ್ನು ಹಸ್ತಾಂತರಿಸಿದೆ. ಇದು ಆರು ಹೆಲಿಕಾಪ್ಟರ್ ಪೂರೈಕೆ ಒಪ್ಪಂದದ ಮೊದಲ ಹಂತವಾಗಿದೆ.

* AH-64E ಅಪಾಚೆ ವಿಶ್ವದ ಅತ್ಯಾಧುನಿಕ ಮಲ್ಟಿ-ರೋಲ್ ಯುದ್ಧ ಹೆಲಿಕಾಪ್ಟರ್ ಆಗಿದ್ದು, ಇದನ್ನು ಅಮೆರಿಕ ಸೇನೆ ಸಹ ಬಳಸುತ್ತದೆ.

* ಈ ಹೆಲಿಕಾಪ್ಟರ್‌ಗಳ ಸಹಾಯದಿಂದ ಭಾರತೀಯ ಸೇನೆಯ ಕಾರ್ಯಾಚರಣಾ ಸಾಮರ್ಥ್ಯ ಹೆಚ್ಚಲಿದೆ ಎಂದು ಸೇನೆ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದೆ.

* ಈಗಾಗಲೇ 2020ರಲ್ಲಿ ಭಾರತ 22 ಅಪಾಚೆ ಹೆಲಿಕಾಪ್ಟರ್‌ಗಳನ್ನು ಪಡೆದಿತ್ತು. ಇದೇ ವೇಳೆ ಇನ್ನೂ ಆರು ಹೆಲಿಕಾಪ್ಟರ್‌ಗಳಿಗಾಗಿ ಒಪ್ಪಂದ ಮಾಡಿಕೊಂಡಿತ್ತು.

* 2017ರಲ್ಲಿ ಭೂಸೇನೆಗಾಗಿ ₹4,168 ಕೋಟಿ ವೆಚ್ಚದಲ್ಲಿ ಆರು ಅಪಾಚೆ ಹೆಲಿಕಾಪ್ಟರ್‌ಗಳನ್ನು ಖರೀದಿಸಲು ರಕ್ಷಣಾ ಸಚಿವಾಲಯ ಅನುಮೋದನೆ ನೀಡಿತ್ತು.

## 2035ರ ವೇಳೆಗೆ ಭಾರತದ ಬಾಹ್ಯಾಕಾಶ ನಿಲ್ದಾಣ




* ಇಸ್ರೋ ತನ್ನ ಹೊಸ ಅಧ್ಯಕ್ಷ ಡಾ. ವಿ. ನಾರಾಯಣನ್ ನೇತೃತ್ವದಲ್ಲಿ 2035ರ ವೇಳೆಗೆ ಸ್ವತಂತ್ರ ಭಾರತೀಯ ಬಾಹ್ಯಾಕಾಶ ನಿಲ್ದಾಣವನ್ನು ಮತ್ತು 2040ರ ವೇಳೆಗೆ ಚಂದ್ರನ ಮೇಲ್ಮೈಗೆ ಮಾನವರನ್ನು ಕಳಿಸುವ ಗುರಿಯನ್ನು ಘೋಷಿಸಿದೆ.

* ಈ ಘೋಷಣೆ ಐಐಐಟಿಡಿಎಂ ಕರ್ನೂಲ್‌ನಲ್ಲಿ ನಡೆದ ಘಟಿಕೋತ್ಸವದಲ್ಲಿ ಪ್ರಕಟವಾಯಿತು, ಇದು ಭಾರತದ ಬಾಹ್ಯಾಕಾಶ ಕ್ಷೇತ್ರದಲ್ಲಿ ನಾವೀನ್ಯತೆ, ಶಿಕ್ಷಣ ಮತ್ತು ತಂತ್ರಜ್ಞಾನದ ಮಹತ್ವವನ್ನು ಎತ್ತಿ ತೋರಿಸುತ್ತದೆ.

* ಭಾರತದ ಬಾಹ್ಯಾಕಾಶ ಕಾರ್ಯಕ್ರಮವು ವಿನಮ್ರ ಆರಂಭದಿಂದ ವಿಶ್ವದಾರ್ಶಿ ಮಹತ್ವಾಕಾಂಕ್ಷೆಗಳಿಗೆ ಬೆಳೆಯಿತು.

* ಇಸ್ರೋ ಇಂದು ಭಾರಿ ಪೇಲೋಡ್‌ಗಳನ್ನು ಉಡಾಯಿಸುವ ಸಾಮರ್ಥ್ಯ ಹೊಂದಿದ್ದು, ಚಂದ್ರಯಾನ, ಮಂಗಳಯಾನ ಮತ್ತು ಆದಿತ್ಯ-ಎಲ್ 1 ಮಿಷನ್‌ಗಳ ಮೂಲಕ ಪ್ರಭಾವಶಾಲಿ ಸಾಧನೆಗಳನ್ನು ದಾಖಲೆ ಮಾಡಿದೆ.

* ಡಾ. ನಾರಾಯಣನ್ 2035ರ ವೇಳೆಗೆ ಬಾಹ್ಯಾಕಾಶ ನಿಲ್ದಾಣವನ್ನು ಸ್ಥಾಪಿಸಲು ಮತ್ತು 2040ರ ವೇಳೆಗೆ ಮಾನವ ಚಂದ್ರಯಾನ ನಡೆಸಲು ಇಸ್ರೋ ನಿರ್ಧರಿಸಿರುವುದಾಗಿ ಪ್ರಕಟಿಸಿದರು. ಇವು ಬಾಹ್ಯಾಕಾಶದಲ್ಲಿ ಭಾರತದ ಸ್ಥಿತಿಯನ್ನು ಬಲಪಡಿಸುವ ಮಹತ್ವದ ಹೆಜ್ಜೆಗಳಾಗಿವೆ.

* ಇಸ್ರೋ ಈಗಾಗಲೇ ಸೂರ್ಯನ ಅಧ್ಯಯನಕ್ಕಾಗಿ ಆದಿತ್ಯ-ಎಲ್1 ಮತ್ತು ಮಾನವಸಹಿತ ಮಿಷನ್‌ಗಾಗಿ ಡಾಕಿಂಗ್ ತಂತ್ರಜ್ಞಾನ ಸೇರಿದಂತೆ ಅನೇಕ ತಾಂತ್ರಿಕ ಮೈಲಿಗಲ್ಲುಗಳನ್ನು ತಲುಪಿದೆ. ಮುಂದಿನ ದಿನಗಳಲ್ಲಿ ಇಸ್ರೋ ವೀನಸ್ ಆರ್ಬಿಟರ್ ಮಿಷನ್ ಮತ್ತು ಇನ್ನಷ್ಟು ಉಪಗ್ರಹ ಉಡಾವಣೆಗಳತ್ತ ಗಮನ ಹರಿಸುತ್ತಿದೆ.

* ಖಾಸಗಿ ಕ್ಷೇತ್ರದ ಭಾಗವಹಿಸುವಿಕೆಯಿಂದ ಭಾರತೀಯ ಬಾಹ್ಯಾಕಾಶ ವಲಯವು ವೇಗವಾಗಿ ಬೆಳೆಯುತ್ತಿದ್ದು, ದೇಶದ ವೈಜ್ಞಾನಿಕ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಜಾಗತಿಕ ನಾಯಕತ್ವದತ್ತ ಭಾರತ ಕ್ರಮಿಸಿದೆ.

## ಐಐಟಿ ರೋಪ್‌ನ ಡ್ರೋನ್‌ಗಳು ಶೀಘ್ರದಲ್ಲಿ ಸೇನೆಗೆ ಸೇರ್ಪಡೆ



* ಐಐಟಿ ರೋಪ್‌ನಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಡ್ರೋನ್ ಸಂಸ್ಥೆಗಳು ಶೀಘ್ರದಲ್ಲೇ ಭಾರತೀಯ ಸೇನೆಗೆ ಸೇರ್ಪಡೆಗೊಳ್ಳಲಿದ್ದು ಸೇನಾ ಕಾರ್ಯಾಚರಣೆಗಳಲ್ಲಿ ಮುಂಚೂಣಿಯಲ್ಲಿ ಎಂದು ಇರಲಿವೆ ವರದಿಯಾಗಿದೆ.
* ಡ್ರೋನ್ಸ್ ಆ್ಯಂಟ್ಸ್ ಆಟೋನೊಮಸ್ ಸಿಸ್ಟಮ್ಸ್ ಸೆಂಟರ್‌ನಲ್ಲಿ ಸಂಶೋಧಕರು ಮತ್ತು ವಿದ್ಯಾರ್ಥಿಗಳ ತಂಡವು ಡೋನ್ ಗಳನ್ನು ನಿರ್ಮಾಣ ಮಾಡುತ್ತಿದೆ. ಇದು ಭಾರತಕ್ಕೆ ವಿದೇಶಿ ತಂತ್ರಜ್ಞಾನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ.
* ಯುದ್ಧ ಭೂಮಿಯಲ್ಲಿ ಇಳಿಯಬಹುದಾದ ಮತ್ತು ನೈಜ ಸಮಯದಲ್ಲಿ ಭೌಗೋಳಿಕ ಸ್ಥಳಗಳನ್ನು ಅಂದಾಜು ಮಾಡಬಹುದಾದ ಸ್ವಾಯತ್ತ ಡೋನ್‌ಗಳನ್ನು ನಿರ್ಮಿಸಲಾಗುತ್ತಿದೆ.
* ಐಐಟಿ ರೋಪರ್‌ನಲ್ಲಿ ಎರಡು ತಾಂತ್ರಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾ ಗುತ್ತದೆ. ಮೊದಲನೆಯದು ಯುದ್ಧಪೀಡಿತ ಪ್ರದೇಶಗಳಲ್ಲಿ ಡೋನ್ ಅನ್ನು ಸುರಕ್ಷಿತವಾಗಿ ಇಳಿಸುವುದು, ಎರಡನೆಯದು ವೈಮಾನಿಕ ಪ್ರದೇಶಗಳ ಮೇಲೆ ಕಣ್ಗಾವಲಿಡುವ ರೀತಿಯಲ್ಲಿ ಡ್ರೋನ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
* ಡ್ರೋನ್ ಮೂಲಕ ಕೇವಲ ಮ್ಯಾಪಿಂಗ್ ಮಾಡುವುದಿಲ್ಲ, ದಟ್ಟವಾದ ಕಾಡು, ಪೊದೆಗಳಲ್ಲಿ ಬಿದ್ದಿರುವ ವಸ್ತುಗಳನ್ನು ಗುರುತಿಸಲು, ಅಡಗಿರುವ ಶತ್ರು ರಾಷ್ಟ್ರದ ಸೈನಿಕರು, ಭಯೋತ್ಪಾದಕರು, ಉಗ್ರರನ್ನು ಗುರುತಿಸಲು ನೆರವಾಗುತ್ತದೆ. ಸೈನಿಕರು ಗಸ್ತು ತಿರುಗುವಿಕೆಗೆ ಕಷ್ಟವಾಗುವ ಪ್ರದೇಶಗಳಲ್ಲಿ ಈ ಡ್ರೋನ್‌ಗಳನ್ನು ನಿಯೋಜಿಸಲಾಗುತ್ತದೆ.

## FISM 2025 ರಲ್ಲಿ 'ಆಸ್ಕರ್ ಫಾರ್ ಮ್ಯಾಜಿಶಿಯನ್ಸ್' ಗೆದ್ದ ಮೊದಲ ಭಾರತೀಯ ಸುಹಾನಿ ಶಾ



* ಭಾರತದ ಪ್ರದರ್ಶನ ಕಲೆಗಳಿಗೆ ಒಂದು ಹೆಗ್ಗುರುತು ಸಾಧನೆಯಾಗಿ ರಾಜಸ್ಥಾನದ ಮಾನಸಿಕ ತಜ್ಞೆ ಸುಹಾನಿ ಶಾ ಅವರು ಫೆಡರೇಷನ್ ಇಂಟರ್ನ್ಯಾಷನಲ್ ಡೆಸ್ ಸೊಸೈಟೀಸ್ ಮ್ಯಾಜಿಕ್ಸ್ (FISM) ನಲ್ಲಿ 'ಅತ್ಯುತ್ತಮ ಮ್ಯಾಜಿಕ್ ಕ್ರಿಯೇಟರ್ 2025' ಪ್ರಶಸ್ತಿಯನ್ನು ಗೆದ್ದ ಮೊದಲ ಭಾರತೀಯರಾಗಿದ್ದಾರೆ, - ಇದನ್ನು ಜಾದೂಗಾರರಿಗೆ ಆಸ್ಕರ್ ಎಂದು ಕರೆಯಲಾಗುತ್ತದೆ.
* ಇಟಲಿಯ ಟೊರಿನೊದಲ್ಲಿ ನಡೆದ ಪ್ರತಿಷ್ಠಿತ FISM ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಆನ್‌ಲೈನ್ ಮ್ಯಾಜಿಕ್ ವಿಭಾಗದಲ್ಲಿ ಅವರ ಶ್ರೇಷ್ಠತೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಯಿತು.
* ಇಟಲಿಯ ಟೊರಿನೊದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಜಾಗತಿಕ ಪ್ರತಿಭೆಗಳು ಸ್ಪರ್ಧಿಸಿದರು, ಆನ್‌ಲೈನ್ ವಿಭಾಗದಲ್ಲಿ ಶಾ ಯುಕೆ, ಯುಎಸ್, ಆಸ್ಟ್ರೇಲಿಯಾ ಮತ್ತು ದುಬೈನ ಜಾದೂಗಾರರನ್ನು ಹಿಂದಿಕ್ಕಿ ಜಯಗಳಿಸಿದರು.
* FISM ವರ್ಲ್ಡ್ ಚಾಂಪಿಯನ್‌ಶಿಪ್ ಆಫ್ ಮ್ಯಾಜಿಕ್ ಫೆಡರೇಷನ್ ಇಂಟರ್ನ್ಯಾಷನಲ್ ಡೆಸ್ ಸೊಸೈಟೀಸ್ ಮ್ಯಾಜಿಕ್ಸ್ ಪ್ರತಿ ಮೂರು ವರ್ಷಗಳಿಗೊಮ್ಮೆ ಆಯೋಜಿಸುವ ಅಂತರರಾಷ್ಟ್ರೀಯ ಸ್ಪರ್ಧೆಯಾಗಿದೆ.
* 1948 ರಲ್ಲಿ ಸ್ಥಾಪನೆಯಾದ FISM ಅನ್ನು ಜಾದೂಗಾರರಿಗೆ ಅತ್ಯುನ್ನತ ಜಾಗತಿಕ ವೇದಿಕೆ ಎಂದು ಪರಿಗಣಿಸಲಾಗಿದೆ, ಇದು ವೇದಿಕೆಯ ಮ್ಯಾಜಿಕ್, ಕ್ಲೋಸ್-ಅಪ್ ಮ್ಯಾಜಿಕ್ ಮತ್ತು ಆನ್‌ಲೈನ್ ಮ್ಯಾಜಿಕ್‌ನಂತಹ ಬಹು ವಿಭಾಗಗಳಲ್ಲಿ ಅತ್ಯುತ್ತಮ ಪ್ರತಿಭೆಗಳನ್ನು ಪ್ರದರ್ಶಿಸುತ್ತದೆ.
* ಶಾ ವಿಜಯಶಾಲಿಯಾಗಿ ಹೊರಹೊಮ್ಮಿದ ಆನ್‌ಲೈನ್ ವಿಭಾಗದಲ್ಲಿ, ಯುಕೆಯ ಜ್ಯಾಕ್ ರೋಡ್ಸ್, ಯುಎಸ್‌ನ ಜೇಸನ್ ಲಡಾನ್ಯೆ, ಆಸ್ಟ್ರೇಲಿಯಾದ ಜೇಸನ್ ಮಹೇರ್ ಮತ್ತು ದುಬೈನ ಮೊಹಮ್ಮದ್ ಇಮಾನಿ ಸೇರಿದಂತೆ ಪ್ರತಿಭಾನ್ವಿತ ಸ್ಪರ್ಧಿಗಳು ಭಾಗವಹಿಸಿದ್ದರು. ಶಾ ಅವರ ಗೆಲುವು ಗಮನಾರ್ಹ ಸಾಧನೆಯಾಗಿದೆ, ವಿಶೇಷವಾಗಿ ಅವರು ಎದುರಿಸಿದ ಪ್ರತಿಭಾನ್ವಿತ ಜಾದೂಗಾರರ ಜಾಗತಿಕ ಗುಂಪನ್ನು ಪರಿಗಣಿಸಿ.
* ಜ್ಯಾಕ್ ರೋಡ್ಸ್ (ಯುಕೆ), ಜೇಸನ್ ಲಡಾನ್ಯೆ (ಯುಎಸ್), ಜೇಸನ್ ಮಹೇರ್ (ಆಸ್ಟ್ರೇಲಿಯಾ), ಮತ್ತು ಮೊಹಮ್ಮದ್ ಇಮಾನಿ (ದುಬೈ) ಅವರಂತಹ ಪ್ರಸಿದ್ಧ ಪ್ರದರ್ಶಕರ ವಿರುದ್ಧ ಸ್ಪರ್ಧಿಸುವ ಅವರ ಗೆಲುವು ಜಾಗತಿಕ ಸರ್ಕ್ಯೂಟ್‌ಗಳಲ್ಲಿ ಭಾರತೀಯ ಜಾದೂಗಾರರ ಹೆಚ್ಚುತ್ತಿರುವ ಸ್ಥಾನಮಾನವನ್ನು ಒತ್ತಿಹೇಳುತ್ತದೆ.

# 24 July 2025

## ಇಂದು ಭಾರತ ಬ್ರಿಟನ್ ಮುಕ್ತ ವ್ಯಾಪಾರ ಒಪ್ಪಂದ



* ಭಾರತ ಮತ್ತು ಬ್ರಿಟನ್ ಜುಲೈ 25ರಂದು ಲಂಡನ್‌ನಲ್ಲಿ "ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ"ಕ್ಕೆ ಸಹಿ ಹಾಕಲಿವೆ.
* ಈ ಒಪ್ಪಂದವು ಚರ್ಮ, ಪಾದರಕ್ಷೆ, ಬಟ್ಟೆ ರಫ್ತುಗೆ ಅವಕಾಶ ನೀಡುತ್ತಿದ್ದು, ಬ್ರಿಟನ್‌ನಿಂದ ವಿಸ್ಕಿ ಮತ್ತು ಕಾರುಗಳ ಆಮದು ಖರ್ಚು ಕಡಿಮೆ ಮಾಡುತ್ತದೆ.
* ಈ ಒಪ್ಪಂದದ ಮೂಲಕ 2030ರ ವೇಳೆಗೆ ಉಭಯ ದೇಶಗಳ ವ್ಯಾಪಾರ ಮೌಲ್ಯವನ್ನು 120 ಬಿಲಿಯನ್ ಡಾಲರ್‌ಗಳಿಗೆ ದ್ವಿಗುಣಗೊಳಿಸುವ ಉದ್ದೇಶವಿದೆ.
* ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರ ಸಮ್ಮುಖದಲ್ಲಿ, ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಮತ್ತು ಬ್ರಿಟನ್‌ನ ವಾಣಿಜ್ಯ ಸಚಿವ ಜೋನಾಥನ್ ರೆನಾಲ್ಡ್ಸ್ ಸಹಿ ಹಾಕಲಿದ್ದಾರೆ.
* ಒಪ್ಪಂದ ಜಾರಿಗೆ ಬರಲು ಬ್ರಿಟನ್ ಸಂಸತ್ತಿನ ಅನುಮೋದನೆ ಅಗತ್ಯವಾಗಿದ್ದು, ಈ ಪ್ರಕ್ರಿಯೆಗೆ ಒಂದು ವರ್ಷ ಬೇಕಾಗಬಹುದು.
* ಸರಕು, ಸೇವೆಗಳು, ಬೌದ್ಧಿಕ ಆಸ್ತಿ ಹಕ್ಕುಗಳು, ಸರ್ಕಾರದ ಖರೀದಿ, ನಾವೀನ್ಯತೆ ಸೇರಿದಂತೆ ಹಲವು ಅಂಶಗಳನ್ನು ಈ ಒಪ್ಪಂದ ಒಳಗೊಂಡಿದೆ.

KPSCVaani

* ಪ್ರಧಾನಿ ಮೋದಿ ಬ್ರಿಟನ್ ಮತ್ತು ಮಾಲ್ಡೀವ್ಸ್‌ಗೆ ನಾಲ್ಕು ದಿನಗಳ ಪ್ರವಾಸ ಕೈಗೊಂಡಿದ್ದು, ಒಪ್ಪಂದ ಸಹಿಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

## ಬಿಮಾ ಸಖಿ ಯೋಜನೆಯನ್ನು ಉತ್ತೇಜಿಸಲು ಎಲ್‌ಐಸಿ ಗ್ರಾಮೀಣಾಭಿವೃದ್ಧಿ ಸಚಿವಾಲಯದೊಂದಿಗೆ ಒಪ್ಪಂದಕ್ಕೆ ಸಹಿ




* ಭಾರತೀಯ ಜೀವ ವಿಮಾ ನಿಗಮ (LIC) ಜುಲೈ 21 ರಂದು (ಸೋಮವಾರ) ಗ್ರಾಮೀಣ ಪ್ರದೇಶಗಳಲ್ಲಿ ತನ್ನ ಬಿಮಾ ಸಖಿ ಯೋಜನೆಯನ್ನು ಉತ್ತೇಜಿಸಲು ಗ್ರಾಮೀಣಾಭಿವೃದ್ಧಿ ಸಚಿವಾಲಯದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ತಿಳಿಸಿದೆ.
* ಜುಲೈ 8 ರಿಂದ 10, 2025 ರವರೆಗೆ ಗೋವಾದಲ್ಲಿ ನಡೆದ ಸಚಿವಾಲಯದ ರಾಷ್ಟ್ರೀಯ ಹಣಕಾಸು ಸೇರ್ಪಡೆ ಸಮಾವೇಶ, ಅನುಭೂತಿಯಲ್ಲಿ ಈ ತಿಳಿವಳಿಕೆ ಒಪ್ಪಂದಕ್ಕೆ ಔಪಚಾರಿಕವಾಗಿ ಸಹಿ ಹಾಕಲಾಯಿತು.
* ಹೆಚ್ಚು ಲಾಭದಾಯಕ ವಿಮಾ ವಿತರಣಾ ಯೋಜನೆಯಲ್ಲಿ ಮಹಿಳೆಯರು ಬಲವಾದ ನೆಲೆಯನ್ನು ಪಡೆಯಲು ಸಹಾಯ ಮಾಡಲು ಎಲ್‌ಐಸಿಯ ಬಿಮಾ ಸಖಿ ಯೋಜನೆಯನ್ನು ಪ್ರತ್ಯೇಕವಾಗಿ ವಿನ್ಯಾಸಗೊಳಿಸಲಾಗಿದೆ ಎಂದು ವಿಮಾದಾರರು ಹೇಳಿಕೆಯಲ್ಲಿ ತಿಳಿಸಿದ್ದಾರೆ.
* ಎಲ್‌ಐಸಿಯ ಬೀಮಾ ಸಖಿ ಯೋಜನೆಯನ್ನು ಮಹಿಳೆಯರು ಹೆಚ್ಚು ಲಾಭದಾಯಕ ವಿಮಾ ವಿತರಣಾ ಯೋಜನೆಯಲ್ಲಿ ಬಲವಾದ ನೆಲೆಯನ್ನು ಪಡೆಯಲು ಸಹಾಯ ಮಾಡಲು ಪ್ರತ್ಯೇಕವಾಗಿ ವಿನ್ಯಾಸಗೊಳಿಸಲಾಗಿದೆ.
* ಈ ಯೋಜನೆಯಡಿಯಲ್ಲಿ, ಬೀಮಾ ಸಖಿ ಏಜೆಂಟ್‌ಗಳಿಗೆ ಕೆಲವು ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಮೊದಲ ವರ್ಷದಲ್ಲಿ ರೂ 7,000, ಎರಡನೇ ವರ್ಷದಲ್ಲಿ ರೂ 6,000 ಮತ್ತು ಮೂರನೇ ಏಜೆನ್ಸಿ ವರ್ಷದಲ್ಲಿ ರೂ 5,000 ಮಾಸಿಕ ಸ್ಟೈಫಂಡ್ ಪಡೆಯುವ ಸೌಲಭ್ಯವನ್ನು ಒದಗಿಸಲಾಗಿದೆ.
* ಭಾರತೀಯ ಜೀವ ವಿಮಾ ನಿಗಮವು (LIC) ಸರ್ಕಾರಿ ಸ್ವಾಮ್ಯದ ವಿಮಾ ಗುಂಪು ಮತ್ತು ಹೂಡಿಕೆ ಕಂಪನಿಯಾಗಿದ್ದು, ಇದನ್ನು LIC ಎಂದು ಕರೆಯಲಾಗುತ್ತದೆ.
* ಈ ಯೋಜನೆಯಡಿಯಲ್ಲಿ, ಅರ್ಹ ಮಹಿಳೆಯರಿಗೆ ಮೊದಲ ಏಜೆನ್ಸಿ ವರ್ಷದಲ್ಲಿ ₹7,000, ಎರಡನೇ ವರ್ಷದಲ್ಲಿ ₹6,000 ಮತ್ತು ಮೂರನೇ ವರ್ಷದಲ್ಲಿ ₹5,000 ಮಾಸಿಕ ಸ್ಟೈಫಂಡ್ ನೀಡಲಾಗುತ್ತದೆ - ಕೆಲವು ಮಾನದಂಡಗಳನ್ನು ಪೂರೈಸಿದರೆ.






## ಜುಲೈ 24 : ಆದಾಯ ತೆರಿಗೆ ದಿನ





* ಆದಾಯ ತೆರಿಗೆ ಇಲಾಖೆಯು ಪ್ರತಿ ವರ್ಷ ಜುಲೈ 24 ಅನ್ನು ಆದಾಯ ತೆರಿಗೆ ದಿನ ಅಥವಾ 'ಆಯ್ಕಾರ್ ದಿವಸ್' ಎಂದು ಆಚರಿಸುತ್ತದೆ, ಇದು ದೇಶದಲ್ಲಿ ಆದಾಯ ತೆರಿಗೆಯನ್ನು ಒದಗಿಸಿದ ಪರಿಚಯದ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ.
* 1860 ರ ಮೊದಲ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಉಂಟಾದ ನಷ್ಟವನ್ನು ಸರಿದೂಗಿಸಲು ಸರ್ ಜೇಮ್ಸ್ ವಿಲ್ಸನ್ ಅವರು ಭಾರತದಲ್ಲಿ ಆದಾಯ ತೆರಿಗೆಯನ್ನು ಪರಿಚಯಿಸಿದರು. ಇದು ಆದಾಯ ತೆರಿಗೆ ದಿನದ 165 ನೇ ವಾರ್ಷಿಕೋತ್ಸವವಾಗಿದೆ.
* ಆದಾಯ ತೆರಿಗೆ ದಿನದಂದು, ಆದಾಯ ತೆರಿಗೆ ಮತ್ತು ಅದರ ಮಹತ್ವದ ಬಗ್ಗೆ ಅರಿವು ಮೂಡಿಸಲು CBDT ವಿವಿಧ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ಆಯೋಜಿಸುತ್ತದೆ.
* ಈ ಘಟನೆಗಳು ಸೆಮಿನಾರ್‌ಗಳು, ಕಾರ್ಯಾಗಾರಗಳು ಮತ್ತು ಔಟ್ ರೀಚ್ ಕಾರ್ಯಕ್ರಮಗಳನ್ನು ಒಳಗೊಂಡಿವೆ.

## ದೇಶದಲ್ಲಿ ತಲಾ ಆದಾಯ ಏರಿಕೆ: ಅಗ್ರಸ್ಥಾನದಲ್ಲಿ ಕರ್ನಾಟಕ



* 2024-25ನೇ ಸಾಲಿನಲ್ಲಿ ಕರ್ನಾಟಕವು ದೇಶದಲ್ಲಿ ತಲಾ ಆದಾಯದಲ್ಲಿ ಅಗ್ರಸ್ಥಾನ ಪಡೆದಿದೆ. ರಾಜ್ಯದ ತಲಾ ಆದಾಯ ₹2,04,605 ಆಗಿದ್ದು, 2014-15ರ ₹1,05,697ರಿಂದ ಶೇ. 93.6ರಷ್ಟು ಏರಿಕೆಯಾಗಿದೆ.
* ರಾಷ್ಟ್ರಮಟ್ಟದಲ್ಲಿ ತಲಾ ರಾಷ್ಟ್ರೀಯ ಆದಾಯ ₹1,14,710 ಆಗಿದೆ. ಇದು 2014-15ರಲ್ಲಿ ₹72,805 ಇತ್ತು. ತಲಾ ಆದಾಯದಲ್ಲಿ ಹೆಚ್ಚಿನ ಬೆಳವಣಿಗೆಯು ವಿವಿಧ ರಾಜ್ಯಗಳಲ್ಲಿ ವಿಭಿನ್ನವಾಗಿ ಕಂಡುಬಂದಿದೆ.
* ಕರ್ನಾಟಕವು ತಮಿಳುನಾಡು (₹1,96,309) ಮತ್ತು ಇತರ ರಾಜ್ಯಗಳನ್ನು ಮೀರಿಸಿ ಅಗ್ರಸ್ಥಾನಕ್ಕೇರಿದೆ. ತಮಿಳುನಾಡು ದ್ವಿತೀಯ ಸ್ಥಾನದಲ್ಲಿದೆ.
* ದಶಕದ ಬೆಳವಣಿಗೆ ದರದಲ್ಲಿ ಒಡಿಶಾ ಶೇ.96.7ರೊಂದಿಗೆ ಮೊದಲ ಸ್ಥಾನದಲ್ಲಿದ್ದು, ಕರ್ನಾಟಕ ಶೇ.93.6ರೊಂದಿಗೆ ದ್ವಿತೀಯ ಸ್ಥಾನದಲ್ಲಿದೆ. ತಲಾ ಆದಾಯದಲ್ಲಿ ಗರಿಷ್ಠ ಬೆಳವಣಿಗೆ ಮಿಜೋರಾಂನಲ್ಲಿ ಶೇ.125.4 ದಾಖಲಾಗಿದೆ.
* ಕೆಲವು ರಾಜ್ಯಗಳಾದ ಕೇರಳ, ಮಿಜೋರಾಂ, ಜಾರ್ಖಂಡ್ ಇತ್ಯಾದಿಗಳ ತಲಾ ಆದಾಯದ ದತ್ತಾಂಶ ಲಭ್ಯವಿಲ್ಲವೆಂದು ಕೇಂದ್ರ ಸರ್ಕಾರ ತಿಳಿಸಿದೆ.

## SOAR ಉಪಕ್ರಮ: ಕೌಶಲ ಎಐ ಕಲಿಕೆಗಾಗಿ ಹೊಸ ಹೆಜ್ಜೆ




* ಭಾರತವು ಕೃತಕ ಬುದ್ಧಿಮತ್ತೆ (AI) ಕ್ಷೇತ್ರದಲ್ಲಿ ಯುವಜನತೆಗೆ ಸಕ್ರಿಯ ಅವಕಾಶ ಕಲ್ಪಿಸಲು 'SOAR ಫಾರ್ ಎಐ ರೆಡಿನೆಸ್' ಎಂಬ ಹೊಸ ಉಪಕ್ರಮಕ್ಕೆ ಚಾಲನೆ ನೀಡಿದೆ.
* ಕೌಶಲಾಭಿವೃದ್ಧಿ ರಾಜ್ಯ ಸಚಿವ ಜಯಂತ್ ಚೌಧರಿ ದಿಲ್ಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, 6ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಎಐ ಬಗ್ಗೆ ಅರಿವು ಮೂಡಿಸಲು ಹಾಗೂ ಮೂಲಭೂತ ಜ್ಞಾನ ಕಲಿಸಲು ಈ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.
* ಈ ಯೋಜನೆಯಡಿ ವಿದ್ಯಾರ್ಥಿಗಳಿಗೆ 15 ಗಂಟೆಗಳ 'ಎಐ ಟು ಬಿ ಅವೇರ್, ಎಐ ಟು ಆಕ್ಟ್, ಎಐ ಟು ಮಾಸ್ಟರ್' ಎಂಬ ಮಾಡ್ಯೂಲ್ ಕಲಿಸಲಾಗುತ್ತದೆ. ಶಿಕ್ಷಕರಿಗಾಗಿ 45 ಗಂಟೆಗಳ 'ಎಐ ಫಾರ್ ಎಜುಕೇಟರ್ಸ್' ತರಬೇತಿ ಸಹ ನೀಡಲಾಗುವುದು.
* ಈ ಕ್ರಮದ ಮೂಲಕ ಎಐ ತಂತ್ರಜ್ಞಾನದ ಅರ್ಥಪೂರ್ಣ ಹಾಗೂ ಪರಿಣಾಮಕಾರಿ ಕಲಿಕೆಗೆ ಪ್ರೋತ್ಸಾಹ ನೀಡಲಾಗುತ್ತಿದೆ.

## ಜಾರ್ಖಂಡ್‌ನಲ್ಲಿ ಭಾರತದ ಮೊದಲ ಗಣಿಗಾರಿಕೆ ಪ್ರವಾಸೋದ್ಯಮ ಯೋಜನೆ



* ಜಾರ್ಖಂಡ್ ಭಾರತದ ಮೊದಲ ಗಣಿಗಾರಿಕೆ ಪ್ರವಾಸೋದ್ಯಮವನ್ನು ಪ್ರಾರಂಭಿಸಲು ಸಜ್ಜಾಗಿದೆ. ಇದು ಕೈಗಾರಿಕಾ ಪರಂಪರೆಯನ್ನು ಪ್ರವಾಸೋದ್ಯಮದೊಂದಿಗೆ ಸಂಯೋಜಿಸುವ ಹೊಸ ಪ್ರಯೋಗವಾಗಿದೆ, ಸಂದರ್ಶಕರಿಗೆ ಖನಿಜ ಸಮೃದ್ಧ ರಾಜ್ಯದ ಭೂದೃಶ್ಯಗಳ ಪರಿಚಯವನ್ನು ನೀಡಲಿದೆ.
* ಈ ಯೋಜನೆಗಾಗಿ ಜೆಟಿಡಿಸಿ ಮತ್ತು ಸೆಂಟ್ರಲ್ ಕೋಲ್‌ಫೀಲ್ಡ್ಸ್ ಲಿಮಿಟೆಡ್ (CCL) ನಡುವೆ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಈ ಮೂಲಕ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸಹಯೋಗಕ್ಕೆ ನಾಂದಿ ನೀಡಲಾಗಿದೆ.
* ಉತ್ತರ ಉರಿಮರಿ ಪ್ರದೇಶದಿಂದ ಆರಂಭವಾಗಿ ಕಾರ್ಯನಿರ್ವಹಣೆಯಲ್ಲಿರುವ ಕಲ್ಲಿದ್ದಲು ಗಣಿಗಳಿಗೆ ಭೇಟಿಯ ಅವಕಾಶ ಕಲ್ಪಿಸಲಾಗುವುದು. ಭವಿಷ್ಯದಲ್ಲಿ ಇತರ ಗಣಿಗಳನ್ನು ಸಹ ಸೇರಿಸಲಾಗುತ್ತದೆ.
* ಒಪ್ಪಂದ ಪ್ರಾರಂಭಿಕವಾಗಿ ಐದು ವರ್ಷಗಳಿಗಿದ್ದು, ಮುಂದಿನ ಐದು ವರ್ಷಗಳಿಗೆ ವಿಸ್ತರಿಸಬಹುದಾಗಿದೆ. ವಾರದಲ್ಲಿ ಎರಡು ಬಾರಿ 10-20 ಜನರ ಗುಂಪುಗಳಿಗೆ ಪ್ರವಾಸ ಆಯೋಜಿಸಲಾಗುತ್ತದೆ.
* ಈ ಯೋಜನೆಯು ಪ್ರವಾಸಿಗರಿಗೆ ಕಲ್ಲಿದ್ದಲು ಗಣಿಗಾರಿಕೆಯ ಇತಿಹಾಸ, ಸವಾಲುಗಳು ಮತ್ತು ನಾವೀನ್ಯತೆಗಳ ಬಗ್ಗೆ ಅರಿವು ನೀಡುತ್ತದೆ. ಎಲ್ಲಾ ಸಂದರ್ಶಕರಿಗೂ CCL ನ ಸುರಕ್ಷತಾ ನಿಯಮಗಳನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ.
* ಈ ಯೋಜನೆಯು ಕೇವಲ ಪ್ರವಾಸವಲ್ಲ; ಇದು ಶೈಕ್ಷಣಿಕ ಗಂಭೀರತೆಯುಳ್ಳ ಕೈಗಾರಿಕಾ ಅನುಭವವೂ ಆಗಿದ್ದು, ಜಾರ್ಖಂಡ್‌ನ ಆರ್ಥಿಕತೆ ಮತ್ತು ಇಂಧನ ತಂತ್ರಜ್ಞಾನಗಳ ವಿಶಿಷ್ಟತೆಯನ್ನು ಎತ್ತಿ ತೋರಿಸುತ್ತದೆ.

## ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ-2025



* ಮಂಡನೆಯಾಗಿರುವ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ-2025 ದೇಶದ ಕ್ರೀಡಾ ರಂಗದಲ್ಲಿ ಪರಿವರ್ತನೆಯ ಹೆಜ್ಜೆಯಾಗಿ ಪರಿಗಣಿಸಲಾಗಿದೆ. ಈ ಮಸೂದೆಯು ಪಾರದರ್ಶಕತೆ, ಉತ್ತರದಾಯಿತ್ವ, ಲಿಂಗ ಸಮಾನತೆ ಮತ್ತು ಉತ್ತಮ ಆಡಳಿತವನ್ನು ಉತ್ತೇಜಿಸಲು ಗುರಿಯಾಗಿದ್ದು, ಎಲ್ಲಾ ಕ್ರೀಡಾ ಸಂಸ್ಥೆಗಳನ್ನು ಕಾನೂನಿನ ವ್ಯಾಪ್ತಿಗೆ ತರಲು ಯತ್ನಿಸುತ್ತದೆ.
* ರಾಷ್ಟ್ರೀಯ ಕ್ರೀಡಾ ಮಂಡಳಿ (NSB) : ಹೊಸ ರಾಷ್ಟ್ರ ಮಟ್ಟದ ಸಂಸ್ಥೆ ಸ್ಥಾಪನೆಯು ಪ್ರಮುಖ ಅಂಶ. ಈ ಮಂಡಳಿ 55ಕ್ಕೂ ಹೆಚ್ಚು ಕ್ರೀಡಾ ಒಕ್ಕೂಟಗಳಿಗೆ ಮಾನ್ಯತೆ ನೀಡುವ ಅಥವಾ ರದ್ದು ಮಾಡುವ ಅಧಿಕಾರ ಹೊಂದಿರುತ್ತದೆ. ಅವ್ಯವಹಾರದ ಸಂದರ್ಭದಲ್ಲಿ

ನಿರ್ವಹಣಾ ಮಂಡಳಿಗಳನ್ನು ಪುನರ್‌ರಚಿಸಲು ಶಕ್ತಿಯು ಇದಕ್ಕೆ ಒದಗಿಸಲಾಗಿದೆ.

* ರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿ (NST) : ಕ್ರೀಡಾ ವಿಚಾರಗಳು ಭಾನುವಿಧಾನದಿಂದ ಬಗೆಹರಿಯಲು ಕ್ರೀಡಾ ನ್ಯಾಯಮಂಡಳಿ ಸ್ಥಾಪನೆಯು ಪ್ರಸ್ತಾವಿತವಾಗಿದೆ. ಇದರ ಅಧ್ಯಕ್ಷರು ಸುಪ್ರೀಂ/ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿರಲಿದ್ದಾರೆ. ನ್ಯಾಯಮಂಡಳಿಯ ತೀರ್ಪುಗಳನ್ನು ಕೇವಲ ಸುಪ್ರೀಂ ಕೋರ್ಟ್‌ನಲ್ಲಿ ಮಾತ್ರ ಪ್ರಶ್ನಿಸಬಹುದು.

* RTI ವ್ಯಾಪ್ತಿ ಮತ್ತು ಚುನಾವಣಾ ನಿಯಂತ್ರಣ : ಎಲ್ಲಾ ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳನ್ನು ಮಾಹಿತಿ ಹಕ್ಕು ಕಾಯ್ದೆ (RTI) ವ್ಯಾಪ್ತಿಗೆ ತರುತ್ತಿದೆ. ಚುನಾವಣಾ ಪ್ರಕ್ರಿಯೆಯ ಮೇಲೆ ನಿಗಾವಹಿಸಲು ಸರ್ಕಾರ 'ಕ್ರೀಡಾ ಚುನಾವಣಾ ಸಮಿತಿ' ರಚಿಸಲಿದ್ದು, ಅದು ತಟಸ್ಥ ಚುನಾವಣೆಗಳನ್ನು ನೆರವೇರಿಸಲಿದೆ.

* ಅಧ್ಯಕ್ಷರ ವಯಸ್ಸು ಮತ್ತು ಅವಧಿ ಮಿತಿಗಳು : ಪದಾಧಿಕಾರಿಗಳ ವಯಸ್ಸನ್ನು ಗರಿಷ್ಠ 70ರಿಂದ 75 ವರ್ಷಕ್ಕೆ ವಿಸ್ತರಿಸುವ ಅವಕಾಶವಿದೆ. ಒಬ್ಬ ವ್ಯಕ್ತಿ ಸತತವಾಗಿ 12 ವರ್ಷಗಳವರೆಗೆ ಮಾತ್ರ ಅಧಿಕಾರದಲ್ಲಿರಬಹುದು.

* ಬಿಸಿಸಿಐನಿಗೆ ನಿಯಂತ್ರಣ : ಈ ಮಸೂದೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (BCCI)ಯನ್ನೂ ನಿಯಂತ್ರಣಕ್ಕೆ ತರುತ್ತಿದೆ. ಬಿಸಿಸಿಐಗೆ ಕೇಂದ್ರದ ಅನುದಾನ ಇಲ್ಲದಿದ್ದರೂ, ನಿಯಮಗಳು ಇದರಿಗೂ ಅನ್ವಯವಾಗುತ್ತವೆ. RTI ಅಡಿಗೆ ತರಲಾಗುತ್ತದೆ ಹಾಗೂ ಚುನಾವಣೆ-ವಿವಾದಗಳ ಮೇಲ್ವಿಚಾರಣೆ ಕ್ರೀಡಾ ನ್ಯಾಯಮಂಡಳಿಯ ಮೂಲಕ ನಡೆಯುತ್ತದೆ.

* ವಿರೋಧ ಮತ್ತು ಪ್ರತಿಕ್ರಿಯೆ : ಬಿಸಿಸಿಐ ಈ ಕಾಯ್ದೆಗೆ ಎಚ್ಚರಿಕೆಯ ಪ್ರತಿಕ್ರಿಯೆ ನೀಡಿದ್ದು, ಇದರ ಅಧ್ಯಯನ ಮಾಡುವುದಾಗಿ ಮತ್ತು ಸರ್ಕಾರದೊಂದಿಗೆ ಮಾತುಕತೆ ನಡೆಸುವುದಾಗಿ ಹೇಳಿದೆ.

* ಒಲಿಂಪಿಕ್ಸ್ ಗುರಿ : ಭಾರತ 2036ರ ಒಲಿಂಪಿಕ್ಸ್ ಆತಿಥ್ಯಕ್ಕಾಗಿ ಬಿಡ್ ಸಲ್ಲಿಸಲು ಸಜ್ಜಾಗಿದ್ದು, ಈ ಕಾಯ್ದೆಯು ಅಂತರರಾಷ್ಟ್ರೀಯ ಮಾನದಂಡಗಳನ್ನು ಪೂರೈಸಲು ನೆರವಾಗಲಿದೆ.

* ಈ ಮಸೂದೆ ಕ್ರೀಡಾ ಕ್ಷೇತ್ರದಲ್ಲಿ ವ್ಯವಸ್ಥಿತ, ಜವಾಬ್ದಾರಿ ಯುಕ್ತ ಮತ್ತು ಸಮಾನಾತ್ಮಕ ಆಡಳಿತವನ್ನು ಸ್ಥಾಪಿಸಲು ಪ್ರಮುಖ ಹೆಜ್ಜೆಯಾಗಿದೆ. BCCIನ ನಿಯಂತ್ರಣ ಸೇರಿ ಬಹುಮುಖ್ಯ ಬದಲಾವಣೆಗಳನ್ನು ಉದ್ದೇಶಿಸುತ್ತಿದ್ದು, ಮುಂದಿನ ದಿನಗಳಲ್ಲಿ ಈ ಮಸೂದೆ ಭಾರಿ ಚರ್ಚೆಗೆ ಕಾರಣವಾಗಲಿದೆ.

## ಭಾರತದ ಮೊದಲ ಹಾರ್ನ್ಬಿಲ್ ಸಂರಕ್ಷಣಾ ಕೇಂದ್ರ



* ತಮಿಳುನಾಡು ಸರ್ಕಾರವು ಕೋಯಮತ್ತೂರು ಜಿಲ್ಲೆಯ ಅನಾಮಲೈ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಗಂಡಭೇರುಂಡ(ಹಾರ್ನ್ಬಿಲ್) ಪಕ್ಷಿಗಳ ಸಂರಕ್ಷಣೆಗೆ ನಿಗಮಿತ ತಜ್ಞತೆ ಕೇಂದ್ರವನ್ನು ಸ್ಥಾಪಿಸಲು ₹1 ಕೋಟಿ ಬಿಡುಗಡೆ ಮಾಡಿದೆ.

* ಈ ಕೇಂದ್ರವು ಗ್ರೇಟ್ ಹಾರ್ನ್ಬಿಲ್, ಮಲಬಾರ್ ಗ್ರೇ ಹಾರ್ನ್ಬಿಲ್, ಮಲಬಾರ್ ಪೈಡ್ ಹಾರ್ನ್ಬಿಲ್ ಮತ್ತು ಇಂಡಿಯನ್ ಗ್ರೇ ಹಾರ್ನ್ಬಿಲ್ ಸೇರಿದಂತೆ ನಾಲ್ಕು ಪ್ರಭೇದಗಳ ಸಂರಕ್ಷಣೆಯತ್ತ ದೃಷ್ಟಿಸಲಿದೆ.

* ಕೇಂದ್ರದಲ್ಲಿ ವಾಸಸ್ಥಳ ನಕ್ಷೆ, ಗೂಡು ಮೇಲ್ವಿಚಾರಣೆ, ಹವಾಮಾನ ವಿಶ್ಲೇಷಣೆ, ಅರಣ್ಯ ಪುನಃಸ್ಥಾಪನೆ ಮತ್ತು ವೈಜ್ಞಾನಿಕ ಅಧ್ಯಯನ ಕೈಗೊಳ್ಳಲಾಗುತ್ತದೆ.

* ಸಮುದಾಯ ಪಾಲ್ಗೊಳ್ಳಿಕೆ, ವಿದ್ಯಾರ್ಥಿವೇತನ, ಗೂಡು ದತ್ತತ್ವ, ಬೀಜ ಸಂಗ್ರಹಣೆ ಮತ್ತು ಜಾಗೃತಿ ಕಾರ್ಯಕ್ರಮಗಳ ಮೂಲಕ ಸ್ಥಳೀಯರಿಗೂ ಅವಕಾಶ ಕಲ್ಪಿಸಲಾಗುತ್ತದೆ.

* ಅಂತಾರಾಷ್ಟ್ರೀಯ ಸಹಕಾರದಲ್ಲಿ ಈ ಯೋಜನೆ ಅನಾಮಲೈ ಸೇರಿದಂತೆ STR, KMTR ಮತ್ತು ಕನ್ಯಾಕುಮಾರಿಯ ಕೆಲವು ಪ್ರದೇಶಗಳಲ್ಲಿ ಜಾರಿಗೊಳ್ಳಲಿದೆ.

## ₹39 ಕೋಟಿ ಅನುದಾನದ ಅಡಿಯಲ್ಲಿ 5 ಯೋಜನೆಗಳಿಗೆ ಭಾರತ ಮತ್ತು ನೇಪಾಳ ಒಪ್ಪಂದಕ್ಕೆ ಸಹಿ



* ಭಾರತ ಮತ್ತು ನೇಪಾಳ ನಡುವೆ ₹390 ಮಿಲಿಯನ್ ಮೊತ್ತದ ಅನುದಾನದ ಅಡಿಯಲ್ಲಿ ಐದು "ಹೆಚ್ಚಿನ ಪರಿಣಾಮ ಬೀರುವ" ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

* ಈ ಯೋಜನೆಗಳು ನೇಪಾಳದ ಮಾಧೇಶ್, ಸುದುರ್ಪಾಶ್ಚಿಮ್ ಮತ್ತು ಗಂಡಕಿ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳು ಮತ್ತು ಆಸ್ಪತ್ರೆಗಳ ನಿರ್ಮಾಣವನ್ನು ಒಳಗೊಂಡಿವೆ.

* ಈ ಸೌಲಭ್ಯಗಳು ನೇಪಾಳದ ಜನತೆಗೆ ಉತ್ತಮ ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ಸಹಾಯ ಮಾಡುತ್ತವೆ.

* ಭಾರತ ಮತ್ತು ನೇಪಾಳ ನಡುವಿನ ಸಹಕಾರವು ನೆರೆಹೊರೆಯ ರಾಷ್ಟ್ರಗಳ ನಡುವೆ ಇರುವ ಗಾಢ ಸಂಬಂಧವನ್ನು ಪ್ರತಿಬಿಂಬಿಸುತ್ತದೆ. ಭಾರತ ಸರ್ಕಾರ, ನೇಪಾಳದ ಆಧಾರಭುತ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ನಿರಂತರ ಬೆಂಬಲ ನೀಡುತ್ತಿದೆ.

## ರಾಷ್ಟ್ರೀಯ ಬಿಕ್ಕಟ್ಟು ನಿರ್ವಹಣಾ ಸಮಿತಿ ರಚನೆ (NCMC)




* ಜುಲೈ 23ರಂದು ಕೇಂದ್ರ ಸರ್ಕಾರವು ರಾಷ್ಟ್ರೀಯ ಪರಿಣಾಮ ಬೀರುವ ವಿಪತ್ತುಗಳನ್ನು ನಿಭಾಯಿಸಲು ಕ್ಯಾಬಿನೆಟ್ ಕಾರ್ಯದರ್ಶಿಯವರ ನೇತೃತ್ವದಲ್ಲಿ ರಾಷ್ಟ್ರೀಯ ಬಿಕ್ಕಟ್ಟು ನಿರ್ವಹಣಾ ಸಮಿತಿಯನ್ನು ರಚಿಸಿದೆ.

* ಈ ಕ್ರಮವನ್ನು ವಿಪತ್ತು ನಿರ್ವಹಣಾ ಕಾಯ್ದೆ, 2005ರ ಸೆಕ್ಷನ್ 8A(2) ಅಡಿಯಲ್ಲಿ ತೆಗೆದುಕೊಳ್ಳಲಾಗಿದೆ.
* ಎನ್‌ಸಿಎಂಸಿಯಲ್ಲಿ ಕ್ಯಾಬಿನೆಟ್ ಕಾರ್ಯದರ್ಶಿ ಅಧ್ಯಕ್ಷರಾಗಿದ್ದು, ಗೃಹ ಕಾರ್ಯದರ್ಶಿ, ರಕ್ಷಣಾ ಕಾರ್ಯದರ್ಶಿ, ಕಾರ್ಯದರ್ಶಿ (ಸಮನ್ವಯ), ಎನ್‌ಡಿಎಂಎ ಸದಸ್ಯರು ಮತ್ತು ಸಂಬಂಧಿತ ಇಲಾಖೆಗಳ ಮುಖ್ಯಸ್ಥರು ಸದಸ್ಯರಾಗಿ ಒಳಗೊಂಡಿದ್ದಾರೆ.
* ಈ ಸಮಿತಿಯ ರಚನೆ ಹಿಮಾಚಲ ಪ್ರದೇಶ, ಜಮ್ಮು-ಕಾಶ್ಮೀರ, ಉತ್ತರಾಖಂಡ, ಮಣಿಪುರ ಸೇರಿದಂತೆ ಹಲವು ರಾಜ್ಯಗಳಲ್ಲಿ ಭಾರಿ ಮಳೆಯ ಪರಿಣಾಮವಾಗಿ ಸಂಭವಿಸಿದ ಪ್ರವಾಹ ಮತ್ತು ಭೂಕುಸಿತದ ನಂತರ ನಡೆದಿದೆ.
* NCMC ವಿಪತ್ತು ಪರಿಸ್ಥಿತಿಗೆ ಪ್ರತಿಕ್ರಿಯೆ ನೀಡುವ ಸಿದ್ಧತೆಯ ಮೌಲ್ಯಮಾಪನ ಮಾಡುತ್ತದೆ ಮತ್ತು ಅಗತ್ಯವಿದ್ದರೆ ನಿರ್ದೇಶನಗಳನ್ನು ನೀಡುತ್ತದೆ.
* ಅದೇ ರೀತಿ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳ ಕಾರ್ಯಾಚರಣೆಗಳನ್ನು ಸಮನ್ವಯಗೊಳಿಸಿ, ಮೇಲ್ವಿಚಾರಣೆ ಮಾಡುತ್ತದೆ.
* ವಿಪತ್ತು ನಿರ್ವಹಣೆಯ ಸರಿಯಾದ ನಿರ್ವಹಣೆಗಾಗಿ ದೇಶದ ಮಟ್ಟದಲ್ಲಿ ಅಗತ್ಯವಿರುವ ನಿರ್ದೇಶನಗಳನ್ನು ಈ ಸಮಿತಿ ನೀಡುತ್ತದೆ.

# 25 July 2025

## 2025ರ FIDE ಚೆಸ್ ವಿಶ್ವಕಪ್'ಗೆ ಭಾರತ ಆತಿಥ್ಯ




* 2025ರ ಅತ್ಯಂತ ಪ್ರತಿಷ್ಠಿತ FIDE ಚೆಸ್ ವಿಶ್ವಕಪ್ ಪಂದ್ಯಾವಳಿ ಭಾರತದಲ್ಲಿ ಅಕ್ಟೋಬರ್ 30 ರಿಂದ ನವೆಂಬರ್ 27ರವರೆಗೆ ನಡೆಯಲಿದೆ ಎಂದು ಅಂತರರಾಷ್ಟ್ರೀಯ ಚೆಸ್ ಫೆಡರೇಶನ್ ಘೋಷಿಸಿದೆ. ಆತಿಥೇಯ ನಗರವನ್ನು ಇನ್ನೂ ನಿಗದಿಪಡಿಸಲಾಗಿಲ್ಲ.
* ಈ ನಾಕೌಟ್ ಮಾದರಿಯ ಟೂರ್ನಮೆಂಟ್‌ನಲ್ಲಿ 206 ಆಟಗಾರರು ಭಾಗವಹಿಸಲಿದ್ದು, 2026ರ ಅಭ್ಯರ್ಥಿಗಳ ಟೂರ್ನಿಗೆ ಮೂರು ಸ್ಥಾನಗಳು ಲಭ್ಯವಿವೆ. 2021ರಿಂದ ಜಾರಿಯಲ್ಲಿರುವ ಈ ಏಕ-ಎಲಿಮಿನೇಷನ್ ಮಾದರಿಯಲ್ಲಿ ಪ್ರತಿ ಸುತ್ತಿಗೆ ಮೂರು ದಿನಗಳ ಕಾಲಾವಧಿಯಿದೆ.
* ಡಿಕೆ ಗುಕೇಶ್, ಆರ್. ಪ್ರಜ್ಞಾನಂದ, ಅರ್ಜುನ್ ಎರಿಗೈಸಿ, ಮತ್ತು ಮ್ಯಾಗ್ನಸ್ ಕಾರ್ಲ್ಸನ್ ಸೇರಿದಂತೆ ಪ್ರಮುಖ ಆಟಗಾರರು ಸ್ಪರ್ಧೆಯ ನಿರೀಕ್ಷೆಯಲ್ಲಿದ್ದಾರೆ. ಭಾರತವು ಮೊದಲ ಬಾರಿಗೆ ವಿಶ್ವಕಪ್‌ಗೆ ಆತಿಥ್ಯ ನೀಡುತ್ತಿದೆ.
* ಚೆಸ್ ಒಲಿಂಪಿಯಾಡ್, ಟಾಟಾ ಸ್ಟೀಲ್ ಚೆಸ್, ಮತ್ತು ಮಹಿಳಾ ಗ್ರ್ಯಾಂಡ್ ಪ್ರಿಕ್ಸ್ ಸೇರಿದಂತೆ ಹಲವಾರು ಪ್ರಮುಖ ಚೆಸ್ ಕಾರ್ಯಕ್ರಮಗಳಿಗೆ ಭಾರತ ಆತಿಥ್ಯ ನೀಡಿದ್ದು, ವಿಶ್ವ ಚೆಸ್ ನಕ್ಷೆ ಮೇಲೆ ಭಾರತದ ಪ್ರಭಾವ ಹೆಚ್ಚುತ್ತಿದೆ.
* FIDE ಸಿಇಒ ಎಮಿಲ್ ಸುಟೋವ್ಸ್ಕಿ, “ಭಾರತದಲ್ಲಿ ಚೆಸ್ ಕುರಿತ ಉತ್ಸಾಹ ಅತ್ಯುನ್ನತ ಮಟ್ಟದಲ್ಲಿದೆ. ಸ್ಥಳೀಯ ಅಭಿಮಾನಿಗಳಿಂದ ಹೆಚ್ಚಿನ ಪ್ರತಿಕ್ರಿಯೆ ನಿರೀಕ್ಷಿಸುತ್ತೇವೆ” ಎಂದು ಹೇಳಿದ್ದಾರೆ. 2025ರ ವಿಶ್ವಕಪ್ ಭಾರತೀಯ ಚೆಸ್‌ಗೆ ದೊಡ್ಡ ಅವಕಾಶ ಎಂದು ಹಂಚಿಕೊಂಡಿದ್ದಾರೆ.

## ಜುಲೈ 25 : ಅಂತರರಾಷ್ಟ್ರೀಯ ನ್ಯಾಯಾಂಗ ಯೋಗಕ್ಷೇಮ ದಿನ



* ಪ್ರತಿ ವರ್ಷ ಜುಲೈ 25 ರಂದು ಜಗತ್ತು ನ್ಯಾಯಾಂಗ ಯೋಗಕ್ಷೇಮಕ್ಕಾಗಿ ಅಂತರರಾಷ್ಟ್ರೀಯ ದಿನವನ್ನು ಆಚರಿಸುತ್ತದೆ. ಮಾರ್ಚ್ 2025 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಈ ಅಂತರರಾಷ್ಟ್ರೀಯ ನ್ಯಾಯಾಂಗ ಯೋಗಕ್ಷೇಮ ದಿನವನ್ನು ಗುರುತಿಸಿತು.
* ಈ ಆಚರಣೆಯು ಅಪಾರ ಒತ್ತಡದಲ್ಲಿ ಕಾನೂನಿನ ನಿಯಮವನ್ನು ಎತ್ತಿಹಿಡಿಯುವ ನ್ಯಾಯಾಧೀಶರು ಮತ್ತು ನ್ಯಾಯಾಧೀಶರ ಮಾನಸಿಕ, ಭಾವನಾತ್ಮಕ ಮತ್ತು ದೈಹಿಕ ಯೋಗಕ್ಷೇಮದ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆ
* ಈ ಜಾಗತಿಕ ದಿನವನ್ನು ಮೀಸಲಿಡುವ ಮೂಲಕ, ನ್ಯಾಯಾಂಗ ಸಮಗ್ರತೆ ಮತ್ತು ಪರಿಣಾಮಕಾರಿ ನ್ಯಾಯ ವಿತರಣೆಯು ನ್ಯಾಯಾಂಗ ಅಧಿಕಾರಿಗಳ ಯೋಗಕ್ಷೇಮದಿಂದ ಬೇರ್ಪಡಿಸಲಾಗದು ಎಂದು ಯುಎನ್ ಬಲಪಡಿಸುತ್ತದೆ.
* UN ಜನರಲ್ ಅಸೆಂಬ್ಲಿಯು ಮಾರ್ಚ್ 4, 2025 ರಂದು A/RES/79/266 ನಿರ್ಣಯವನ್ನು ಅಂಗೀಕರಿಸಿತು, ಜುಲೈ 25 ಅನ್ನು ಅಂತರರಾಷ್ಟ್ರೀಯ ನ್ಯಾಯಾಂಗ ಯೋಗಕ್ಷೇಮ ದಿನವೆಂದು ಘೋಷಿಸಿತು.
* ನ್ಯಾಯಾಂಗ ಯೋಗಕ್ಷೇಮದ ಮಹತ್ವ :
- ನ್ಯಾಯಾಂಗದೊಳಗಿನ ಮಾನಸಿಕ ಆರೋಗ್ಯವನ್ನು ಕೆಡಿಸುತ್ತದೆ.
- ನ್ಯಾಯಾಂಗ ಜವಾಬ್ದಾರಿಗಳ ಮಾನವೀಯ ಭಾಗವನ್ನು ಎತ್ತಿ ತೋರಿಸುತ್ತದೆ.
- ನ್ಯಾಯದಾನದ ಗುಣಮಟ್ಟವು ನ್ಯಾಯಾಂಗ ಅಧಿಕಾರಿಗಳ ಯೋಗಕ್ಷೇಮಕ್ಕೆ ನೇರವಾಗಿ ಸಂಬಂಧಿಸಿದೆ ಎಂದು ಪ್ರತಿಪಾದಿಸುತ್ತದೆ.
- ಜಾಗತಿಕವಾಗಿ ಕಾನೂನು ವ್ಯವಸ್ಥೆಗಳಲ್ಲಿ ಸಾಂಸ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಯನ್ನು ಪ್ರೋತ್ಸಾಹಿಸುತ್ತದೆ.
* ಅಂತರರಾಷ್ಟ್ರೀಯ ದಿನದ ಉದ್ದೇಶಗಳು :
- ನ್ಯಾಯಾಂಗ ಯೋಗಕ್ಷೇಮದ ಸುತ್ತಲಿನ ಕಳಂಕವನ್ನು ತೆಗೆದುಹಾಕಿ ಮತ್ತು ಜಾಗೃತಿ ಮೂಡಿಸಿ.
- ನ್ಯಾಯಾಂಗ ಸಂಸ್ಥೆಗಳಲ್ಲಿ ಯೋಗಕ್ಷೇಮ ನೀತಿಗಳನ್ನು ಪ್ರೋತ್ಸಾಹಿಸಿ.
- ನ್ಯಾಯಾಂಗ ಬೆಂಬಲ ವ್ಯವಸ್ಥೆಗಳಿಗೆ ಉತ್ತಮ ಅಭ್ಯಾಸಗಳ ಕುರಿತು ಅಂತರ-ರಾಷ್ಟ್ರೀಯ ಸಂವಾದವನ್ನು ಪ್ರೇರೇಪಿಸಿ.
- ಆರೋಗ್ಯವಂತ ನ್ಯಾಯಾಧೀಶರು ಉತ್ತಮ ನ್ಯಾಯ ನೀಡುತ್ತಾರೆ ಎಂಬುದನ್ನು ಒಪ್ಪಿಕೊಳ್ಳಿ.
- ವಿಶ್ವಸಂಸ್ಥೆಯ ನಿರ್ಣಯ ಮತ್ತು ಜಾಗತಿಕ ಬೆಂಬಲ

KPSC Vaani

## 2025 ರ ಹೆನ್ಲಿ ಪಾಸ್‌ಪೋರ್ಟ್ ಸೂಚ್ಯಂಕದಲ್ಲಿ ಭಾರತಕ್ಕೆ 85 ರಿಂದ 77 ನೇ ಸ್ಥಾನ



* 2025 ರ ಹೆನ್ಲಿ ಪಾಸ್‌ಪೋರ್ಟ್ ಸೂಚ್ಯಂಕದಲ್ಲಿ ಭಾರತದ ಪಾಸ್ ಪೋರ್ಟ್ ಶ್ರೇಯಾಂಕವು 77 ನೇ ಸ್ಥಾನಕ್ಕೆ ಸುಧಾರಿಸಿದೆ, ಕಳೆದ ವರ್ಷದ 85 ನೇ ಸ್ಥಾನದಿಂದ ಎಂಟು ಸ್ಥಾನಗಳು ಏರಿಕೆಯಾಗಿದೆ. ಭಾರತೀಯ ಪಾಸ್‌ಪೋರ್ಟ್ ಹೊಂದಿರುವವರು ಈಗ 59 ದೇಶಗಳಿಗೆ ವೀಸಾ-ಮುಕ್ತ ಅಥವಾ ವೀಸಾ-ಆನ್-ಅರೈವಲ್ ಪ್ರವೇಶವನ್ನು ಹೊಂದಿದ್ದಾರೆ.

* ಹೆನ್ಲಿ ಪಾಸ್‌ಪೋರ್ಟ್ ಸೂಚ್ಯಂಕವು 199 ದೇಶಗಳನ್ನು ತಮ್ಮ ನಾಗರಿಕರು ಪೂರ್ವ ವೀಸಾ ಇಲ್ಲದೆ ಪ್ರಯಾಣಿಸಬಹುದಾದ ಸ್ಥಳಗಳ ಸಂಖ್ಯೆಯ ಆಧಾರದ ಮೇಲೆ ಶ್ರೇಣೀಕರಿಸಿದೆ. ವೀಸಾ-ಮುಕ್ತ ಪಟ್ಟಿಯಲ್ಲಿ ಕೇವಲ ಎರಡು ಹೊಸ ತಾಣಗಳನ್ನು ಸೇರಿಸಿದ್ದರೂ, ಭಾರತದ ಮೇಲ್ಮುಖ ಚಲನೆಯು ಜಾಗತಿಕ ಚಲನಶೀಲತೆಯನ್ನು ಸುಧಾರಿಸುತ್ತಿದೆ ಎಂದು ಸೂಚಿಸುತ್ತದೆ.

* ಅಂತರರಾಷ್ಟ್ರೀಯ ವಾಯು ಸಾರಿಗೆ ಸಂಘ (IATA) ದ ಡೇಟಾವನ್ನು ಬಳಸಿಕೊಂಡು ಸಂಗ್ರಹಿಸಲಾದ ಹೆನ್ಲಿ ಪಾಸ್‌ಪೋರ್ಟ್ ಸೂಚ್ಯಂಕವು ಪ್ರಯಾಣ ಸ್ವಾತಂತ್ರ್ಯದ ಆಧಾರದ ಮೇಲೆ ಜಾಗತಿಕ ಪಾಸ್‌ಪೋರ್ಟ್ ಗಳನ್ನು ಶ್ರೇಣೀಕರಿಸುತ್ತದೆ.

* ಇತ್ತೀಚಿನ ಮಾಹಿತಿಯ ಪ್ರಕಾರ, ಸಿಂಗಾಪುರದ ಪಾಸ್‌ಪೋರ್ಟ್ ವಿಶ್ವದ ಅತ್ಯಂತ ಶಕ್ತಿಶಾಲಿಯಾಗಿ ಉಳಿದಿದೆ, 227 ಸ್ಥಳಗಳಲ್ಲಿ 193 ಸ್ಥಳಗಳಿಗೆ ವೀಸಾ-ಮುಕ್ತ ಪ್ರವೇಶವನ್ನು ನೀಡುತ್ತದೆ.

* ಏಷ್ಯಾದ ದೇಶಗಳು ಜಾಗತಿಕ ಚಲನಶೀಲತೆ ಓಟದಲ್ಲಿ ಮುಂದಿವೆ, ಜಪಾನ್ ಮತ್ತು ದಕ್ಷಿಣ ಕೊರಿಯಾ ಎರಡನೇ ಸ್ಥಾನದಲ್ಲಿವೆ, ತಮ್ಮ ನಾಗರಿಕರಿಗೆ 190 ಸ್ಥಳಗಳಿಗೆ ವೀಸಾ ಮುಕ್ತ ಪ್ರವೇಶವನ್ನು ನೀಡುತ್ತವೆ.

**- ಟಾಪ್ 10 ಅತ್ಯಂತ ಶಕ್ತಿಶಾಲಿ ಪಾಸ್‌ಪೋರ್ಟ್‌ಗಳು:**

1. ಸಿಂಗಾಪುರ್ : 193 (ಪುಟ 193)
2. ಜಪಾನ್, ದಕ್ಷಿಣ ಕೊರಿಯಾ : 190 (190)
3. ಡೆನ್ಮಾರ್ಕ್, ಫಿನ್ಲ್ಯಾಂಡ್, ಫ್ರಾನ್ಸ್, ಜರ್ಮನಿ, ಐರ್ಲೆಂಡ್, ಇಟಲಿ, ಸ್ಪೇನ್ : 189 (ಪುಟ 189)
4. ಆಸ್ಟ್ರಿಯಾ, ಬೆಲ್ಜಿಯಂ, ಲಕ್ಸೆಂಬರ್ಗ್, ನೆದರ್ಲ್ಯಾಂಡ್ಸ್, ನಾರ್ವೆ, ಪೋರ್ಚುಗಲ್, ಸ್ವೀಡನ್ : 188 (ಪುಟ 188)
5. ಗ್ರೀಸ್, ನ್ಯೂಜಿಲೆಂಡ್, ಸ್ವಿಟ್ಜರ್ಲೆಂಡ್ : 187 (ಪುಟ 187)
6. ಆಸ್ಟ್ರೇಲಿಯಾ, ಜೆಕ್ ಗಣರಾಜ್ಯ, ಪೋಲೆಂಡ್, ಯುನೈಟೆಡ್ ಕಿಂಗ್ ಡಮ್ : 186 (186)
7. ಕೆನಡಾ, ಹಂಗೇರಿ, ಯುನೈಟೆಡ್ ಸ್ಟೇಟ್ಸ್ : 182
8. ಎಸ್ಟೋನಿಯಾ, ಲಿಥುವೇನಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್ : 181 (ಅನುವಾದ)
9. ಲಾಟ್ವಿಯಾ, ಸ್ಲೋವಾಕಿಯಾ, ಸ್ಲೊವೇನಿಯಾ : 180 (180)
10. ಐಸ್ಲ್ಯಾಂಡ್ : 179 (ಪುಟ 179)

## ಭಾರತ-ಬ್ರಿಟನ್ ಐತಿಹಾಸಿಕ ಮುಕ್ತ ವ್ಯಾಪಾರ ಒಪ್ಪಂದ



* ಭಾರತ ಮತ್ತು ಬ್ರಿಟನ್ ಗುರುವಾರ ಐತಿಹಾಸಿಕ ಮುಕ್ತ ವ್ಯಾಪಾರ ಒಪ್ಪಂದ (FTA)ಕ್ಕೆ ಸಹಿ ಹಾಕಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರಿಟಿಶ್ ಪ್ರಧಾನಿ ಕೀತ್ ಸ್ಟಾರ್ಮರ್ ಅವರ ಸಮ್ಮುಖದಲ್ಲಿ ಈ ಒಪ್ಪಂದ ನಡೆದಿದೆ.

* 2030ರೊಳಗೆ ಉಭಯ ದೇಶಗಳು ತಮ್ಮ ವ್ಯಾಪಾರವನ್ನು 120 ಬಿಲಿಯನ್ ಡಾಲರ್‌ಗೂ ಹೆಚ್ಚಿಸುವ ಗುರಿಯನ್ನು ಹೊಂದಿವೆ.

* ಈ ಒಪ್ಪಂದವು ಮೂರು ವರ್ಷಗಳ ಮಾತುಕತೆ ನಂತರ ರೂಪುಗೊಂಡಿದ್ದು, ಅಭಿವೃದ್ಧಿಪಡಿದ ದೇಶದೊಂದಿಗೆ ಭಾರತ ಸಹಿ ಹಾಕಿದ ಪ್ರಥಮ ವ್ಯಾಪಾರ ಒಪ್ಪಂದವಾಗಿದೆ. ಇದು ಭಾರತ ಮತ್ತು ಬ್ರಿಟನ್ ನಡುವಿನ ಆಮದು-ರಫ್ತು ಸುಂಕಗಳನ್ನು ಕಡಿಮೆ ಮಾಡಲಿದೆ.

* ಒಪ್ಪಂದ ಜಾರಿಗೆ ಬರಲು ಬ್ರಿಟನ್ ಸಂಸತ್ ಮತ್ತು ಭಾರತದ ಕೇಂದ್ರ ಸಂಪುಟದ ಅನುಮೋದನೆ ಅಗತ್ಯವಿದೆ.

* ಜವಳಿ, ಚರ್ಮ, ಆಟಿಕೆ, ಸಾಗರ ಉತ್ಪನ್ನಗಳು, ಎಂಜಿನಿಯರಿಂಗ್, ಆಟೋ ಭಾಗಗಳು, ಸಾವಯವ ರಾಸಾಯನಿಕಗಳು ಸೇರಿದಂತೆ ಹಲವು ವಲಯಗಳಿಗೆ ಈ ಒಪ್ಪಂದವು ಉತ್ತೇಜನ ನೀಡಲಿದೆ.

* ಬ್ರಿಟನ್‌ನ ವೈದ್ಯಕೀಯ ಉಪಕರಣಗಳು ಹಾಗೂ ಬಾಹ್ಯಾಕಾಶ ಉತ್ಪನ್ನಗಳು ಭಾರತದಲ್ಲಿ ಕಡಿಮೆ ದರದಲ್ಲಿ ಲಭ್ಯವಾಗಲಿವೆ.

* ಬ್ರಿಟನ್‌ಗೆ ರಿಯಾಯಿತಿಗಳಂತೆ, ಸ್ಕಾಚ್ ವಿಸ್ಕಿ ಮತ್ತು ಜಿನ್‌ಗಳ ಸುಂಕ ಶೇ.150ರಿಂದ ಶೇ.75ಕ್ಕೆ ಇಳಿಸಲಾಗಿದೆ. ಬ್ರಿಟನ್ ಕಾರುಗಳ ಸುಂಕ ಶೇ.100ರಿಂದ ಶೇ.10ಕ್ಕೆ ಇಳಿಯಲಿದೆ. ಕಾಸ್ಮೆಟಿಕ್ಸ್, ಚಾಕೋಲೆಟ್, ಮೀನಿನ ಮೇಲಿನ ಸುಂಕವೂ ಕಡಿಮೆಯಾಗಲಿದೆ.

* ಭಾರತಕ್ಕೆ ಬ್ರಿಟನ್ ನೀಡಿದ ರಿಯಾಯಿತಿಗಳಂತೆ ಶೇ.99ರಷ್ಟು ಭಾರತೀಯ ಉತ್ಪನ್ನಗಳಿಗೆ ಸುಂಕರಹಿತ ಪ್ರವೇಶ ಸಿಗಲಿದೆ.

* ಅಲ್ಪಾವಧಿಯ ವೀಸಾ ಸೌಲಭ್ಯದಿಂದ ಯೋಗ ಶಿಕ್ಷಕರು, ಕಲಾವಿದರು, ಬಾಣಸಿಗರಿಗೆ ಲಾಭವಾಗಲಿದೆ. ಹೂಡಿಕೆ ಹರಿವು ಕೂಡ ಉಭಯ ದೇಶಗಳ ನಡುವೆ ಹೆಚ್ಚುವ ಸಾಧ್ಯತೆ ಇದೆ.

## FIDE ಮಹಿಳಾ ಚೆಸ್ ವಿಶ್ವಕಪ್ 2025: ಫೈನಲ್ ಪ್ರವೇಶಿಸಿದ ಭಾರತದ ಕೊನೇರು ಹಂಪಿ, ದಿವ್ಯಾ ದೇಶ್ ಮುಖ್



* 2025ರ ಫೈಡೆ (FIDE) ಮಹಿಳಾ ಚೆಸ್ ವಿಶ್ವಕಪ್ ನಲ್ಲಿ ಭಾರತ ಐತಿಹಾಸಿಕ ಸಾಧನೆ ನಡೆಸಿದೆ. ಜಾರ್ಜಿಯಾದ ಬಟುಮಿಯಲ್ಲಿ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಕೊನೇರು ಹಂಪಿ ಮತ್ತು ದಿವ್ಯಾ ದೇಶಮುಖ್ ಇಬ್ಬರೂ ವಿಜೇತರಾಗಿ ಫೈನಲ್ ಪ್ರವೇಶಿಸಿದ್ದಾರೆ.

KPSCVaani

* ಚೀನಾದ ಲೀ ಟಿಂಗ್‌ಜಿಯನ್ನು 5–3 ಅಂತರದ ಟೈಬ್ರೇಕ್‌ನಲ್ಲಿ ಸೋಲಿಸಿದ ಹಂಪಿ ಶ್ರೇಷ್ಠ ಆಟ ತೋರಿದರು. ಇನ್ನೊಂದೆಡೆ, ದಿವ್ಯಾ ದೇಶಮುಖ್ ಅವರು ಚೀನಾದ ವಿಶ್ವ ಚಾಂಪಿಯನ್ ತಾನ್ ಝೊಂಗಿಯನ್ನು ಪರಾಭವಗೊಳಿಸಿ ಮೊದಲ ಬಾರಿಗೆ ಫೈನಲ್ ತಲುಪುವ ಸಾಧನೆ ಮಾಡಿದರು.

* ಶನಿವಾರ(ಜುಲೈ 26) ನಡೆಯುವ ಫೈನಲ್ ಪಂದ್ಯದಲ್ಲಿ 38 ವರ್ಷದ ಹಂಪಿ ಮತ್ತು 19 ವರ್ಷದ ದಿವ್ಯಾ ದೇಶಮುಖ್ ಇಬ್ಬರು ಭಾರತೀಯರು ಮುಖಾಮುಖಿಯಾಗಲಿದ್ದು, ದೇಶಕ್ಕೆ ವಿಶ್ವಕಪ್ ಖಚಿತವಾಗಿದೆ. ಇದು ಭಾರತೀಯ ಮಹಿಳಾ ಚೆಸ್‌ನ ಇತಿಹಾಸದಲ್ಲಿ ಮೈಲಿಗಲ್ಲು ಆಗಲಿದೆ.

* ಹಂಪಿ ಹಾಗೂ ದಿವ್ಯಾ ಇಬ್ಬರೂ ಮುಂದಿನ ವರ್ಷ ನಡೆಯುವ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹರಾಗಿದ್ದಾರೆ. ವಿಶ್ವ ಚಾಂಪಿಯನ್‌ಗಾಗಿನ ಸವಾಲು ಈ ಟೂರ್ನಿಯಲ್ಲಿ ನಿರ್ಧಾರವಾಗಲಿದೆ.

* ಚೀನಾದ ತಾನ್ ಝೊಂಗ್ವಿ ಮತ್ತು ಟಿಂಗ್ಜೀ ಲೀ ನಡುವಿನ ಮೂರನೇ ಸ್ಥಾನಕ್ಕಾಗಿ ಪಂದ್ಯ ನಡೆಯಲಿದೆ. ಇದರ ವಿಜೇತ ಕೂಡ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹವಾಗುತ್ತಾರೆ.

## ಸೆಪ್ಟೆಂಬರ್ 22ರಿಂದ ಅಕ್ಟೋಬರ್ 7ರವರೆಗೆ ಜಾತಿ ಸಮೀಕ್ಷೆ



* ಕರ್ನಾಟಕ ಸರ್ಕಾರವು ಸೆಪ್ಟೆಂಬರ್ 22ರಿಂದ ಅಕ್ಟೋಬರ್ 7ರವರೆಗೆ "ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ" ಎಂಬ ಹೆಸರಿನಲ್ಲಿ ಹೊಸ ಜಾತಿ ಸಮೀಕ್ಷೆ ನಡೆಸಲಿದೆ ಎಂದು ಸಿಎಂ ಸಿದ್ದರಾಮಯ್ಯ ಘೋಷಿಸಿದ್ದಾರೆ.

* ಸಮೀಕ್ಷೆಯು ಎಲ್ಲಾ 7 ಕೋಟಿ ಜನರನ್ನು ಒಳಗೊಂಡಿರಲಿದೆ ಮತ್ತು ಅದರ ವರದಿ ಅಕ್ಟೋಬರ್ ಅಂತ್ಯದೊಳಗೆ ಸಲ್ಲಿಸಲಾಗುವುದು.

* ಈ ಸಮೀಕ್ಷೆಯ ಉದ್ದೇಶ:

- ಜಾತಿ ಆಧಾರಿತ ಅಸಮಾನತೆ ನಿವಾರಣೆ
- ಆರ್ಥಿಕ ಸ್ಥಿತಿ ಮತ್ತು ಭೂಸ್ವಾಮ್ಯ ಕುರಿತು ಮಾಹಿತಿ ಸಂಗ್ರಹ
- ಮುಂದಿನ ಬಜೆಟ್ ರೂಪಣೆಗೆ ಆಧಾರ

* ಸಮೀಕ್ಷೆಯಲ್ಲಿ ಮೊಬೈಲ್ ಆಪ್ ಬಳಕೆ, ವೈಜ್ಞಾನಿಕ-ಪಾರದರ್ಶಕ ವಿಧಾನ, 1.65 ಲಕ್ಷ ಗಣತಿದಾರರ ಬಳಕೆ ಸೇರಿದಂತೆ 54ಕ್ಕಿಂತ ಹೆಚ್ಚು ಪ್ರಶ್ನೆಗಳು ಇರಲಿವೆ.

* ಮುನ್ನದ ಜಾತಿ ಸಮೀಕ್ಷೆ (2015) ತೀವ್ರ ಆಕ್ಷೇಪಕ್ಕೆ ಗುರಿಯಾಗಿ ಜಾರಿಗೆ ಬಾರದ ಹಿನ್ನೆಲೆಯಲ್ಲಿಯೇ ಈ ಹೊಸ ಸಮೀಕ್ಷೆ ನಡೆಯುತ್ತಿದೆ.

* ಮುಖ್ಯಮಂತ್ರಿ ಸಮೀಕ್ಷೆಯ ವೈಜ್ಞಾನಿಕತೆ ಮತ್ತು ಸಮಾನತೆಯನ್ನು ಖಚಿತಪಡಿಸಲು ಉನ್ನತ ಸಮಿತಿ, ತಜ್ಞರ ಸಮಿತಿ ರಚನೆ, ತರಬೇತಿ ಮತ್ತು ಜವಾಬ್ದಾರಿ ವಿಭಾಗಗಳ ನಡುವೆ ಸಮನ್ವಯದ ಸೂಚನೆ ನೀಡಿದ್ದಾರೆ.

## DRDO:ULPGM-V3 ಕ್ಷಿಪಣಿಯ ಯಶಸ್ವಿ ಪರೀಕ್ಷೆ



* ಡ್ರೋನ್ ಮೂಲಕ ಉಡಾಯಿಸಬಹುದಾದ ಗುರಿ ನಿರ್ದೇಶಿತ ಕ್ಷಿಪಣಿಯ (ULPGM-V3) ಪರೀಕ್ಷಾರ್ಥ ಉಡಾವಣೆಯನ್ನು ಆಂಧ್ರಪ್ರದೇಶದ ಕರ್ನೂಲ್‌ನಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಯಶಸ್ವಿಯಾಗಿ ನಡೆಸಿದೆ.

* ಶುಕ್ರವಾರ(ಜುಲೈ 25) ಈ ಪ್ರಯೋಗ ನಡೆದಿದ್ದು, ಇದರ ಬಗ್ಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಎಕ್ಸ್‌ನಲ್ಲಿ ಮಾಹಿತಿ ನೀಡಿದ್ದಾರೆ.

* “ಭಾರತದ ರಕ್ಷಣಾ ಸಾಮರ್ಥ್ಯದಲ್ಲಿ ಮಹತ್ತರ ಬೆಳವಣಿಗೆಯಾಗಿದೆ. ಕರ್ನೂಲ್‌ನ ರಾಷ್ಟ್ರೀಯ ಮುಕ್ತ ಪ್ರದೇಶ ಶ್ರೇಣಿಯಲ್ಲಿ ಡಿಆರ್‌ಡಿಒ ಯುಎವಿ ಉಡಾವಣಾ ಗುರಿ ನಿರ್ದೇಶಿತ ಕ್ಷಿಪಣಿ ULPGM-V3ಯ ಹಾರಾಟ ಪರೀಕ್ಷೆ ಯಶಸ್ವಿಯಾಗಿ ಪೂರ್ಣಗೊಂಡಿದೆ” ಎಂದು ಹೇಳಿದ್ದಾರೆ.

* ಈ ಸಾಧನೆಗಾಗಿ ಡಿಆರ್‌ಡಿಒ, ಅದರ ಉದ್ಯಮ ಪಾಲುದಾರರು ಮತ್ತು ಸ್ಟಾರ್ಟ್‌ಅಪ್‌ಗಳಿಗೆ ರಾಜನಾಥ್ ಸಿಂಗ್ ಅಭಿನಂದನೆ ತಿಳಿಸಿದ್ದಾರೆ.

* ULPGM-V3 "ಫೈರ್-ಅಂಡ್-ಫರ್ಗೆಟ್" ಶೈಲಿಯ ಎಯರ್-ಟು-ಸರ್ಫೇಸ್ ಕ್ಷಿಪಣಿಯಾಗಿದ್ದು, ಇಮೇಜಿಂಗ್ ಇನ್‌ಫ್ರಾರೆಡ್ ಸೀಕರ್ ಹೊಂದಿರುವ ಪ್ಯಾಸಿವ್ ಹೋಮಿಂಗ್ ತಂತ್ರಜ್ಞಾನವನ್ನು ಬಳಸುತ್ತದೆ.

* ಇದು ಹಗಲು ಮತ್ತು ರಾತ್ರಿ ಎರಡೂ ಸಂದರ್ಭಗಳಲ್ಲಿ ಗುರಿಯ ಮೇಲೆ ನಿಖರ ದಾಳಿ ಮಾಡಲು ಅನುಕೂಲವಾಗುತ್ತದೆ.

* ಈ ಕ್ಷಿಪಣಿ ತೂಕ 12.5 ಕೆಜಿ ಆಗಿದ್ದು, ಡ್ಯೂಯಲ್-ಥ್ರಸ್ಟ್ ಪ್ರೊಪಲ್ಷನ್ ಮೂಲಕ 4 ಕಿ.ಮೀ. (ಹಗಲು) ಮತ್ತು 2.5 ಕಿ.ಮೀ. (ರಾತ್ರಿ) ವ್ಯಾಪ್ತಿ ಹೊಂದಿದೆ. ಇದು ಸ್ಥಿರ ಹಾಗೂ ಚಲಿಸುತ್ತಿರುವ ಗುರಿಗಳಿಗೆ ದಾಳಿ ಮಾಡಲು ಡಾಟಾ ಲಿಂಕ್ ಮತ್ತು ವಿಭಿನ್ನ ವಾರ್ಹೆಡ್ ಆಯ್ಕೆಗಳನ್ನು ಒದಗಿಸುತ್ತದೆ.

* ಈ ಯಶಸ್ಸು ಭಾರತವನ್ನು ಸ್ವಾವಲಂಬಿ ರಕ್ಷಣಾ ತಂತ್ರಜ್ಞಾನದ ಹೊಸ ಹಂತಕ್ಕೆ ಕೊಂಡೊಯ್ಯುವ ಭರವಸೆ ನೀಡುತ್ತದೆ.

## ದೇಶದ ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಎರಡನೇ ಪ್ರಧಾನಿ ನರೇಂದ್ರ ಮೋದಿ



* ಪ್ರಧಾನಿ ನರೇಂದ್ರ ಮೋದಿ ಇಂದು (ಜುಲೈ 25, 2025) ಪ್ರಧಾನಿಯಾಗಿ 4,078 ದಿನಗಳನ್ನು ಪೂರ್ಣಗೊಳಿಸಿದ್ದಾರೆ.

* ಇದರೊಂದಿಗೆ ಅವರು ಇಂದಿರಾ ಗಾಂಧಿಯ 4,077 ದಿನಗಳ ಸೇವೆಯ ದಾಖಲೆಯನ್ನು ಮುರಿದು, ಭಾರತದ ಇತಿಹಾಸದಲ್ಲಿಯೇ ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಎರಡನೇ ಪ್ರಧಾನಿ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

KPSCVaani

* ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ 16 ವರ್ಷ 286 ದಿನಗಳ ಕಾಲ ಪ್ರಧಾನಿಯಾಗಿದ್ದು, ಇವರ ದಾಖಲೆ ಇನ್ನೂ ಅಪ್ರಾಪ್ಯವಾಗಿದೆ. ಆದರೆ ಮೋದಿ, ಸತತ ಮೂರನೇ ಬಾರಿ ಪ್ರಧಾನಿಯಾಗಿ ಆಯ್ಕೆಯಾಗುವ ಮೂಲಕ ಹೊಸ ದಾಖಲೆ ನಿರ್ಮಿಸಿದ್ದಾರೆ.
* ಸ್ವಾತಂತ್ರ್ಯ ನಂತರ ಜನಿಸಿದ ಮೊದಲ ಪ್ರಧಾನಿ ನರೇಂದ್ರ ಮೋದಿ, ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಕಾಂಗ್ರೆಸ್ಸೇತರ ಪ್ರಧಾನಿ ಮಾತ್ರವಲ್ಲದೆ, ಎರಡು ಅವಧಿಗಳನ್ನು ಪೂರ್ಣಗೊಳಿಸಿದ ಏಕೈಕ ಕಾಂಗ್ರೆಸ್ಸೇತರ ನಾಯಕವೂ ಹೌದು.
* ಮೋದಿ ಅವರು 2001ರಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿ ರಾಜಕೀಯದ ಶಿಖರಕ್ಕೇರಿದರು. 2002, 2007, 2012ರ ವಿಧಾನಸಭಾ ಚುನಾವಣೆಗಳ ಜೊತೆಗೆ 2014, 2019 ಹಾಗೂ 2024ರ ಲೋಕಸಭಾ ಚುನಾವಣೆಗಳಲ್ಲಿ ಗೆಲುವು ಸಾಧಿಸಿ ಸತತ ಆರು ಚುನಾವಣೆಗಳಲ್ಲಿ ಗೆಲುವು ದಾಖಲಿಸಿದ ಏಕೈಕ ನಾಯಕ ಎನಿಸಿಕೊಂಡಿದ್ದಾರೆ.

## ಬನ್ನೇರುಘಟ್ಟದಿಂದ 4 ಆನೆಗಳು ಜಪಾನ್ ಗೆ ರವಾನೆ



* ಬನ್ನೇರುಘಟ್ಟ ಜೈವಿಕ ಉದ್ಯಾನವನದ ನಾಲ್ಕು ಆನೆಗಳಾದ ಸುರೇಶ್, ತುಳಸಿ, ಗೌರಿ ಮತ್ತು ಶ್ರುತಿ ಅಂತಾರಾಷ್ಟ್ರೀಯ ಪ್ರಾಣಿಗಳ ವಿನಿಮಯ ಯೋಜನೆಯಡಿ ಜಪಾನ್‌ಗೆ ರವಾನೆಯಾದವು.
* ಈ ವೇಳೆ ಸುರೇಶ್ ತನ್ನ ಬಾಲ್ಯದ ಗೆಳೆಯ ಬಸವನನ್ನು ಬಿಟ್ಟು ಹೋಗಲು ಆರಂಭದಲ್ಲಿ ನಿರಾಕರಿಸಿದ್ದ, ಆದರೆ ಕೊನೆಗೆ ಕೇಜ್‌ನತ್ತ ಹೆಜ್ಜೆ ಹಾಕಿದ. ಗೌರಿ, ಶ್ರುತಿ ಸಹ ಹಠ ತೋರಿಸಿದ್ದು, ತುಳಸಿ ಜೊತೆ ಅವರನ್ನು ರವಾನಿಸಲಾಯಿತು.
* ಜಪಾನ್‌ನ ಒಸಾಕಾ ವಿಮಾನ ನಿಲ್ದಾಣಕ್ಕೆ ಕಾತಾರ್ ಏರ್ ವೇಸ್‌ನ ಸರಕು ಸಾಗಣೆ ವಿಮಾನದಲ್ಲಿ ವಿಮಾನಯಾನ ನಡೆಸಲಾಯಿತು. ಈ ಗುರಿಯನ್ನು 2023ರಿಂದಲೇ ಯೋಜಿಸಲಾಗಿತ್ತು ಮತ್ತು ಮೂರು ತಿಂಗಳ ತರಬೇತಿ ನಂತರ ಇದನ್ನು ಯಶಸ್ವಿಯಾಗಿ ಜಾರಿಗೆ ತರಲಾಯಿತು.
* ಆನೆಗಳೊಂದಿಗೆ ವೈದ್ಯಾಧಿಕಾರಿಗಳು, ಮಾವುತರು ಮತ್ತು ಜೀವಶಾಸ್ತ್ರಜ್ಞರು ಕೂಡ 15 ದಿನಗಳ ಕಾಲ ತೆರಳಿದ್ದಾರೆ. ಬನ್ನೇರುಘಟ್ಟದವರು ಭಾರದ ಮನಸ್ಸಿನಲ್ಲಿ ಈ ಮೃಗಗಳನ್ನು ಬೀಳ್ಕೊಟ್ಟಿದ್ದಾರೆ.
* ಬದಲಿಗೆ ಜೈವಿಕ ಉದ್ಯಾನವನಕ್ಕೆ ಚೀತಾ, ಜಾಗ್ವಾರ್, ಪೂಮಾ ಮತ್ತು ಚಿಂಪಾಂಜಿ ಹೀಗೆ ಅಪರೂಪದ ಪ್ರಾಣಿಗಳು ಬಂದಾಡಲಿದ್ದು, ಪ್ರಾಣಿ ಪ್ರಿಯರಿಗೆ ಹೊಸ ಅನುಭವ ದೊರೆಯಲಿದೆ.

## ಹೈದರಾಬಾದ್‌ಗೂ ವಂದೇ ಭಾರತ್ ರೈಲು ಶೀಘ್ರ ಆರಂಭ



* ಉತ್ತರ ಕರ್ನಾಟಕದ ಪ್ರಯಾಣಿಕರಿಗೆ ಅನುಕೂಲವಾಗುವಂತೆ, ಪುಣೆ-ಬೆಳಗಾವಿ ಮತ್ತು ಪುಣೆ-ಕಲಬುರಗಿ-ಹೈದರಾಬಾದ್ ಮಾರ್ಗಗಳಲ್ಲಿ ಹೊಸ ವಂದೇ ಭಾರತ್ ರೈಲು ಸೇವೆ ಶೀಘ್ರದಲ್ಲೇ ಆರಂಭವಾಗಲಿದೆ.
* ಈ ಹೊಸ ರೈಲುಗಳ ಮೂಲಕ ಮಹಾರಾಷ್ಟ್ರದ ಪ್ರಮುಖ ನಗರಗಳು ಮತ್ತು ಹೈದರಾಬಾದ್‌ಗೆ ಸಂಪರ್ಕ ಸುಲಭವಾಗಲಿದೆ.
* ಭಾರತೀಯ ರೈಲ್ವೆ ಪುಣೆಯಿಂದ ಶೇಗಾಂವ್, ವಡೋದರಾ, ಬೆಳಗಾವಿ ಹಾಗೂ ಸಿಕಂದರಾಬಾದ್‌ಗೆ ನಾಲ್ಕು ವಂದೇ ಭಾರತ್ ಎಕ್ಸ್‌ಪ್ರೆಸ್‌ಗಳನ್ನು ಚಲಾಯಿಸಲು ನಿರ್ಧರಿಸಿದೆ.
* ಪುಣೆ-ಸಿಕಂದರಾಬಾದ್ ವಂದೇ ಭಾರತ್ ರೈಲು ದೌಂಡ್, ಸೊಲ್ಲಾಪುರ ಮತ್ತು ಕಲಬುರಗಿಗೆ ನಿಲುಗಡೆ ನೀಡಲಿದೆ. ಇದರ ಪರಿಣಾಮವಾಗಿ 2-3 ಗಂಟೆಗಳಷ್ಟು ಪ್ರಯಾಣ ಸಮಯ ಕಡಿಮೆಯಾಗಲಿದೆ.
* ಈ ಮಾರ್ಗದಲ್ಲಿ ಈಗಾಗಲೇ ಹುಬ್ಬಳ್ಳಿ-ಬೆಳಗಾವಿ-ಪುಣೆ ನಡುವಿನ ವಂದೇ ಭಾರತ್ ಸೇವೆ ವಾರದಲ್ಲಿ ಮೂರು ಬಾರಿ ನಡೆಯುತ್ತಿದೆ. ಬೆಳಗಾವಿ ನಿವಾಸಿಗಳು ಈ ಮಾರ್ಗದಲ್ಲಿ ನಿತ್ಯ ಸೇವೆ ನೀಡಬೇಕೆಂದು ಆಗ್ರಹಿಸುತ್ತಿದ್ದರು.

## ಮಾಜಿ ಹಣಕಾಸು ಕಾರ್ಯದರ್ಶಿ ಅಜಯ್ ಸೇಠ್ ಐಆರ್‌ಡಿಎಐನ ಮುಖ್ಯಸ್ಥರಾಗಿ ನೇಮಕ




* ಮಾಜಿ ಹಣಕಾಸು ಕಾರ್ಯದರ್ಶಿ ಅಜಯ್ ಸೇಠ್ ಅವರನ್ನು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (IRDAI) ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.
* ಈ ಹುದ್ದೆ, ದೇಬಾಶಿಶ್ ಪಾಂಡಾ ಅವರ ಅಧಿಕಾರಾವಧಿ ಮಾರ್ಚ್ 2025ರಲ್ಲಿ ಅಂತ್ಯವಾದ ನಂತರದಿಂದ ಖಾಲಿಯಿತ್ತು.
* ಅಜಯ್ ಸೇಠ್ ಅವರು 1987ರ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿ. ಅವರು 2021ರಿಂದ ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.
* ಈ ವರ್ಷದ ಆರಂಭದಲ್ಲಿ, ಸೆಬಿ ಅಧ್ಯಕ್ಷರಾಗಿ ತುಹಿನ್ ಕಾಂತ ಪಾಂಡೆ ನೇಮಕಗೊಂಡ ನಂತರ ಅವರು ಕಂದಾಯ ಕಾರ್ಯದರ್ಶಿಯಾಗಿ ಹೆಚ್ಚುವರಿ ಜವಾಬ್ದಾರಿ ಹೊತ್ತಿದ್ದರು.
* ಸೇಠ್ ಅವರು ಮೆಕ್ಯಾನಿಕಲ್ ಎಂಜಿನಿಯರಿಂಗ್ ಹಾಗೂ ಎಂ.ಬಿ.ಎ ಪದವೀಧರರಾಗಿದ್ದು, ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಹಲವು ಪ್ರಮುಖ ಹಣಕಾಸು ಸಂಬಂಧಿತ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

KPSCVaani

* ಹಣಕಾಸು ನೀತಿ, ಮೂಲಸೌಕರ್ಯ ಅಭಿವೃದ್ಧಿ, ತೆರಿಗೆ ಮತ್ತು ಅಭಿವೃದ್ಧಿ ಹಣಕಾಸಿನಲ್ಲಿ ಅವರು ವಿಶೇಷ ಪ್ರಭಾವ ಬೀರಿದ್ದಾರೆ.

## ಯುದ್ಧಭೂಮಿಗೆ ಇಳಿಯಲಿವೆ ಜರ್ಮನ್‌ನ ಎಐ ಜಿರಳೆ!



* ಜರ್ಮನ್ ಸ್ಟಾರ್ಟ್‌ಅಪ್ ಸ್ವಾರ್ಮ್ ಬಯೋಟ್ಯಾಟಿಕ್ಸ್ ಅರ್ಧ ಜೀವಂತ ಮತ್ತು ಅರ್ಧ ಎಐ ಹೊಂದಿರುವ ಸೈಬೋರ್ಗ್ ಜಿರಳೆಗಳನ್ನು ಅಭಿವೃದ್ಧಿಪಡಿಸುತ್ತಿದೆ. ಈ ಜಿರಳೆಗಳು ಯುದ್ಧಭೂಮಿಯ ಗೂಢಚಾರಿಕೆಗೆ ಬಳಸಲಾಗುತ್ತಿದ್ದು, ಮಿಲಿಟರಿ ತಂತ್ರಜ್ಞಾನದ ಭಾಗವಾಗಿವೆ.
* ಈ ಜಿರಳೆಗಳ ಬೆನ್ನ ಮೇಲೆ ಕ್ಯಾಮೆರಾ, ಸೆನ್ಸರ್, ಹಾಗೂ ಸುರಕ್ಷಿತ ಸಂಪರ್ಕ ಸಾಧನಗಳಿರುವ ಸಣ್ಣ ಬ್ಯಾಗ್ ಇರುತ್ತದೆ. ಇವು ವೈರಿ ಪ್ರದೇಶದ ಮಾಹಿತಿ ಸಂಗ್ರಹಿಸಲು ನೆರವಾಗುತ್ತವೆ.
* CEO ಸ್ಟೆಫನ್ ವಿಲ್ಹೆಮ್ ಅವರು ಈ ಜಿರಳೆಗಳು ನರ ಪ್ರಚೋದಕ, ಸಂವೇದಕ ಮತ್ತು ಸಂವಹನ ತಂತ್ರಜ್ಞಾನ ಹೊಂದಿರುವುದಾಗಿ ತಿಳಿಸಿದ್ದಾರೆ.
* ಉಕ್ರೇನ್ ಯುದ್ಧದ ಬಳಿಕ ಯುರೋಪಿನಲ್ಲಿ ಮಿಲಿಟರಿ ವೆಚ್ಚ ಹೆಚ್ಚಿದ್ದು, ಜರ್ಮನಿಯೂ ತನ್ನ ಶಸ್ತ್ರಸಜ್ಜತೆಗೆ ಆಧುನೀಕರಣ ನೀಡುತ್ತಿದೆ. ಹೀಗಾಗಿ ಸ್ಟಾರ್ಟ್‌ಅಪ್‌ಗಳು ಮತ್ತು ಎಐ ತಂತ್ರಜ್ಞಾನಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುತ್ತಿದೆ.
* ಮಿಲಿಟರಿ ಸ್ಟಾರ್ಟ್‌ಅಪ್‌ಗಳು ಪ್ರತಿದಿನವೂ ಉದ್ಯೋಗಿಗಳಿಗಾಗಿ ಲಿಂಕ್ಡ್‌ಇನ್‌ನಲ್ಲಿ 30 ಕೋರಿಕೆಗಳನ್ನು ಕಳಿಸುತ್ತಿವೆ.

# 26 June 2025

## ಜುಲೈ 26 : ಕಾರ್ಗಿಲ್ ವಿಜಯ ದಿವಸ




* 1999 ರಲ್ಲಿ ಮೇ 3 ರಿಂದ ಜುಲೈ 26ರ ವರೆಗೆ ಭಾರತ & ಪಾಕಿಸ್ತಾನದ ನಡುವೆ ನಡೆದ ಕಾರ್ಗಿಲ್ ಯುದ್ಧದ ವಿಜಯದ ನೆನಪಿಗಾಗಿ ಭಾರತದಾದ್ಯಂತ ಪ್ರತಿವರ್ಷ ಜುಲೈ 26 ರಂದು " ಆಪರೇಷನ್ ವಿಜಯ " ದಿನವನ್ನಾಗಿ ಆಚರಿಸಲಾಗುತ್ತದೆ.
* ಪಾಕಿಸ್ತಾನದ ವಿರುದ್ಧದ ಕಾರ್ಗಿಲ್ ಯುದ್ಧವನ್ನು ಗೆದ್ದು ಇಂದಿಗೆ 25 ವರ್ಷ ಪೂರ್ಣಗೊಂಡಿದೆ.
* ಮೇ 3 ರಂದು ಪ್ರಾರಂಭವಾದ ಕಾರ್ಗಿಲ್ ಯುದ್ಧವು, ಭಾರತೀಯ ಸೇನೆಯು ಜಮ್ಮು ಮತ್ತು ಕಾಶ್ಮೀರದ ಕಾರ್ಗಿಲ್ ಜಿಲ್ಲೆಯಿಂದ ನಿಯಂತ್ರಣ ರೇಖೆಯ (LoC) ಉದ್ದಕ್ಕೂ ಪಾಕಿಸ್ತಾನಿ ಒಳನುಗ್ಗುವವರನ್ನು ಓಡಿಸುವವರೆಗೂ ಮುಂದುವರೆಯಿತು. ಹುತಾತ್ಮರು ಮತ್ತು ಧೈರ್ಯಶಾಲಿ ಸೈನಿಕರ ಅಪಾರ ತ್ಯಾಗಗಳನ್ನು ಈ ದಿನವು ಗೌರವಿಸುತ್ತದೆ.
* ಜಮ್ಮು ಕಾಶ್ಮೀರದ ಕಾರ್ಗಿಲ್‌ನಲ್ಲಿ ನಡೆದ ಈ ಯುದ್ಧದಲ್ಲಿ ಪಾಕಿಸ್ತಾನವನ್ನು ನಮ್ಮ ಭಾರತದ ವೀರ ಯೋಧರು ಆಪರೇಷನ್ ವಿಜಯ ಹೆಸರಿನಲ್ಲಿ ಕಾರ್ಯಾಚರಣೆ ನಡಿಸಿ ಯಶಸ್ವಿಯಾಗಿ ಹಿಮ್ಮೆಟ್ಟಿಸಿ ಅವರು ಆಕ್ರಮಿಸಿಕೊಂಡಿದ್ದ ಜಾಗವನ್ನು ವಶಕ್ಕೆ ಪಡೆದ ದಿನವಾಗಿದೆ.
* ಕಾರ್ಗಿಲ್ ಯುದ್ಧವು 1999 ರ ಮೇ-ಜೂನ್ ನಡುವೆ ಜಮ್ಮು ಮತ್ತು ಕಾಶ್ಮೀರದ ಕಾರ್ಗಿಲ್ ಜಿಲ್ಲೆಯಲ್ಲಿ ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಹೋರಾಡಲ್ಪಟ್ಟಿತು, ಇದರಲ್ಲಿ ಭಾರತವು ವಿಜಯವನ್ನು ಪಡೆಯಿತು. ಆದ್ದರಿಂದ ಈ ದಿನವನ್ನು ಭಾರತೀಯ ಸೈನಿಕರ ವಿಜಯಕ್ಕಾಗಿ ಸಮರ್ಪಿಸಲಾಗಿದೆ.
* ಕಾರ್ಗಿಲ್ ವಿಜಯದ ರಜತ ಮಹೋತ್ಸವದ ಸ್ಮರಣಾರ್ಥವಾಗಿ ಭಾರತೀಯ ವಾಯುಪಡೆಯು ಜುಲೈ 12 ರಿಂದ 26 ರ ವರೆಗೆ ಸರ್ಸಾದ ವಾಯುನೆಲೆಯಲ್ಲಿ ಕಾರ್ಗಿಲ್ ವಿಜಯ ದಿವಸ ರಜತ ಜಯಂತಿಯನ್ನು ಆಚರಿಸಿದೆ.
* ಭಾರತದ ಪರವಾಗಿ ಕೆಚ್ಚೆದೆಯ ಹೋರಾಟ ಪ್ರದರ್ಶಿಸಿದ ಸಂಜಯ್ ಕುಮಾರ್, ನಯಿಬ್ ಸುಬೇದಾರ್ ಯೋಗೇಂದ್ರ ಸಿಂಗ್ ಯಾದವ್, ಕ್ಯಾ.ಮನೋಜ್‌ಕುಮಾರ್ ಪಾಂಡೆ, ಕ್ಯಾ.ವಿಕ್ರಮ್ ಬಾತ್ರಾ ಅವರಿಗೆ ಭಾರತ ಸರಕಾರ ಪರಮವೀರ ಚಕ್ರ ಪುರಸ್ಕಾರ ನೀಡಿತು.
* ಕಾರ್ಗಿಲ್‌ನಿಂದ ಹಿಂದೆ ಸರಿಯುವಂತೆ ಅಮೆರಿಕದ ಅಂದಿನ ಅಧ್ಯಕ್ಷ ಬಿಲ್ ಕ್ಲಿಂಟನ್‌ರಿಂದ ಪಾಕ್ ಪ್ರಧಾನಿ ನವಾಜ್ ಷರೀಫ್‌ಗೆ ಸೂಚನೆ ನೀಡಿದರು.ನಂತರ ಪಾಕ್ ಸೈನಿಕರ ವಾಪಸಾತಿ ಶುರುವಾಯಿತು. ಜು.14 ರಂದು 'ಆಪರೇಷನ್ ವಿಜಯ' ಕಾರ್ಯಾಚರಣೆ ಯಶಸ್ವಿ ಎಂದು ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಘೋಷಿಸಿದರು. ಜು.26ರಂದು ಕಾರ್ಗಿಲ್ ಯುದ್ಧ ಅಧಿಕೃತವಾಗಿ ಕೊನೆಗೊಂಡಿತು.
* ಕಾರ್ಗಿಲ್ ಸಮರದ ಹಾದಿ :
- ಯುದ್ಧ ನಡೆದ ಅವಧಿ: 74 ದಿನಗಳು
- ಯುದ್ಧಕ್ಷೇತ್ರದ ವ್ಯಾಪ್ತಿ: 150 ಕಿ.ಮೀ.
- ಒಟ್ಟು ಭಾರತೀಯ ಸೈನಿಕರು: 20,000
- ಅತಿಕ್ರಮಣಕಾರರು: 1,500 (ಅಂದಾಜು)
- ಹುತಾತ್ಮರಾದ ಭಾರತೀಯ ಸೈನಿಕರು: 527
- ಗಾಯಗೊಂಡ ಭಾರತೀಯ ಸೈನಿಕರು: 1,300ಕ್ಕೂ ಹೆಚ್ಚು
- ನಾಪತ್ತೆಯಾದ ಭಾರತೀಯ ಸೈನಿಕರು: 06
- ಮಡಿದ ಪಾಕ್ ಸೈನಿಕರು: 696
- ದೈನಂದಿನ ಸರಾಸರಿ ಯುದ್ಧವೆಚ್ಚ: 15 ಕೋಟಿ ರೂಪಾಯಿಗಳು
- ಒಟ್ಟು ವೆಚ್ಚ : 1,100 ಕೋಟಿ ರೂಪಾಯಿಗಳು
* ಪ್ರಮುಖ ಘಟನಾವಳಿಗಳು
- ಮೇ 3: ಪಾಕಿಸ್ತಾನೀಯರು ಅಕ್ರಮವಾಗಿ ಕಾರ್ಗಿಲ್ ಪ್ರವೇಶಿಸಿದ ಮಾಹಿತಿ
- ಮೇ 5 : ಐವರು ಸೈನಿಕರನ್ನು ಸೆರೆಹಿಡಿದು ಹತ್ಯೆಗೈದ ಪಾಕ್
- ಮೇ 27 : ಮಿಗ್-21, ಮಿಗ್-27 ಯುದ್ಧವಿಮಾನಗಳ ಮೇಲೆ ಪಾಕ್ ದಾಳಿ
- ಜೂ.6 : ಕಾರ್ಗಿಲ್‌ನಲ್ಲಿ ಪಾಕ್ ಸೈನಿಕರ ವಿರುದ್ಧ ದಾಳಿ ಆರಂಭ.
- ಜೂ.9 : ಬಟಾಲಿಕ್‌ನಲ್ಲಿ ಎರಡು ಪ್ರಮುಖ ಸೇನಾಠಾಣೆ ಮರುವಶ

- ಜೂ.13 : ಟೋಲೋಲೋಂಗ್‌ನ್ನು ವಶಕ್ಕೆ ತೆಗೆದುಕೊಳ್ಳುವಲ್ಲಿ ಯಶಸ್ವಿ
- ಜುಲೈ 4 : ಟೈಗರ್ ಹಿಲ್ ಮತ್ತೆ ಭಾರತದ ವಶಕ್ಕೆ
- ಜುಲೈ 5 : ದ್ರಾಸ್ ಪ್ರದೇಶ ಭಾರತೀಯ ಸೇನೆ ಹತೋಟಿಗೆ
- ಜುಲೈ 11 : ಪಾಕಿಸ್ತಾನವು ಸೇನಾ ವಾಪಸಾತಿ

## ಆಸ್ತಿ ತೆರಿಗೆ ವಂಚಕರಿಗೆ ಬಿಬಿಎಂಪಿ ನೋಟಿಸ್



* ನಗರದಲ್ಲಿ ಸುಳ್ಳು ಆಸ್ತಿ ವಿವರ ನೀಡಿದ 26 ಸಾವಿರಕ್ಕೂ ಅಧಿಕ ಆಸ್ತಿ ಮಾಲೀಕರಿಗೆ ಬಿಬಿಎಂಪಿ ನೋಟಿಸ್ ಜಾರಿಗೊಳಿಸಿದೆ.
* ಅವರು ಕಾವೇರಿ ತಂತ್ರಾಂಶದಲ್ಲಿರುವ ವಾಸ್ತವ ವಿಸ್ತೀರ್ಣಕ್ಕಿಂತ ಕಡಿಮೆ ಪ್ರಮಾಣದ ವಿಸ್ತೀರ್ಣವನ್ನು ತೆರಿಗೆ ಪಾವತಿಗೆ ಘೋಷಿಸಿರುವುದು ಪತ್ತೆಯಾಗಿದೆ.
* ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿ ವ್ಯವಸ್ಥೆಯನ್ನು ಕೆಲವು ಮಾಲೀಕರು ದುರ್ಬಳಕೆ ಮಾಡಿಕೊಂಡು, ಕಡಿಮೆ ತೆರಿಗೆ ಪಾವತಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯು ಆನ್ ಲೈನ್ ಮೂಲಕ ನೋಟಿಸ್‌ಗಳನ್ನು ಜಾರಿಗೊಳಿಸುತ್ತಿದೆ.
* ನೋಟಿಸ್ ನಂತರ 15 ದಿನಗಳಲ್ಲಿ ಉತ್ತರ ಇಲ್ಲದಿದ್ದರೆ, ಡಿಮ್ಯಾಂಡ್ ನೋಟ್ ನೀಡಲಾಗುತ್ತದೆ. ನಂತರ 30 ದಿನಗಳಲ್ಲಿ ಬಾಕಿ ಪಾವತಿಸದಿದ್ದರೆ, ಆಸ್ತಿಯನ್ನು ಬಿಬಿಎಂಪಿಯೊಂದಿಗೆ ಲಿಂಕ್ ಮಾಡಲಾಗುತ್ತದೆ. ಇದರಿಂದ ಆಸ್ತಿಯ ಮಾರಾಟ ಅಥವಾ ವರ್ಗಾವಣೆ ಅಸಾಧ್ಯವಾಗುತ್ತದೆ.
* ಬಾಕಿ ತೆರಿಗೆ ಪಾವತಿಸದ ಆಸ್ತಿಗಳಿಗೆ ಇ-ಖಾತಾ ಡೌನ್‌ಲೋಡ್ ಮಾಡುವ ಅವಕಾಶವನ್ನೂ ನಿರ್ಬಂಧಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

## ಪ್ಯಾಲೆಸ್ತೀನ್ ಒಂದು ದೇಶ ಫ್ರಾನ್ಸ್ ಘೋಷಣೆ



* ಗಾಜಾದಲ್ಲಿ ಮಾನವೀಯ ಬಿಕ್ಕಟ್ಟು ತೀವ್ರವಾಗಿರುವ ಹಿನ್ನೆಲೆಯಲ್ಲಿ ಫ್ರಾನ್ಸ್ ಪ್ಯಾಲೆಸ್ತೀನ್ ಅನ್ನು ಒಂದು ಸ್ವತಂತ್ರ ರಾಷ್ಟ್ರವಾಗಿ ಗುರುತಿಸುವುದಾಗಿ ಘೋಷಿಸಿದೆ.
* ಈ ನಿರ್ಧಾರವನ್ನು ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಯುಎನ್ ಸಾಮಾನ್ಯ ಸಭೆಯಲ್ಲಿ ಅಧಿಕೃತಗೊಳಿಸಲಾಗುವುದು ಎಂದು ಅಧ್ಯಕ್ಷ ಎಮ್ಮಾನ್ಯುಯೆಲ್ ಮ್ಯಾಕ್ರನ್ ತಿಳಿಸಿದ್ದಾರೆ.
* ಈ ಘೋಷಣೆ ಇಸ್ರೇಲ್ ವಿರುದ್ಧ ಜಾಗತಿಕ ರಾಜತಾಂತ್ರಿಕ ಒತ್ತಡವನ್ನು ಹೆಚ್ಚಿಸುತ್ತದೆ. ಫ್ರಾನ್ಸ್ ಪ್ಯಾಲೆಸ್ತೀನ್ ಅನ್ನು ಗುರುತಿಸಿದ ಪ್ರಮುಖ ಪಾಶ್ಚಿಮಾತ್ಯ ರಾಷ್ಟ್ರವಾಗಿದೆ.
* ಈ ನಡೆ ಇತರ ರಾಷ್ಟ್ರಗಳಿಗೂ ಪ್ರೇರಣೆಯಾಗುವ ಸಾಧ್ಯತೆ ಇದೆ. ಈಗಾಗಲೇ 140ಕ್ಕೂ ಹೆಚ್ಚು ದೇಶಗಳು ಪ್ಯಾಲೆಸ್ತೀನ್ ಅನ್ನು ದೇಶವಾಗಿ ಗುರುತಿಸಿವೆ.
* ಪ್ಯಾಲೆಸ್ತೀನಿಯರು 1967ರ ಯುದ್ಧದಲ್ಲಿ ಇಸ್ರೇಲ್ ಆಕ್ರಮಿಸಿಕೊಂಡ ಪಶ್ಚಿಮ ದಂಡೆ, ಪೂರ್ವ ಜೆರುಸಲೆಮ್ ಮತ್ತು ಗಾಜಾದಲ್ಲಿ ಸ್ವತಂತ್ರ ರಾಷ್ಟ್ರ ಸ್ಥಾಪನೆಯ ಕನಸು ಕಾಣುತ್ತಿದ್ದಾರೆ.
* ಇಸ್ರೇಲ್ ಹಾಗೂ ಅದರ ಬಹುಪಾಲು ರಾಜಕೀಯ ವರ್ಗಗಳು ಈ ಗುರುತುವುಗೆ ವಿರೋಧ ವ್ಯಕ್ತಪಡಿಸುತ್ತಿವೆ. ಹಮಾಸ್‌ನ 2023ರ ದಾಳಿಯ ನಂತರ, ಇಸ್ರೇಲ್ ಈ ರೀತಿಯ ಗುರುತುವನ್ನು ಉಗ್ರಗಾಮಿಗಳಿಗೆ ಬಹುಮಾನ ಎಂದು ತಿರಸ್ಕರಿಸಿದೆ.

## ಚುನಾವಣಾ ಅಧಿಕಾರಿಯಾಗಿ ಪಿ.ಸಿ.ಮೋದಿ ನೇಮಕ



* ಉಪ ರಾಷ್ಟ್ರಪತಿ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯ ಸಭೆಯ ಪ್ರಧಾನ ಕಾರ್ಯದರ್ಶಿ ಪಿ.ಸಿ. ಮೋದಿಯನ್ನು ಚುನಾವಣಾ ಅಧಿಕಾರಿಯಾಗಿ ನೇಮಕ ಮಾಡಲಾಗಿದೆ.
* ಗರಿಮಾ ಜೈನ್ (ಜಂಟಿ ಕಾರ್ಯದರ್ಶಿ) ಮತ್ತು ವಿಜಯ್ ಕುಮಾರ್ (ರಾಜ್ಯಸಭೆ ಕಾರ್ಯದರ್ಶಿ) ಅವರನ್ನು ಸಹಾಯಕ ಚುನಾವಣಾ ಅಧಿಕಾರಿಗಳಾಗಿ ನೇಮಕ ಮಾಡಿದ್ದಾರೆ.
* ಈ ಚುನಾವಣೆ 1952ರ ರಾಷ್ಟ್ರಪತಿ ಹಾಗೂ ಉಪ ರಾಷ್ಟ್ರಪತಿ ಚುನಾವಣಾ ಕಾಯ್ದೆ ಮತ್ತು 1974ರ ನಿಯಮಾವಳಿಯ ಪ್ರಕಾರ ನಡೆಯಲಿದೆ. ಈ ಬಾರಿ ಸಂಪ್ರದಾಯ ಬದಲಾಗಿದೆ ಹಿಂದಿನ ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ಲೋಕಸಭೆ ಕಾರ್ಯದರ್ಶಿ ಮುಖ್ಯ ಅಧಿಕಾರಿಯಾಗಿದ್ದರೆ, ಈ ಬಾರಿ ರಾಜ್ಯಸಭೆ ಕಾರ್ಯದರ್ಶಿಗೆ ಆ ಹೊಣೆ ನೀಡಲಾಗಿದೆ.
* ಹಾಲಿ ಉಪ ರಾಷ್ಟ್ರಪತಿ ಜಗದೀಪ್ ಧಂಖರ್ ಅವರು ಅನಾರೋಗ್ಯದ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಿದ ನಂತರ ಈ ಚುನಾವಣಾ ಪ್ರಕ್ರಿಯೆ ಆರಂಭವಾಗಿದೆ.

## ಮಾಲ್ಡೀವ್ಸ್ 60ನೇ ಸ್ವಾತಂತ್ರ್ಯ ದಿನಾಚರಣೆಗೆ ಮುಖ್ಯ ಅತಿಥಿಯಾಗಿ ಪ್ರಧಾನಿ ಮೋದಿ



* ಮಾಲ್ಡೀವ್ಸ್ ರಾಜಧಾನಿ ಮಾಲೆಯಲ್ಲಿ ಇಂದು(ಜುಲೈ 26) ನಡೆಯುತ್ತಿರುವ 60ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 'ಗೌರವ ಅತಿಥಿ' ಯಾಗಿ ಪಾಲ್ಗೊಂಡಿದ್ದಾರೆ.


KPSCVaani

* ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಮಾಲ್ಡೀವ್ಸ್‌ಗೆ ಅಧಿಕೃತ ಭೇಟಿಗೆ ಹೋಗಿದ್ದಾರೆ.
* ಶುಕ್ರವಾರ(ಜುಲೈ 25) ಆಯೋಜಿಸಲಾದ ರಾಜ್ಯ ಔತಣಕೂಟದಲ್ಲಿ ಮಾತನಾಡಿದ ಪ್ರಧಾನಿ, ಆಹ್ವಾನಕ್ಕಾಗಿ ಧನ್ಯವಾದ ತಿಳಿಸಿ, ಮಾಲ್ಡೀವ್ಸ್ ಜನತೆಗೆ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳನ್ನು ಕೋರಿದರು.
* ಮಾಲ್ಡೀವ್ಸ್ ಅಧ್ಯಕ್ಷರು, ಪ್ರಧಾನಿ ಮೋದಿ ಅವರನ್ನು ಭಾರತದ ಎರಡನೇ ಅತ್ಯಧಿಕ ಅವಧಿಗೆ ಸೇವೆ ಸಲ್ಲಿಸಿದ ಪ್ರಧಾನಿಯಾಗಿ ಅಭಿನಂದಿಸಿದರು.
* ಭಾರತದ ನಾಯಕತ್ವ ಹಾಗೂ ಭಾರತ-ಮಾಲ್ಡೀವ್ಸ್ ನಡುವಿನ ಬಲವಾದ ಸಂಬಂಧಗಳ ಬಗ್ಗೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.
* ಭಾರತವು ಮಾಲ್ಡೀವ್ಸ್‌ನ ನಿಕಟವಾದ ಮತ್ತು ವಿಶ್ವಾಸಾರ್ಹ ಪಾಲುದಾರ ಎಂದು ಅವರು ಹೇಳಿದ್ದು, ಈ ಸಹಕಾರದಿಂದ ಭದ್ರತೆ, ಆರೋಗ್ಯ, ಶಿಕ್ಷಣ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಪ್ರಗತಿ ಕಂಡುಬಂದಿದೆ ಎಂದು ವಿವರಿಸಿದರು.

## ಸೆಪ್ಟೆಂಬರ್ 2025 ರ ವೇಳೆಗೆ IAF MiG-21 ಜೆಟ್‌ಗಳಿಗೆ ನಿವೃತ್ತಿ



* ಭಾರತೀಯ ವಾಯುಪಡೆ (IAF) ಸೆಪ್ಟೆಂಬರ್ 2025 ರ ವೇಳೆಗೆ ಐತಿಹಾಸಿಕ MiG-21 ಯುದ್ಧವಿಮಾನಗಳನ್ನು ನಿವೃತ್ತಿಗೊಳಿಸಲಿದೆ. ಆರು ದಶಕಗಳ ಸೇವೆಗೆ ವಿದಾಯ ಹೇಳುತ್ತಿರುವ ಈ ಜೆಟ್‌ಗಳು ಈಗ ತೇಜಸ್ ಮಾರ್ಕ್ 1A ಗೆ ಸ್ಥಳ ನೀಡುತ್ತಿವೆ.
* 1963 ರಲ್ಲಿ ಸೇರ್ಪಡೆಯಾದ MiG-21 ಭಾರತದ ಮೊದಲ ಸೂಪರ್‌ಸಾನಿಕ್ ಯುದ್ಧವಿಮಾನವಾಗಿದ್ದು, ಬಾಂಗ್ಲಾದೇಶ ವಿಮೋಚನಾ ಯುದ್ಧ, ಕಾರ್ಗಿಲ್ ಯುದ್ಧ ಮತ್ತು ಬಾಲಕೋಟ್ ದಾಳಿ ಸೇರಿದಂತೆ ಅನೇಕ ಮಹತ್ವದ ಯುದ್ಧಗಳಲ್ಲಿ ಭಾಗವಹಿಸಿದೆ.
* ಈ ನಿವೃತ್ತಿ ಭಾರತದ ಯುದ್ಧ ಸಾಮರ್ಥ್ಯದ ಪೀಳಿಗೆಯ ಬದಲಾವಣೆಯನ್ನು ಸೂಚಿಸುತ್ತದೆ. ಇದು 'ಆತ್ಮನಿರ್ಭರ ಭಾರತ' ಧ್ಯೇಯಕ್ಕೆ ಅನುಗುಣವಾಗಿ ತೇಜಸ್‌ನಂತಹ ಸ್ವದೇಶೀಯವಾಗಿ ಅಭಿವೃದ್ಧಿಪಡಿಸಿದ ಯುದ್ಧವಿಮಾನಗಳತ್ತ ಹೆಜ್ಜೆ ಹಾಕುವುದು.
* MiG-21 ಅಪಘಾತಗಳಿಂದಾಗಿ "ಹಾರುವ ಶವಪೆಟ್ಟಿಗೆ" ಎಂಬ ಹಣೆಪಟ್ಟಿ ಪಡೆದುಕೊಂಡಿದೆ. ತೇಜಸ್ ಎಂಜಿನ್ ಪೂರೈಕೆಯ ವಿಳಂಬವು ಪರಿವರ್ತನೆಗೆ ಅಡ್ಡಿಯಾಗುವ ಭೀತಿಯಿದೆ.
* ರಾಜಸ್ಥಾನದ ನಾಲ್ ಏರ್‌ಬೇಸ್‌ನ MiG-21 ಸ್ಕ್ವಾಡ್ರನ್‌ಗಳನ್ನು ತೇಜಸ್ ಮಾರ್ಕ್ 1A ಯೊಂದಿಗೆ ಬದಲಾಯಿಸಲಾಗುವುದು. HAL ಮಾರ್ಚ್ 2026 ರ ಒಳಗಾಗಿ ಕನಿಷ್ಠ ಆರು ತೇಜಸ್ ವಿಮಾನಗಳನ್ನು ಪೂರೈಸಲಿದ್ದು, IAF ನ ಸಾಮರ್ಥ್ಯ ಹೆಚ್ಚಳಕ್ಕೆ ಇದು ಸಹಕಾರಿಯಾಗಲಿದೆ.




## ರಾಣಿ ಚೆನ್ನಭೈರಾದೇವಿ ಸ್ಮರಣಾರ್ಥ ಅಂಚೆ ಚೀಟಿ ಬಿಡುಗಡೆ



* ಭಾರತದ 'ಕಾಳು ಮೆಣಸಿನ ರಾಣಿ' ಎಂದೇ ಖ್ಯಾತಿಯ ರಾಣಿ ಚೆನ್ನಭೈರಾದೇವಿಯ ಸ್ಮರಣಾರ್ಥವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದ್ದಾರೆ.
* ಈ ವಿಶೇಷ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪಲ್ಹಾದ ಜೋಶಿ ಫೋಟೊ ಹಂಚಿಕೊಂಡಿದ್ದಾರೆ.
* ಕರ್ನಾಟಕದ ಗೇರುಸೊಪ್ಪೆಯ ರಾಜಕೀಯ ನಾಯಕಿಯಾಗಿ ಗುರುತಿಸಿಕೊಂಡ ರಾಣಿ ಚೆನ್ನಭೈರಾದೇವಿಗೆ ಪೋರ್ಚುಗೀಸರು 'ರೈನಾ ಡಾ ಪಿಮೆಂಟಾ' ಎಂದು ಕರೆದು ಗೌರವಿಸುತ್ತಿದ್ದರು. ಅವರು 54 ವರ್ಷಗಳ ಕಾಲ ತಮ್ಮ ರಾಜ್ಯವನ್ನು ರಕ್ಷಿಸಿದ್ದ ಶಕ್ತಿಯ ಪ್ರತೀಕ.
* ಅಂಚೆ ಚೀಟಿ ಬಿಡುಗಡೆ ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರೂ ಉಪಸ್ಥಿತರಿದ್ದರು.

## WI vs Aus : ಎರಡನೇ ಅತಿ ವೇಗದ ಶತಕ ಸಿಡಿಸಿದ ಟಿಮ್ ಡೇವಿಡ್



* ವೆಸ್ಟ್ ಇಂಡೀಸ್ ವಿರುದ್ಧದ ಟಿ-20 ಸರಣಿಯ ಮೂರನೇ ಪಂದ್ಯದಲ್ಲಿ ಕೇವಲ 37 ಎಸೆತಗಳಲ್ಲಿ ಟಿಮ್ ಡೇವಿಡ್ ಅವರು ಶತಕ ಬಾರಿಸಿದರು. ಇದು ಅಂತರರಾಷ್ಟ್ರೀಯ ಟಿ-20 ಕ್ರಿಕೆಟ್‌ನಲ್ಲಿ ಎರಡನೇ ಅತಿ ವೇಗದ ಶತಕವಾಗಿದೆ. ಈ ಮೂಲಕ ಭರ್ಜರಿ ದಾಖಲೆ ನಿರ್ಮಿಸಿದ್ದಾರೆ.

* ವೆಸ್ಟ್ ಇಂಡೀಸ್ ವಿರುದ್ಧದ ಮೂರನೇ ಟಿ20ಐ ಅನ್ನು ಆಸ್ಟ್ರೇಲಿಯಾ 6 ವಿಕೆಟ್‌ಗಳಿಂದ ಗೆಲ್ಲುವ ಮೂಲಕ ಇನ್ನು 2 ಪಂದ್ಯಗಳಿರುವಂತೆ 5 ಪಂದ್ಯಗಳ ಟಿ20 ಸರಣಿಯನ್ನು ವಶಪಡಿಸಿಕೊಂಡಿದೆ. 215 ರನ್‌ಗಳ ಗುರಿ ಬೆನ್ನಟ್ಟಿದ ಕಾಂಗರೂ ಪಡೆ ಕೇವಲ 16.1 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಗುರಿ ತಲುಪಿತು.

* ಸೇಂಟ್ ಕಿಟ್ಸ್‌ನಲ್ಲಿ ನಡೆದ ಈ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ಟಾಸ್ ಗೆದ್ದು ಮೊದಲು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ವಿಂಡೀಸ್ ಆರಂಭಿಕ ಆಟಗಾರರಾದ ಬ್ರ್ಯಾಂಡನ್ ಕಿಂಗ್ 62 ಹಾಗೂ ನಾಯಕ ಶಾಯ್ ಹೋಪ್ ಅಜೇಯ ಶತಕದ ನೆರವಿನಿಂದ(102) 4 ವಿಕೆಟ್ ಕಳೆದುಕೊಂಡು 214 ರನ್ ಗಳಿಸಿತ್ತು. ಶಿಮ್ರಾನ್ ಹೆಟ್ಮೈಯರ್ 9 ರುದರ್ಫೋರ್ಡ್ 12 ರನ್ ಪೊವೆಲ್ 9 ಮತ್ತು ರೊಮಾರಿಯೊ ಶೆಫರ್ಡ್ ತಲಾ 9 ರನ್ ಗಳಿಸಿದರು.

* ವಿಂಡೀಸ್ ಬೌಲರ್‌ಗಳ ಎಸೆತಗಳನ್ನು ಮನಸ್ಸೋ ಇಚ್ಛೆ ಸಿಡಿಸಿದ ಟಿಮ್ ಡೇವಿಡ್ ಕೇವಲ 37 ಎಸೆತಗಳಲ್ಲಿ ಭರ್ಜರಿ ಶತಕ ಬಾರಿಸಿದರು. ಡೇವಿಡ್ 11 ಸಿಕ್ಸರ್ ಬಾರಿಸಿದರು. ಮಿಚೆಲ್ ಓವೆನ್ 16 ಎಸೆತಗಳಲ್ಲಿ 36 ರನ್ ಬಾರಿಸಿದರು.

* ಡೇವಿಡ್ ಅಬ್ಬರಕ್ಕೆ 215 ರನ್‌ಗಳ ಗುರಿಯನ್ನ ಆಸ್ಟ್ರೇಲಿಯಾ ಇನ್ನೂ 23 ಎಸೆತಗಳಿರುವಂತೆ ದಾಟಿತು. ಇನ್ನೂ 50-60 ರನ್‌ಗಳಿದ್ದರೂ ಆಸ್ಟ್ರೇಲಿಯಾ ಚೇಸ್ ಮಾಡುತ್ತಿತ್ತು. ಟಿಮ್ ಡೇವಿಡ್ 37 ಎಸೆತಗಳಲ್ಲಿ 6 ಬೌಂಡರಿ, 11 ಸಿಕ್ಸರ್ ಸಿಡಿಸಿದರು.

* 275.68ರ ಸ್ಟ್ರೈಕ್ ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದ ಟಿಮ್ ಡೇವಿಡ್ ಈಗ ಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ಪರ ವೇಗದ ಶತಕ ಸಿಡಿಸಿದ ದಾಖಲೆಯನ್ನು ಹೊಂದಿದ್ದಾರೆ. ಇದಕ್ಕೂ ಮುನ್ನ ಈ ದಾಖಲೆ ಜೋಶ್ ಇಂಗ್ಲಿಸ್ ಹೆಸರಿನಲ್ಲಿತ್ತು. ಇಂಗ್ಲಿಸ್ 2024ರಲ್ಲಿ ಸ್ಕಾಟ್ಲೆಂಡ್ ವಿರುದ್ಧ 43 ಎಸೆತಗಳಲ್ಲಿ ಶತಕ ಸಿಡಿಸಿದ್ದು ದಾಖಲೆಯಾಗಿತ್ತು.

## ಫಿನೋ ಪೇಮೆಂಟ್ಸ್ ಬ್ಯಾಂಕ್ ಬಂಗಾಳದಲ್ಲಿ ಯುಪಿಐ ವಿಸ್ತರಣೆಗಾಗಿ "GATI" ಉಳಿತಾಯ ಖಾತೆ ಆರಂಭ




* ಫಿನೋ(FINO) ಪೇಮೆಂಟ್ಸ್ ಬ್ಯಾಂಕ್ "GATI" ಎಂಬ ಹೊಸ ಡಿಜಿಟಲ್ ಉಳಿತಾಯ ಖಾತೆಯನ್ನು ಪ್ರಾರಂಭಿಸಿದೆ.

* "ಗತಿ" ಪದದ ಅರ್ಥವೇ ವೇಗ. ಈ ಖಾತೆ ಪಶ್ಚಿಮ ಬಂಗಾಳದ ಗ್ರಾಮೀಣ ಹಾಗೂ ಅರೆ-ನಗರ ಪ್ರದೇಶಗಳಲ್ಲಿ ಡಿಜಿಟಲ್ ವಹಿವಾಟುಗಳನ್ನು ಉತ್ತೇಜಿಸಲು ಉದ್ದೇಶಿತವಾಗಿದೆ.

* ಈ ಖಾತೆ ಶೂನ್ಯ-ಬ್ಯಾಲೆನ್ಸ್‌ನೊಂದಿಗೆ ತ್ವರಿತ ವಹಿವಾಟು ಸಾಮರ್ಥ್ಯವನ್ನು ನೀಡುತ್ತದೆ. ಇಂದಿನ ಹೆಚ್ಚುತ್ತಿರುವ UPI ಬಳಕೆಯ ನಡುವೆಯೇ, ಈ ಖಾತೆ ಆನ್‌ಲೈನ್ ಹಣಕಾಸು ಸೇವೆಗಳಿಗೆ ಸುಲಭ ಪ್ರವೇಶವನ್ನು ನೀಡುತ್ತದೆ. ವಿಶೇಷವಾಗಿ ಯುವಕರು, ಮಹಿಳೆಯರು ಮತ್ತು ಸರಕಾರದ ಲಾಭಾಂಶದ ಫಲಾನುಭವಿಗಳಿಗೆ ಉಪಯುಕ್ತವಾಗಿದೆ.

* ಫಿನೋ ತನ್ನ ವ್ಯಾಪಾರಿ ಆಧಾರಿತ ಮಾದರಿಯ ಮೂಲಕ ಬ್ಯಾಂಕಿಂಗ್ ಸೇವೆಗಳನ್ನು ಗ್ರಾಹಕರಿಗೆ ಒದಗಿಸುತ್ತಿದೆ. ಪಶ್ಚಿಮ ಬಂಗಾಳದಲ್ಲಿ 40,000 ಕ್ಕೂ ಹೆಚ್ಚು ವ್ಯಾಪಾರಿ ಕೇಂದ್ರಗಳ ಮೂಲಕ ಈ ಸೇವೆಗಳನ್ನು ಮತ್ತಷ್ಟು ಸುಲಭಗೊಳಿಸಿದೆ.

* ಸ್ಮಾರ್ಟ್‌ಫೋನ್ ಬಳಕೆ ಏರಿದ ಹಿನ್ನೆಲೆಯಲ್ಲಿ, ಎಲ್ಲರಿಗೂ ಲಭ್ಯವಿರುವ ಡಿಜಿಟಲ್ ಬ್ಯಾಂಕಿಂಗ್ ಸೇವೆಗಳ ಅಗತ್ಯವಿದೆ.

* ಈ ಯೋಜನೆಯ ಮುಖ್ಯ ಗುರಿ ಗ್ರಾಮೀಣ ಪ್ರದೇಶಗಳಲ್ಲಿ ಡಿಜಿಟಲ್ ಬ್ಯಾಂಕಿಂಗ್ ಲಭ್ಯತೆಯನ್ನು ಹೆಚ್ಚಿಸುವುದು. ಮೊಬೈಲ್ ಆಧಾರಿತ ಬ್ಯಾಂಕಿಂಗ್ ಮೂಲಕ ಕಡಿಮೆ ಆದಾಯದ ಗುಂಪುಗಳನ್ನು, ಹಿರಿಯರನ್ನು ಹಾಗೂ ಮಹಿಳೆಯರನ್ನು ಸಬಲೀಕರಣಗೊಳಿಸುವ ಉದ್ದೇಶ ಹೊಂದಿದೆ.

ವೈಶಿಷ್ಟ್ಯಗಳು

· eKYC ಮೂಲಕ ತ್ವರಿತ ಖಾತೆ ತೆರೆಯುವಿಕೆ

· ಶೂನ್ಯ-ಬ್ಯಾಲೆನ್ಸ್ ಖಾತೆ

· ₹100 ಖಾತೆ ಶುಲ್ಕ, ತ್ರೈಮಾಸಿಕ ನಿರ್ವಹಣಾ ಶುಲ್ಕ ₹50

· ತಕ್ಷಣದ UPI ಸಕ್ರಿಯಗೊಳಿಸುವಿಕೆ

· ಡಿಜಿಟಲ್ ಚಿನ್ನ, ವಿಮೆ, ಸಾಲ ಸೇವೆಗಳು ಅಪ್ಲಿಕೇಶನ್ ಮೂಲಕ ಲಭ್ಯ

* ಫಿನೋ ಡಿಜಿಟಲ್ ಆಧಾರಿತ ಆರ್ಥಿಕ ಸೇರ್ಪಡೆಗೆ ಬದ್ಧವಾಗಿದೆ. "ಫೈಜಿಟಲ್" (ಭೌತಿಕ+ಡಿಜಿಟಲ್) ಮಾದರಿಯಿಂದ ಸಂಪೂರ್ಣ ಡಿಜಿಟಲ್‌ಗೆ ತೆರಳುವ ಗುರಿ ಹೊಂದಿದೆ. ಈ ಯೋಜನೆ ಗ್ರಾಮೀಣ ಜನತೆಗೆ ಡಿಜಿಟಲ್ ಹಣಕಾಸು ಸೇವೆಗಳಲ್ಲಿ ಹೆಚ್ಚಿನ ಭಾಗವಹಿಸುವಿಕೆಯನ್ನು ತರುವ ನಿರೀಕ್ಷೆ ಇದೆ.

## ಭಾರತದ ಮೊದಲ ಹೈಡ್ರೋಜನ್ ಚಾಲಿತ ರೈಲು ಕೋಚ್‌ನ ಯಶಸ್ವಿ ಪರೀಕ್ಷೆ



* ಭಾರತದಲ್ಲಿ ಹೈಡ್ರೋಜನ್ ಇಂಧನ ರೈಲು ಅಭಿವೃದ್ಧಿಯಲ್ಲಿ ಪ್ರಮುಖ ಸಾಧನೆ ನಡೆದಿದೆ. ಚೆನ್ನೈನ ಇಂಟಿಗ್ರಲ್ ಕೋಚ್ ಫ್ಯಾಕ್ಟರಿಯಲ್ಲಿ (ಐಸಿಎಫ್) ದೇಶದ ಮೊದಲ ಹೈಡ್ರೋಜನ್ ಚಾಲಿತ ಕೋಚ್ ಅನ್ನು ಯಶಸ್ವಿಯಾಗಿ ಪರೀಕ್ಷಿಸಲಾಗಿದೆ ಎಂದು ಜುಲೈ 25, 2025 ರಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಘೋಷಿಸಿದರು.

* ಈ ಕೋಚ್ 1,200 ಎಚ್‌ಪಿ ಶಕ್ತಿಯಿರುವ ಹೈಡ್ರೋಜನ್ ಚಾಲಿತ ರೈಲು ಪ್ರಾಜೆಕ್ಟಿನ ಭಾಗವಾಗಿದೆ. ಇದು ಭಾರತವನ್ನು ಹೈಡ್ರೋಜನ್ ರೈಲು ತಂತ್ರಜ್ಞಾನದ ಮುಂಚೂಣಿಯಲ್ಲಿರಿಸಲು ನೆರವಾಗಲಿದೆ ಎಂದು ವೈಷ್ಣವ್ ಅವರು ತಿಳಿಸಿದ್ದಾರೆ.

* 2023ರಲ್ಲಿ "ಹೈಡ್ರೋಜನ್ ಫಾರ್ ಹೆರಿಟೇಜ್" ಯೋಜನೆಯಡಿಯಲ್ಲಿ ₹80 ಕೋಟಿ ವೆಚ್ಚದಲ್ಲಿ 35 ಹೈಡ್ರೋಜನ್ ರೈಲುಗಳ ಅಭಿವೃದ್ಧಿಗೆ ಯೋಜನೆ ರೂಪಿಸಲಾಗಿದೆ. ಪ್ರತಿ ಪರಂಪರೆಯ ಮಾರ್ಗಕ್ಕೆ ₹70 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ಒದಗಿಸಲಾಗುವುದು.

* ಈಗಾಗಲೇ ಡೀಸೆಲ್ ಎಲೆಕ್ಟ್ರಿಕ್ ಮಲ್ಟಿಪಲ್ ಯುನಿಟ್ (DEMU) ರೇಕ್‌ಗಳಲ್ಲಿ ಹೈಡ್ರೋಜನ್ ಇಂಧನ ಕೋಶ ತಂತ್ರಜ್ಞಾನವನ್ನು ₹111.83 ಕೋಟಿ ವೆಚ್ಚದಲ್ಲಿ ಜಿಂದ್-ಸೋನಿಪತ್ ವಿಭಾಗದಲ್ಲಿ ಪ್ರಯೋಗಾತ್ಮಕವಾಗಿ ತರುವ ಯೋಜನೆ ರೂಪಿಸಲಾಗಿದೆ.

* ಹೈಡ್ರೋಜನ್ ರೈಲುಗಳ ಪ್ರಾಥಮಿಕ ಚಾಲನಾ ವೆಚ್ಚ ಹೆಚ್ಚು ಇರಬಹುದಾದರೂ, ಪ್ರಮಾಣ ಹೆಚ್ಚಾದಂತೆ ವೆಚ್ಚ ಕಡಿಮೆಯಾಗಲಿದೆ. ಇದರೊಂದಿಗೆ, ಶೂನ್ಯ ಇಂಗಾಲ ಹೊರಸೂಸುವಿಕೆಯನ್ನು ಸಾಧಿಸಲು ಇದು ಮಹತ್ವದ ಹಸಿರು ಸಾರಿಗೆ ಪರಿಹಾರವಾಗಲಿದೆ.

* ಹೈಡ್ರೋಜನ್ ಸಂಚಾರ ಕ್ಷೇತ್ರದಲ್ಲಿ ಭಾರತ ಮುನ್ನಡೆಸುತ್ತಿದೆ ಎಂಬುದಕ್ಕೆ ಸೂಚನೆವಾಗಿ, ಭೂತಾನ್ ಪ್ರಧಾನಿ ಅವರಿಗೆ ಹೈಡ್ರೋಜನ್ ಇಂಧನ ಬಸ್ ಪ್ರದರ್ಶನ ನೀಡಿ ಭಾರತೀಯ ಆಯಿಲ್ ವತಿಯಿಂದ ಚಲನಶೀಲತೆ ತಂತ್ರಜ್ಞಾನವನ್ನು ಪರಿಚಯಿಸಲಾಯಿತು.

# 28 July 2025

## ಜುಲೈ 28 : ವಿಶ್ವ ಹೆಪಟೈಟಿಸ್ ದಿನ




* ಪ್ರತಿ ವರ್ಷ, ಜುಲೈ 28 ರಂದು ವಿಶ್ವ ಹೆಪಟೈಟಿಸ್ ದಿನವನ್ನು ಆಚರಿಸಲಾಗುತ್ತದೆ, ಇದು ವೈರಲ್ ಹೆಪಟೈಟಿಸ್‌ನ ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಜನರಿಗೆ ಶಿಕ್ಷಣ ನೀಡಲು ಆಚರಿಸಲಾಗುತ್ತದೆ.

*ಈ ವರ್ಷ, 2025, ವಿಶ್ವ ಹೆಪಟೈಟಿಸ್ ದಿನದ ಥೀಮ್ " ಹೆಪಟೈಟಿಸ್ ಅನ್ನು ಭೇದಿಸೋಣ". ಈ ಥೀಮ್ ಯಕೃತ್ತಿನ ಕ್ಯಾನ್ಸರ್ ಮತ್ತು ಹೆಪಟೈಟಿಸ್ ಅನ್ನು ಎದುರಿಸಲು ವಿಶ್ವಾದ್ಯಂತ ಪ್ರಯತ್ನಕ್ಕೆ ಅಡ್ಡಿಪಡಿಸುವ ಕಳಂಕ ಮತ್ತು ಸುಳ್ಳು ಮಾಹಿತಿಯಂತಹ ವ್ಯವಸ್ಥಿತ, ಸಾಮಾಜಿಕ ಮತ್ತು ಆರ್ಥಿಕ ಅಡೆತಡೆಗಳನ್ನು ತೆಗೆದುಹಾಕುವ ತುರ್ತು ಅಗತ್ಯವನ್ನು ಎತ್ತಿ ತೋರಿಸುತ್ತದೆ.

* ಇದು ಯಕೃತ್ತಿನ ಉರಿಯೂತಕ್ಕೆ ಕಾರಣವಾಗಬಹುದು ಮತ್ತು ತೀವ್ರ ಯಕೃತ್ತಿನ ಸಂಬಂಧಿತ ಕಾಯಿಲೆಗಳು ಮತ್ತು ಯಕೃತ್ತಿನ ಕ್ಯಾನ್ಸರ್‌ಗೆ ಕಾರಣವಾಗಬಹುದು.

* 2030 ರ ವೇಳೆಗೆ ಸಾರ್ವಜನಿಕ ಆರೋಗ್ಯ ಬೆದರಿಕೆಯಾಗಿ ಹೆಪಟೈಟಿಸ್ ಅನ್ನು ತೊಡೆದುಹಾಕಲು ಲಸಿಕೆ, ಪರೀಕ್ಷೆ ಮತ್ತು ಚಿಕಿತ್ಸೆ ಸೇರಿದಂತೆ ಹೆಪಟೈಟಿಸ್ ಸೇವೆಗಳನ್ನು ಸರಳೀಕರಿಸುವುದು, ಹೆಚ್ಚಿಸುವುದು ಮತ್ತು ರಾಷ್ಟ್ರೀಯ ಆರೋಗ್ಯ ವ್ಯವಸ್ಥೆಗಳಲ್ಲಿ ಸಂಯೋಜಿಸುವುದು ಸೂಕ್ತ ಎಂದು ಶಿಫಾರಸು ಮಾಡಲಾಗಿದೆ.

* ವಿಶ್ವ ಹೆಪಟೈಟಿಸ್ ದಿನದ ಇತಿಹಾಸ (WHD) :

ಬ್ಯಾರಿ ಬ್ಲಂಬರ್ಗ್ ಎಂದೂ ಕರೆಯಲ್ಪಡುವ ಡಾ. ಬರೂಚ್ ಸ್ಯಾಮ್ಯುಯೆಲ್ ಬ್ಲಂಬರ್ಗ್ 1967 ರಲ್ಲಿ ಹೆಪಟೈಟಿಸ್ ಬಿ ವೈರಸ್ ಅನ್ನು ಕಂಡುಹಿಡಿದರು ಮತ್ತು ಮೊದಲ ಹೆಪಟೈಟಿಸ್ ಬಿ ಲಸಿಕೆಯನ್ನು ಅಭಿವೃದ್ಧಿಪಡಿಸಿದರು, ಇದಕ್ಕಾಗಿ ಅವರಿಗೆ ನೊಬೆಲ್ ಪ್ರಶಸ್ತಿ ನೀಡಲಾಯಿತು. ಅವರ ಜನ್ಮದಿನವಾದ ಜುಲೈ 28 ಅನ್ನು ಅವರ ಸಾಧನೆ ಮತ್ತು ಕೊಡುಗೆಗಳನ್ನು ಸ್ಮರಿಸಲು ವಿಶ್ವ ಹೆಪಟೈಟಿಸ್ ದಿನವನ್ನಾಗಿ ಆಯ್ಕೆ ಮಾಡಲಾಯಿತು.

* ಹೆಪಟೈಟಿಸ್ ವೈರಸ್ ತಡೆಗಟ್ಟುವಿಕೆ :

- ಹೆಪಟೈಟಿಸ್ (ಎ ಮತ್ತು ಬಿ) ಗೆ ಲಸಿಕೆಗಳನ್ನು ಪಡೆಯಿರಿ.
- ಲೈಂಗಿಕ ಸಮಯದಲ್ಲಿ ಕಾಂಡೋಮ್ ಬಳಸಿ.
- ಔಷಧಿ ತೆಗೆದುಕೊಳ್ಳಲು ಸೂಜಿಗಳನ್ನು ಹಂಚಿಕೊಳ್ಳಬೇಡಿ.
- ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದು, ಉದಾಹರಣೆಗೆ ಸೋಪ್ ಮತ್ತು ನೀರಿನಿಂದ ಕೈಗಳನ್ನು ಚೆನ್ನಾಗಿ ತೊಳೆಯುವುದು.
- ಸೋಂಕಿತ ವ್ಯಕ್ತಿಯ ವೈಯಕ್ತಿಕ ವಸ್ತುಗಳನ್ನು ಬಳಸಬೇಡಿ.
- ಹಚ್ಚೆ ಹಾಕಿಸಿಕೊಳ್ಳುವಾಗ ಅಥವಾ ದೇಹ ಚುಚ್ಚಿಸಿಕೊಳ್ಳುವಾಗ ಜಾಗರೂಕರಾಗಿರಿ.
- ಕಳಪೆ ನೈರ್ಮಲ್ಯ ಹೊಂದಿರುವ ವಿಶ್ವದ ಪ್ರದೇಶಗಳಿಗೆ ಪ್ರಯಾಣಿಸುವಾಗ ನೀವು ಲಸಿಕೆ ಹಾಕಿಸಿಕೊಂಡಿದ್ದೀರಾ ಎಂದು ಖಚಿತಪಡಿಸಿಕೊಳ್ಳಿ.
- ಪ್ರಯಾಣದ ಸಮಯದಲ್ಲಿ ಬಾಟಲ್ ನೀರನ್ನು ಕುಡಿಯಿರಿ.

KPSCVaani

## ಆರ್‌ಬಿಐ ಕೇಂದ್ರ ಮಂಡಳಿಯ ನಿರ್ದೇಶಕಿಯಾಗಿ ಅನುರಾಧಾ ಠಾಕೂರ್ ನಾಮನಿರ್ದೇಶನ



* ಅಜಯ್ ಸೇಠ್ ಅವರ ಬದಲಿಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕೇಂದ್ರೀಯ ಮಂಡಳಿಯ ನಿರ್ದೇಶಕರಾಗಿ ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ಅನುರಾಧಾ ಠಾಕೂರ್ ಅವರನ್ನು ಕೇಂದ್ರ ಸರ್ಕಾರ ನಾಮನಿರ್ದೇಶನ ಮಾಡಿದೆ.
* ಜುಲೈ 25 ರಂದು (ಶುಕ್ರವಾರ) ಹೊರಡಿಸಿದ ಅಧಿಕೃತ ಪ್ರಕಟಣೆಯ ಪ್ರಕಾರ, ಠಾಕೂರ್ ಅವರ ನೇಮಕವು ಜುಲೈ 24 ರಿಂದ ಜಾರಿಗೆ ಬರಲಿದೆ ಮತ್ತು ಮುಂದಿನ ಸೂಚನೆಯವರೆಗೆ ಜಾರಿಯಲ್ಲಿರುತ್ತದೆ.
* ಆರ್‌ಬಿಐ ಬೆಲೆ ಸ್ಥಿರತೆಯನ್ನು ಕಾಯ್ದುಕೊಳ್ಳುವುದು, ಬ್ಯಾಂಕಿಂಗ್ ನಿಯಂತ್ರಣವನ್ನು ಬಲಪಡಿಸುವುದು ಮತ್ತು ಆಗಸ್ಟ್ 4 ರಿಂದ 6, 2025 ರವರೆಗೆ ನಡೆಯಲಿರುವ ಮುಂಬರುವ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಗೆ ಸಿದ್ಧತೆ ನಡೆಸುವತ್ತ ಗಮನಹರಿಸುತ್ತಿರುವುದರಿಂದ ಅವರ ನೇಮಕಾತಿ ನಿರ್ಣಾಯಕ ಸಮಯದಲ್ಲಿ ಬಂದಿದೆ.
* ಮುಂಬೈನಲ್ಲಿ ನಡೆದ ಫೈನಾನ್ಶಿಯಲ್ ಎಕ್ಸ್‌ಪ್ರೆಸ್ ಬಿಎಫ್‌ಎಸ್‌ಐ ಶೃಂಗಸಭೆಯನ್ನುದ್ದೇಶಿಸಿ ಮಾತನಾಡಿದ ಗವರ್ನರ್ ಸಂಜಯ್ ಮಲ್ಹೋತ್ರಾ, "ಹಣಕಾಸು ನೀತಿಯು ದತ್ತಾಂಶ ಆಧಾರಿತವಾಗಿರುವುದರಿಂದ, ಯಾವುದೇ ನಿರ್ಧಾರ ತೆಗೆದುಕೊಂಡರೆ ಪರಿಷ್ಕೃತ ಸಂಖ್ಯೆಗಳಿಂದ ದೃಷ್ಟಿಕೋನದ ಕುರಿತು ಹೆಚ್ಚಿನ ಮಾರ್ಗದರ್ಶನ ನೀಡಲಾಗುವುದು" ಎಂದು ಹೇಳಿದರು.
* ಮಂಡಳಿಯು ಆರ್‌ಬಿಐ ವ್ಯವಹಾರಗಳ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿರ್ದೇಶನಕ್ಕೆ ಕಾರಣವಾಗಿದೆ. ಅನುರಾಧಾ ಠಾಕೂರ್ ಅವರ ನಾಮನಿರ್ದೇಶನವು ಕೇಂದ್ರ ಬ್ಯಾಂಕ್ ಮಟ್ಟದಲ್ಲಿ ಆರ್ಥಿಕ ನೀತಿ ನಿರೂಪಣೆಯನ್ನು ಬಲಪಡಿಸುವ ಸರ್ಕಾರದ ಉದ್ದೇಶವನ್ನು ಪ್ರತಿಬಿಂಬಿಸುತ್ತದೆ.

## ದೇಶದ ಮೊದಲ ಹಿಂದಿ ಮಾಧ್ಯಮ ವೈದ್ಯಕೀಯ ಕಾಲೇಜು



* ಭೋಪಾಲ್‌ನಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯವು ಭಾರತದ ಮೊದಲ ಹಿಂದಿ ಮಾಧ್ಯಮ ವೈದ್ಯಕೀಯ ಕಾಲೇಜಾಗಿ ಪ್ರಾರಂಭವಾಗಿದೆ.
* ಈ ಕಾಲೇಜಿನಲ್ಲಿ ವೈದ್ಯಕೀಯ ಪಠ್ಯಕ್ರಮಗಳನ್ನು ಹಿಂದಿ ಭಾಷೆಯಲ್ಲಿ ಬೋಧಿಸಲಾಗುತ್ತಿದೆ.
* ಮೂಲತಃ ಎಂ.ಬಿ.ಬಿ.ಎಸ್ ಪದವಿ ಕೋರ್ಸ್‌ಗಾಗಿ ಹಿಂದಿಯಲ್ಲಿ ಪಾಠಪುಸ್ತಕಗಳನ್ನು ರೂಪಿಸಲಾಗಿದ್ದು, ವಿದ್ಯಾರ್ಥಿಗಳಿಗೆ ತಮ್ಮ ಮೌಲಿಕ ಭಾಷೆಯಲ್ಲಿ ಶಿಕ್ಷಣ ಪಡೆಯುವ ಅವಕಾಶ ಸಿಕ್ಕಿದೆ.
* ಪೈಲಟ್ ಯೋಜನೆಯಾಗಿ ಆರಂಭವಾಗಿರುವ ಈ ಕಾರ್ಯಕ್ರಮದಲ್ಲಿ ಪ್ರಥಮ ವರ್ಷದ ಮೂರು ಪ್ರಮುಖ ವಿಷಯಗಳು – ಅಂಗರಚನಾಶಾಸ್ತ್ರ, ಶರೀರಶಾಸ್ತ್ರ, ಮತ್ತು ಜೈವಿಕ-ರಸಾಯನಶಾಸ್ತ್ರ – ಗಳನ್ನು ಹಿಂದಿಯಲ್ಲಿ ಬೋಧಿಸಲಾಗುತ್ತಿದೆ.
* ಇದು ಸ್ಥಳೀಯ ವಿದ್ಯಾರ್ಥಿಗಳಿಗೆ ಓದುವಿಕೆ ಸುಲಭವಾಗಿಸಲು ಮತ್ತು ತಂತ್ರಜ್ಞಾನ-ಆಧಾರಿತ ವೈದ್ಯಕೀಯ ಶಿಕ್ಷಣವನ್ನು ತವರಿಗೆ ತರುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.

## ಜಗತ್ತಿನ ವಿಶ್ವಾಸಾರ್ಹ ನಾಯಕರಲ್ಲಿ ಮೋದಿ ನಂ 01



* ಅಮೇರಿಕ ಮೂಲದ "ಮಾರ್ನಿಂಗ್ ಕನ್ಸಲ್ಟ್" ಸಂಸ್ಥೆಯು 2025ರ ಜುಲೈ 4ರಿಂದ 10ರ ವರೆಗೆ ನಡೆಸಿದ "ಗ್ಲೋಬಲ್ ಲೀಡರ್ ಅಪ್ರೂವಲ್ ರೇಟಿಂಗ್" ಸಮೀಕ್ಷೆಯಲ್ಲಿ ಹಲವು ರಾಷ್ಟ್ರಗಳ ಜನರ ಅಭಿಪ್ರಾಯ ಸಂಗ್ರಹಿಸಲಾಗಿದೆ.
* ಈ ಸಮೀಕ್ಷೆಯಲ್ಲಿ ಭಾಗವಹಿಸಿದ ಪ್ರತಿ ನಾಲ್ಕು ಜನರಲ್ಲಿ ಮೂವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಜಾಪ್ರಭುತ್ವ ನಾಯಕನೆಂದು ಒಪ್ಪಿಕೊಂಡಿದ್ದಾರೆ.
* 18% ಜನರು ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದು, 7% ಜನರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.
* ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜೇ ಮ್ಯುಂಗ್, ಅಧಿಕಾರ ವಹಿಸಿಕೊಂಡ ಕೇವಲ ಒಂದು ತಿಂಗಳಲ್ಲಿ 59% ಅಪ್ರೂವಲ್ ಪಡೆಯದ ಮೂಲಕ ಎರಡನೇ ಸ್ಥಾನದಲ್ಲಿದ್ದಾರೆ. ಅಮೇರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಂಟನೇ ಸ್ಥಾನಕ್ಕಿಳಿದಿದ್ದಾರೆ.

## ಡಾ. ವಿ. ನಾರಾಯಣನ್ ಅವರಿಗೆ 2025ರ ಜಿಪಿ ಬಿರ್ಲಾ ಸ್ಮಾರಕ ಪ್ರಶಸ್ತಿ



* ಇಸ್ರೋ ಅಧ್ಯಕ್ಷರು ಹಾಗೂ ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿಯಾದ ಡಾ. ವಿ. ನಾರಾಯಣನ್ ಅವರಿಗೆ 2025ರ ಜಿಪಿ ಬಿರ್ಲಾ ಸ್ಮಾರಕ ಪ್ರಶಸ್ತಿ ಲಭಿಸಿದೆ.
* ಭಾರತದ ಬಾಹ್ಯಾಕಾಶ ಕ್ಷೇತ್ರದಲ್ಲಿ ಅವರ ಮಹತ್ವದ ಕೊಡುಗೆ ಹಾಗೂ ತಂತ್ರಜ್ಞಾನ ಅಭಿವೃದ್ಧಿಗೆ ನೀಡಿದ ನಾಯಕತ್ವಕ್ಕಾಗಿ ಈ ಗೌರವ ನೀಡಲಾಗಿದೆ.
* ಈ ಪ್ರಶಸ್ತಿಯನ್ನು ಜಿಪಿ ಬಿರ್ಲಾ ಅವರ ಸ್ಮರಣಾರ್ಥವಾಗಿ ನೀಡಲಾಗುತ್ತದೆ. ಹಿಂದೆ ಇದನ್ನು "ಜೀವಮಾನ ಸಾಧನೆ ಪ್ರಶಸ್ತಿ" ಎಂದು ಕರೆಯಲಾಗುತ್ತಿತ್ತು.

* ವಿಜ್ಞಾನ, ಶಿಕ್ಷಣ, ಖಗೋಳಶಾಸ್ತ್ರ, ಮತ್ತು ಸಾರ್ವಜನಿಕ ಸೇವೆಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ವ್ಯಕ್ತಿಗಳಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.
* ಡಾ. ನಾರಾಯಣನ್ ಅವರು ಕ್ರಯೋಜೆನಿಕ್ ಪ್ರೊಪಲ್ಷನ್ ತಂತ್ರಜ್ಞಾನದಲ್ಲಿ ಪರಿಣಿತರಾಗಿದ್ದು, ಗಗನಯಾನ, ಚಂದ್ರಯಾನ-3 ಮತ್ತು ಆದಿತ್ಯ-L1 ಮುಂತಾದ ಯೋಜನೆಗಳಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.
* ಇಸ್ರೋ ಅಧ್ಯಕ್ಷರಾಗಿ ನೇಮಕಗೊಳ್ಳುವ ಮೊದಲು ಅವರು ಎಲ್‌ಪಿಎಸ್‌ಸಿ ನಿರ್ದೇಶಕರಾಗಿದ್ದರು.
* ಈ ಪ್ರಶಸ್ತಿ, ಇಸ್ರೋದ ಗ್ಲೋಬಲ್ ಯುಗರಣದ ಪ್ರತೀಕವಾಗಿದ್ದು, ಡಾ. ಎಪಿಜೆ ಅಬ್ದುಲ್ ಕಲಾಂ, ಡಾ. ಕಸ್ತೂರಿರಂಗನ್, ಡಾ. ವೆಂಕಟರಮಣ ರಾಮಕೃಷ್ಣನ್ ಮುಂತಾದ ಗಣ್ಯರ ಸಾಲಿಗೆ ಡಾ. ನಾರಾಯಣನ್ ಅವರನ್ನು ಸೇರಿಸುತ್ತದೆ.
* ಇದುವರೆಗೆ 32 ನೊಬೆಲ್ ಪುರಸ್ಕೃತರು ಈ ಪ್ರಶಸ್ತಿಗೆ ಭಾಜನರಾಗಿದ್ದು, ಇವರಲ್ಲಿ ಡಾ. ವೆಂಕಟರಾಮನ್ ರಾಮಕೃಷ್ಣನ್, ಪ್ರೊ. ಜೋಗೇಶ್ ಪತಿ ಮತ್ತು ಡಾ. ಎಪಿಜೆ ಅಬ್ದುಲ್ ಕಲಾಂ ಪ್ರಮುಖರು.

## ಭಾರತ ಮತ್ತು ಸಿಂಗಾಪುರ ಮಿಲಿಟರಿ ವ್ಯಾಯಾಮ "ಬೋಲ್ಡ್ ಕುರುಕ್ಷೇತ್ರ 2025"



* ಭಾರತ ಮತ್ತು ಸಿಂಗಾಪುರ ಸಶಸ್ತ್ರ ಪಡೆಗಳು ರಾಜಸ್ಥಾನದ ಜೋಧಪುರ ಮರುಭೂಮಿಯಲ್ಲಿ 'ಬೋಲ್ಡ್ ಕುರುಕ್ಷೇತ್ರ 2025' ಎಂಬ ಜಂಟಿ ಮಿಲಿಟರಿ ವ್ಯಾಯಾಮವನ್ನು ಆರಂಭಿಸಿವೆ.
* ಈ ಕವಾಯತಿನ ಉದ್ದೇಶ ಪರಸ್ಪರ ಸಹಕಾರ, ಜಂಟಿ ಕಾರ್ಯಸಾಧ್ಯತೆ ಮತ್ತು ಆಧುನಿಕ ಯುದ್ಧ ತಂತ್ರಗಳನ್ನು ಅಭಿವೃದ್ಧಿಪಡಿಸುವುದಾಗಿದೆ.

ವ್ಯಾಯಾಮದ ಪ್ರಮುಖ ಅಂಶಗಳು:
- ನೈಜ-ಸಮಯದ ಯುದ್ಧ ಸನ್ನಿವೇಶಗಳ ಅನುಕರಣೆ
- ನಗರ ಯುದ್ಧ, ಭಯೋತ್ಪಾದನಾ ನಿಗ್ರಹ ಹಾಗೂ ಸಿಂಕ್ರೊನೈಸ್ ತಂತ್ರಗಳ ಅಭ್ಯಾಸ
- ಶಸ್ತ್ರಾಸ್ತ್ರ, ಸಂವಹನ ತಂತ್ರಜ್ಞಾನ ಮತ್ತು ಗುಪ್ತಚರ ಹಂಚಿಕೆಯ ಬಳಕೆ
- ತ್ವರಿತ ನಿರ್ಧಾರ ಮತ್ತು ಸಂಯೋಜಿತ ಕಾರ್ಯಾಚರಣೆಗಳ ಅಭ್ಯಾಸ

* ಈ ತರಬೇತಿಯಿಂದ ಉಭಯ ದೇಶಗಳ ಪಡೆಗಳು ಪರಸ್ಪರ ಕಲಿಯಲು ಮತ್ತು ಉತ್ತಮ ಯುದ್ಧತಂತ್ರಗಳನ್ನು ವಿನಿಮಯ ಮಾಡಿಕೊಳ್ಳಲು ಅವಕಾಶ ಪಡೆಯುತ್ತವೆ.
* ವ್ಯಾಯಾಮ ಜುಲೈ 30 ರವರೆಗೆ ನಡೆಯಲಿದ್ದು, ಇದು ಭಾರತ-ಸಿಂಗಾಪುರ ರಕ್ಷಣಾ ಪಾಲುದಾರಿಕೆಯಲ್ಲಿ ವೃದ್ಧಿಯನ್ನು ಸೂಚಿಸುತ್ತದೆ.

## 200ಕ್ಕೂ ಅಧಿಕ ಬಾಹ್ಯಾಕಾಶ ಸ್ಟಾರ್ಟಪ್ : ಮನ್ ಕಿ ಬಾತ್ ಮೋದಿ ಹೇಳಿಕೆ



* ಭಾನುವಾರದ(ಜುಲೈ 27) "ಮನ್ ಕಿ ಬಾತ್" ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾರತದಲ್ಲಿ ಬಾಹ್ಯಾಕಾಶ ಕ್ಷೇತ್ರದ ಪ್ರಗತಿ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.
* ಮೋದಿ ಅವರು ಈ ವಿಷಯದಲ್ಲಿ ಕಳೆದ ಐದು ವರ್ಷಗಳಲ್ಲಿ ಬಾಹ್ಯಾಕಾಶ ಸಂಬಂಧಿತ ಸ್ಟಾರ್ಟಪ್‌ಗಳ ಸಂಖ್ಯೆ 50ರಿಂದ 200ಕ್ಕೂ ಹೆಚ್ಚು ಹೆಚ್ಚಿದ ಬಗ್ಗೆ ಉಲ್ಲೇಖಿಸಿದರು. ಇದನ್ನು ಅವರು ಭಾರತದ ವೈಜ್ಞಾನಿಕ ವಲಯದ ಪ್ರಗತಿಯ ಸಂಕೇತವೆಂದು ಹೇಳಿದರು.
* ಗಗನಯಾನಿ ಶುಭಾಂಶು ಶುಕ್ಲಾ ಅವರು ಬಾಹ್ಯಾಕಾಶ ಯಾತ್ರೆಯಿಂದ ಸುರಕ್ಷಿತವಾಗಿ ಮರಳಿದ ವಿಷಯವನ್ನು ಮೋದಿ ಶ್ಲಾಘಿಸಿದರು. ಈ ಸಾಧನೆ ದೇಶದ ಮಕ್ಕಳಲ್ಲಿ ಬಾಹ್ಯಾಕಾಶ ಕುರಿತ ಕುತೂಹಲವನ್ನು ಹೆಚ್ಚಿಸಿದೆ ಎಂದರು.
* ಭಾರತದ ಯುವತೆ ರಸಾಯನಶಾಸ್ತ್ರದಿಂದ ಗಣಿತ ಒಲಿಂಪಿಯಾಡ್ ವರೆಗೆ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆಗಳನ್ನು ಮಾಡುತ್ತಿದ್ದಾರೆ ಎಂದು ಅವರು ಗೌರವಿಸಿದರು.
* ಮೋದಿ ಅವರು ಯುನೆಸ್ಕೋ ವಿಶ್ವ ಪರಂಪರೆಯ ಪಟ್ಟಿಗೆ ಸೇರ್ಪಡೆಗೊಂಡಿರುವ 12 ಮರಾಠಾ ಕೋಟೆಗಳ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು.
* ಆಗಸ್ಟ್ 23ರಂದು ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನು ಆಚರಿಸಲಾಗುವುದು. ಈ ದಿನವನ್ನು ಹೇಗೆ ಆಚರಿಸಬೇಕು ಎಂಬ ಬಗ್ಗೆ ಸಾರ್ವಜನಿಕರಿಂದ ಸಲಹೆ ಕೇಳಿದ್ದಾರೆ.

## ಇಗ್ನೋ(IGNOU)ದ ಮೊದಲ ಮಹಿಳಾ ಕುಲಪತಿಯಾಗಿ ಉಮಾ ಕಾಂಜಿಲಾಲ್ ನೇಮಕ



* ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯಕ್ಕೆ (IGNOU) ಪ್ರಪ್ರಥಮ ಮಹಿಳಾ ಉಪ ಕುಲಪತಿಯಾಗಿ ಉಮಾ ಕಾಂಜಿಲಾಲ್ ಅವರನ್ನು ನೇಮಕ ಮಾಡಲಾಗಿದೆ ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.
* ಉಮಾ ಕಾಂಜಿಲಾಲ್ ಅವರಿಗೆ ಮುಕ್ತ ಹಾಗೂ ದೂರ ಶಿಕ್ಷಣ ಕ್ಷೇತ್ರದಲ್ಲಿ 36 ವರ್ಷಗಳ ಅನುಭವವಿದೆ. ಶೈಕ್ಷಣಿಕ ನಾಯಕತ್ವ, ಡಿಜಿಟಲ್ ಆವಿಷ್ಕಾರ ಹಾಗೂ ಆಡಳಿತ ಜ್ಞಾನದಿಂದ IGNOUಗೆ ಮಹತ್ವದ ಆಸ್ತಿಯಾಗಿ ಪರಿಗಣಿಸಲಾಗುತ್ತಿದೆ.

KPSCVaani

* ಅವರು ಈಗ ವಿಶ್ವವಿದ್ಯಾಲಯದ ಸಕ್ರಿಯ ಕುಲಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಾರ್ಚ್ 2021ರಿಂದ ಜುಲೈ 2024ರವರೆಗೆ ಪ್ರಭಾರಿ ಕುಲಪತಿಯಾಗಿ ಸೇವೆ ಸಲ್ಲಿಸಿದ್ದರು.
* 2003ರಿಂದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಉಮಾ, ಇ-ಕಲಿಕೆ, ಡಿಜಿಟಲ್ ಗ್ರಂಥಾಲಯಗಳು, ಮಾಹಿತಿ ತಂತ್ರಜ್ಞಾನ ಬಳಕೆ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಪರಿಣತರೆಂದು ಗುರುತಿಸಲಾಗಿದೆ.
* ಅವರು ಸ್ವಯಂ ಮತ್ತು ಸ್ವಯಂ ಪ್ರಭಾ ಯೋಜನೆಗಳ ರಾಷ್ಟ್ರೀಯ ಸಮನ್ವಯಕಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## Operation Mahadev: ಪಹಲ್ಗಾಮ್ ದಾಳಿಯ ಉಗ್ರರನ್ನು ಗುರಿಯಾಗಿಸಿ ಕಾರ್ಯಾಚರಣೆ



* ಜಮ್ಮು ಮತ್ತು ಕಾಶ್ಮೀರದ ಲಿದ್ವಾಸ್ ಪ್ರದೇಶದಲ್ಲಿ ಉಗ್ರರ ವಿರುದ್ಧ 'ಆಪರೇಷನ್ ಮಹಾದೇವ' ಎಂಬ ಹೆಸರಿನಲ್ಲಿ ಭಾರತೀಯ ಸೇನೆ ಕಾರ್ಯಾಚರಣೆ ಆರಂಭಿಸಿದೆ ಎಂದು ಚಿನಾರ್ ಕಾರ್ಪ್ಸ್ ಎಕ್ಸ್ ಖಾತೆಯಲ್ಲಿ ತಿಳಿಸಿದೆ.
* ಸೇನೆ, ಸಿಆರ್‌ಪಿಎಫ್ ಮತ್ತು ಜಮ್ಮು-ಕಾಶ್ಮೀರ ಪೊಲೀಸರ ಜಂಟಿ ಕಾರ್ಯಾಚರಣೆಯಲ್ಲಿ ಕೆಲ ಉಗ್ರರನ್ನು ಹೊಡೆದುರುಳಿಸಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ, ಆದರೆ ಅಧಿಕೃತ ದೃಢೀಕರಣ ಇನ್ನಷ್ಟೇ ಬರುವ ಸಾಧ್ಯತೆ ಇದೆ.
* ಗುಪ್ತಚರ ಮಾಹಿತಿ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆ ಹರ್ವಾನ್ ಪ್ರಾಂತ್ಯದ ಮುಲ್ನಾರ್ ಎಂಬಲ್ಲಿ ಆರಂಭವಾಗಿದ್ದು, ಹೆಚ್ಚಿನ ಭದ್ರತಾ ಪಡೆಯು ಸ್ಥಳಕ್ಕೆ ದೌಡಾಯಿಸಿದೆ ಎಂದು ವರದಿಯಾಗಿದೆ.

## ತಮಿಳುನಾಡಿನ ರಾಜ್ಯಸಭಾ ಸದಸ್ಯರಾಗಿ ಕಮಲ್ ಹಾಸನ್ ಪ್ರಮಾಣ ವಚನ ಸ್ವೀಕಾರ



* ಹಿರಿಯ ನಟ ಮತ್ತು ಮಕ್ಕಳ್ ನೀಧಿ ಮಯ್ಯಮ್ (ಎಂಎನ್‌ಎಂ) ಅಧ್ಯಕ್ಷ ಕಮಲ್ ಹಾಸನ್ ಅವರು ಶುಕ್ರವಾರ ರಾಜ್ಯಸಭೆಯಲ್ಲಿ ಸಂಸತ್ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ತಮ್ಮ ಶಾಸಕಾಂಗ ಪ್ರಯಾಣವನ್ನು ಅಧಿಕೃತವಾಗಿ ಪ್ರಾರಂಭಿಸಿದರು.
* ಡಿಎಂಕೆ ನೇತೃತ್ವದ ಮೈತ್ರಿಕೂಟದ ಬೆಂಬಲದೊಂದಿಗೆ ಜೂನ್ 2025 ರಲ್ಲಿ ಅವಿರೋಧವಾಗಿ ಆಯ್ಕೆಯಾದ ಹಾಸನ್ ಅವರು ತಮಿಳಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.
* 2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕಮಲ್ ಹಾಸನ್ ನೇತೃತ್ವದ ಎಂಎನ್‌ಎಂ ಪಕ್ಷದ ಜೊತೆ ಮಾಡಿಕೊಂಡ ಒಪ್ಪಂದದ ಪ್ರಕಾರ ರಾಜ್ಯಸಭಾ ಸ್ಥಾನವನ್ನು ನೀಡುವ ಭರವಸೆ ನೀಡಿದ್ದ ಆಡಳಿತಾರೂಢ ಡಿಎಂಕೆ ನೇತೃತ್ವದ ಮೈತ್ರಿಕೂಟದ ಬೆಂಬಲದೊಂದಿಗೆ ಅವರನ್ನು ನಾಮನಿರ್ದೇಶನ ಮಾಡಲಾಯಿತು.
* 70 ವರ್ಷ ವಯಸ್ಸಿನ ಅವರು 2018 ರಲ್ಲಿ ತಮ್ಮ ರಾಜಕೀಯ ಪಕ್ಷ ಎಂಎನ್‌ಎಂ ಅನ್ನು ಪ್ರಾರಂಭಿಸಿದರು ಮತ್ತು ಸಂಸತ್ತಿಗೆ ಮೊದಲ ಬಾರಿಗೆ ಪ್ರವೇಶ ಮಾಡುತ್ತಿದ್ದಾರೆ.
* ಎಂಎನ್‌ಎಂ 2024 ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರಲಿಲ್ಲ ಮತ್ತು ಬದಲಾಗಿ ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟಕ್ಕೆ ಸಂಪೂರ್ಣ ಬೆಂಬಲ ನೀಡಿತ್ತು. 2021ರ ವಿಧಾನಸಭಾ ಚುನಾವಣೆಯಲ್ಲಿ, ಎಂಎನ್‌ಎಂ ಶೇ 2.62 ರಷ್ಟು ಮತಗಳನ್ನು ಗಳಿಸಿತ್ತು.
* ಜೂನ್ 12 ರಂದು, ಮಕ್ಕಳ್ ನೀಧಿ ಮೈಯ್ಯಂ (ಎಂಎನ್‌ಎಂ) ಅಧ್ಯಕ್ಷ ಕಮಲ್ ಹಾಸನ್ ಮತ್ತು ಇತರ ಐದು ಮಂದಿ ತಮಿಳುನಾಡಿನಿಂದ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾದರು.

# 29 July 2025

## ದಿವ್ಯಾ ದೇಶಮುಖ್ ಭಾರತದ ಮೊದಲ ಮಹಿಳಾ ಚೆಸ್ ವಿಶ್ವಕಪ್ ಚಾಂಪಿಯನ್



* ಭಾರತದ 19 ವರ್ಷದ ಯುವ ಚೆಸ್ ಆಟಗಾರ್ತಿ ದಿವ್ಯಾ ದೇಶಮುಖ್ 2025ರ ಮಹಿಳಾ ಚೆಸ್ ವಿಶ್ವಕಪ್ ಅನ್ನು ಜಯಿಸಿದ್ದಾರೆ. ಜಾರ್ಜಿಯಾದ ಬಟುಮಿಯಲ್ಲಿ ನಡೆದ ಫೈನಲ್‌ನಲ್ಲಿ ಭಾರತದ ಹಿರಿಯ ಆಟಗಾರ್ತಿ ಕೊನೆರು ಹಂಪಿ ಅವರನ್ನು ಸೋಲಿಸಿ ಈ ಸಾಧನೆ ಮಾಡಿದರು.
* ಈ ಜಯದೊಂದಿಗೆ ದಿವ್ಯಾ ಚೆಸ್ ವಿಶ್ವಕಪ್ ಗೆದ್ದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.
* ಕಳೆದ ವರ್ಷವೇ ವಿಶ್ವ ಚಾಂಪಿಯನ್ ಆಗಿದ್ದ ದಿವ್ಯಾ, ಇದೀಗ ವಿಶ್ವಕಪ್‌ನ ಚಾಂಪಿಯನ್ ಕೂಡ ಆಗಿದ್ದಾರೆ.
* ಫೈನಲ್‌ನ ಮೊದಲ ಎರಡು ಪಂದ್ಯಗಳು ಡ್ರಾ ಆಗಿದ್ದರೂ, ಟೈ-ಬ್ರೇಕ್‌ನಲ್ಲಿ ದಿವ್ಯಾ ಚಾಣಾಕ್ಷ ನಡೆಯಿಂದ ಗೆಲುವು ಸಾಧಿಸಿದರು. ರ್‍ಯಾಪಿಡ್ ಪಂದ್ಯಗಳಲ್ಲಿ ಅನುಭವಹೊಂದಿದ ಕೊನೆರು ಹಂಪಿಯನ್ನು ಪರಾಭವಗೊಳಿಸಿದರು.
* ಈ ಜಯದಿಂದ ದಿವ್ಯಾ ಭಾರತದ ನಾಲ್ಕನೇ ಮಹಿಳಾ ಗ್ರ್ಯಾಂಡ್ ಮಾಸ್ಟರ್ ಆಗಿದ್ದಾರೆ. ವಿಶೇಷವೆಂದರೆ, ಈ ಸಾಧನೆ ಅವರು ಭಾರತದ ಮೊದಲ ಗ್ರ್ಯಾಂಡ್‌ಮಾಸ್ಟರ್ ಕೊನೆರು ಹಂಪಿಯನ್ನು ಸೋಲಿಸುವ ಮೂಲಕ ಸಾಧಿಸಿದ್ದಾರೆ.

## ಜುಲೈ 29 ಅಂತಾರಾಷ್ಟ್ರೀಯ ಹುಲಿಗಳ ದಿನ




KPSCVaani

* ಪ್ರತಿ ವರ್ಷ ಜುಲೈ 29 ರಂದು ಅಂತರಾಷ್ಟ್ರೀಯ ಹುಲಿಗಳ ದಿನವನ್ನು ಆಚರಿಸಲಾಗುತ್ತದೆ.

* ಇತ್ತೀಚಿನ ದಿನಗಳಲ್ಲಿ ಅಳಿವಿನಂಚಿನತ್ತ ಹುಲಿಯ ಸಂತತಿಯು ಸಾಗುತ್ತಿದೆ. ಕ್ಷೀಣಿಸುತ್ತಿರುವ ಹುಲಿಗಳ ಸಂಖ್ಯೆಯ ಕುರಿತಾಗಿ ಜಾಗೃತಿ ಮೂಡಿಸಲು ಪ್ರತಿ ವರ್ಷ ಅಂತರಾಷ್ಟ್ರೀಯ ಹುಲಿಗಳ ದಿನವನ್ನು ಆಚರಿಸಲಾಗುತ್ತದೆ.

* 2010 ಜುಲೈ 29ರಂದು ಮೊದಲ ಬಾರಿಗೆ ಅಂತರಾಷ್ಟ್ರೀಯ ಹುಲಿ ದಿನವನ್ನು ರಷ್ಯಾದ ಸೆಂಟ್ ಪೀಟರ್ ಬರ್ಗ್‌ನಲ್ಲಿ ಆಚರಿಸಲಾಯಿತು.

* ರಷ್ಯಾದಲ್ಲಿ ಸೇಂಟ್ ಪೀಟರ್ಸ್‌ಬರ್ಗ್ ಹುಲಿ ಶೃಂಗಸಭೆಯ ಸಂದರ್ಭದಲ್ಲಿ ಇದನ್ನು ರಚಿಸಲಾಯಿತು. ಕ್ಷೀಣಿಸುತ್ತಿರುವ ಹುಲಿ ಸಂಖ್ಯೆಯನ್ನು ಪರಿಹರಿಸಲು ಹದಿಮೂರು ಹುಲಿ-ಶ್ರೇಣಿಯ ದೇಶಗಳು ಒಗ್ಗೂಡಿದವು. 2022 ರ ವೇಳೆಗೆ ಕಾಡು ಹುಲಿಗಳ ಸಂಖ್ಯೆಯನ್ನು ದ್ವಿಗುಣಗೊಳಿಸಲು ಅವರು ಪ್ರತಿಜ್ಞೆ ಮಾಡಿದರು, ಈ ಗುರಿಯನ್ನು "Tx2" ಎಂದು ಕರೆಯಲಾಗುತ್ತದೆ.

* WWF, IFAW ಮತ್ತು ಸ್ಮಿತ್ಸೋನಿಯನ್ ಇನ್ಸ್ಟಿಟ್ಯೂಟ್ ನಂತಹ ಅನೇಕ ಅಂತರರಾಷ್ಟ್ರೀಯ ಸಂಸ್ಥೆಗಳು ಅಂತರರಾಷ್ಟ್ರೀಯ ಹುಲಿ ದಿನವನ್ನು ಸಹ ಆಚರಿಸುತ್ತವೆ.

* ನಾಲ್ಕು ವರ್ಷಕ್ಕೊಮ್ಮೆ ಹುಲಿ ಗಣತಿ ಮಾಡಲಾಗುತ್ತದೆ. ಪ್ರಪಂಚದ 13 ದೇಶಗಳ ಕಾಡಿನಲ್ಲಿ ಮಾತ್ರ ಹುಲಿಗಳನ್ನು ನಾವು ಕಾಣಬಹುದಾಗಿದೆ. 2018ರ ಗಣತಿ ಪ್ರಕಾರ ಮಧ್ಯಪ್ರದೇಶದಲ್ಲಿ 526 ಹುಲಿಗಳಿದ್ದು, ಮಧ್ಯಪ್ರದೇಶ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ, ಕರ್ನಾಟಕದಲ್ಲಿ 524 ಹುಲಿಗಳಿದ್ದು ಕರ್ನಾಟಕ ಎರಡನೇ ಸ್ಥಾನದಲ್ಲಿದೆ.

* ಭಾರತದಲ್ಲಿ ಹುಲಿಗಳ ಸಂಖ್ಯೆ 2018ರಲ್ಲಿ 2,967 ಇತ್ತು. 2022ರಲ್ಲಿ ಇವುಗಳ ಸಂಖ್ಯೆ 3,167ಕ್ಕೆ ಏರಿಕೆಯಾಗಿದೆ. ಹುಲಿಗಳನ್ನು ರಕ್ಷಿಸಲು, ಸರಕಾರ 'ಪ್ರಾಜೆಕ್ಟ್ ಟೈಗರ್' ಎಂಬ ಉಪಕ್ರಮವನ್ನು 1973ರಲ್ಲಿ ಪ್ರಾರಂಭಿಸಿತು. ಹುಲಿ ಮೀಸಲುಗಳನ್ನು ಸ್ಥಾಪಿಸಿದೆ. ನೈಸರ್ಗಿಕ ಆವಾಸ ಸ್ಥಾನಗಳಲ್ಲಿ ಹುಲಿಗಳ ಸಂಖ್ಯೆ ಉಳಿಸಲು ಈ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

* ವಿಶ್ವದಲ್ಲಿರುವ ಒಟ್ಟು ಹುಲಿಗಳ ಸಂಖ್ಯೆಯಲ್ಲಿ ಶೇ.75ರಷ್ಟು ಭಾರತದಲ್ಲಿವೆ. ಮಧ್ಯಪ್ರದೇಶದಲ್ಲಿ 785 ಹುಲಿಗಳಿದ್ದು, ಅತಿ ಹೆಚ್ಚು ಹುಲಿಗಳಿರುವ ರಾಜ್ಯಗಳಲ್ಲಿ ಮೊದಲ ಸ್ಥಾನದಲ್ಲಿದೆ. 563 ಹುಲಿಗಳೊಂದಿಗೆ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. 560 ಹುಲಿಗಳಿರುವ ಉತ್ತರಾಖಂಡ ಮೂರನೇ ಸ್ಥಾನದಲ್ಲಿದೆ, 444 ಹುಲಿಗಳಿರುವ ಮಹಾರಾಷ್ಟ್ರ ನಾಲ್ಕನೇ ಸ್ಥಾನದಲ್ಲಿದೆ.

## ಪ್ರಧಾನಿ ಮೋದಿರಾಜೇಂದ್ರ ಚೋಳ ಸ್ಮರಣಾರ್ಥ ನಾಣ್ಯ ಬಿಡುಗಡೆ



* ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮಿಳುನಾಡಿನ ಗಂಗೈಕೊಂಡ ಚೋಳಪುರಂನಲ್ಲಿ ನಡೆದ 'ಆದಿ ತಿರುಪತಿರೈ' ಉತ್ಸವದ ವೇಳೆ, ರಾಜೇಂದ್ರ ಚೋಳರ ಸ್ಮರಣಾರ್ಥವಾಗಿ ₹1,000 ಮೌಲ್ಯದ ವಿಶೇಷ ಸ್ಮಾರಕ ನಾಣ್ಯವನ್ನು ಬಿಡುಗಡೆ ಮಾಡಿದರು.

* ಈ ನಾಣ್ಯವು 99.9% ಶುದ್ಧ ಬೆಳ್ಳಿಯಿಂದ ತಯಾರಾಗಿದ್ದು, ತೂಕ 40 ಗ್ರಾಂ ಮತ್ತು ವ್ಯಾಸ 44 ಮಿಮೀ. ಮುಂಭಾಗದಲ್ಲಿ ಅಶೋಕ ಸ್ತಂಭ, "ಸತ್ಯಮೇವ ಜಯತೇ" ಹಾಗೂ "ಭಾರತ" ಮತ್ತು "INDIA" ಪದಗಳೊಂದಿಗೆ ₹1,000 ಮೌಲ್ಯ ಇದೆ. ಹಿಂಭಾಗದಲ್ಲಿ ರಾಜೇಂದ್ರ ಚೋಳರ ನೌಕಾ ದಂಡಯಾತ್ರೆಯ ಚಿತ್ರವಿದೆ.

* ಅವರು ಚೋಳ ಸಾಮ್ರಾಜ್ಯದ ಶ್ರೇಷ್ಠ ಚಕ್ರವರ್ತಿಗಳಲ್ಲಿ ಒಬ್ಬರಾಗಿದ್ದು, ಗಂಗೈಕೊಂಡ ಚೋಳಪುರವನ್ನು ಸ್ಥಾಪಿಸಿದರು, ಬೃಹದೀಶ್ವರ ದೇವಾಲಯವನ್ನು ನಿರ್ಮಿಸಿದರು ಮತ್ತು ಆಗ್ನೇಯ ಏಷ್ಯಾದ ದೇಶಗಳತ್ತ ನೌಕಾ ದಂಡಯಾತ್ರೆ ನಡೆಸಿದರು.

* ಗಂಗೈಕೊಂಡ ಚೋಳಪುರ ದೇವಾಲಯವು ಭಾರತದ ಪ್ರಮುಖ ಶಿವ ದೇವಾಲಯಗಳಲ್ಲಿ ಒಂದಾಗಿ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಸಂರಕ್ಷಿತ ಸ್ಮಾರಕವಾಗಿದೆ.

* ಈ ನಾಣ್ಯ ಬಿಡುಗಡೆ ಭಾರತೀಯ ಇತಿಹಾಸದ ಗೌರವವನ್ನು ಸಾರುವ ಹೆಜ್ಜೆಯಾಗಿ, ರಾಜೇಂದ್ರ ಚೋಳರಂತಹ ಮಹಾನ್ ಚಕ್ರವರ್ತಿಯವರ ಸಂಸ್ಕೃತಿಕ ಕೊಡುಗೆಗಳನ್ನು ನೆನಪಿಸಲು ಕಾರಣವಾಯಿತು.

## ಹುಲಿ ಸಾಂದ್ರತೆಯಲ್ಲಿ ಕಾಜಿರಂಗ ಜಾಗತಿಕವಾಗಿ ಮೂರನೇ ಸ್ಥಾನದಲ್ಲಿ



* ಕಾಜಿರಂಗ ಹುಲಿ ಮೀಸಲು ಪ್ರದೇಶ (ಅಸ್ಸಾಂ) ಇದೀಗ ವಿಶ್ವದ ಮೂರನೇ ಅತಿ ಹೆಚ್ಚು ಹುಲಿ ಸಾಂದ್ರತೆ ಹೊಂದಿರುವ ಪ್ರದೇಶವಾಗಿದೆ. ಪ್ರತಿ 100 ಚ.ಕಿ.ಮೀಗೆ 18.65 ಹುಲಿಗಳು, ಬಂಡೀಪುರ (19.83) ಮತ್ತು ಕಾರ್ಬೆಟ್ (19.56) ನಂತರದ ಸ್ಥಾನ.

* ವಯಸ್ಕ ಹುಲಿಗಳ ಸಂಖ್ಯೆ 2022ರ 104 ರಿಂದ 2024ರಲ್ಲಿ 148ಕ್ಕೆ ಏರಿಕೆ – ಇದು 42% ಬೆಳವಣಿಗೆಯಾಗಿದೆ.

* ಹೊಸ ಸೇರ್ಪಡೆ: ಬಿಸ್ವನಾಥ್ ವಿಭಾಗವನ್ನು ಮೊದಲ ಬಾರಿ ಸೇರ್ಪಡೆಗೊಳಿಸಿದ್ದು, ಇದೊಂದು ಪ್ರಮುಖ ಕಾರಣ. ಇನ್ನು ಪೂರ್ವ ಅಸ್ಸಾಂ ವಿಭಾಗದಲ್ಲಿ ಸಹ ಏರಿಕೆ ಕಂಡುಬಂದಿದೆ.

* ಅತ್ಯಾಧುನಿಕ ತಂತ್ರಜ್ಞಾನಗಳ ಬಳಕೆ: ಕ್ಯಾಮೆರಾ ಟ್ರಾಪ್‌ಗಳು, ಡ್ರೋನ್‌ಗಳು, ಇನ್ಫ್ರಾರೆಡ್ ಮೇಲ್ವಿಚಾರಣೆ ಮತ್ತು M-STrIPES ತಂತ್ರಜ್ಞಾನಗಳ ಮೂಲಕ ವೈಜ್ಞಾನಿಕ ಅಂಕಿಅಂಶ ಸಂಗ್ರಹ.

* 200 ಚದರ ಕಿ.ಮೀ ಹೊಸ ಆವಾಸಸ್ಥಾನ ಸೇರ್ಪಡೆ – ಬುರ್ಹಾಚಪೋರಿ-ಲಾವೋಖೋವಾ ಅಭಯಾರಣ್ಯಗಳ ಭಾಗವಾಗಿ, ಹುಲಿಗಳ ಚಲನೆಗೆ ಹೆಚ್ಚು ಅವಕಾಶವಾಗಿದೆ.

* 83 ಹೆಣ್ಣು, 55 ಗಂಡು, 10 ಅನಿರ್ದಿಷ್ಟ ಹುಲಿಗಳನ್ನು ಗುರುತಿಸಿ ಲಿಂಗ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

* ಹುಲಿಗಳ ಬೆಳವಣಿಗೆ ಒಂದು ಸಮಗ್ರ ಪರಿಸರ ವ್ಯವಸ್ಥೆಯ ಯಶಸ್ಸಿಗೆ ಸಂಕೇತವಾಗಿ ಪರಿಸರದ ಆರೋಗ್ಯದ ಸೂಚನೆಯಾಗಿದೆ.

* ಬಫರ್ ವಲಯಗಳ ನಿರ್ವಹಣೆ, ಮಾನವ-ವನ್ಯಜೀವಿ ಸಂಘರ್ಷ ನಿವಾರಣೆ, ಶಾಶ್ವತ ಹಣಕಾಸು ಹಾಗೂ ಸಮುದಾಯದ ತೊಡಗಿಸಿಕೊಳ್ಳುವಿಕೆ ಅಗತ್ಯ ಸವಾಲುಗಳಾಗಿವೆ.

KPSCVaani

* ಕಾಜಿರಂಗದ ಯಶಸ್ಸು ಕೇವಲ ಹುಲಿಗಳ ಸಂಖ್ಯೆಯಲ್ಲಿ ಮಾತ್ರವಲ್ಲ; ಅದು ವಿಜ್ಞಾನ, ಸಮರ್ಪಣೆ ಮತ್ತು ನವೀನ ತಂತ್ರಜ್ಞಾನಗಳನ್ನು ಸಮರ್ಥವಾಗಿ ಬಳಸಿದ ಪರಿಣಾಮವಾಗಿದೆ. ಇದು ಇತರೆ ಪ್ರದೇಶಗಳಿಗೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತದೆ.

## ಪ್ರಾಚೀನ ಗ್ರಂಥಗಳ ಡಿಜಿಟಲೀಕರಣಕ್ಕೆ 'ಜ್ಞಾನ್ ಭಾರತಂ' ಮಿಷನ್ ಪ್ರಾರಂಭ




* ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದ 124ನೇ ಸಂಚಿಕೆಯಲ್ಲಿ "ಜ್ಞಾನ ಭಾರತಂ ಮಿಷನ್" ಅನ್ನು ಪ್ರಾರಂಭಿಸಿದರು.

* ಈ ಮಹತ್ವಾಕಾಂಕ್ಷಿ ಯೋಜನೆಯು ಭಾರತದ ಪ್ರಾಚೀನ ಹಸ್ತಪ್ರತಿಗಳ ಡಿಜಿಟಲೀಕರಣ, ಸಂರಕ್ಷಣೆ ಮತ್ತು ಪ್ರಚಾರವನ್ನು ಗುರಿಯಾಗಿಟ್ಟುಕೊಂಡಿದೆ.

* 2024–2031ರ ಅವಧಿಗೆ ರೂಪುಗೊಂಡಿರುವ ಈ ಮಿಷನ್, ದೇಶದಾದ್ಯಂತ 1 ಕೋಟಿಗೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಲು ಪ್ರಯತ್ನಿಸುತ್ತಿದೆ. ವಿದ್ಯಾಸಂಸ್ಥೆಗಳು, ವಸ್ತುಸಂಗ್ರಹಾಲಯಗಳು, ಗ್ರಂಥಾಲಯಗಳು, ದೇವಾಲಯಗಳು ಮತ್ತು ಖಾಸಗಿ ಸಂಗ್ರಹಗಳು ಇದರ ಭಾಗವಾಗಿವೆ.

* ಈ ಯೋಜನೆಗೆ ₹482.85 ಕೋಟಿಯ ಬಜೆಟ್ ನಿಗದಿಯಾಗಿದೆ. 2025–26ರ ಬಜೆಟ್‌ನಲ್ಲಿ ಹಸ್ತಪ್ರತಿ ಸಂರಕ್ಷಣೆಗೆ ಹಣಕಾಸು ಹಂಚಿಕೆಯನ್ನು ₹3.5 ಕೋಟಿಯಿಂದ ₹60 ಕೋಟಿಗೆ ಹೆಚ್ಚಿಸಲಾಗಿದೆ.


* ಮೋದಿ ಅವರು ಈ ಮಿಷನ್ ಭಾರತವನ್ನು ವಿಶ್ವಗುರುವನ್ನಾಗಿಸಿದ ಜ್ಞಾನ ಪರಂಪರೆಯ ಪುನರುಜ್ಜೀವನ ಎಂದು ವಿವರಿಸಿದರು. ಹಸ್ತಪ್ರತಿಗಳಲ್ಲಿ ಔಷಧ, ತತ್ವಶಾಸ್ತ್ರ, ಖಗೋಳಶಾಸ್ತ್ರ, ಸಾಹಿತ್ಯ ಮೊದಲಾದ ವಿಷಯಗಳ ಜ್ಞಾನ ಸಮೃದ್ಧವಾಗಿದೆ.

* ಸಂಸ್ಕೃತಿ ಸಚಿವಾಲಯ, ರಾಷ್ಟ್ರೀಯ ಆರ್ಕೈವ್ಸ್, IGNCA ಮುಂತಾದ ಸಂಸ್ಥೆಗಳು ಈ ಮಿಷನ್‌ಗೆ ಸಹಕಾರ ನೀಡಲಿದ್ದು, ಸ್ಕ್ಯಾನ್ ಮಾಡಿದ ಹಸ್ತಪ್ರತಿಗಳ ಸಾರ್ವಜನಿಕ ಪ್ರವೇಶಕ್ಕಾಗಿ ಡಿಜಿಟಲ್ ಪೋರ್ಟಲ್ ಅಭಿವೃದ್ಧಿ ಪಡಿಸಲಾಗುತ್ತಿದೆ.

* ಈ ಮೊದಲು ಲಭ್ಯವಿಲ್ಲದ ಅಪರೂಪದ ಪಾಠಗಳು ಈಗ ಸಂಶೋಧಕರು, ವಿದ್ಯಾರ್ಥಿಗಳು ಮತ್ತು ವಿದ್ವಾಂಸರಿಗೆ ಉಪಯುಕ್ತವಾಗಲಿದ್ದು, ಇದು ಭಾರತೀಯ ಬೌದ್ಧಿಕ ಪರಂಪರೆಯ ಪುನರುಜ್ಜೀವನಕ್ಕೆ ನಾಂದಿ ಆಗಲಿದೆ.




## 5 ವರ್ಷ ಮೊದಲೇ ಎಥಿನಲ್ ಮಿಶ್ರಣ ಗುರಿ ಯಶಸ್ವಿ




* ಭಾರತವು ಈ ವರ್ಷ ಪೆಟ್ರೋಲ್‌ನಲ್ಲಿ ಶೇ.20 ಎಥೆನಾಲ್ ಮಿಶ್ರಣವನ್ನು ಸಾಧಿಸಿದ್ದು, ನಿಗದಿತ 2030 ಗುರಿಗಿಂತ ಐದು ವರ್ಷ ಮುಂಚಿತವಾಗಿದೆ ಎಂದು ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

* 2014ರಲ್ಲಿ ಎಥೆನಾಲ್ ಮಿಶ್ರಣ ಶೇ.1.5ರಷ್ಟಿತ್ತು. ಅದು 2025ರೊಳಗೆ ಶೇ.20ಕ್ಕೆ ಏರಿದಿದೆ, ಇದು 13 ಪಟ್ಟು ಬೆಳವಣಿಗೆಯಾಗಿದೆ. ಈ ಬದಲಾವಣೆ ಇಂಧನ ಸುರಕ್ಷತೆಗೆ ಹಾಗೂ ಪರಿಸರ ರಕ್ಷಣೆಗೆ ಸಹಕಾರಿಯಾಗಿದೆಯೆಂದು ಅವರು ಹೇಳಿದರು.

* 2014ರಲ್ಲಿ 38 ಕೋಟಿ ಲೀಟರ್ ಎಥೆನಾಲ್ ಉತ್ಪಾದನೆಯು 2025ರ ಜೂನ್ ವೇಳೆಗೆ 661.1 ಕೋಟಿ ಲೀಟರ್‌ಗಳಿಗೆ ಏರಿದಿದೆ. ಇದರ ಪರಿಣಾಮವಾಗಿ ₹1.36 ಲಕ್ಷ ಕೋಟಿ ವಿದೇಶಿ ವಿನಿಮಯ ಉಳಿದಿದ್ದು, ಇಂಗಾಲದ ಡೈಆಕ್ಸೈಡ್ ಉತ್ಸರ್ಜನೆಯೂ 698 ಲಕ್ಷ ಟನ್‌ಗಳಷ್ಟು ಕಡಿಮೆಯಾಗಿದೆ.

* ಎಥೆನಾಲ್ ಮುಖ್ಯವಾಗಿ ಕಬ್ಬು ಬೆಳೆಗಳಿಂದ ಪಡೆಯಲಾಗುತ್ತದೆ. ಇದರಿಂದ ಕೃಷಿಗೆ ಸಹಕಾರ ಸಿಗುತ್ತಿದೆ. ಇತ್ತೀಚೆಗಷ್ಟೆ, ಕೇಂದ್ರ ಸರ್ಕಾರ ಎಥೆನಾಲ್ ಬೆಲೆ ಹೆಚ್ಚಳಕ್ಕೂ ಅನುಮೋದನೆ ನೀಡಿದೆ.

## ರಾಮ್ಸರ್ ಜೌಗುಭೂಮಿ ಸಮಾವೇಶ



* ರಾಮ್ಸರ್ ಚೌಗುಭೂಮಿಗಳ 15ನೇ ಅಂತರರಾಷ್ಟ್ರೀಯ ಸಮಾವೇಶವು ಜುಲೈ 23ರಿಂದ ಜಿಂಬಾಬ್ವೆಯ ವಿಕ್ಟೋರಿಯಾ ಜಲಪಾತದಲ್ಲಿ ಆರಂಭವಾಗಿದೆ.
* 172 ದೇಶಗಳಿಂದ 3,000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ ಜೌಗುಭೂಮಿಗಳ ಉಳಿವಿಗಾಗಿ ತುರ್ತು ಕ್ರಮಗಳನ್ನು ಚರ್ಚಿಸುತ್ತಿದ್ದಾರೆ.
* ಚೌಗು ಪ್ರದೇಶಗಳು ಭೂಮಿಯ ಆರೋಗ್ಯವನ್ನು ಕಾಪಾಡಲು ಅತ್ಯಂತ ಅಗತ್ಯ. ಇವು ನೀರಿನ ಚಕ್ರವನ್ನು ನಿಯಂತ್ರಿಸಿ, ಇಂಗಾಲ ಶೋಷಿಸಿ, ಜೀವವೈವಿಧ್ಯತೆಯನ್ನು ಉಳಿಸುತ್ತವೆ. ಈ ಪ್ರದೇಶಗಳು ಮಾಲಿನ್ಯ ಶೋಧನೆಗೂ ಸಹಕಾರಿ.
* ಪ್ರಸ್ತುತ, ಜೌಗುಭೂಮಿಗಳು ನಗರೀಕರಣ, ಕೃಷಿ, ಹವಾಮಾನ ಬದಲಾವಣೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಯಿಂದ ತೀವ್ರವಾಗಿ ಬೆದರಿಕೆಯೊಳಗಾಗಿವೆ.
* 'ಗ್ಲೋಬಲ್ ವೆಟ್‌ಲ್ಯಾಂಡ್ ಔಟ್‌ಲುಕ್ 2025' ಪ್ರಕಾರ, 2050ರ ವೇಳೆಗೆ ಶೇ.20ರಷ್ಟು ಚೌಗುಭೂಮಿಗಳು ನಾಶವಾಗಬಹುದು ಎಂದು ಎಚ್ಚರಿಸಲಾಗಿದೆ.
* ಚೌಗುಭೂಮಿಗಳ ಸಂರಕ್ಷಣೆಗೆ ತಕ್ಷಣವೇ ಗಂಭೀರ ಕ್ರಮಕೈಗೊಳ್ಳುವ ಅಗತ್ಯವಿದೆ ಎಂಬ ಸಂದೇಶವನ್ನು ಈ ಸಮಾವೇಶ ಪುನರುಚ್ಚರಿಸಿದೆ.

## ಪಿಎಂ-ಇ ಬಸ್ ಯೋಜನೆ - ಕರ್ನಾಟಕಕ್ಕೆ 750 ಎಲೆಕ್ಟ್ರಿಕ್ ಬಸ್‌ಗಳ ಹಂಚಿಕೆ



* ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಇ-ಬಸ್ ಸೇವಾ ಯೋಜನೆಯಡಿ ಕರ್ನಾಟಕಕ್ಕೆ 750 ಎಲೆಕ್ಟ್ರಿಕ್ ಬಸ್‌ಗಳನ್ನು ಹಂಚಿಕೆ ಮಾಡಲಾಗಿದೆ. ಈ ಕುರಿತು ಲೋಕಸಭೆಯಲ್ಲಿ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಮಾಹಿತಿ ನೀಡಿದೆ.
* ಬಳ್ಳಾರಿ, ಶಿವಮೊಗ್ಗ, ತುಮಕೂರು, ವಿಜಯಪುರ, ದಾವಣಗೆರೆ ನಗರಗಳಿಗೆ ತಲಾ 50 ಬಸ್‌ಗಳು, ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಕಲಬುರಗಿ, ಮಂಗಳೂರು, ಮೈಸೂರು ನಗರಗಳಿಗೆ ತಲಾ 100 ಬಸ್‌ಗಳು ಸಿಗಲಿವೆ. ಬೆಂಗಳೂರು ಮತ್ತು ಉಡುಪಿ ಜಿಲ್ಲೆಗಳು ಈ ಹಂಚಿಕೆಯಿಂದ ಹೊರಗುಳಿದಿವೆ.
* 2023ರ ಆಗಸ್ಟ್ 16ರಂದು ಪ್ರಾರಂಭವಾದ ಈ ಯೋಜನೆಯ ಉದ್ದೇಶ ಸಾರ್ವಜನಿಕ ಸಾರಿಗೆ ಬಳಕೆಯನ್ನು ಉತ್ತೇಜಿಸುವುದು. ದೇಶದಾದ್ಯಂತ ಪಿಪಿಪಿ ಮಾದರಿಯಲ್ಲಿ 10,000 ಎಲೆಕ್ಟ್ರಿಕ್ ಬಸ್‌ಗಳನ್ನು ಹಂಚಿಕೆಯಾಗುತ್ತಿದೆ. ಇದರಲ್ಲಿ ಈಗಾಗಲೇ 7,293 ಬಸ್‌ಗಳ ಹಂಚಿಕೆ ಪೂರ್ಣಗೊಂಡಿದ್ದು, 6,518 ಬಸ್‌ಗಳಿಗೆ ಟೆಂಡರ್ ಕರೆಯಲಾಗಿದೆ.
* ಕರ್ನಾಟಕ ಪಿಪಿಪಿ ಮಾದರಿಯ ಬದಲು ನೇರ ಸಬ್ಸಿಡಿಯಡಿ ಬಸ್‌ಗಳನ್ನು ನೀಡಬೇಕು ಎಂದು ಮನವಿ ಮಾಡಿದೆ. ಪಿಪಿಪಿ ಮಾದರಿಯಲ್ಲಿ ಖಾಸಗಿ ಕಂಪನಿಗೆ ಬಸ್ ನಿರ್ವಹಣಾ ಹೊಣೆ ಇರುತ್ತದೆ. ರಾಜ್ಯದ ಸಾರಿಗೆ ಸಂಸ್ಥೆಗಳು ನಿರ್ವಾಹಕರ ನೇಮಕ ಮತ್ತು ಸಂಚಾರದ ಹಣ ಪಾವತಿಸುವ ಜವಾಬ್ದಾರಿಯಲ್ಲಿರುತ್ತವೆ.
* ಬೆಂಗಳೂರು ಯೋಜನೆಯ ಮಾನದಂಡಗಳಿಗೆ ಅನುಗುಣವಲ್ಲ. ಆದರೆ ನಗರದಲ್ಲಿ ಈಗಾಗಲೇ ಖಾಸಗಿ ಕಂಪನಿಗಳ ಎಲೆಕ್ಟ್ರಿಕ್ ಬಸ್‌ಗಳು ಸಬ್ಸಿಡಿ ದರದಲ್ಲಿ ಸಂಚರಿಸುತ್ತಿವೆ. ಬಿಎಂಟಿಸಿ ಈ ಬಸ್‌ಗಳಿಗೆ ಕಂಡಕ್ಟರ್ ನೀಡುತ್ತದೆ, ಚಾಲನೆ ಮತ್ತು ನಿರ್ವಹಣೆ ಖಾಸಗಿ ಕಂಪನಿಯ ಮೇರೆಗೆ ಇದೆ.

## Sansad Ratna Awards | 17 ಸಂಸದರಿಗೆ 'ಸಂಸದ ರತ್ನ' ಪ್ರಶಸ್ತಿ ಪ್ರದಾನ




* ಲೋಕಸಭೆಯಲ್ಲಿ ಉತ್ತಮ ಕಾರ್ಯನಿರ್ವಹಣೆ ಮಾಡಿದ 17 ಮಂದಿ ಸಂಸದರು ಹಾಗೂ ಎರಡು ಸಂಸದೀಯ ಸಮಿತಿಗಳಿಗೆ 'ಸಂಸದ ರತ್ನ–2025' ಪ್ರಶಸ್ತಿ ಜುಲೈ 26 ರಂದು ನೀಡಲಾಗಿದೆ.
* ಬಿಜೆಪಿಯ ಭರ್ತೃಹರಿ ಮಹತಾಬ್, ಕ್ರಾಂತಿಕಾರ ಸಮಾಜವಾದಿ ಪಕ್ಷದ ಎನ್.ಕೆ. ಪ್ರೇಮಚಂದ್ರನ್, ಎನ್‌ಸಿಪಿ ಶರದ್ ಪವಾರ್ ಬಣದ ಸುಪ್ರಿಯಾ ಸುಳೆ ಮತ್ತು ಶಿವಸೇನೆಯ ಶ್ರೀರಂಗ ಅಪ್ಪ ಬಾರ್ನೆ ಅವರಿಗೆ ಪ್ರಶಸ್ತಿ ಲಭಿಸಿದೆ.
* ಸ್ಮಿತಾ ವಾಘ್, ಮೇಧಾ ಕುಲಕರ್ಣಿ, ಪ್ರವೀಣ್ ಪಟೇಲ್, ರವಿಕಿಶನ್, ನಿಶಿಕಾಂತ್ ದುಬೆ, ಬಿದ್ಯುತ್ ಮಹಾತೊ, ಪಿ.ಪಿ. ಚೌಧರಿ, ಮದನ್ ರಾಥೋಡ್, ದಿಲೀಪ್ ಸೈಕಿಯಾ, ಅರವಿಂದ ಸಾವಂತ್, ನರೇಶ್ ಮಹಸ್ಕೆ, ವರ್ಷಾ ಗಾಯಕ್ವಾಡ್, ಸಿ.ಎನ್. ಅಣ್ಣಾದೊರೈ ಮೊದಲಾದವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.
* ಶಾಸನ ಮೇಲ್ವಿಚಾರಣೆಯೆಂದು ಹಣಕಾಸು ಮತ್ತು ಕೃಷಿ ವಿಷಯಗಳ ಸ್ಥಾಯಿ ಸಮಿತಿಗಳಿಗೆ ಪ್ರಶಸ್ತಿ ನೀಡಲಾಗಿದೆ. ಭರ್ತೃಹರಿ ಮಹತಾಬ್ ಹಣಕಾಸು ಸಮಿತಿಗೆ ಹಾಗೂ ಚರಣ್‌ಜಿತ್ ಸಿಂಗ್ ಚನ್ನಿ ಕೃಷಿ ಸಮಿತಿಗೆ ಅಧ್ಯಕ್ಷರಾಗಿದ್ದಾರೆ.
* ಸತತ ಮೂರು ಅವಧಿಗಳ ಸೇವೆಯು ರಾಷ್ಟ್ರದ ಸಂಸದೀಯ ಪ್ರಜಾಪ್ರಭುತ್ವಕ್ಕೆ ನೀಡಿದ ಕೊಡುಗೆ ಎಂದು ಗುರುತಿಸಿ ನಾಲ್ಕು ತೀರ್ಪುಗಾರರ ವಿಶೇಷ ಪ್ರಶಸ್ತಿಗಳನ್ನು ಸಹ ನೀಡಲಾಗಿದೆ.

## ಸಶಸ್ತ್ರ ಸೀಮಾ ಬಲದ ಹೊಸ ಮಹಾನಿರ್ದೇಶಕರಾಗಿ ಸಂಜಯ್ ಸಿಂಘಾಲ್ ನೇಮಕ

* 1993 ರ ಬ್ಯಾಚ್‌ನ ಉತ್ತರ ಪ್ರದೇಶ ಕೇಡರ್ ಭಾರತೀಯ ಪೊಲೀಸ್ (ಐಪಿಎಸ್) ಅಧಿಕಾರಿ ಸಂಜಯ್ ಸಿಂಘಾಲ್ ಅವರನ್ನು ಸಶಸ್ತ್ರ ಸೀಮಾ ಬಲದ (ಎಸ್‌ಎಸ್‌ಬಿ)ಯ ಹೊಸ ಮಹಾನಿರ್ದೇಶಕರನ್ನಾಗಿ ನೇಮಕ ಮಾಡಲು ಸಂಪುಟದ ನೇಮಕಾತಿ ಸಮಿತಿ ಅನುಮೋದನೆ ನೀಡಿದೆ.
* ಆಗಸ್ಟ 31, 2025 ರಂದು ನಿವೃತ್ತರಾಗಲಿರುವ ಅಮೃತ್ ಮೋಹನ್ ಪ್ರಸಾದ್ ಅವರ ನಂತರ ಅವರು ನೇಮಕಗೊಳ್ಳಲಿದ್ದಾರೆ.
* ಪ್ರಸ್ತುತ ಬಿಎಸ್‌ಎಫ್‌ನ ವಿಶೇಷ ಮಹಾನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಸಿಂಘಾಲ್ ಅವರು ಸೆಪ್ಟೆಂಬರ್ 1, 2025 ರಿಂದ ಎಸ್ ಎಸ್‌ಬಿಯ ಅಧಿಕಾರ ವಹಿಸಿಕೊಳ್ಳಲಿದ್ದಾರೆ.
* ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಹೊರಡಿಸಿದ ಅಧಿಸೂಚನೆಯ ಪ್ರಕಾರ, ಸಿಂಘಾಲ್ ಅವರ ಅಧಿಕಾರಾವಧಿಯು ಡಿಸೆಂಬರ್ 31, 2028 ರಂದು ನಿವೃತ್ತರಾಗುವವರೆಗೆ ಅಥವಾ ಮುಂದಿನ ಆದೇಶದವರೆಗೆ, ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರಿಯುತ್ತದೆ.

# 30 July 2025

## ನಾಸಾ-ಇಸ್ರೋ ಜಂಟಿ ಭೂ ವೀಕ್ಷಣಾ ಉಪಗ್ರಹ ನಿಸಾರ್ ಇಂದು ಉಡಾವಣೆ




* ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಜುಲೈ 30 ರಂದು ಸಂಜೆ 5:40 ಕ್ಕೆ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ GSLV-F16 ರಾಕೆಟ್ ಬಳಸಿ ಬಹುನಿರೀಕ್ಷಿತ NASA-ISRO ಸಿಂಥೆಟಿಕ್ ಅಪರ್ಚರ್ ರಾಡಾರ್ (NISAR) ಅನ್ನು ಉಡಾವಣೆ ಮಾಡಲಿದೆ.
* ನಿನ್ನೆ ಮಧ್ಯಾಹ್ನ 2:10 ಕ್ಕೆ ಕೌಂಟ್‌ಡೌನ್ ಪ್ರಾರಂಭವಾಯಿತು, ಇದುವರೆಗೆ ಕೈಗೊಂಡ ಅತ್ಯಂತ ಮಹತ್ವಾಕಾಂಕ್ಷೆಯ ಭೂ ವೀಕ್ಷಣಾ ಕಾರ್ಯಾಚರಣೆಗಳಲ್ಲಿ ಒಂದಕ್ಕೆ ಅಂತಿಮ ಹಂತದ ಸಿದ್ಧತೆಯನ್ನು ಗುರುತಿಸುತ್ತದೆ.
* ಈ ಉಡಾವಣೆಯು ಭಾರತದ GSLV ರಾಕೆಟ್ ಮೊದಲ ಬಾರಿಗೆ ಉಪಗ್ರಹವನ್ನು ಸೂರ್ಯ ಸಿಂಕ್ರೊನಸ್ ಧ್ರುವ ಕಕ್ಷೆಗೆ ಸೇರಿಸುತ್ತದೆ, ಈ ಕಕ್ಷೆಯಲ್ಲಿ ಉಪಗ್ರಹವು ಪ್ರತಿದಿನ ಒಂದೇ ಸಮಯದಲ್ಲಿ ಭೂಮಿಯ ಮೇಲಿನ ಒಂದೇ ಬಿಂದುವಿನ ಮೇಲೆ ಸ್ಕ್ಯಾನ್ ಮಾಡುತ್ತದೆ.
* ಭೂಮಿಯ ಮೇಲ್ಮೈಯ ಸುತ್ತ 24/7, ಎಲ್ಲಾ ಹವಾಮಾನ ಮೇಲ್ವಿಚಾರಣೆಯನ್ನು ಒದಗಿಸಲು NISAR ಉಪಗ್ರಹವನ್ನು ವಿನ್ಯಾಸಗೊಳಿಸಲಾಗಿದೆ. ಅದರ ಸುಧಾರಿತ ಡ್ಯುಯಲ್-ಬ್ಯಾಂಡ್ ಸಿಂಥೆಟಿಕ್ ಅಪರ್ಚರ್ ರಾಡಾರ್ ತಂತ್ರಜ್ಞಾನದೊಂದಿಗೆ, NISAR ಅತ್ಯಂತ ವಿವರವಾದ ಚಿತ್ರಗಳನ್ನು ಸೆರೆಹಿಡಿಯುತ್ತದೆ, ಒಂದು ಸೆಂಟಿಮೀಟರ್‌ನಂತಹ ಸಣ್ಣ ಮೇಲ್ಮೈ ಬದಲಾವಣೆಗಳನ್ನು ಪತ್ತೆ ಮಾಡುತ್ತದೆ.
* 2,392 ಕಿಲೋಗ್ರಾಂಗಳಷ್ಟು ತೂಕವಿರುವ ಈ ಉಪಗ್ರಹವನ್ನು ಭಾರತದ GSLV-F16 ರಾಕೆಟ್‌ನಲ್ಲಿ ಬಾಹ್ಯಾಕಾಶಕ್ಕೆ ಕೊಂಡೊಯ್ಯಲಾಗುತ್ತದೆ. ಈ ಉಪಗ್ರಹವನ್ನು 740 ಕಿಮೀ ಎತ್ತರದಲ್ಲಿ ಸೂರ್ಯ-ಸಿಂಕ್ರೊನಸ್ ಕಕ್ಷೆಗೆ ಸೇರಿಸಲಾಗುತ್ತದೆ.
* ಅಲ್ಲಿ ಅದು ಪ್ರತಿ 12 ದಿನಗಳಿಗೊಮ್ಮೆ ಭೂಮಿಯ ಭೂಪ್ರದೇಶ ಮತ್ತು ಮಂಜುಗಡ್ಡೆಯಿಂದ ಆವೃತವಾದ ಮೇಲ್ಮೈಗಳನ್ನು 242 ಕಿಲೋಮೀಟರ್ ಸ್ವಾತ್‌ನಲ್ಲಿ ಹೆಚ್ಚಿನ ರೆಸಲ್ಯೂಶನ್ ಚಿತ್ರಣದೊಂದಿಗೆ ಸ್ಕ್ಯಾನ್ ಮಾಡುತ್ತದೆ, ಮೊದಲ ಬಾರಿಗೆ ಸ್ವೀಪ್ ಸಾರ್ ತಂತ್ರಜ್ಞಾನವನ್ನು ಬಳಸುತ್ತದೆ.
* ಬಾಹ್ಯಾಕಾಶ ಇಲಾಖೆ ಪತ್ರಿಕಾ ಪ್ರಕಟಣೆಯಲ್ಲಿ "NISAR ಕಾರ್ಯಾಚರಣೆಯು ಎರಡೂ ಸಂಸ್ಥೆಗಳ ತಾಂತ್ರಿಕ ಪರಿಣತಿಯನ್ನು ಸಂಯೋಜಿಸುತ್ತದೆ. ನಾಸಾ L-ಬ್ಯಾಂಡ್ ಸಿಂಥೆಟಿಕ್ ಅಪರ್ಚರ್ ರಾಡಾರ್ (SAR), ಹೆಚ್ಚಿನ ದರದ ದೂರಸಂಪರ್ಕ ಉಪವ್ಯವಸ್ಥೆ, GPS ರಿಸೀವರ್‌ಗಳು ಮತ್ತು ನಿಯೋಜಿಸಬಹುದಾದ 12-ಮೀಟರ್ ಅನ್ ಫರ್ಲಬಲ್ ಆಂಟೆನಾವನ್ನು ಕೊಡುಗೆಯಾಗಿ ನೀಡಿದೆ.
* ಇಸ್ರೋ ತನ್ನ ಕಡೆಯಿಂದ S-ಬ್ಯಾಂಡ್ SAR ಪೇಲೋಡ್, ಎರಡೂ ಪೇಲೋಡ್‌ಗಳನ್ನು ಅಳವಡಿಸಲು ಬಾಹ್ಯಾಕಾಶ ನೌಕೆ ಬಸ್, GSLV-F16 ಉಡಾವಣಾ ವಾಹನ ಮತ್ತು ಎಲ್ಲಾ ಸಂಬಂಧಿತ ಉಡಾವಣಾ ಸೇವೆಗಳನ್ನು ಒದಗಿಸಿದೆ."
- ಜಾಗತಿಕ ವ್ಯಾಪ್ತಿ: ಉಪಗ್ರಹವು ಪ್ರತಿ 12 ದಿನಗಳಿಗೊಮ್ಮೆ ಇಡೀ ಭೂಗೋಳವನ್ನು ಸ್ಕ್ಯಾನ್ ಮಾಡುತ್ತದೆ, ಸಮಗ್ರ ಮತ್ತು ಸ್ಥಿರವಾದ ಮೇಲ್ವಿಚಾರಣಾ ಚಕ್ರವನ್ನು ಖಚಿತಪಡಿಸುತ್ತದೆ.
- ಮಿಷನ್ ಜೀವಿತಾವಧಿ: 3 ವರ್ಷಗಳ ಕಾರ್ಯಾಚರಣೆಯ ಜೀವನಕ್ಕಾಗಿ ವಿನ್ಯಾಸಗೊಳಿಸಲಾದ NISAR ಪರಿಸರ ಮತ್ತು ಸಂಪನ್ಮೂಲ ನಿರ್ವಹಣೆಗೆ ನಿರ್ಣಾಯಕವಾದ ನಿರಂತರ ಡೇಟಾವನ್ನು ಉತ್ಪಾದಿಸುತ್ತದೆ.
- ಕಕ್ಷೆ: ಇದನ್ನು 747 ಕಿ.ಮೀ ಎತ್ತರದಲ್ಲಿ ಸೂರ್ಯ-ಸಿಂಕ್ರೊನಸ್ ಧ್ರುವ ಕಕ್ಷೆಯಲ್ಲಿ ಇರಿಸಲಾಗುವುದು, ಇದು ಚಿತ್ರಣಕ್ಕಾಗಿ ಸ್ಥಿರವಾದ ಬೆಳಕಿನ ಪರಿಸ್ಥಿತಿಗಳನ್ನು ಖಚಿತಪಡಿಸುತ್ತದೆ.

## ಕೇಟಿ ಲೆಡೆಕಿಗೆ 22ನೇ ವಿಶ್ವ ಚಾಂಪಿಯನ್ ಪದಕ – 1500 ಮೀ. ಫ್ರೀಸ್ಟೈಲ್‌ನಲ್ಲಿ ಚಿನ್ನ!



* ಅಮೆರಿಕದ ಈಜುತಾರೆ ಕೇಟಿ ಲೆಡೆಕಿ ಅವರು ವಿಶ್ವ ಈಜು ಚಾಂಪಿಯನ್‌ಷಿಪ್‌ನ ಮಹಿಳೆಯರ 1,500 ಮೀಟರ್ ಫ್ರೀಸ್ಟೈಲ್‌ನಲ್ಲಿ ಚಿನ್ನ ಜಯಿಸಿದರು.
* 15:26.44 ಸೆಕೆಂಡ್‌ನಲ್ಲಿ ದಡ ತಲುಪಿದ ಲೆಡೆಕಿ, ತಮ್ಮ 22ನೇ ವಿಶ್ವ ಚಾಂಪಿಯನ್ ಪದಕವನ್ನು ಪಡೆದು ಮೈಕೆಲ್ ಫೆಲ್ಪ್ಸ್ (26 ಚಿನ್ನ) ಅವರ ದಾಖಲೆ ಹತ್ತಿರವಾದರು.
* ಈ ಸ್ಪರ್ಧೆಯಲ್ಲಿ ಇಟಲಿಯ ಸಿಮೋನಾ ಕ್ವಾಡರೆಲ್ಲಾ ಬೆಳ್ಳಿ (15:31.79), ಆಸ್ಟ್ರೇಲಿಯಾದ ಲ್ಯಾನಿ ಪಲ್ಲಿಸ್ಟರ್ ಕಂಚು (15:41.18) ಪಡೆದರು. ಲೆಡೆಕಿ ಈಗಾಗಲೇ 400 ಮೀಟರ್‌ನಲ್ಲಿ ಕಂಚು ಗೆದ್ದಿದ್ದು, ಮುಂದಿನ 800 ಮೀಟರ್‌ನಲ್ಲಿ ಸಮ್ಮರ್ ಮೆಕಿಂಟೋಷ್ ಎದುರಿಯಾಗಲಿದ್ದಾರೆ.
* ರೊಮೇನಿಯಾದ ಡೇವಿಡ್ ಪೊಪೊವಿಸಿ ಪುರುಷರ 200 ಮೀಟರ್ ಫ್ರೀಸ್ಟೈಲ್‌ನಲ್ಲಿ 1:43.53 ಸೆಕೆಂಡುಗಳಲ್ಲಿ ಗೆದ್ದು ಚಿನ್ನ ಜಯಿಸಿದರು. ಲ್ಯೂಕ್ ಹಾಬ್ಸನ್ (ಅಮೆರಿಕಾ) ಬೆಳ್ಳಿ, ತತ್ಸುಯಾ ಮುರಾಸಾ (ಜಪಾನ್) ಕಂಚು ಪಡೆದರು.
* ಆಸ್ಟ್ರೇಲಿಯಾದ ಕೈಲಿ ಮೆಕ್‌ಕೌನ್ ಮಹಿಳೆಯರ 100 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ 57.16 ಸೆಕೆಂಡುಗಳಲ್ಲಿ ಚಿನ್ನ ಜಯಿಸಿ ಚಾಂಪಿಯನ್‌ಷಿಪ್ ದಾಖಲೆ ಬರೆದರು. ರೇಗನ್ ಸ್ಮಿತ್ (ಅಮೆರಿಕಾ) ಬೆಳ್ಳಿ, ಕ್ಯಾಥರಿನ್ ಬರ್ಕಾಫ್ ಕಂಚು ಗಳಿಸಿದರು.
* ಜರ್ಮನಿಯ ಅನ್ನಾ ಎಲೆಂಡ್ಟ್ ಮಹಿಳೆಯರ 100 ಮೀ. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಚಾಂಪಿಯನ್ ಆದರು.
* ಪುರುಷರ 100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ದಕ್ಷಿಣ ಆಫ್ರಿಕಾದ ಪೀಟರ್ ಕೋಟ್ಜೆ ಚಿನ್ನ ಜಯಿಸಿದರು.

## 'ಆಪರೇಷನ್ ಮಹಾದೇವ್' ಯಶಸ್ವಿ: ಪಹಲ್ಗಾಮ್ ಉಗ್ರರ ಹತ್ಯೆ : ಶಾ



* ಪಹಲ್ಗಾಮ್‌ನಲ್ಲಿ 26 ಅಮಾಯಕ ಪ್ರವಾಸಿಗರನ್ನು ಹತ್ಯೆ ಮಾಡಿದ ಲಷ್ಕರ್-ಎ-ತಯಬಾ ಸಂಘಟನೆಯ ಮೂವರು ಎ-ವರ್ಗದ ಉಗ್ರರನ್ನು ಸೇನೆ, ಸಿಆರ್‌ಪಿಎಫ್ ಹಾಗೂ ಜಮ್ಮು-ಕಾಶ್ಮೀರ ಪೊಲೀಸರು ಜುಲೈ 22ರಂದು 'ಆಪರೇಷನ್ ಮಹಾದೇವ್' ಮೂಲಕ ಹತ್ಯೆ ಮಾಡಿದ್ದಾರೆ ಎಂದು ಗೃಹ ಸಚಿವ ಅಮಿತ್ ಶಾ ಲೋಕಸಭೆಯಲ್ಲಿ ಘೋಷಿಸಿದರು.
* ಹತರಾದ ಉಗ್ರರನ್ನು ಸುಲೇಮಾನ್ ಅಲಿಯಾಸ್ ಫೈಜಲ್, ಅಫ್ಘಾನಿ ಮತ್ತು ಜಿಬ್ರಾನ್ ಎಂದು ಗುರುತಿಸಲಾಗಿದೆ. ಶಾ ಹೇಳುವಂತೆ, ಇಬ್ಬರ ಬಳಿ ಪಾಕಿಸ್ತಾನದ ಗುರುತಿನ ಚೀಟಿ ಹಾಗೂ ಪಾಕಿಸ್ತಾನದಲ್ಲಿ ತಯಾರಾದ ಚಾಕೊಲೇಟ್‌ಗಳು ಪತ್ತೆಯಾಗಿವೆ.
* ಶಸ್ತ್ರಾಸ್ತ್ರಗಳು ಮತ್ತು ಎಫ್‌ಎಸ್‌ಎಲ್ ವರದಿಗಳ ಬೆನ್ನಲ್ಲೇ ಅವರು ಪಹಲ್ಗಾಮ್ ದಾಳಿಯಲ್ಲಿ ಭಾಗವಹಿಸಿದ್ದದು ದೃಢವಾಗಿದೆ.
* ದಾಳಿಯ ದಿನವೇ ಕಾರ್ಯಾಚರಣೆ ಆರಂಭಗೊಂಡಿತು ಮತ್ತು ಉಗ್ರರು ಪಾಕಿಸ್ತಾನಕ್ಕೆ ಪರಾರಿಯಾಗದಂತೆ ನಿಗಾ ಇಡಲಾಯಿತು. ಶಾಹ್ ತಮ್ಮ ಹೇಳಿಕೆಯಲ್ಲಿ, ಪ್ರಧಾನಿ ಮೋದಿಯ ಬಿಹಾರ ಪ್ರವಾಸದ ಗಂಭೀರತೆಯನ್ನೂ ಸಮರ್ಥಿಸಿದರು ಮತ್ತು ಅದು ಭಯೋತ್ಪಾದನೆ ವಿರುದ್ಧ ಭಾರತದ ಸಂಕಲ್ಪವನ್ನೇ ಪ್ರತಿಬಿಂಬಿಸುತ್ತದೆ ಎಂದರು.
* ಶಾ ಕಾಂಗ್ರೆಸ್ ಪಕ್ಷದ ಮಾಜಿ ಪ್ರಧಾನಿಗಳಾದ ನೆಹರು, ಇಂದಿರಾ, ರಾಜೀವ್ ಹಾಗೂ ಮನಮೋಹನ್ ಸಿಂಗ್ ವಿರುದ್ಧ ವಾಗ್ದಾಳಿ ನಡೆಸಿ, ಅವರ ನಿರ್ಣಯಗಳಿಂದ ಪಾಕ್ ಮತ್ತು ಚೀನಾ ಬಲಿಷ್ಠವಾದವು ಎಂದು ಆರೋಪಿಸಿದರು. ಕಾಂಗ್ರೆಸ್ ಸರ್ಕಾರ ಭದ್ರ ಕ್ರಮ ಕೈಗೊಳ್ಳದೆ ಕೇವಲ ದಾಖಲೆ ಕಳುಹಿಸಿತೆಂದು ಶಾ ಟೀಕಿಸಿದರು.

## ಆಪರೇಷನ್ ಸಿಂಧೂರ್ ಮತ್ತು ಕ್ಯಾಪ್ಟನ್ ಶುಭಾಂಶು ಶುಕ್ಲಾ ಕುರಿತು ಹೊಸ ಪಾಠ್ಯಕ್ರಮಕ್ಕೆ ಪರಿಚಯಿಸಲಿರುವ NCERT




* ಶಿಕ್ಷಣದ ಸಾಂದರ್ಭಿಕತೆ ಮತ್ತು ರಾಷ್ಟ್ರಪರತೆಯನ್ನು ಹೆಚ್ಚಿಸಲು NCERT ಹೊಸ ಪಾಠ್ಯಮಾಡ್ಯುಲ್ಗಳನ್ನು ಪರಿಚಯಿಸಲು ತಯಾರಾಗಿದೆ.
* ಇದರಡಿಯಲ್ಲಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರ ಬಾಹ್ಯಾಕಾಶ ಪಯಣ ಹಾಗೂ ಭಾರತ ನಡೆಸಿದ ಯುದ್ಧ ಕಾರ್ಯಾಚರಣೆ ಆಪರೇಷನ್ ಸಿಂಧೂರ ಕುರಿತು ಪಾಠಗಳು ಸೇರಲಿವೆ. ಈ ಪಾಠಗಳು 3ನೇ ತರಗತಿಯಿಂದ 12ನೇ ತರಗತಿಯವರೆಗೆ ಕಲಿಸಲಿದೆ.
* ವಿದ್ಯಾರ್ಥಿಗಳಿಗೆ ಭಾರತದ ವೈಜ್ಞಾನಿಕ ಹಾಗೂ ರಕ್ಷಣಾ ಸಾಧನೆಗಳ ಕುರಿತು ಅರಿವು ಮೂಡಲಿದೆ.
* ಬಾಹ್ಯಾಕಾಶ ವಿಜ್ಞಾನ, ಪರಿಸರ ಸಂರಕ್ಷಣೆ ಮತ್ತು ರಾಷ್ಟ್ರಭದ್ರತೆ ಕುರಿತ ಜ್ಞಾನ ಹೆಚ್ಚಳವಾಗಲಿದೆ.
* ವಿದ್ಯಾರ್ಥಿಗಳಲ್ಲಿ ವಿಜ್ಞಾನಪರ ಕುತೂಹಲ ಬೆಳೆದು, ರಾಷ್ಟ್ರದ ಸಾಧನೆಗಳ ಬಗ್ಗೆ ಹೆಮ್ಮೆ ಉಂಟಾಗಲಿದೆ.

ಪ್ರಮುಖ ಅಂಶಗಳು:
* ಶುಭಾಂಶು ಶುಕ್ಲಾ: ಅಂತರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ ಭೇಟಿ ನೀಡಿದ ಪ್ರಥಮ ಭಾರತೀಯ ವಾಯುಪಡೆ ಅಧಿಕಾರಿ
* ಆಪರೇಷನ್ ಸಿಂಧೂರ: ರಕ್ಷಣಾತ್ಮಕ ತುರ್ತು ಕಾರ್ಯಾಚರಣೆ ಕುರಿತು ಪಾಠ, ಸೈನಿಕರ ಪಾತ್ರ ಮತ್ತು ರಾಷ್ಟ್ರ ಭದ್ರತೆ ಕುರಿತ ಅರಿವು
* ಇದು ಭಾರತೀಯ ಪಾಠ್ಯಕ್ರಮವನ್ನು ಹೆಚ್ಚು ಸಮಕಾಲೀನ ಹಾಗೂ ಪ್ರೇರಣಾದಾಯಕವಾಗಿಸಲು ತೆಗೆದುಕೊಳ್ಳಲಾದ ಮಹತ್ವದ ಹೆಜ್ಜೆಯಾಗಿದೆ.

## 'ಗ್ಲೋಬಲ್ ಸ್ಪೆಕ್ಸ್ 2030' ಉಪಕ್ರಮ



* ವಿಶ್ವ ಆರೋಗ್ಯ ಸಂಸ್ಥೆ (WHO) ಪ್ರಾರಂಭಿಸಿದ 'ಗ್ಲೋಬಲ್ ಸ್ಪೆಕ್ಸ್ 2030' ಉಪಕ್ರಮದ ಮುಖ್ಯ ಉದ್ದೇಶ 2030ರ ವೇಳೆಗೆ ಎಲ್ಲರಿಗೂ ಕೈಗೆಟುಕುವ ಕಣ್ಣಿನ ಆರೈಕೆ ಸೇವೆಗಳನ್ನು ಒದಗಿಸುವುದು.

ಈ ಯೋಜನೆ ಐದು ಪ್ರಮುಖ ಕ್ಷೇತ್ರಗಳ ಮೇಲೆ ಗಮನಹರಿಸುತ್ತದೆ :

- ಸೇವೆಗಳು: ವಕ್ರೀಭವನ ಸೇವೆಗಳ ಪ್ರಾಪ್ಯತೆ ಹೆಚ್ಚಿಸುವುದು
- ಸಿಬ್ಬಂದಿ: ಕಣ್ಣಿನ ಆರೈಕೆ ಸಿಬ್ಬಂದಿಯ ಸಾಮರ್ಥ್ಯ ಬೆಳೆಸುವುದು
- ಶಿಕ್ಷಣ: ಸಾರ್ವಜನಿಕರಲ್ಲಿ ಕಣ್ಣಿನ ಆರೋಗ್ಯದ ಜಾಗೃತಿ ಮೂಡಿಸುವುದು
- ವೆಚ್ಚ: ಕನ್ನಡಕ ಮತ್ತು ಸೇವೆಗಳ ವೆಚ್ಚ ಕಡಿಮೆ ಮಾಡುವುದು
- ಕಣ್ಗಾವಲು: ದತ್ತಾಂಶ ಸಂಗ್ರಹಣೆ ಮತ್ತು ಸಂಶೋಧನೆ ಬಲಪಡಿಸುವುದು

* WHO ಇರುವ ಮಾರ್ಗಸೂಚಿಗಳನ್ನು ಆಧಾರವಾಗಿ ಬಳಸಿಕೊಂಡು, ದೇಶಗಳು ಮತ್ತು ಪಾಲುದಾರರನ್ನು ಬೆಂಬಲಿಸಲು ನಾಲ್ಕು ತಂತ್ರಗಳನ್ನು ರೂಪಿಸಲಾಗಿದೆ.

* SPECS ಜಾಗತಿಕ ನೆಟ್‌ವರ್ಕ್ ಸಂಬಂಧಿತ ಸಂಸ್ಥೆಗಳಿಗೆ ಜ್ಞಾನ ವಿನಿಮಯ ಮತ್ತು ಸಹಕಾರದ ವೇದಿಕೆ ನೀಡುತ್ತದೆ.

* ಆಪ್ಟಿಕಲ್, ಔಷಧೀಯ, ತಂತ್ರಜ್ಞಾನ ಕ್ಷೇತ್ರಗಳ ಉದ್ಯಮಗಳು ಮತ್ತು ವಿಮಾ ಕಂಪನಿಗಳ ಜೊತೆ ಸಂವಾದ ನಡೆಸಲಾಗುತ್ತದೆ.

* ಪ್ರದೇಶೀಯ ಮತ್ತು ರಾಷ್ಟ್ರ ಮಟ್ಟದ ತೊಡಗಿಸಿಕೊಳ್ಳುವಿಕೆ ಮೂಲಕ ಜಾಗತಿಕ ಕಣ್ಣಿನ ಆರೈಕೆಯ ಉದ್ದೇಶಗಳನ್ನು ಸಾಧಿಸಲು ಹಾಗೂ ದೇಶೀಯ ನಿಟ್ಟಿನಲ್ಲಿ ಅನುಷ್ಠಾನ ಬಲಪಡಿಸಲು ಈ ಯೋಜನೆ ಸಹಕಾರಿಯಾಗುತ್ತದೆ.

## ಪರಿಷ್ಕೃತ ಮಿಷನ್ ವಾತ್ಸಲ್ಯ ಪೋರ್ಟಲ್ ಬಿಡುಗಡೆ: ಮಕ್ಕಳ ರಕ್ಷಣೆಗೆ ಸಮಗ್ರ ಡಿಜಿಟಲ್ ವೇದಿಕೆ




* ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಪರಿಷ್ಕೃತ ಮಿಷನ್ ವಾತ್ಸಲ್ಯ ಪೋರ್ಟಲ್ ಅನ್ನು ಪ್ರಾರಂಭಿಸಿದ್ದು, ಇದು ಮಕ್ಕಳ ರಕ್ಷಣಾ ಸೇವೆಗಳಿಗಾಗಿ ಎಲ್ಲ ಪಾಲುದಾರರಿಗೆ ಒಂದೇ ಡಿಜಿಟಲ್ ವೇದಿಕೆ ಒದಗಿಸುತ್ತದೆ.

* ಈ ಪೋರ್ಟಲ್ ಪೂರಕವಾಗಿ ತಾಂತ್ರಿಕವಾಗಿ ನವೀಕರಿಸಲ್ಪಟ್ಟಿದ್ದು, ಹಿಂದಿನ ಖೋಯಾ-ಪಾಯಾ ಮತ್ತು ಟ್ರ್ಯಾಕ್‌ಚೈಲ್ಡ್ ಸೇವೆಗಳನ್ನು ಸಮೇತಗೊಳಿಸಿದೆ. ರಾಜ್ಯ, ಜಿಲ್ಲಾ ಮಟ್ಟದ ವಿವಿಧ ಘಟಕಗಳು ಇದರ ಮೂಲಕ ಸಮನ್ವಯ ಸಾಧಿಸಬಹುದು.

* ಪ್ರಮುಖ ಪಾಲುದಾರರು – ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬಾಲ ನ್ಯಾಯ ಮಂಡಳಿ, ಬಾಲ ಮಕ್ಕಳ ಆರೈಕೆ ಕೇಂದ್ರಗಳು – ಎಲ್ಲರಿಗೂ ಇದು ಡಿಜಿಟಲ್ ಸಂಪರ್ಕ ವ್ಯವಸ್ಥೆ ಒದಗಿಸುತ್ತದೆ. ಪೋರ್ಟಲ್‌ದು ಸೂಕ್ಷ್ಮ ಮೇಲ್ವಿಚಾರಣೆ ಮತ್ತು ಯೋಜನೆಗಾಗಿ ಎಂಐಎಸ್ ಡ್ಯಾಶ್‌ಬೋರ್ಡ್ ಹೊಂದಿದೆ.

* ಸಹಾಯವಾಣಿ ಸೇವೆ: ಮಿಷನ್ ವಾತ್ಸಲ್ಯ ಪೋರ್ಟಲ್ 24x7 ಮಕ್ಕಳ ಸಹಾಯವಾಣಿ (1098) ಸೇವೆ ಮತ್ತು ಮಹಿಳಾ ಸಹಾಯವಾಣಿ (181), ತುರ್ತು ಸೇವೆ 112 ಜೊತೆ ಸಂಯೋಜನೆಯಲ್ಲಿದೆ.

* ಪೋರ್ಟಲ್ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು SPNIWCD ಸಹಯೋಗದೊಂದಿಗೆ ಮಾಸ್ಟರ್ ತರಬೇತಿ ಕಾರ್ಯಕ್ರಮ ನಡೆಸಲಾಗಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಎಲ್ಲಾ ಪಾಲುದಾರರಿಗೆ ಲಾಗಿನ್ ಅಕ್ಸೆಸ್ ಒದಗಿಸಲಾಗಿದೆ. ಈ ಮಾಹಿತಿಯನ್ನು ರಾಜ್ಯ ಸಚಿವೆ ಸಾವಿತ್ರಿ ಠಾಕೂರ್ ಅವರು ಲೋಕಸಭೆಯಲ್ಲಿ ಹಂಚಿಕೊಂಡರು.

## 2025ರ 'ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರಕ್ಕೆ ಕೆ.ಆರ್. ಮೀರಾ ಆಯ್ಕೆ



* 2025ರ ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರಕ್ಕೆ ಮಲೆಯಾಳ ಲೇಖಕಿ ಕೆ.ಆರ್. ಮೀರಾ ಆಯ್ಕೆಯಾಗಿದ್ದಾರೆ. ಈ ಪುರಸ್ಕಾರವು ₹2 ಲಕ್ಷ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದ್ದು, ಕಾರ್ಯಕ್ರಮದ ಕೊನೆಯ ದಿನವಾದ ಆಗಸ್ಟ್ 10ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

* ಈ ಕಾರ್ಯಕ್ರಮ ಆಗಸ್ಟ್ 8ರಿಂದ 10ರ ತನಕ ಬೆಂಗಳೂರಿನ ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ನಡೆಯುವ ಬುಕ್ ಬ್ರಹ್ಮ ಸಾಹಿತ್ಯ ಉತ್ಸವದ ಭಾಗವಾಗಿದೆ. ಪ್ರಶಸ್ತಿ ಪ್ರದಾನವಾದ ಬಳಿಕ ಮೀರಾ ಅವರ ಜತೆಗೆ ವಿಶೇಷ ಸಂವಾದ ನಡೆಯಲಿದೆ.

* ಈ ಪುರಸ್ಕಾರವು ದಕ್ಷಿಣ ಭಾರತೀಯ ಭಾಷಾ ಸಾಹಿತ್ಯದ ಕೊಡುಗೆಯನ್ನು ಪರಿಗಣಿಸಿ ನೀಡಲಾಗುತ್ತದೆ.

* ಕೆ.ಆರ್. ಮೀರಾ, ಕೋಟಯಂನ ಮೂಲದವರು, ಕಥೆಗಾರ್ತಿ ಮತ್ತು ಪತ್ರಕರ್ತೆ. ಅವರು ಐದು ಕಥಾಸಂಕಲನ, ಎರಡು ನೀಳ್ಗತೆಗಳ ಸಂಕಲನ ಹಾಗೂ ಐದು ಕಾದಂಬರಿಗಳನ್ನು ರಚಿಸಿದ್ದಾರೆ. ಅವರ ಕೃತಿ 'ಆರಚ್ಚಾರ್' (Hangwoman) ಮಲೆಯಾಳ ಸಾಹಿತ್ಯದಲ್ಲಿ ಬಹುಮಾನ್ಯ ಕೃತಿಯಾಗಿದೆ.

* ಈ ಪುರಸ್ಕಾರದ ಆಯ್ಕೆ ಸಮಿತಿಯಲ್ಲಿ ವಿವೇಕ್ ಶಾನಭಾಗ, ಸುಧಾಕರನ್ ರಾಮಂತಳ್ಳಿ ಮತ್ತು ಸತೀಶ್ ಚಪ್ಪರಿಕೆ ಇದ್ದರು ಎಂದು ಪ್ರಕಟಣೆ ತಿಳಿಸಿದೆ.

## ಕರ್ನಾಟಕ ಸೇರಿ 6 ಹೈಕೋರ್ಟ್ ಗೆ ನ್ಯಾಯಾಧೀಶರ ನೇಮಕಕ್ಕೆ ಶಿಫಾರಸ್ಸು



KPSCVaani

* ಭಾರತದ ಮುಖ್ಯ ನ್ಯಾಯಮೂರ್ತಿ ಬಿಆರ್ ಗವಾಯಿ ನೇತೃತ್ವದ ಸುಪ್ರೀಂ ಕೋರ್ಟ್ ಕೊಲಿಜಿಯಂ ದೇಶದ ಆರು ಹೈಕೋರ್ಟ್‌ಗಳಿಗೆ ನ್ಯಾಯಾಧೀಶರ ನೇಮಕಾತಿಗೆ ಶಿಫಾರಸು ಮಾಡಿದೆ.
* ದೆಹಲಿ ಹೈಕೋರ್ಟ್: ನ್ಯಾಯಾಂಗ ಅಧಿಕಾರಿ ವಿಮಲ್ ಕುಮಾರ್ ಯಾದವ್ ಅವರನ್ನು ನ್ಯಾಯಾಧೀಶರಾಗಿ ನೇಮಕ ಮಾಡಲು ಅನುಮೋದಿಸಲಾಗಿದೆ.
* ಬಾಂಬೆ ಹೈಕೋರ್ಟ್: ವಕೀಲರಾದ ಅಜಿತ್ ಕಡೆತಂಕರ್, ಆರತಿ ಸಾಥೆ ಮತ್ತು ಸುಶೀಲ್ ಘೋಡೇಶ್ವರ್ ಅವರ ನೇಮಕ ಶಿಫಾರಸು ಮಾಡಲಾಗಿದೆ.
* ಆಂಧ್ರಪ್ರದೇಶ ಹೈಕೋರ್ಟ್: ನ್ಯಾಯಮೂರ್ತಿಗಳಾದ ಹರಿನಾಥ್ ನುನೆಪಳ್ಳಿ, ಕಿರಣ್ಮಯಿ ಮಾಂಡವ, ಸುಮತಿ ಜಗದಮ್ ಮತ್ತು ನ್ಯಾಪತಿ ವಿಜಯ್ ಅವರನ್ನು ಖಾಯಂ ನ್ಯಾಯಾಧೀಶರಾಗಿ ನೇಮಿಸಲು ಶಿಫಾರಸು ಮಾಡಲಾಗಿದೆ.
* ಛತ್ತೀಸ್‌ಗಢ ಹೈಕೋರ್ಟ್: ನ್ಯಾಯಮೂರ್ತಿ ರವೀಂದ್ರ ಕುಮಾರ್ ಅಗರವಾಲ್ ಅವರನ್ನು ಖಾಯಂ ನ್ಯಾಯಾಧೀಶರಾಗಿ ನೇಮಕ ಮಾಡುವ ಪ್ರಸ್ತಾವನೆ ಇದೆ.
* ಕಲ್ಕತ್ತಾ ಹೈಕೋರ್ಟ್: ನ್ಯಾಯಮೂರ್ತಿ ಪಾರ್ಥ ಸಾರಥಿ ಸೇನ್ ಮತ್ತು ಅಪುರ್ಬಾ ಸಿನ್ಹಾ ರೇ ಅವರನ್ನು ಖಾಯಂ ನ್ಯಾಯಾಧೀಶರಾಗಿ ಹಾಗೂ ಇತರ ಎಂಟು ನ್ಯಾಯಮೂರ್ತಿಗಳನ್ನು ಹೆಚ್ಚುವರಿ ನ್ಯಾಯಾಧೀಶರಾಗಿ ಇನ್ನೊಂದು ಅವಧಿಗೆ ನೇಮಕ ಮಾಡಲು ಶಿಫಾರಸು ಮಾಡಲಾಗಿದೆ.
* ಕರ್ನಾಟಕ ಹೈಕೋರ್ಟ್: ಹೆಚ್ಚುವರಿ ನ್ಯಾಯಾಧೀಶ ಗುರುಸಿದ್ದಯ್ಯ ಬಸವರಾಜ ಅವರನ್ನು ಖಾಯಂ ನ್ಯಾಯಾಧೀಶರಾಗಿ ಮಾಡಲಾಗುತ್ತದೆ.
* ಇತ್ತೀಚೆಗೆ ಕೇಂದ್ರ ಸರ್ಕಾರ 19 ನ್ಯಾಯಾಧೀಶರ ನೇಮಕಾತಿಗೆ ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ ಈ ಶಿಫಾರಸುಗಳು ಹೊರಬಿದ್ದಿವೆ.

## ಯಡಿಯೂರಪ್ಪ ಅವರಿಗೆ 'ಬಸವ ಶ್ರೀ' ಪ್ರಶಸ್ತಿ ಪ್ರಧಾನ



* ಶ್ರೀಬಸವೇಶ್ವರ ಸೇವಾ ಸಮಿತಿ, ಅಕ್ಕನ ಬಳಗ ಮಹಿಳಾ ಸಮಾಜ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾ ಬೆಂಗಳೂರು ಘಟಕದ ಸಹಯೋಗದಲ್ಲಿ ಬಸವಜಯಂತಿ ಹಾಗೂ ಅಕ್ಕಮಹಾದೇವಿ ಜಯಂತಿ ಆಚರಿಸಲಾಯಿತು.
* ಈ ಸಂದರ್ಭದಲ್ಲಿ ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರಿಗೆ 'ಬಸವ ಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅವರು ಮಾತನಾಡಿ, "ಬಸವಣ್ಣನ ತತ್ವಗಳು ನನ್ನ ಬದುಕಿಗೆ ಪ್ರೇರಣೆಯಾಗಿವೆ. ಈ ಪ್ರಶಸ್ತಿ ಸೇವೆಗಾಗಿ ನನ್ನನ್ನು ಇನ್ನಷ್ಟು ಬದ್ಧನಾಗಿಸುತ್ತಿದೆ" ಎಂದು ಹೇಳಿದರು.
* ಕೆ.ವಿ.ವಿ ಸಂಸ್ಥೆ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ, "ವೀರಶೈವ-ಲಿಂಗಾಯತ ಸಮುದಾಯದ ಮಧ್ಯೆ ಒಗ್ಗಟ್ಟಿನ ಕೊರತೆಯಿಂದಲೇ ನಾಯಕರಿಗೆ ಪೂರಕ ಆಡಳಿತಾವಧಿ ದೊರಕಿಲ್ಲ" ಎಂದು ಅಭಿಪ್ರಾಯಪಟ್ಟರು. ಪಂಗಡೀಯ ಭಿನ್ನತೆ ಮರೆತು ಒಗ್ಗಟ್ಟಿನಿಂದ ಮುಂದೆ ಸಾಗಬೇಕೆಂದು ಹೇಳಿದರು.
* ಯಡಿಯೂರಪ್ಪ ಅವರು ಕೆ. ರುದ್ರೇಶ್ ಅವರನ್ನು ಯಶವಂತಪುರ ಕ್ಷೇತ್ರದ ಅಭ್ಯರ್ಥಿಯಾಗಿ ಪರಿಗಣಿಸಲು ಸೂಚನೆ ನೀಡಿರುವುದಾಗಿ ತಿಳಿಯಿತು.
* ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಸುಶೀಲಮ್ಮ ಅವರಿಗೆ 'ಅಕ್ಕಮಹಾದೇವಿ ಪ್ರಶಸ್ತಿ' , ಡಾ. ದೀಪಕ್ ಶಿವರಾತ್ರಿ ಅವರಿಗೆ 'ಕಾಯಕ ಯೋಗಿ' , ಜಿ. ಮರಿಸ್ವಾಮಿ ಅವರಿಗೆ 'ಕಾಯಕ ರತ್ನ' ಪ್ರಶಸ್ತಿಗಳು ನೀಡಿ ಗೌರವಿಸಲಾಯಿತು. ಅಲ್ಲದೆ, ಒಂಬತ್ತು ಜನ ಸಾಧಕರಿಗೆ 'ಅತ್ಯುತ್ತಮ ಸೇವಾ ಪ್ರಶಸ್ತಿ' ನೀಡಲಾಯಿತು.

# 31 July 2025

## ಖ್ಯಾತ ಅರ್ಥಶಾಸ್ತ್ರಜ್ಞ ಮತ್ತು ಹೌಸ್ ಆಫ್ ಲಾರ್ಡ್ಸ್ ಪೀರ್ ಮೇಘನಾದ್ ದೇಸಾಯಿ ನಿಧನ



* ಭಾರತೀಯ ಮೂಲದ ಪ್ರತಿಷ್ಠಿತ ಅರ್ಥಶಾಸ್ತ್ರಜ್ಞ, ಲೇಖಕ ಮತ್ತು ಯುಕೆ ಹೌಸ್ ಆಫ್ ಲಾರ್ಡ್ಸ್ ಸದಸ್ಯ ಲಾರ್ಡ್ ಮೇಘನಾದ್ ದೇಸಾಯಿ ಅವರು ಜುಲೈ 29 ರಂದು (ಮಂಗಳವಾರ) 85 ನೇ ವಯಸ್ಸಿನಲ್ಲಿ ನಿಧನರಾದರು.
* ಪ್ರಧಾನಿ ನರೇಂದ್ರ ಮೋದಿ ಮತ್ತು ಭಾರತದಲ್ಲಿನ ಬ್ರಿಟಿಷ್ ಹೈ ಕಮಿಷನರ್ ಲಿಂಡಿ ಕ್ಯಾಮರೂನ್ ಸೇರಿದಂತೆ ವಿಶ್ವದಾದ್ಯಂತ ಸಂತಾಪ ಸೂಚಿಸಿದ್ದಾರೆ.
* ದೇಸಾಯಿ ವಡೋದರಾದಲ್ಲಿ ಜನಿಸಿದರು. ಅವರು ರಾಮನಾರಾಯಣ್ ರುಯಾ ಕಾಲೇಜಿನಿಂದ ಅರ್ಥಶಾಸ್ತ್ರದಲ್ಲಿ ಪದವಿ, ಮುಂಬೈ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮತ್ತು 1963 ರಲ್ಲಿ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಪಿಎಚ್‌ಡಿ ಪಡೆದರು.
* ದೇಸಾಯಿ ಅವರಿಗೆ 2008 ರಲ್ಲಿ ಮೂರನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮಭೂಷಣ ಪ್ರಶಸ್ತಿ ನೀಡಲಾಯಿತು.
* ಭಾರತೀಯ ಮೂಲದ ಬ್ರಿಟಿಷ್ ಪ್ರಜೆ ಲಾರ್ಡ್ ಮೇಘನಾದ್ ದೇಸಾಯಿ ಅವರು ತಮ್ಮ ಪಾಂಡಿತ್ಯಕ್ಕೆ, ವಿಶೇಷವಾಗಿ ಭಾರತ-ಯುನೈಟೆಡ್ ಕಿಂಗ್‌ಡಮ್ ಸಂಬಂಧಗಳನ್ನು ಬಲಪಡಿಸಲು ನೀಡಿದ ಕೊಡುಗೆಗಳಿಗೆ ಹೆಸರುವಾಸಿಯಾಗಿದ್ದರು.
* ಮೇಘನಾದ್ ದೇಸಾಯಿ ಮಹಾರಾಷ್ಟ್ರದ ಪ್ರತಿಷ್ಠಿತ ಮುಂಬೈ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಪಡೆದರು.
* ಅವರು 200 ಕ್ಕೂ ಹೆಚ್ಚು ಶೈಕ್ಷಣಿಕ ಪ್ರಬಂಧಗಳು ಮತ್ತು ಎಂಟು ಪುಸ್ತಕಗಳನ್ನು ಪ್ರಕಟಿಸಿದರು. ಅವರ ಪ್ರಸಿದ್ಧ ಪುಸ್ತಕಗಳಲ್ಲಿ ಮಾರ್ಕ್ಸಿಯನ್ ಎಕನಾಮಿಕ್ ಥಿಯರಿ, ಮಾರ್ಕ್ಸ್ ರಿವೆಂಜ್, ದಿ ರೀಡಿಸ್ಕವರಿ ಆಫ್ ಇಂಡಿಯಾ, ಮತ್ತು ಹೂ ರೋಟ್ ದಿ ಭಗವದ್ಗೀತೆ ಸೇರಿವೆ.

KPSCVaani

## ಪರಮಾಣು ಜಲಾಂತರ್ಗಾಮಿ ನೌಕೆಗಳನ್ನು ನಿರ್ಮಿಸಲು 50 ವರ್ಷಗಳ ಒಪ್ಪಂದಕ್ಕೆ ಯುಕೆ, ಆಸ್ಟ್ರೇಲಿಯಾ ಒಪ್ಪಂದಕ್ಕೆ ಸಹಿ




* ಯುನೈಟೆಡ್ ಸ್ಟೇಟ್ಸ್ ಒಪ್ಪಂದದ ನಿರಂತರ ಪರಿಶೀಲನೆಯ ಹೊರತಾಗಿಯೂ ಆಸ್ಟ್ರೇಲಿಯಾ ಮತ್ತು ಯುನೈಟೆಡ್ ಕಿಂಗ್‌ಡಮ್ (ಯುಕೆ) AUKUS ರಕ್ಷಣಾ ಒಪ್ಪಂದಕ್ಕೆ 50 ವರ್ಷಗಳ ಬದ್ಧತೆಗೆ ಸಹಿ ಹಾಕಿದವು.
* ಆಸ್ಟ್ರೇಲಿಯಾದ ಉಪ ಪ್ರಧಾನ ಮಂತ್ರಿ ಮತ್ತು ರಕ್ಷಣಾ ಸಚಿವ ರಿಚರ್ಡ್ ಮಾರ್ಲೆಸ್ ಮತ್ತು ಯುಕೆ ರಕ್ಷಣಾ ಕಾರ್ಯದರ್ಶಿ ಜಾನ್ ಹೀಲಿ ಅವರು ಜುಲೈ 26, 2025 ರಂದು ವಿಕ್ಟೋರಿಯಾದ ಗೀಲಾಂಗ್‌ನಲ್ಲಿ ನಡೆದ ಸಭೆಯಲ್ಲಿ ದ್ವಿಪಕ್ಷೀಯ ಪರಮಾಣು-ಚಾಲಿತ ಜಲಾಂತರ್ಗಾಮಿ ಪಾಲುದಾರಿಕೆ ಮತ್ತು ಸಹಯೋಗ ಒಪ್ಪಂದಕ್ಕೆ (ಗೀಲಾಂಗ್ ಒಪ್ಪಂದ) ಸಹಿ ಹಾಕಿದರು.
* ಈ ಜಲಾಂತರ್ಗಾಮಿ ನೌಕೆಗಳಿಗೆ ಆಸ್ಟ್ರೇಲಿಯಾ ಸುಮಾರು $245 ಬಿಲಿಯನ್ ವೆಚ್ಚವಾಗಲಿದೆ ಎಂದು ನಿರೀಕ್ಷಿಸಲಾಗಿದೆ.
* ಈ ಗೀಲಾಂಗ್ ಒಪ್ಪಂದವು ನಮ್ಮ SSN-AUKUS ಜಲಾಂತರ್ಗಾಮಿ ನೌಕೆಗಳ ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ, ಸುಸ್ಥಿರತೆ ಮತ್ತು ವಿಲೇವಾರಿ ಕುರಿತು ಸಮಗ್ರ ಸಹಕಾರವನ್ನು ಸಕ್ರಿಯಗೊಳಿಸುತ್ತದೆ.
* 2021 ರಲ್ಲಿ ಆಸ್ಟ್ರೇಲಿಯಾ, ಯುನೈಟೆಡ್ ಕಿಂಗ್‌ಡಮ್ ಮತ್ತು ಯುನೈಟೆಡ್ ಸ್ಟೇಟ್ಸ್ ನಾಯಕರು AUKUS ಎಂಬ ಹೊಸ ಕಡಲ ಭದ್ರತಾ ಮೈತ್ರಿಕೂಟವನ್ನು ಘೋಷಿಸಿದರು. ಈ ಮೈತ್ರಿಕೂಟವನ್ನು ಆಸ್ಟ್ರೇಲಿಯಾದ ರಕ್ಷಣಾ ಸಾಮರ್ಥ್ಯಗಳನ್ನು ಹೆಚ್ಚಿಸುವ ಮತ್ತು ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಚೀನಾವನ್ನು ಎದುರಿಸುವ ಪ್ರಯತ್ನವೆಂದು ಪರಿಗಣಿಸಲಾಗಿದೆ.
* AUKUS ಮೈತ್ರಿಕೂಟದಲ್ಲಿ ತನ್ನ ಪಾತ್ರದ ಬಗ್ಗೆ ಅಮೆರಿಕ ಹಿಂಜರಿದ ಕಾರಣ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಒಪ್ಪಂದವು ಅಮೆರಿಕ ಮೊದಲ ಕಾರ್ಯಸೂಚಿಗೆ ಹೊಂದಿಕೆಯಾಗುತ್ತದೆಯೇ ಎಂದು ನಿರ್ಧರಿಸಲು ತ್ರಿಪಕ್ಷೀಯ ಭದ್ರತಾ ಪಾಲುದಾರಿಕೆಯ ಪರಿಶೀಲನೆಯನ್ನು ಅಮೆರಿಕದ ರಕ್ಷಣಾ ಇಲಾಖೆ ಘೋಷಿಸಿದೆ.

## ಪ್ರಳಯ ಕ್ಷಿಪಣಿ: DRDO ನಡೆಸಿದ ಯಶಸ್ವಿ ಹಾರಾಟ ಪರೀಕ್ಷೆ



* ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಜುಲೈ 28 ಮತ್ತು 29, 2025ರಂದು ಒಡಿಶಾದ ಕರಾವಳಿಯ ಡಾ. ಎಪಿಜೆ ಅಬ್ದುಲ್ ಕಲಾಂ ದ್ವೀಪದಿಂದ ಪ್ರಳಯ ಕ್ಷಿಪಣಿಯ ಎರಡು ಸತತ ಯಶಸ್ವಿ ಹಾರಾಟ ಪರೀಕ್ಷೆಗಳನ್ನು ನಡೆಸಿದೆ.
* ಈ ಪರೀಕ್ಷೆಗಳು ಪ್ರಳೇ ಕ್ಷಿಪಣಿಯ ಗರಿಷ್ಠ ಹಾಗೂ ಕನಿಷ್ಠ ವ್ಯಾಪ್ತಿಯನ್ನು ಮೌಲ್ಯೀಕರಿಸಲು ನಡೆಸಲಾಯಿತು. ಕ್ಷಿಪಣಿಗಳು ನಿಖರವಾಗಿ ಗುರಿ ಬಿಂದು ತಲುಪಿದವು.
* ಎಲ್ಲಾ ಉಪವ್ಯವಸ್ಥೆಗಳು ನಿರೀಕ್ಷಿತ ರೀತಿಯಲ್ಲಿ ಕಾರ್ಯನಿರ್ವಹಿಸಿದ್ದನ್ನು DRDO ಖಚಿತಪಡಿಸಿದೆ.
* ಪ್ರಳಯ ಕ್ಷಿಪಣಿ ಘನ ಇಂಧನ ಆಧಾರಿತ ಕ್ವಾಸಿ-ಬ್ಯಾಲಿಸ್ಟಿಕ್ ಕ್ಷಿಪಣಿ ಆಗಿದ್ದು, ನಿಖರ ಮಾರ್ಗದರ್ಶನ ಮತ್ತು ಸಂಚಲನ ವ್ಯವಸ್ಥೆ ಹೊಂದಿದೆ. ಇದಕ್ಕೆ ಬಹುಮಟ್ಟದ ಸಿಡಿತಲೆಗಳನ್ನು ಸಾಗಿಸುವ ಸಾಮರ್ಥ್ಯವಿದೆ.
* ಈ ಕ್ಷಿಪಣಿಯನ್ನು DRDOಯ ವಿವಿಧ ಪ್ರಯೋಗಾಲಯಗಳು ಮತ್ತು ಭಾರತ್ ಡೈನಾಮಿಕ್ಸ್, ಭಾರತ್ ಎಲೆಕ್ಟ್ರಾನಿಕ್ಸ್ ಸೇರಿದಂತೆ ವಿವಿಧ ಕೈಗಾರಿಕೆಗಳು ಸಹಯೋಗದಿಂದ ಅಭಿವೃದ್ಧಿಪಡಿಸಿವೆ.
* ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು DRDO ಮುಖ್ಯಸ್ಥ ಡಾ. ಸಮೀರ್ ಕಾಮತ್ ಅವರು ಯಶಸ್ವಿ ಪರೀಕ್ಷೆಗಾಗಿ DRDO, ಸಶಸ್ತ್ರ ಪಡೆಗಳು ಮತ್ತು ಕೈಗಾರಿಕೆಗಳನ್ನು ಅಭಿನಂದಿಸಿದ್ದಾರೆ. ಈ ಯಶಸ್ಸು ಕ್ಷಿಪಣಿಯನ್ನು ಸಶಸ್ತ್ರ ಪಡೆಗಳಲ್ಲಿ ಬಳಸಲು ದಾರಿ ಮಾಡಿಕೊಡುತ್ತದೆ.
* ಜುಲೈ 25ರಂದು DRDO ಆಂಧ್ರಪ್ರದೇಶದ ಕರ್ನೂಲ್‌ನ ರಾಷ್ಟ್ರೀಯ ಮುಕ್ತ ಪ್ರದೇಶ ಶ್ರೇಣಿಯಲ್ಲಿ ULPGM-V3 ಕ್ಷಿಪಣಿಯ ಹಾರಾಟ ಪರೀಕ್ಷೆ ಯಶಸ್ವಿಯಾಗಿ ನಡೆಸಿತು. ಇದು ಹಿಂದೆ ಅಭಿವೃದ್ಧಿಪಡಿಸಿದ ULPGM-V2 ಆವೃತ್ತಿಯ ಸುಧಾರಿತ ರೂಪವಾಗಿದೆ.
* ULPGM-V3 ಕ್ಷಿಪಣಿಯು ಹೈ-ಡೆಫಿನಿಷನ್ ಡ್ಯುಯಲ್-ಚಾನೆಲ್ ಸೀಕರ್, ದಿನ-ರಾತ್ರಿ ಸಾಮರ್ಥ್ಯ, ಉಡಾವಣೆಯ ನಂತರ ಗುರಿ ನವೀಕರಣಕ್ಕಾಗಿ ದ್ವಿಮುಖ ಡೇಟಾ ಲಿಂಕ್ ಹೊಂದಿದ್ದು, ಮೂರು ವಿಭಿನ್ನ ಸಿಡಿತಲೆ ಆಯ್ಕೆಗಳೊಂದಿಗೆ ಲಭ್ಯವಿದೆ.

## ಭಾರತದ ರಫ್ತು ಸರಕುಗಳಿಗೆ ಅಮೆರಿಕದಿಂದ 25% ಸುಂಕ: ಟ್ರಂಪ್ ಘೋಷಣೆ



* ಆಗಸ್ಟ್ 1ರಿಂದ ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಎಲ್ಲಾ ಸರಕುಗಳ ಮೇಲೆ ಶೇಕಡಾ 25ರಷ್ಟು ಸುಂಕ ವಿಧಿಸಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.
* ರಷ್ಯಾದಿಂದ ಶಸ್ತ್ರಾಸ್ತ್ರ ಮತ್ತು ತೈಲ ಖರೀದಿಸುತ್ತಿರುವುದಕ್ಕಾಗಿ ಭಾರತಕ್ಕೆ ದಂಡ ವಿಧಿಸಲಾಗುವುದು ಎಂದೂ ಅವರು ಹೇಳಿದ್ದಾರೆ.
* ಅಮೆರಿಕದ ಒತ್ತಡಕ್ಕೆ ಒಳಪಟ್ಟಂತೆ ಭಾರತವು ವ್ಯಾಪಾರ ಒಪ್ಪಂದಗಳಿಗೆ ಒಪ್ಪಿಕೊಳ್ಳಲಿ ಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.
* ಟ್ರಂಪ್ ಅವರ ಹೇಳಿಕೆಯಲ್ಲಿ ಭಾರತದಲ್ಲಿನ ಸುಂಕ ಪ್ರಮಾಣ ಅತ್ಯಂತ ಹೆಚ್ಚಾಗಿದೆ ಮತ್ತು ಭಾರತವು ಅಸಹ್ಯಕರ ಹಣಕಾಸೇತರ ತಡೆಗೋಡೆಗಳನ್ನು ಹೊಂದಿದೆ ಎಂದು ಟೀಕಿಸಿದ್ದಾರೆ.
* ಭಾರತದಿಂದ ರಫ್ತಾಗುವ ಪ್ರಮುಖ ಉತ್ಪನ್ನಗಳಲ್ಲಿ ಜವಳಿ, ಔಷಧ, ಆಭರಣ ಮತ್ತು ಪೆಟ್ರೋಕೆಮಿಕಲ್ಸ್ ಸೇರಿವೆ; 87 ಬಿಲಿಯನ್ ಡಾಲರ್ ಮೌಲ್ಯದ ರಫ್ತಿಗೆ ಈ ಕ್ರಮ ಭಾರಿ ಹೊಡೆತ ನೀಡಲಿದೆ.

* ಈ ಹಿಂದೆ ಏಪ್ರಿಲ್‌ನಲ್ಲಿ ಶೇ 26ರಷ್ಟು ಸುಂಕ ಘೋಷಿಸಲಾಗಿತ್ತು, ಆದರೆ 90 ದಿನಗಳವರೆಗೆ ಅಮಾನತಿನಲ್ಲಿ ಇಡಲಾಗಿತ್ತು. ಈಗ ಶೇ 10ರಷ್ಟು ಮೂಲಸುಂಕ ಜಾರಿಯಲ್ಲಿದೆ. ಕೇಂದ್ರ ಸರ್ಕಾರ ಸುಂಕದ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸುತ್ತಿದೆ ಎಂದು ತಿಳಿಸಿದೆ.

## 200 ಮೀ. ಮೆಡ್ಲೆ ಸ್ಪರ್ಧೆಯಲ್ಲಿ ಲೆಯೋನ್ ಮಕ್ಕಾನ್ ವಿಶ್ವದಾಖಲೆ



* ಫ್ರಾನ್ಸ್‌ನ ಲೆಯೋನ್ ಮಕ್ಕಾನ್ ಪುರುಷರ 200 ಮೀ. ವೈಯಕ್ತಿಕ ಮೆಡ್ಲೆ ಸ್ಪರ್ಧೆಯನ್ನು 1:52.69 ಸೆ.ನಲ್ಲಿ ಪೂರ್ಣಗೊಳಿಸಿ ವಿಶ್ವದಾಖಲೆ ಸ್ಥಾಪಿಸಿದರು. ಈ ಮೂಲಕ 2011ರ ರಯಾನ್ ಲಾಕ್ಟೆಯ ದಾಖಲೆ ಮುರಿದರು.
* ಮಕ್ಕಾನ್ ಈ ಹಿಂದೆ 400 ಮೀ. ಮೆಡ್ಲೆಯಲ್ಲಿ ಮೈಕೆಲ್ ಫೆಲ್ಪ್ಸ್ ದಾಖಲೆಯನ್ನೂ ಮುರಿಸಿದ್ದರು. ಈಗಿನ ದಾಖಲೆಗೆ ಅವರು ಉಲ್ಲಾಸ ವ್ಯಕ್ತಪಡಿಸಿದರು.
* ಟ್ಯುನೀಷಿಯಾದ ಅಹ್ಮದ್ ಜಾವೊವದಿ ಪುರುಷರ 800 ಮೀ. ಫ್ರೀಸ್ಟೈಲ್‌ನಲ್ಲಿ 7:36.88 ಸೆ.ದಲ್ಲಿ ಗೆದ್ದು ಚಿನ್ನ ಪಡೆದರು.
* ಆಸ್ಟ್ರೇಲಿಯಾದ ಒ' ಕ್ಯಾಲಗನ್ 200 ಮೀ. ಫ್ರೀಸ್ಟೈಲ್‌ನಲ್ಲಿ 1:54.48 ಸೆ. ಸಮಯದೊಂದಿಗೆ ಗೆದ್ದು ತಮ್ಮ ಹತ್ತನೇ ಚಾಂಪಿಯನ್‌ಷಿಪ್ ಚಿನ್ನ ಗಳಿಸಿದರು.
* ಭಾರತದ ಶಾನ್ ಗಂಗೂಲಿ 200 ಮೀ. ಮೆಡ್ಲೆ ಸ್ಪರ್ಧೆಯಲ್ಲಿ 2:05.40 ಸೆ.ನಲ್ಲಿ ಈಜಿ 38ನೇ ಸ್ಥಾನ ಪಡೆದರು.
* ಚೀನಾದ 12 ವರ್ಷದ ಯು ಝಿದಿ ಸ್ಪರ್ಧಿಸಿದ ಹಿನ್ನೆಲೆಯಲ್ಲಿ, ವಿಶ್ವ ಅಕ್ವೆಟಿಕ್ಸ್ ಪ್ರವೇಶ ವಯೋಮಿತಿಗೆ ಸಂಬಂಧಿಸಿದ ನಿಯಮಗಳಲ್ಲಿ ಬದಲಾವಣೆ ಮಾಡುವ ಚಿಂತನೆ ನಡೆಸುತ್ತಿದೆ.

## ಫಾರ್ಚೂನ್ 500 ಪಟ್ಟಿಯಲ್ಲಿ ರಿಲಯನ್ಸ್ ದೇಶದ ಅಗ್ರ ಕಂಪನಿ




* 2025ರ ಫಾರ್ಚೂನ್ ಜಾಗತಿಕ 500 ಕಂಪನಿಗಳ ಪಟ್ಟಿಯಲ್ಲಿ ಮುಕೇಶ್ ಅಂಬಾನಿಯ ರಿಲಯನ್ಸ್ ಇಂಡಸ್ಟ್ರೀಸ್ ಭಾರತದ ಅಗ್ರ ಸ್ಥಾನದಲ್ಲಿರುವ ಕಂಪನಿಯಾಗಿ ಉಳಿದಿದೆ.
* ಈ ವರ್ಷ ಕಂಪನಿಯು 88ನೇ ಸ್ಥಾನ ಪಡೆದಿದ್ದು, 2024ರ 86ನೇ ಸ್ಥಾನಕ್ಕೆ ಹೋಲಿಸಿದರೆ ಎರಡು ಸ್ಥಾನ ಇಳಿಕೆಯಾಗಿದೆ. ಆದರೆ 2021ರ 155ನೇ ಸ್ಥಾನದಿಂದ ಇದು ನಾಲ್ಕು ವರ್ಷದಲ್ಲಿ 67 ಸ್ಥಾನ ಜಿಗಿದಿದೆ.
* ಫಾರ್ಚೂನ್ ಪಟ್ಟಿಯಲ್ಲಿ ಅಮೆರಿಕದ ವಾಲ್‌ಮಾರ್ಟ್ ಮೊದಲ ಸ್ಥಾನದಲ್ಲಿದೆ. ಅಮೆಜಾನ್ ಎರಡನೇ ಸ್ಥಾನದಲ್ಲಿದ್ದು, ಮೊದಲ ಹತ್ತು ಸ್ಥಾನಗಳಲ್ಲಿ ಚೀನಾದ ಮೂರು ಕಂಪನಿಗಳು ಮತ್ತು ಸೌದಿ ಅರಾಮ್ಕೊ (4ನೇ), ಆ್ಯಪಲ್ (8ನೇ) ಸ್ಥಾನಗಳಲ್ಲಿವೆ.
* ಈ ಪಟ್ಟಿಯಲ್ಲಿ ಭಾರತದಿಂದ ಒಟ್ಟು 9 ಕಂಪನಿಗಳು ಸ್ಥಾನ ಪಡೆದಿದ್ದು, ಐದು ಸರ್ಕಾರಿ ಮತ್ತು ನಾಲ್ಕು ಖಾಸಗಿ ವಲಯದ ಕಂಪನಿಗಳಾಗಿವೆ. ಭಾರತೀಯ ಜೀವ ವಿಮಾ ನಿಗಮ (95), ಇಂಡಿಯನ್ ಆಯಿಲ್ (127), ಎಸ್‌ಬಿಐ (163), ಒಎನ್‌ಜಿಸಿ (181), ಎಚ್‌ಡಿಎಫ್‌ಸಿ ಬ್ಯಾಂಕ್ (258), ಟಾಟಾ ಮೋಟರ್ಸ್ (283), ಭಾರತ್ ಪೆಟ್ರೋಲಿಯಂ (285) ಮತ್ತು ಐಸಿಐಸಿಐ ಬ್ಯಾಂಕ್ (464) ಪಟ್ಟಿಯಲ್ಲಿ ಸೇರಿವೆ.
* 2024ರ ಮಾರ್ಚ್‌ನಲ್ಲಿ 1 ಡಾಲರ್ ₹83.35 ಇದ್ದು, 2025ರ ಮಾರ್ಚ್ ವೇಳೆಗೆ ₹85.45 ಆಗಿತ್ತು. ರೂಪಾಯಿ ಮೌಲ್ಯದ ಈ ಇಳಿಕೆಯು ರಿಲಯನ್ಸ್ ವರಮಾನ ಮತ್ತು ಹೀಗಾಗಿ ಅದರ ಸ್ಥಾನಮಾನದ ಮೇಲೆ ಪ್ರಭಾವ ಬೀರಿದೆ.

## ಓಲಾ, ಊಬರ್ ಮಾದರಿಯಲ್ಲಿ ಆಂಬುಲೆನ್ಸ್ ಸೇವೆ



* ರಾಜ್ಯದಲ್ಲಿ ಓಲಾ, ಊಬರ್ ಮಾದರಿಯ ಆಂಬುಲೆನ್ಸ್ ಸೇವೆ ಆರಂಭವಾಗಲಿದೆ. ಆ್ಯಪ್ ಬಳಸಿ ಟ್ಯಾಕ್ಸಿ ಬುಕ್ ಮಾಡುವಂತೆ, ಇನ್ನು ಮುಂದೆ ಆಂಬುಲೆನ್ಸ್ ಸೇವೆಯನ್ನೂ ಮೊಬೈಲ್ ಆ್ಯಪ್ ಮೂಲಕ ಕರೆಸಬಹುದಾಗುತ್ತದೆ.
* ಈಗಾಗಲೇ ಗುರುಗ್ರಾಮದಲ್ಲಿ ಖಾಸಗಿ ಸಂಸ್ಥೆ ಈ ಮಾದರಿಯ ಸೇವೆ ಆರಂಭಿಸಿದೆ. ಅದೇ ಮಾದರಿಯಲ್ಲಿ ಕರ್ನಾಟಕ ಸರ್ಕಾರ ಕೂಡ ಆಂಬುಲೆನ್ಸ್ ಸೇವೆ ನೀಡಲು ಯೋಜನೆ ರೂಪಿಸಿದೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರಕಾರ, ಈ ಸೇವೆಗೆ ಸರ್ಕಾರವೇ ದರ ನಿಗದಿಪಡಿಸಲಿದೆ.
* ಆಂಬುಲೆನ್ಸ್ ಸೇವೆಯ ಮೇಲೆ ಮಾನದಂಡ ಸ್ಥಾಪಿಸಲು ಹಾಗೂ ದುಡ್ಡು ಲೂಟಿ ತಡೆಯಲು ಹೊಸ ಕಾಯಿದೆ ತರಲಾಗುತ್ತಿದೆ. ಖಾಸಗಿ ಆಂಬುಲೆನ್ಸ್‌ಗಳು ಇದೀಗ ಕೆಪಿಎಂಇ ಕಾಯ್ದೆಯ ಅಡಿಯಲ್ಲಿ ನೋಂದಾಯಿಸಬೇಕು.
* ಸರ್ಕಾರದ 108 ಆಂಬುಲೆನ್ಸ್ ಸೇವೆಯನ್ನೂ ಖಾಸಗಿ ಸಂಸ್ಥೆಗಳಿಂದ ಹಿಂದಕ್ಕೆ ಪಡೆದು, ಜಿಲ್ಲಾಧಿಕಾರಿ, ಸಿಇಒ ಹಾಗೂ ಆರೋಗ್ಯಾಧಿಕಾರಿ ಕಂಟ್ರೋಲ್‌ಗೆ ತರಲಾಗುತ್ತದೆ.

## ಅಭಿಷೇಕ್ ಶರ್ಮಾ ಟಿ20ಐ ಶ್ರೇಯಾಂಕದಲ್ಲಿ ನಂ.1 ಸ್ಥಾನ ಪಡೆದ ಮೂರನೇ ಭಾರತೀಯ



KPSCVaani

* ಅಭಿಷೇಕ್ ಶರ್ಮಾ ಐಸಿಸಿ ಟಿ20ಐ ಬ್ಯಾಟ್ಸ್‌ಮನ್ ಶ್ರೇಯಾಂಕದಲ್ಲಿ ನಂ.1 ಸ್ಥಾನಕ್ಕೇರಿದ ಮೂರನೇ ಭಾರತೀಯ ಆಟಗಾರರಾಗಿದ್ದಾರೆ.
* ಅವರು ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಅವರನ್ನು ಹಿಂದಿಕ್ಕಿದ್ದಾರೆ, ತಿಲಕ್ ವರ್ಮಾ ಮೂರನೇ ಸ್ಥಾನದಲ್ಲಿದ್ದರೆ, ಸೂರ್ಯಕುಮಾರ್ ಯಾದವ್ ಆರನೇ ಸ್ಥಾನದಲ್ಲಿ ಇದ್ದಾರೆ.
* ಜಿಂಬಾಬ್ವೆ ವಿರುದ್ಧ ಟಿ20 ಶತಕದ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪ್ರವೇಶ ಮಾಡಿದ ಅಭಿಷೇಕ್, ಇತ್ತೀಚಿನ ದಕ್ಷಿಣ ಆಫ್ರಿಕಾ ಮತ್ತು ಇಂಗ್ಲೆಂಡ್ ವಿರುದ್ಧದ ಉತ್ತಮ ಆಟದಿಂದ ಶ್ರೇಯಾಂಕದಲ್ಲಿ ಉನ್ನತಿ ಸಾಧಿಸಿದ್ದಾರೆ.
* ಆಸ್ಟ್ರೇಲಿಯಾದ ನಾಥನ್ ಎಲಿಸ್ ಮತ್ತು ಸೀನ್ ಅಬಾಟ್ ತಮ್ಮ ಶ್ರೇಯಾಂಕವನ್ನು ಪ್ರಮುಖವಾಗಿ ಸುಧಾರಿಸಿಕೊಂಡಿದ್ದಾರೆ.
* ದಕ್ಷಿಣ ಆಫ್ರಿಕಾ ಮತ್ತು ಜಿಂಬಾಬ್ವೆ ವಿರುದ್ಧ ಉತ್ತಮ ಪ್ರದರ್ಶನ ನೀಡಿದ್ದರಿಂದ, ನ್ಯೂಜಿಲೆಂಡ್‌ನ ಮ್ಯಾಟ್ ಹೆನ್ರಿ 10 ಸ್ಥಾನಗಳ ಜಿಗಿತದಿಂದ 19ನೇ ಸ್ಥಾನಕ್ಕೇರಿದ್ದಾರೆ.

## 2025ರ ಬೂಕರ್ ಪ್ರಶಸ್ತಿ ಆಯ್ಕೆ ಪಟ್ಟಿಗೆ ಮತ್ತೆ ಕಿರಣ ದೇಸಾಯಿ





* 2006ರಲ್ಲಿ ಬೂಕರ್ ಪ್ರಶಸ್ತಿ ಗೆದ್ದ ಕಿರಣ್ ದೇಸಾಯಿ ಅವರು "ದಿ ಲೋನೆಲಿನೆಸ್ಸ್ ಆಫ್ ಸೋನಿಯಾ ಅಂಡ್ ಸನ್ನಿ" ಎಂಬ ತಮ್ಮ ಹೊಸ ಕಾದಂಬರಿಯಿಂದ 2025ರ ಬೂಕರ್ ಲಾಂಗ್‌ಲಿಸ್ಟ್ (ಪ್ರಾಥಮಿಕ ಪಟ್ಟಿ)ಗೆ ಆಯ್ಕೆಯಾಗಿದ್ದಾರೆ.
* 667 ಪುಟಗಳ ಈ ಕೃತಿ ಪಟ್ಟಿಯಲ್ಲಿನ ಅತ್ಯಂತ ದೈರ್ಘ್ಯದ ಕಾದಂಬರಿಯಾಗಿದ್ದು, ಅಮೆರಿಕಾದಲ್ಲಿ ವಾಸವಿರುವ ಇಬ್ಬರು ಭಾರತೀಯ ಯುವಕರ ಬಾಳ ಪಯಣವನ್ನು ಚಿತ್ರಿಸುತ್ತದೆ.
* ಈ ಕೃತಿಗೆ 20 ವರ್ಷಗಳ ಕಾಲ ಅವರು ಶ್ರಮಿಸಿದರೆಂದು ಬೂಕರ್ ಪ್ರತಿಷ್ಠಾನ ತಿಳಿಸಿದೆ. ಅವರು ಪುನಃ ಪ್ರಶಸ್ತಿ ಗೆದ್ದರೆ, ಇಬ್ಬರಿಗೂ ಎರಡು ಬಾರಿ ಬೂಕರ್ ಪ್ರಶಸ್ತಿ ದೊರಕಿದ ಐದನೇ ಲೇಖಕಿ ಎಂಬ ಗೌರಕ್ಕೆ ಪಾತ್ರರಾಗಲಿದ್ದಾರೆ. ಅವರ ತಾಯಿ ಅನಿತಾ ದೇಸಾಯಿ ಮೂರು ಬಾರಿ ಶಾರ್ಟ್‌ಲಿಸ್ಟ್ ಆದರೂ ಪ್ರಶಸ್ತಿ ಗೆಲ್ಲಲಿಲ್ಲ.
* 2025ರ ಬೂಕರ್ ಲಾಂಗ್‌ಲಿಸ್ಟ್‌ನಲ್ಲಿ ಒಟ್ಟು 13 ಕೃತಿಗಳಿದ್ದು, ಸೆಪ್ಟೆಂಬರ್ 23ರಂದು ಆರು ಕೃತಿಗಳ ಅಂತಿಮ ಪಟ್ಟಿ ಲಂಡನ್‌ನಲ್ಲಿ ಘೋಷಣೆಯಾಗಲಿದೆ.
* ನವೆಂಬರ್ 10ರಂದು ವಿಜೇತ ಕೃತಿಯನ್ನು ಪ್ರಕಟಿಸಲಾಗುತ್ತದೆ. ವಿಜೇತರಿಗೆ ₹58 ಲಕ್ಷ ನಗದು ಹಾಗೂ ಇತರ ಲೇಖಕರಿಗೂ ₹2.9 ಲಕ್ಷದೊಂದಿಗೆ ವಿಶೇಷ ಪ್ರತಿಗಳನ್ನು ನೀಡಲಾಗುತ್ತದೆ.
* ಈ ವರ್ಷದ ಪಟ್ಟಿಯಲ್ಲಿರುವ ಕೃತಿಗಳು ಹಲವಾರು ದೇಶಗಳಿಂದ ಆಯ್ಕೆಯಾಗಿದ್ದು, ವೈವಿಧ್ಯಮಯ ಕಥಾನಕಗಳನ್ನು ಒಳಗೊಂಡಿವೆ.
* 153 ಕೃತಿಗಳ ಪೈಕಿ ಆಯ್ಕೆಗೊಂಡ ಈ 13 ಕಾದಂಬರಿಗಳು ಭಾಷಾ ವೈವಿಧ್ಯ, ಪ್ರಾಯೋಗಿಕತೆ ಹಾಗೂ ವೈಯಕ್ತಿಕ ಮತ್ತು ಜಾತ್ಯಾತೀತ ದೃಷ್ಟಿಕೋನಗಳಿಂದ ಗಮನಸೆಳೆದಿವೆ.

## ನಟಿ ಖುಷ್ಬು ಸುಂದರ್ ತಮಿಳುನಾಡು ಬಿಜೆಪಿ ಉಪಾಧ್ಯಕ್ಷೆಯಾಗಿ ನೇಮಕ



* 2006ರಲ್ಲಿ ಬೂಕರ್ ಪ್ರಶಸ್ತಿ ಗೆದ್ದ ಕಿರಣ್ ದೇಸಾಯಿ ಅವರು "ದಿ ಲೋನೆಲಿನೆಸ್ಸ್ ಆಫ್ ಸೋನಿಯಾ ಅಂಡ್ ಸನ್ನಿ" ಎಂಬ ತಮ್ಮ ಹೊಸ ಕಾದಂಬರಿಯಿಂದ 2025ರ ಬೂಕರ್ ಲಾಂಗ್‌ಲಿಸ್ಟ್ (ಪ್ರಾಥಮಿಕ ಪಟ್ಟಿ)ಗೆ ಆಯ್ಕೆಯಾಗಿದ್ದಾರೆ.
* 667 ಪುಟಗಳ ಈ ಕೃತಿ ಪಟ್ಟಿಯಲ್ಲಿನ ಅತ್ಯಂತ ದೈರ್ಘ್ಯದ ಕಾದಂಬರಿಯಾಗಿದ್ದು, ಅಮೆರಿಕಾದಲ್ಲಿ ವಾಸವಿರುವ ಇಬ್ಬರು ಭಾರತೀಯ ಯುವಕರ ಬಾಳ ಪಯಣವನ್ನು ಚಿತ್ರಿಸುತ್ತದೆ.
* ಈ ಕೃತಿಗೆ 20 ವರ್ಷಗಳ ಕಾಲ ಅವರು ಶ್ರಮಿಸಿದರೆಂದು ಬೂಕರ್ ಪ್ರತಿಷ್ಠಾನ ತಿಳಿಸಿದೆ. ಅವರು ಪುನಃ ಪ್ರಶಸ್ತಿ ಗೆದ್ದರೆ, ಇಬ್ಬರಿಗೂ ಎರಡು ಬಾರಿ ಬೂಕರ್ ಪ್ರಶಸ್ತಿ ದೊರಕಿದ ಐದನೇ ಲೇಖಕಿ ಎಂಬ ಗೌರಕ್ಕೆ ಪಾತ್ರರಾಗಲಿದ್ದಾರೆ. ಅವರ ತಾಯಿ ಅನಿತಾ ದೇಸಾಯಿ ಮೂರು ಬಾರಿ ಶಾರ್ಟ್‌ಲಿಸ್ಟ್ ಆದರೂ ಪ್ರಶಸ್ತಿ ಗೆಲ್ಲಲಿಲ್ಲ.
* 2025ರ ಬೂಕರ್ ಲಾಂಗ್‌ಲಿಸ್ಟ್‌ನಲ್ಲಿ ಒಟ್ಟು 13 ಕೃತಿಗಳಿದ್ದು, ಸೆಪ್ಟೆಂಬರ್ 23ರಂದು ಆರು ಕೃತಿಗಳ ಅಂತಿಮ ಪಟ್ಟಿ ಲಂಡನ್‌ನಲ್ಲಿ ಘೋಷಣೆಯಾಗಲಿದೆ.
* ನವೆಂಬರ್ 10ರಂದು ವಿಜೇತ ಕೃತಿಯನ್ನು ಪ್ರಕಟಿಸಲಾಗುತ್ತದೆ. ವಿಜೇತರಿಗೆ ₹58 ಲಕ್ಷ ನಗದು ಹಾಗೂ ಇತರ ಲೇಖಕರಿಗೂ ₹2.9 ಲಕ್ಷದೊಂದಿಗೆ ವಿಶೇಷ ಪ್ರತಿಗಳನ್ನು ನೀಡಲಾಗುತ್ತದೆ.
* ಈ ವರ್ಷದ ಪಟ್ಟಿಯಲ್ಲಿರುವ ಕೃತಿಗಳು ಹಲವಾರು ದೇಶಗಳಿಂದ ಆಯ್ಕೆಯಾಗಿದ್ದು, ವೈವಿಧ್ಯಮಯ ಕಥಾನಕಗಳನ್ನು ಒಳಗೊಂಡಿವೆ.
* 153 ಕೃತಿಗಳ ಪೈಕಿ ಆಯ್ಕೆಗೊಂಡ ಈ 13 ಕಾದಂಬರಿಗಳು ಭಾಷಾ ವೈವಿಧ್ಯ, ಪ್ರಾಯೋಗಿಕತೆ ಹಾಗೂ ವೈಯಕ್ತಿಕ ಮತ್ತು ಜಾತ್ಯಾತೀತ ದೃಷ್ಟಿಕೋನಗಳಿಂದ ಗಮನಸೆಳೆದಿವೆ.





Practice 60 KSP PC
Question Papers For Free
ಶೀಘ್ರದಲ್ಲೇ ನಡೆಯಲಿರುವ
ಪೊಲೀಸ್ ಕಾನ್ಸ್ಟೇಬಲ್
ಹುದ್ದೆಗಳ ತಯಾರಿಗಾಗಿ 60
ಹಳೆಯ ಪ್ರಶ್ನೆಗಳನ್ನು ಉಚಿತವಾಗಿ
ಪ್ರಾಕ್ಟೀಸ್ ಮಾಡಿ
* ಷರತ್ತುಗಳು ಅನ್ವಯ
KPSC FDA SDA PSI PC PDO ಸೇರಿದಂತೆ ಇನ್ನು
ಅನೇಕ ಹುದ್ದೆಗಳ ನೇಮಕಕ್ಕೆ ಉಚಿತವಾಗಿ ಪ್ರಾಕ್ಟೀಸ್ ಮಾಡಿ
www.kpscvaani.com




KPSC Vaani
ಕೇವಲ ₹499
Hi-Tech Library
ಸೌಲಭ್ಯಗಳು:
* Free Wi-Fi
* 24X7 ಸೌಲಭ್ಯ
* ಮಾಸ ಪತ್ರಿಕೆಗಳು
* ದಿನಪತ್ರಿಕೆಗಳು
* ಶುದ್ಧ ಕುಡಿಯುವ ನೀರು
* ಪ್ರತಿ ವಾರ ಉಚಿತ Online Quiz ಕಾರ್ಯಕ್ರಮ
* KPSCVaani App ಉಚಿತ ಚಂದಾದಾರಿಕೆ
* CCTV ಕ್ಯಾಮೆರಾ
CALL NOW
+91 9019773121
2nd floor, Revanasiddeshwar Complex,
17th cross, BEC Hostel Rd, Vidayagiri, BGK
www.kpscvaani.com


Vaani